**ASSOCIATION OF CRICKET UMPIRES, KARNATAK**

**PRESESNTS**

# THE LAWS OF CRICKET 2017 CODE (3rd Edition - 2022)

# ಕ್ರಿಕೆಟ್ ನಿಯಮಗಳು (೨೦೧೭ ಕೋಡ್ ೩ ನೇಯ ಆವೃತ್ತಿ ೨೦೨೨)

BILINGUAL BOOK – IN ENGLISH AND KANNADA LANGUAGES

ದ್ವಿಭಾಷಾ ಪುಸ್ತಕ  -  ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ

## TRANSLATOR

**Vinayak Narayanrao Kulkarni**

(Former International Cricket Umpire & BCCI Umpire coach and Educator)

- ಅನುವಾದಕರು

**ವಿನಾಯಕ ನಾರಾಯಣರಾವ ಕುಲಕರ್ಣಿ**

**(**ಮಾಜಿ ಅಂತರರಾಷ್ಟ್ರೀಯ ಕ್ರಿಕೆಟ್ ಅಂಪೈರ್ ಮತ್ತು ಬಿಸಿಸಿಐ ಅಂಪೈರ್ ಕೋಚ ಮತ್ತು ಶಿಕ್ಷಕ)

**Copyright MCC - ಕೃತಿ ಹಕ್ಕು ಎಂ.ಸಿ.ಸಿ.**

5023 Sobha Chrysanthemum
Thanisandra main Road
Bengaluru 560077
Mobile - +91 9900080380
E-mail vnumpire@gmail.com

೫೦೨೩**,** ಸೊಭಾ ಕ್ರಿಸಂತಮಮ
ಥಣಿಸಂದ್ರ ಮುಖ್ಯ ರಸ್ತೆ
ಬೆಂಗಳೂರು -೫೬೦೦೭೭
ಮೊಬೈಲ್: +೯೧ ೯೯೦೦೦೮೦೩೮೦
ಇ ಮೇಲ್: **vnumpire@gmail.com**



# FOREWORD

There are not many books in Kannada on cricket, that too laws of cricket. Being an English game almost all the literature on cricket is in English. This is one of the reasons why this game is dependent on English.

In these circumstances, for easy understanding of the game my good friend Shri. Vinayak Kulkarni, former international umpire and ex. Faculty of Umpires Academy of BCCI has been doing a yeoman service to cricket, especially rural cricket in translating the laws of cricket since 2015. It is to his credit that MCC, the global custodians of the laws have in recognising his efforts to take the game to nooks and corners of the world has been publishing his work on its official website- https://www.lords.org. Now he has come out with the bilingual edition – English / Kannada- of the latest Laws of Cricket 2022 edition to reach larger stakeholders. This work will greatly help not only umpires but also players from rural areas and other stake holders in Karnataka and the world over to understand the game better.

I am sure this bilingual book will be a proud copy to have in one's library of all those umpires, players, and other stakeholders of the game not only in rural areas but also the urbanites.

**VIJAY BHARDWAJ**
Former Test Player from Karnataka,
Commentator Star Sports Kannada
Bengaluru

# ಮುನ್ನುಡಿ

ಕನ್ನಡದಲ್ಲಿ ಕ್ರಿಕೆಟ್ ಬಗ್ಗೆ ಹೆಚ್ಚಿನ ಪುಸ್ತಕಗಳಿಲ್ಲ. ಅದರಲ್ಲೂ ಬ್ರಿಟಿಷರಿಂದ ಬಳುವಳಿಯಾಗಿ ಬಂದ ಆಟದ ನಿಯಮಗಳನ್ನು ವಿವರಿಸುವ ಪುಸ್ತಕ ಕನ್ನಡದಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಆಟವು ಸಂಪೂರ್ಣ ಆಂಗ್ಲಭಾಷೆಯನ್ನೇ ಅವಲಂಬಿಸಿರುವುದು ಇದಕ್ಕೆ ಮುಖ್ಯ ಕಾರಣ.

ಇಂಥ ಸ್ಥಿತಿಯಲ್ಲಿ  ನಿಯಮಗಳನ್ನು ಕನ್ನಡಕ್ಕೆ ಅನುವಾದಿಸಿ, ಸುಲಭವಾಗಿ ಅರ್ಥವಾಗುವಂತೆ ವಿವರಿಸಿರುವ ನನ್ನ ಮಿತ್ರ ಅಂತರರಾಷ್ಟ್ರಿಯ ಮಟ್ಟದ ಅಂಪೈರ್ ಮತ್ತು ಮಾಜಿ ಉಪನ್ಯಾಸಕ,  ಬಿ. ಸಿ. ಸಿ. ಐ. ಅಂಪೈರ್ ಅಕಾಡೆಮಿ, ಶ್ರೀ ವಿನಾಯಕ್ ನಾರಾಯಣರಾವ ಕುಲಕರ್ಣಿ ಅವರು ೨೦೧೫ ರಿಂದಲೂ ಮಾಡುತ್ತಿರುವ ಈ  ಕಾರ್ಯ ಸ್ತುತ್ಯಾರ್ಹ. ಜಾಗತಿಕ ಹಕ್ಕನ್ನು ಇಟ್ಟುಕೊಂಡಿರುವ ಎಮ್ ಸಿ ಸಿ, ಜಗತ್ತಿನ ಎಲ್ಲ ದೇಶಗಳಿಗೂ ಕ್ರಿಕೆಟನ್ನು ವಿಸ್ತರಿಸುವ ದೇಯಕ್ಕನುಗುಣವಾಗಿ ಅವರ ಈ ಕಾರ್ಯವನ್ನು ಮನ್ನಿಸಿ ತನ್ನ ಅಧಿಕೃತ ವೆಬಸೈಟ್ https://www.lords.org ನಲ್ಲಿ ಪ್ರಕಟಿಸುತ್ತಿದೆ. ಶ್ರಿ ಕುಲಕರ್ಣಿ ಅವರ ಈ ದ್ವಿಭಾಷಾ  ಕೈಪಿಡಿ ಅಂಪೈರ್ ಗಳಿಗೆ ಮಾತ್ರ ಸ್ತಿಮಿತವಾಗಿಲ್ಲ. ಆಟಗಾರರಿಗೆ ಮತ್ತು ಕ್ರಿಕೆಟ್ ನಲ್ಲಿ ಆಸಕ್ತಿ ಇರುವ ಸಾಮಾನ್ಯ ಜನರಿಗೂ ಉಪಯುಕ್ತ. ಮುಖ್ಯವಾಗಿ ಕರ್ನಾಟಕದ ಗ್ರಾಮೀಣ ಭಾಗಗಳ ಆಟಗಾರರು ಆಟವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಹಾಯಕ. ಜೊತೆಗೆ ಕ್ರಿಕೆಟ್ ಆಟವನ್ನು ಪ್ರೀತಿಸುವವರಿಗೆಲ್ಲ ಸಂಗ್ರಹ ಯೋಗ್ಯ  ಕೃತಿ.

ಶ್ರಿ ವಿಜಯ್ ಭಾರದ್ವಾಜ
ಕರ್ನಾಟಕದ ಮಾಜಿ ಟೆಸ್ಟ್ ಆಟಗಾರ ಹಾಗೂ ವೀಕ್ಷಕ ವಿವರಣೆಕಾರ ಸ್ಟಾರ್ ಸ್ಪೋರ್ಟ್ಸ್ ಕನ್ನಡ
ಬೆಂಗಳೂರು

## AUTHORS VIEWS - ಅನುವಾದಕರ ಮಾತು



Today Cricket has become a big game. With the introduction of TV coverage, it has revolutionised cricket by its reach to remote villages and nooks and corners of the world. With the advent of ODIs and T20 it has kindled the minds of the public. With this fabulous growth the pressure on Umpires is much more than the players. Smallest of the small mistakes of the Umpire is blown up with the latest technologies like slow motion and ultra slow-motion coverage. Today Cricket has come out of the traditional English game and to keep the interest of the viewing public many an amendment has been made in the laws of Cricket. This is a constant process, and the laws are amended from time to time. An umpire must cross a few levels to reach international status.

ಕ್ರಿಕೆಟ್ ಇಂದು ದೊಡ್ಡ ಆಟ. ಟೆಲಿವಿಷನ್ ಪ್ರಸಾರದಿಂದ ಹಳ್ಳಿ ಹಳ್ಳಿಗೂ ತಲುಪಿರುವ ಕ್ರಿಕೆಟ್‌ನಲ್ಲಿ ಕ್ರಾಂತಿಯೇ ಆದಂತಾಗಿದೆ. ಒಂದು ದಿನದ ಪಂದ್ಯಗಳು ಹಾಗೂ ಟಿ೨೦ ಪಂದ್ಯಗಳು ಜನರಲ್ಲಿ ಕ್ರಿಕೆಟ್ ಹುಚ್ಚನ್ನು ಕರೆಕಳಿಸಿದೆ. ಇಂಥ ಒಂದು ಅದ್ಭುತ ಬೆಳವಣಿಗೆಯಲ್ಲಿ ಆಟಗಾರರಿಗಿಂತ ಹೆಚ್ಚಿನ ಒತ್ತಡ ಅಂಪೈರುಗಳ ಮೇಲಿದೆ. ಅಂಪೈರ್‌ಗಳು ಮಾಡುವ ಒಂದು ಸಣ್ಣ ತಪ್ಪು ಇಂದು ಟೆಲಿವಿಷನಲ್ಲಿ ಸ್ಲೊ ಮೊಷನ ಮತ್ತು ಅಲ್ಟ್ರಾ ಸ್ಲೊ ಮೊಷನ ಮೂಲಕ ದೊಡ್ಡದಾಗಿ ಕಾಣುತ್ತದೆ. ಸಂಪ್ರದಾಯದ ಕಟ್ಟುಪಾಡುಗಳಿಂದ ಹೊರ ಬಂದಿರುವ ಈ ಇಂಗ್ಲಿಷ್ ಆಟದಲ್ಲಿ ಪ್ರೇಕ್ಷಕರ ಆಸಕ್ತಿ ಉಳಿಸಲು ಹಲವು ಬದಲಾವಣೆಗಳನ್ನು ಮಾಡಲಾಗಿದೆ. ನಿಯಮಗಳಲ್ಲಿ ಕಾಲ ಕಾಲಕ್ಕೆ ತಕ್ಕಂತೆ ಮಾರ್ಪಾಡುಗಳಾಗಿವೆ ಮತ್ತು ಆಗುತ್ತಿರುತ್ತವೆ. ಒಬ್ಬ ಅಂಪೈರ್ ಅಂತಾರಾಷ್ಟ್ರೀಯ ದರ್ಜೆಗೆರಲು ಹಲವು ಹಂತಗಳನ್ನು ದಾಟಿ ಬರಬೇಕಾಗುತ್ತದೆ.

This being a traditionally an English game it is but natural that all the literature are in English. Hence, the laws of Cricket booklet is also published in English. However, in the recent past there have been efforts to have the Laws of Cricket in different languages which are available on the MCC official website Lords.org. It is desirable that all the players should know the Laws of Cricket, but many players do not bother to know them all. There are instances of a match being lost due to ignorance of the relevant laws. It is a fact that it is difficult to understand a few complex laws. To add to this there are examples of different umpires also interpreting the same law in different ways.

ಮೂಲತಃ ಇಂಗ್ಲಿಷ್‌ನವರ ಆಟವಾದ ಕ್ರಿಕೆಟ್ ನಲ್ಲಿ ಸಹಜವಾಗಿಯೇ ಎಲ್ಲ ಸಾಹಿತ್ಯಗಳು ಆಂಗ್ಲ ಭಾಷೆಯಲ್ಲಿಯೇ ಇವೆ. ಆಟದ ನಿಯಮಗಳ ಪುಸ್ತಕವೂ ಇಂಗ್ಲಿಷ್‌ನಲ್ಲಿದೆ. ಇತ್ತೀಚೆಗೆ ಜಗತ್ತಿನ ಬೇರೆ ಬೇರೆ  ಭಾಷೆಗಳಲ್ಲಿ ಪ್ರಕಟಿಸುವ ಪ್ರಯತ್ನಗಳು ನಡೆದಿವೆ. ಪ್ರತಿಯೊಬ್ಬ ಆಟಗಾರ ನಿಯಮಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ಹೊಂದುವುದು ಅಗತ್ಯವಾದರೂ, ಹೆಚ್ಚಿನವರು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಎಷ್ಟೋ ಸಲ ತಂಡದ ನಾಯಕ, ನಿಯಮಗಳ ಅರಿವಿಲ್ಲದೆ ಪಂದ್ಯ ಸೋತ ಉದಾಹರಣೆಗಳಿವೆ. ಕೆಲವೊಂದು ಕ್ಲಿಷ್ಟಕರ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇ ಆಗಿರುತ್ತದೆ. ಒಬ್ಬೊಬ್ಬ ಅಂಪೈರ್ ಒಂದೊಂದು ರೀತಿಯಲ್ಲಿ ನಿಯಮಗಳನ್ನು ಅರ್ಥೈಸುವುದೂ ಕಂಡು ಬರುತ್ತದೆ.

These different interpretations were noticed in the workshops arranged by Karnataka State Cricket Association at different district centers. During one of these workshops, it was felt that if we make available the Laws of Cricket in one’s mother tung, it may be more beneficial to the umpires, players, and the public to understand them easily. My first translated version came out in 1998. In these 20 odd years there are quite a few changes to the Laws of Cricket. My close fraternity members and friends were after me to bring out the latest laws of Cricket in Kanada, but due to some reason or other I was not able to fulfill their wish till 2017. In 2017 MCC came out with the Laws of Cricket 2017 code incorporating all the amendments to the Laws and Experimental laws over the years. Then again further MCC came out with the 2nd edition and in 2019 and the latest 3rd edition in 2022. Law 2 was divided into two laws (Law 24 and 25). Laws 20 and 33 were deleted by amalgamating them with different laws. Law 42 was newly added thus retaining the total Laws to 42. Some of the laws were reworded to suit the amendments and for more clarity. The numbers of a couple of laws were changed. The latest amendments were made as late as January 2023. Keeping all these changes in mind I am placing this new edition Laws of Cricket 2017 code 3rd edition in bilingual format ( English and Kannada side by side) for better understanding, to reach to larger stake holders. These are to be read with the playing conditions in vogue.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಸಹಯೋಗದಲ್ಲಿ  ಕರ್ನಾಟಕ ಅಂಪೈರುಗಳ ಸಂಘ ವಿವಿಧ ಜಿಲ್ಲೆಗಳಲ್ಲಿ ನಡೆಸಿದ ಕಾರ್ಯಾಗಾರಗಳಲ್ಲಿ ಇಂಥ ವ್ಯತ್ಯಾಸಗಳು ಕಂಡುಬಂದವು. ನಿಯಮಗಳನ್ನು  ಮಾತೃಭಾಷೆಯಲ್ಲಿ ಕೊಟ್ಟರೆ ಆಟಗಾರರಿಗೆ, ಅಂಪೈರುಗಳಿಗೆ ಮತ್ತು ಸಾಮಾನ್ಯ ಜನರಿಗೆ ಅನುಕೂಲವಾಗಬಹುದೆಂಬ ಭಾವನೆ ಮೂಡಿದ್ದು ಆಗಲೇ. ೧೯೯೮ರಲ್ಲಿ ನನ್ನ ಮೊದಲ ಅನುವಾದ ಹೊರಬಂದಿತ್ತು. ಈ ಇಪ್ಪತ್ತೈದು ವರ್ಷಗಳಲ್ಲಿ, ನಿಯಮಗಳಲ್ಲಿ ಸಾಕಷ್ಟು  ಬದಲಾವಣೆಗಳಾಗಿವೆ. ಹಲವಾರು ಮಿತ್ರರು ತಿದ್ದುಪಡಿ ಮಾಡಿದ ಪುಸ್ತಕವನ್ನು ಬರೆಯಲು

ಒತ್ತಾಯಿಸುತ್ತಿದ್ದರು. ಆದರೆ ಕಾರಣಾಂತರಗಳಿಂದ ಅವರ ಕೋರಿಕೆ ೨೦೧೭ ರ ವರೆಗೆ ಈಡೇರಿಸಲು ಆಗಿರಲಿಲ್ಲ. ೨೦೧೭ರಲ್ಲಿ ಎಮ್. ಸಿ. ಸಿ. ಈ ಎಲ್ಲ ಬದಲಾವಣೆಗಳನ್ನು ಕ್ರೋಢಿಕರಿಸಿ ನಿಯಮಗಳಲ್ಲಿ ಸಮಗ್ರ ಬದಲಾವಣೆಗಳನ್ನು ಮಾಡಿದೆ. ೨೦೧೯ ರಲ್ಲಿ ಎಮ್. ಸಿ. ಸಿ.೨೦೧೭ನೇ ಕೋಡಿನ ಎರಡನೆ ಆವೃತ್ತಿಯನ್ನು ಬಿಡುಗಡೆ ಮಾಡಿತು. ಮತ್ತೆ ಅದನ್ನು ಪರಿಷ್ಕರಿಸಿ ೨೦೨೨ ರಲ್ಲಿ ಅದರ ೩ನೇ ಆವೃತ್ತಿಯನ್ನು ಬಿಡುಗಡೆಮಾಡಿತು. ನಿಯಮ ೨ನ್ನು ವಿಭಜಿಸಿ ಎರಡು ನಿಯಮಗಳನ್ನಾಗಿ (ನಿಯಮ ೨೪ ಮತ್ತು ೨೫) ಮಾಡಿದೆ. ಹಳೆಯ ನಿಯಮ ೨೦ ಮತ್ತು ೩೩ ಗಳನ್ನು ರದ್ದುಗೊಳಿಸಿ, ಬೇರೆ ನಿಯಮಗಳಲ್ಲಿ ವಿಲಿನಗೊಳಿಸಿದೆ. ನಿಯಮ ೪೨ನ್ನು ಹೊಸದಾಗಿ ಅಳವಡಿಸಿ ವಟ್ಟು ನಿಯಮಗಳನ್ನು ೪೨ಕ್ಕೇ ಸಿಮಿತಗೊಳಿಸಿದೆ. ಹಲವಾರು ನಿಯಮಗಳ ವಿವರಣೆಯ ಭಾಷೆಯನ್ನು ಬದಲಾವಣೆಗೆ ತಕ್ಕಂತೆ ಬದಲಿಸಲಾಗಿದೆ. ಕೆಲವು ನಿಯಮಗಳ ಸ್ಥಾನವನ್ನು ಬದಲಿಸಲಾಗಿದೆ. ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಹೊಸ ನಿಯಮಗಳನ್ನು ಕನ್ನಡದಲ್ಲಿ ಅನುವಾದಿಸಿ ಹೆಚ್ಚು ಜನರಿಗೆ ಅನುಕೂಲವಾಗಲೆಂದು ದ್ವಿಭಾಷಾ ರೂಪದಲ್ಲಿ (ಇಂಗ್ಲಿಷ ಮತ್ತು ಕನ್ನಡ) ನಿಮ್ಮ ಕೈಯಲ್ಲಿಡುತ್ತಿದ್ದೇನೆ. ಈ ನಿಯಮಗಳನ್ನು ಕಾಲ ಕಾಲಕ್ಕೆ ಬಿಡುಗಡೆ ಮಾಡುವ ಪ್ರಾಯೋಗಿಕ ನಿಯಮಗಳ ಜೊತೆಗೆ ಓದಿ ಪ್ರಯೋಗಿಸಬೇಕು.

Translating the laws in Kannada language was not easy as there have not been many efforts to explain these in Kannada language. There might have been halfhearted efforts here and there. In north Karnataka alternate words for “run”, “wicket”, “stump” and “wicketkeeper” in Kanada have been in use but in rest of the state English words are being used hence, I have tried to use more Kanada words for example “Dandiga” for batter, “Ghootagalu” for stumps, Ghoota rakshaka” for wicketkeeper. I wanted to use “Pancharu” or “Nirnayakaru” for umpire, but it may look very odd so have decided to retain the word “umpire”. I have used certain Kannada terminology which may look odd now but with the hope of the usage over time may come into practice.

ಕನ್ನಡದಲ್ಲಿ ಭಾಷಾಂತರ ಸುಲಭವಾಗೇನೂ ಇರಲಿಲ್ಲ. ಇದಕ್ಕೆ ಮೂಲ ಕಾರಣ, ಆಟವನ್ನು ಸಂಪೂರ್ಣವಾಗಿ ಕನ್ನಡದಲ್ಲಿ ವಿವರಿಸುವ ಯತ್ನ ಆಗಿಯೇ ಇಲ್ಲ. ಅಲ್ಲೊಂದು ಇಲ್ಲೊಂದು ಆಗಿರಬಹುದು. ಉತ್ತರ ಕರ್ನಾಟಕದ ಭಾಗಗಳಲ್ಲಿ ರನ್, ವಿಕೆಟ್, ಸ್ಟಂಪ್, ವಿಕೆಟ್ ಕೀಪರಗಳಿಗೆ ಕನ್ನಡದಲ್ಲಿ ಪರ್ಯಾಯ ಶಬ್ದಗಳನ್ನು ರೂಪಿಸಲಾಗಿದೆಯಾದರೂ ಉಳಿದ ಭಾಗಗಳಲ್ಲಿ ಇಂಗ್ಲಿಷ್ (ಆಂಗ್ಲ) ಶಬ್ದಗಳೇ ಉಳಿದುಕೊಂಡಿವೆ. ಆದ್ದರಿಂದ ಈ ಪುಸ್ತಕದಲ್ಲಿ ಹೆಚ್ಚು ಕನ್ನಡ ಶಬ್ದಗಳನ್ನೇ ಉಪಯೋಗಿಸುವ ಪ್ರಯತ್ನ ಮಾಡಿದ್ದೇನೆ. ಉದಾಹರಣೆಗೆ ಬ್ಯಾಟರಗೆ ದಾಂಡಿಗ, ಸ್ಟಂಪುಗಳಿಗೆ ಘೂಟಗಳು, ವಿಕೆಟ್ ಕೀಪರ್ಗೆ - ಘೂಟರಕ್ಷಕ. ಅಂಪೈರ್‌ಗಳಿಗೆ ನಿರ್ಣಾಯಕರು ಅಥವಾ ಪಂಚರು ಎಂದು ಉಪಯೋಗಿಸುವ ಯೋಚನೆ ಇತ್ತಾದರೂ “ಅಂಪೈರ್” ಎಂಬುದೇ ಹೆಚ್ಚು ಸೂಕ್ತವೆನಿಸಿದ್ದರಿಂದ ಹಾಗೆಯೆ ಉಳಿಸಿಕೊಂಡಿದ್ದೇನೆ. ಕೆಲವು ಶಬ್ದಗಳು ಅಭಾಸವೆನಿಸಿದರೂ ಕ್ರಮೇಣ ಬಳಕೆಯಲ್ಲಿ ಬರಬೇಕೆಂಬ ಆಶಾಭಾವನೆಯಿಂದ ಬಳಸಿದ್ದೇನೆ.

The translation work was relatively easy as this is my fourth attempt. The encouragement from my many friends, children Ms. Varsha, Mr. Vishal and assistance from my spouse Mrs. Geetha Kulkarni were invaluable. I am ever grateful to my brother Mr. Ramachandra M N and my parents Late N B Kulkarni and Late Indirabai Kulkarni for recognizing my talent at very early stage and encouraging me to be what I am today. After 2017 code & its 2nd edition, I am placing this Laws of Cricket 2017 code 3rd edition 2022 in your hands.
ಭಾಷಾಂತರದಲ್ಲಿ ಇದು ನನ್ನ ನಾಲ್ಕನೆಯ ಪ್ರಯತ್ನವಾದದ್ದರಿಂದ ಸ್ವಲ್ಪ ಅನುಕೂಲವಾಯಿತು. ಈ ಪುಸ್ತಕ ಹೊರಬರುವಂತಾಗಲು ನನ್ನ ಅಪಾರ ಗೆಳೆಯರ ಬಳಗ, ಮಕ್ಕಳು ಶ್ರೀಮತಿ ವರ್ಷಾ, ಶ್ರೀ. ವಿಶಾಲ ಮತ್ತು ಪತ್ನಿ ಶ್ರೀಮತಿ ಗೀತಾ ಅವರ ಪ್ರೋತ್ಸಾಹ, ಸಹಾಯ ಮತ್ತು ಬೆಂಬಲ ಕಾರಣ. ನನ್ನ ಕ್ರೀಡಾ ಪ್ರತಿಭೆಯನ್ನು ಚಿಕ್ಕಂದಿನಲ್ಲೇ ಗುರುತಿಸಿ ಈ ಮಟ್ಟಕ್ಕೇರಲು ನನ್ನ ಸ್ವರ್ಗೀಯ ತಾಯಿ ಇಂದಿರಾಬಾಯಿ, ಸ್ವರ್ಗೀಯ ತಂದೆ ಎನ್. ಬಿ. ಕುಲಕರ್ಣಿ ಹಾಗೂ ಹಿರಿಯ ಅಣ್ಣ ಶ್ರೀ ರಾಮಚಂದ್ರ, ಅವರ ಪ್ರೋತ್ಸಾಹ ಮರೆಯಲಾರದಂತಹದ್ದು. ೨೦೧೭ ಕೊಡ್ ಮತ್ತು ಅದರ ೨ನೇ ಆವೃತ್ತಿಯ ನಂತರ ಈಗ ೨೦೧೭ ಕೊಡ್ ನ ೩ನೇ ಆವೃತ್ತಿ ೨೦೨೨ನ್ನು ತಮ್ಮೆಲ್ಲರ ಕೈಯಲ್ಲಿಡುತ್ತಿದ್ದೇನೆ.
I am sure this book will be a handy utility and reference book not only for umpires but also players and cricket enthusiasts. I shall be grateful to have your direct feedback and suggestions which will certainly help me in bettering my next venture.
ಈ ಪುಸ್ತಕ ಅಂಪೈರ್‌ಗಳು, ಆಟಗಾರರು ಹಾಗೂ ಆಟದ ಅಭಿಮಾನಿ ಗಳಿಗೆ ಉಪಯುಕ್ತ ಕೈಪಿಡಿಯಾಗುವುದೆಂಬ ನಂಬಿಕೆ, ವಿಶ್ವಾಸ ನನ್ನದು. ಪುಸ್ತಕದ ಬಗ್ಗೆ ನಿಮ್ಮ ನೇರ ಅಭಿಪ್ರಾಯ, ಸಲಹೆ ನನ್ನ ಮುಂದಿನ ಯತ್ನಗಳಿಗೆ ಸಹಾಯಕ ಮತ್ತು ಪ್ರೋತ್ಸಾಹ.

**Vinayak Kulkarni - ವಿನಾಯಕ ನಾ ಕುಲಕರ್ಣಿ** **Bengaluru ಬೆಂಗಳೂರು**

## INDEX - ಸೂಚ್ಯಾಂಕ


| PC No | PAYING CONDITION | PAGE No | | PAGE No | PLAYING CONDITION | PAGE No |
|---|---|---|---|---|---|---|
| | THE PREAMBLE – THE SPIRIT OF CRICKET ಪೀಠಿಕೆ: ಕ್ರಿಕೆಟ್ ಆಟದ ಸ್ಪೂರ್ತಿ | 17 / ೧೭ | | 15 / ೧೫ | DECLARATION AND FORFEITURE - ಸರದಿಯ ಸಮಾಪ್ತಿಯ ಘೋಷಣೆ ಮತ್ತು ತ್ಯಜಿಸುವುದು | 69/೬೯ |
| ೧ | THE PLAYERS - ಆಟಗಾರರು | 18/೧೮ | | 16/೧೬ | THE RESULT - ಫಲಿತಾಂಶ | 70/೭೦ |
| 2 - ೨ | THE UMPIRES - ಅಂಪೈರ್ | 20/೨೦ | | 17/೧೭ | THE OVER - ಓವರ್ | 76/೭೬ |
| 3 - ೩ | THE SCORERS - ಸ್ಕೋರರ್‌ಗಳು | 31/೩೧ | | 18/೧೮ | SCORING RUNS – ರನ್ ಘಳಿಕೆ | 79/೭೯ |
| 4 - ೪ | THE BALL - ಚೆಂಡು | 32/೩೨ | | 19/೧೯ | BOUNDARIES - ಬೌಂಡರಿಗಳು | 89/೮೯ |
| 5 - ೫ | THE BAT - ದಾಂಡು | 35/೩೫ | | 20/೨೦ | DEAD BALL - ಡೆಡ್ ಬಾಲ್ | 96/೯೬ |
| 6 - ೬ | THE PITCH - ಆಟದ ಪಟ್ಟಿ | 39/೩೯ | | 21/೨೧ | NO BALL - ನೋ ಬಾಲ್ | 102/೧೦೨ |
| 7 - ೭ | THE CREASES - ಕ್ರೀಸ್‌ಗಳು | 41/೪೧ | | 22/೨೨ | WIDE BALL - ವೈಡ್ ಬಾಲ್ | 112/೧೧೨ |
| 8 - ೮ | THE WICKETS - ಘೂಟಗಳು | 43/೪೩ | | 23/೨೩ | BYE AND LEG BYE - ಬೈ ಮತ್ತು ಲೆಗ್ ಬೈ | 115/೧೧೫ |
| 9 - ೯ | PREPARATION AND MAINTENANCE OF THE PLAYING AREA - ಆಟದ ಮೈದಾನ ವನ್ನು ಸಿದ್ವಪಡಿಸುವುದು ಮತ್ತು ಉಸ್ತುವಾರಿ | 45೪೫ | | 24/೨೪ | FIELDERS ABSECNCE SUBSTITUTES | 117/೧೧೭ |
| 10/೧೦ | COVERING THE PITCH - ಆಟದ ಪಟ್ಟಿಯನ್ನು ಹೊದಿಸುವುದು | 50/೫೦ | | 25/೨೫ | BATTER’S INNINGS; RUNNERS - ದಾಂಡಿಗನ ಸರದಿ : ಓಟಗಾರರು | 123/೧೨೩ |
| 11/೧೧ | INTERVALS - ವಿರಾಮಗಳು | 51/೫೧ | | 26/೨೬ | PRACTICE ON THE FIELD – ಆಟದ ಮೈದಾನದಲ್ಲಿ ಅಭ್ಯಾಸ | 131/೧೩೧ |
| 12/೧೨ | START OF PLAY ......... ಆಟದ ಪ್ರಾರಂಭ ಮತ್ತು ಮುಕ್ತಾಯ | 59/೫೯ | | 27/೨೭ | THE WICKETKEEPER - ಘೂಟ ರಕ್ಷಕ | 134/೧೩೪ |
| 13/೧೩ | INNINGS - ಸರದಿ (ಇನ್ನಿಂಗ್ಸ್) | 66/೬೬ | | 28/೨೮ | THE FIELDER - ಕ್ಷೇತ್ರ ರಕ್ಷಕ | 138/೧೩೮ |
| 14/೧೪ | THE FOLLOW ON - ಮರಳಿ ಸರದಿಯ ಮುಂದುವರಿಕೆ | 68/೬೮ | | 29/೨೯ | THE WICKET BROKEN – ವಿಕೆಟ್ ಬೀಳಿಸುವುದು | 145/೧೪೫ |

| | | | | | | |
|---|---|---|---|---|---|---|
| 30/೩೦ | BATTER OUT OF HIS/HER GROUND - ದಾಂಡಿಗ ಅವನ ಜಾಗದಿಂದ ಹೊರಗಿರುವುದು | 148/೧೪೮ | | 39/೩೯ | STUMPED - ಸ್ಟಂಪ್ಡ್ | 171/೧೭೧ |
| 31/೩೧ | APPEALS - ಮನವಿಗಳು | 150/೧೫೦ | | 40/೪೦ | TIMED OUT - ಟೈಮ್ಡ್ ಔಟ್ | 172/೧೭೨ |
| 32/೩೨ | BOWLED - ಬೌಲ್ಡ್ | 152/೧೫೨ | | 41/೪೧ | UNFAIR PLAY - ನಿಯಮಬಾಹಿರ ಆಟ | 173/೧೭೩ |
| 33/೩೩ | CAUGHT - ಕಾಟ್ (ಬುತ್ತಿ ಹಿಡಿಯುವುದು) | 153/೧೫೩ | | 42/೪೨ | PLAYER'S CONDUCT - ಆಟಗಾರರ ನಡವಳಿಕೆ | 204/೨೦೪ |
| 34/೩೪ | HIT THE BALL TWICE - ಚೆಂಡನ್ನು ಎರಡು ಸಲ ಹೊಡೆಯುವುದು (ಹಿಟ್ ದಿ ಬಾಲ್ ಟ್ವೈಸ್) | 156/೧೫೬ | | A - ಎ | APPENDIX A – DEFINITIONS ಅನುಬಂಧ ಎ - ಉಪಯೋಗಿಸಿದ ಪದಗಳ ವ್ಯಾಖ್ಯಾನ ಮತ್ತು ವಿವರಣೆ | 217/೨೧೭ |
| 35/೩೫ | HIT WICKET - ಹಿಟ್ ವಿಕೆಟ್ | 159/೧೫೯ | | B - ಬಿ | APPENDIX B - ಅನುಬಂಧ ಬಿ – ದಾಂಡು ನಿಯಮ ೫ | 230/2೩೦ |
| 36/೩೬ | LEG BEFORE WICKET - ಎಲ್ ಬಿ ಡಬ್ಲ್ಯೂ ( ಘೂಟಗಳ ಮುಂದೆ ಕಾಲು) | 161/೧೬೧ | | C -ಸಿ | APPENDIX C – THE PITCH ಅನುಬಂಧ ಸಿ – ನಿಯಮ ೬ (ಆಟದ ಪಟ್ಟಿ) ಮತ್ತು ನಿಯಮ ೭(ಕ್ರೀಸ್ ಗಳು) | 237/೨೩೭ |
| 37/೩೭ | OBSTRUCTING THE FIELD | 163/೧೬೩ | | D- ಡಿ | APPENDIX D - ಅನುಬಂಧ ಡಿ – ನಿಯಮ ೮ (ಘೂಟಗಳು) | 238/೨೩೮ |
| 38/೩೮ | RUN OUT - ರನ್ ಔಟ್ | 166/೧೬೬ | | E - ಇ | APPENDIX E - ಅನುಬಂಧ ಇ – ಘೂಟರಕ್ಷಕನ ಕೈಗವಚ | 239/೨೩೯ |
| | | | | | ABOUT AUTHOR - ಲೆಖಕರ ಬಗ್ಗೆ | 258/೨೫೮ |

## THE PREFACE - ಮುನ್ನುಡಿ

The game of Cricket has been governed by a series of Codes of Laws for over 275 years. These Codes have been subject to additions and alterations recommended by the governing authorities of the time. Since its formation in 1787, Marylebone Cricket Club (MCC) has been recognised as the sole authority for drawing up the Code and for all subsequent amendments. The Club also holds the World Copyright.

ಕ್ರಿಕೆಟ್ ಆಟವು ಹಿಂದಿನ ೨೭೫ ವರ್ಷಗಳಿಂದ ನಿಯಮಗಳ ಸಂಹಿತೆಯ ಮೂಲಕ ನಿಯಂತ್ರಿಸಲ್ಪಡುತ್ತಿದೆ. ಈ ಸಂಹಿತೆಗಳು ಆಯಾ ಕಾಲಕ್ಕೆ ಆಡಳಿತ ಪ್ರಾಧಿಕಾರಗಳು ಮಾಡುವ ಸೇರ್ಪಡೆ ಮತ್ತು ಮಾರ್ಪಾಡಿನ ಶಿಫಾರಿಸುಗಳಿಗೆ ಒಳಪಟ್ಟಿವೆ. ೧೭೮೭ರಲ್ಲಿ ರಚನೆಯಾದಾಗಿನಿಂದ ಮೆಲ್ಬರ್ನ್ ಕ್ರಿಕೆಟ್ ಕ್ಲಬ್ (ಎಂ.ಸಿ.ಸಿ.) ಸಂಸ್ಥೆಯನ್ನು, ಈ ಆಟದ ಸಂಹಿತೆಗಳ ಗೊತ್ತುಪಡಿಸುವಿಕೆ ಹಾಗೂ ತದನಂತರದ ಎಲ್ಲಾ ತಿದ್ದುಪಡಿಗಳಿಗಾಗಿ, ಏಕಮೇವ ಪ್ರಾಧಿಕಾರವನ್ನಾಗಿ ಗುರುತಿಸಲಾಗಿದೆ. ಈ ಕ್ಲಬ್ ವಿಶ್ವ ವ್ಯಾಪಿ ಕೃತಿ ಹಕ್ಕನ್ನು ಪಡೆದಿದೆ.

The basic Laws of Cricket have stood the test of time remarkably well. While the game has evolved over generations, it remains recognisably the same sport as in decades and centuries gone by. The Laws today may be longer and more complex than the earliest Codes in the 18th Century, but they retain the same central core, and often some of the same language. It is thought that one of the real reasons for this sustainability is not just the appeal of cricket as a sport, but also that cricketers have traditionally been prepared to play in the Spirit of the Game, recognised in the Preamble since 2000, as well as in accordance with the Laws.

ಕ್ರಿಕೆಟ್ ಆಟದ ಮೂಲ ನಿಯಮಗಳು ಹಲವಾರು ಪರೀಕ್ಷೆಗಳನ್ನು ಗಮನಾರ್ಹವಾಗಿ ದಾಟಿ ಬಂದಿವೆ. ಕ್ರಿಕೆಟ್ ಆಟವು ಶತಮಾನಗಳಿ0ದ ವಿಕಸನಗೊಳ್ಳುತ್ತಾ ಬ0ದಿದೆ, ಆದರೂ ಅದು ಹತ್ತಾರು ವರ್ಷಗಳೇ ಏಕೆ ಶತಮಾನಗಳಿಂದಲೂ ತನ್ನ ಆಟದ ಸ್ವರೂಪವನ್ನು ಉಳಿಸಿಕೊಂಡು ಬಂದಿದೆ. ೧೮ನೇ ಶತಮಾನಕ್ಕೆ ಹೊಲಿಸಿದರೆ ಇಂದಿನ ನಿಯಮಗಳು ಉದ್ದ ಮತ್ತು ಹೆಚ್ಚು ಕ್ಲಿಷ್ಟಕರ ಎನಿಸಬಹುದು, ಆದರೇ ಅವುಗಳ ಭಾಷೆ ಮತ್ತು ತಿರುಳು ಒಂದೆ ಆಗಿರುತ್ತದೆ. ಕ್ರಿಕೆಟ್ ಆಟಗಾರರು ಸಂಪ್ರದಾಯಬದ್ದವಾಗಿ, ಸನ್ ೨೦೦೦ ದಿಂದ ಅಳವಡಿಸಲಾದ ಪೀಠಿಕೆಯಲ್ಲಿ ವಿವರಿಸಿದ ಆಟದ ಸ್ಫೂರ್ತಿ ಹಾಗೂ ನಿಯಮಗಳ ಅನುಸಾರ ಆಡಲು ಸಿದ್ದವಾಗಿರುವುದು ಮತ್ತು ಜನಪ್ರಿಯತೆ ಇದರ ನಿಜವಾದ ಕಾರಣಗಳು.

That said, the game does evolve, and the Laws must do so with it. The changes made in the 2017 Code – of which this is the third edition - reflected views following a global consultation with players, umpires and administrators at all levels of the game, including the

International Cricket Council, the sport's global governing body. The game had evolved quickly, requiring six Editions of the 2000 Code to be published in only fifteen years. A new Code was necessary to rationalise these amendments and to list the Laws in a more logical format and order.  The guiding objectives behind the 2017 changes, evidenced from the consultation, were to maintain a fair balance between bat and ball, to make the Laws easier to understand, to safeguard players' welfare, and to give umpires more mechanisms to address instances of poor behaviour by players. Those principles have continued to guide this third edition, in which changes are intended to shape the game of cricket as it should be played, rather than being reliant on outdated, if long-standing, traditions. With that in mind, for the first time in 2017, the Laws were written in a gender-neutral format, reflecting, and further encouraging, the rising popularity of the game amongst women and girls. This edition goes a step further, replacing the old term 'batter' with the gender-neutral 'batter' – reflecting that cricket is a game for everyone, and that language shapes our behaviours.

ಆಟವು ವಿಕಸನಗೊಂಡಂತೆ ಆಟದ ನಿಯಮಗಳಲ್ಲಿ ಕಾಲ ಕಾಲಕ್ಕೆ ಬದಲಾವಣೆಗಳಾಗುವುದು ಸಹಜ.  ೨೦೧೭ರ ಕೋಡನಲ್ಲಿ -ಇದು ಮೂರನೆಯ ಬದಲಾವಣೆ- ಮಾಡಿರುವ ಬದಲಾವಣೆಗಳು ಇಂಟರ್‌ನ್ಯಾಶನಲ್ ಕ್ರಿಕೆಟ್ ಕೌನ್ಸಿಲ್ (ಐ.ಸಿ.ಸಿ.), ಆಟದ ಜಾಗತಿಕ ಕ್ರಿಕೆಟ್ ಪ್ರಾಧಿಕಾರಗಳನ್ನು ಒಳಗೊಂಡಂತೆ ಜಾಗತೀಕವಾಗಿ ಎಲ್ಲ ಪಾತಳಿಯ ಆಟಗಾರರು, ಅಂಪೈರ್‌ಗಳು ಮತ್ತು ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಹೊರಬಂದ ಅಭಿಪ್ರಾಯಗಳನ್ನು ಬಿಂಬಿಸುತ್ತವೆ. ಆಟವು ಎಷ್ಟು ಬೇಗ ಬೆಳೆಯಿತೆಂದರೆ ೧೫ ವರ್ಷಗಳಲ್ಲಿ ೨೦೦೦ ಕೋಡ್‌ನ ಒಂಬತ್ತು ಅವತರಣಿಕೆಗಳನ್ನು ಬಿಡುಗಡೆ ಮಾಡಬೇಕಾಯಿತು. ಈ ಎಲ್ಲ ಬದಲಾವಣೆಗಳನ್ನು ಕ್ರೋಢಿಕರಿಸಿ, ನಿಯಮಗಳನ್ನು ಹೆಚ್ಚು ತಾರ್ಕಿಕವಾದ ರೀತಿಯಲ್ಲಿ ನಮೂದಿಸಲು ಹೊಸ ಕೋಡ್‌ನ ಅವಶ್ಯಕತೆ ಕಂಡುಬಂದಿತು. ೨೦೧೭ರಲ್ಲಿ ಈ ಸಮಾಲೊಚನೆಗಳಿ0ದ ತಂದ ಬದಲಾವಣೆಗಳ ಉದ್ದೇಶ,  ಸಾಧ್ಯವಾದಷ್ಟು ಚೆಂಡು ಮತ್ತು ದಾಂಡಿನ ನಡುವಿನ ಸಮತೋಲನ ಕಾಪಾಡುವುದು, ನಿಯಮಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯಕವಾಗುವುದು, ಆಟಗಾರರ ಕ್ಷೇಮವನ್ನು ಕಾಪಾಡುವುದು ಮತ್ತು ಅಂಪೈರ್‌ಗಳಿಗೆ ಆಟಗಾರರ ಕೆಳಮಟ್ಟದ ವರ್ತನೆಗಳನ್ನು ನಿಯಂತ್ರಿಸಲು ಹೆಚ್ಚು ಅಧಿಕಾರವನ್ನು ಕೊಡುವುದು, ಈ ಬದಲಾವಣೆಗಳ ಹಿಂದಿನ ಮಾರ್ಗದರ್ಶಿ ಉದ್ದೇಶಗಳು ಸಮಾಲೋಚನೆಗಳಿಂದ ಬಂದವುಗಳು. ಮೊದಲ ಬಾರಿಗೆ ನಿಯಮಗಳನ್ನು ಲಿಂಗ ಭೇದವಿಲ್ಲದಂತೆ ಬರೆದಿರುವುದು, ಹೆಣ್ಣುಮಕ್ಕಳಲ್ಲಿ ಆಟದ ಬಗ್ಗೆ ಹೆಚ್ಚುತ್ತಿರುವ ಜನಪ್ರಿಯತೆಯ ದ್ಯೋತಕವಾಗಿದೆ. ಈ ಆವೃತ್ತಿಯಲ್ಲಿ ಒಂದು ಹೆಜ್ಜೆ ಮುಂದಿರಿಸಿ ಲಿಂಗ ಭೇದ ಕಾಯ್ದು ಕೊಳ್ಳಲು "ಬ್ಯಾಟ್ಸಮನ್" ಪದವನ್ನು "ಬ್ಯಾಟರ" ಕನ್ನಡದಲ್ಲಿ " ದಾಂಡಿಗ" ಅಂತ ಬದಲಿಸಲಾಗಿದೆ ಯಾಕೆಂದರೇ ಭಾಷೆ ನಮ್ಮ ನಡುವಳಿಕೆಯನ್ನು ರೂಪಿಸುತ್ತವೆ.

The MCC Laws of Cricket provide the framework around which all cricket  matches are based. Individual leagues and governing bodies then add their  own playing regulations on top, amending the Laws to suit the differing needs of, for example, matches in junior cricket, T20 matches and Test matches. In almost all cases, the fundamentals of the game, such as scoring runs and taking wickets, remain unchanged in such regulations.

ಎಂ.ಸಿ.ಸಿ.ಯ ಕ್ರಿಕೆಟ್ ನಿಯಮಗಳ ಸುತ್ತಲೂ ಎಲ್ಲ ಪಂದ್ಯಗಳನ್ನು ಆಡಬೇಕು. ಪ್ರತ್ಯೇಕ ಆಡಳಿತ ಪ್ರಾಧಿಕಾರಗಳು ಸರಣಿ ಪಂದ್ಯಗಳಲ್ಲಿ ಅವಶ್ಯವಿದ್ದಲ್ಲಿ, ಉದಾಹರಣೆಗೆ, ಕಿರಿಯರ ಕ್ರಿಕೆಟ್, ಟಿ೨೦ ಕ್ರಿಕೆಟ್ ಮತ್ತು ಟೆಸ್ಟ್ ಪಂದ್ಯಗಳಿಗೆ ಬೇಕಾಗುವ ವಿವಿಧ ಅವಶ್ಯಕತೆಗಳಿಗೆ ಅನುಸಾರವಾಗಿ, ಇವುಗಳ ಮೇಲೆ ಪ್ರಾಯೋಗಿಕ ನಿಯಮಗಳನ್ನು ನಿಯಮಗಳ ಬದಲಾವಣೆಗಾಗಿ ರಚಿಸಬಹುದು. ಆದರೇ, ಬಹುತೇಕ ಎಲ್ಲ ಸಂದರ್ಭಗಳಲ್ಲಿ, ಇಂತಹ ಪ್ರಾಯೋಗಿಕ ನಿಯಮಗಳಲ್ಲಿ,  ಆಟದ ಮೂಲ ಸ್ವರೂಪವನ್ನು, ಅಂದರೆ ಘಳಿಸುವ ರನಗಳು, ಹುದ್ದರಿ ಪಡೆಯುವುದು/ ಪತನವಾಗುವುದು ಗಳನ್ನು ಬದಲಿಸಬಾರದು.

The Laws contained in this book are correct  at the time of its publication but the MCC website (www.lords.org) and Laws of Cricket App provide a digital version which will be updated with any minor changes, if necessary.

ಈ ಪುಸ್ತಕದಲ್ಲಿಯ ನಿಯಮಗಳು ಪುಸ್ತಕ ಬಿಡುಗಡೆಯಾದ ಸಮಯದಲ್ಲಿ ಸರಿಯಾಗಿವೆ. ಆದರೆ ಎಂ.ಸಿ.ಸಿ. ವೆಬಸೈಟ್ (www.lords.org)  ಮತ್ತು ಕ್ರಿಕೆಟ್ ನಿಯಮಗಳ ಡಿಜಿಟಲ ಅವತರಣಿಕೆಗಳನ್ನು ಅಗತ್ಯವಿದ್ದರೆ ಕೆಲವು ಸಣ್ಣ ಬದಲಾವಣೆಯೊಂದಿಗೆ ತಿದ್ದುಪಡಿಸಲಾಗಿರಬಹುದು.

Significant dates in the history of the Laws are as follows:

ಕ್ರಿಕೆಟ್ ಆಟದ ನಿಯಮಗಳ ಚರಿತ್ರೆಯಲ್ಲಿ ಗಮನಾರ್ಹ ದಿನಾಂಕಗಳು ಹೀಗಿವೆ

1700 Cricket was recognised as early as this date.

೧೭೦೦ ಕ್ರಿಕೆಟ್ ಆಟವನ್ನು ಗುರುತಿಸಲಾಗಿತ್ತು.

1744 The earliest known Code was drawn up by certain “Noblemen and Gentlemen” whoused the Artillery Ground in London

೧೭೪೪ ಗೊತ್ತಿರುವ ಅತೀ ಮೊದಲಿನ ನಿಯಮಗಳ ಸಂಹಿತೆಯನ್ನು (ಕೋಡ್) ಲಂಡನ್‌ನಲ್ಲಿರುವ ಆರ್ಟಿಲರಿ ಮೈದಾನ ಉಪಯೋಗಿಸುತ್ತಿದ್ದ ಕೆಲವು “ಶ್ರೀಮಂತ ಮತ್ತು ಸಭ್ಯ ವ್ಯಕ್ತಿಗಳು” ಗೊತ್ತುಪಡಿಸಿದರು.

1755 The Laws were revised by “Several Cricket Clubs, particularly the Star and Garter inPall Mall”.

೧೭೫೫ ಪಾಲ ಮಾಲನಲ್ಲಿಯ ಕೆಲವು ಕ್ರಿಕೆಟ್ ಕ್ಲಬ್ಬುಗಳು, ಮುಖ್ಯವಾಗಿ ದಿ ಸ್ಟಾರ್ ಮತ್ತು ಗಾರ್ಟರ ನಿಯಮಗಳನ್ನು ಪರಿಷ್ಕರಿಸಿದವು

. 1774 A further revision was produced by "a Committee of Noblemen and Gentlemen ofKent, Hampshire, Surrey, Sussex, Middlesex and London at the Star and Garter".

೧೭೭೪ ಕೆಂಟ್, ಹ್ಯಾಂಪಶೈರ್, ಸರ್ರೆ, ಸಸೆಕ್ಸ್, ಮಿಡಲ್‌ಸೆಕ್ಸ್, ಮತ್ತು ಲಂಡನ್ನಿನ ಕೆಲ ಶ್ರೀಮಂತ ಮತ್ತು ಸಭ್ಯ ವ್ಯಕ್ತಿಗಳ ಒಂದು ಸಮಿತಿ ದಿ ಸ್ಟಾರ್ ಮತ್ತು ಗಾರ್ಟರ್‌ನಲ್ಲಿ ನಿಯಮಗಳನ್ನು ಮತ್ತಷ್ಟು ಪರಿಷ್ಕರಿಸಿತು.

1786 A further revision was undertaken by a similar body of Noblemen and Gentlemen ofKent, Hampshire, Surrey, Sussex, Middlesex, and London.

೧೭೮೬ ಕೆಂಟ್, ಹ್ಯಾಂಪಶೈರ್, ಸರ್ರೆ, ಸಸೆಕ್ಸ್, ಮಿಡಲ್‌ಸೆಕ್ಸ್, ಮತ್ತು ಲಂಡನ್ನಿನ ಕೆಲ ಶ್ರೀಮಂತ ಮತ್ತು ಸಭ್ಯ ವ್ಯಕ್ತಿಗಳ ಒಂದು ಸಮಿತಿ ನಿಯಮಗಳನ್ನು ಮತ್ತಷ್ಟು ಪರಿಷ್ಕರಿಸಿತು.

1788 The first MCC Code of Laws was adopted on 30 May.

೧೭೮೮ ಎಂ.ಸಿ.ಸಿ. ಯ ಮೊಟ್ಟ ಮೊದಲ ಕ್ರಿಕೆಟ್ ಆಟದ ಸಂಹಿತೆಯನ್ನು ಮೇ ೩೦ರಂದು ಅಂಗೀಕರಿಸಲಾಯಿತು.

18.35 A new Code of Laws was approved by the MCC Committee on 19 May.

೧೮೩೫ ಹೊಸ ನಿಯಮಗಳ ಸಂಹಿತೆಯನ್ನು ಎಂ.ಸಿ.ಸಿ. ಯ ಸಮಿತಿಯು ಮೇ ೧೯ರಂದು ಅಂಗೀಕರಿಸಿತು.

1884 Afterconsultation with cricket clubs worldwide, important alterations wereincorporated in a new version approved at an MCC Special General Meeting on 21 April.

೧೮೮೪ ವಿಶ್ವಾದ್ಯಂತ ಕ್ರಿಕೆಟ್ ಕ್ಲಬ್ಬುಗಳೊಡನೆ ಸಮಾಲೋಚಿಸಿ, ಮುಖ್ಯ ತಿದ್ದುಪಡಿಗಳನ್ನು ಮಾಡಿದ ಹೊಸ ಆವೃತ್ತಿ ಎಂ.ಸಿ.ಸಿ. ಯ ವಿಶೇಷ ಸಾರ್ವತ್ರಿಕ ಸಭೆಯಲ್ಲಿ ಏಪ್ರಿಲ್ ೨೧ರಂದು ಅನುಮೋದಿಸಲಾಯಿತು.

1947 A new Code of Laws was approved at an MCC Special General Meeting on 7 May. The main changes were aimed at achieving clarification and better arrangement of the Laws and their interpretations.

೧೯೪೭ ಮೇ ೭ರಂದು ಎಂ.ಸಿ.ಸಿ. ಯ ವಿಶೇಷ ಸಾರ್ವತ್ರಿಕ ಸಭೆಯಲ್ಲಿ ನಿಯಮಗಳ ಹೊಸ ಸಂಹಿತೆಯನ್ನು ಅನುಮೋದಿಸಲಾಯಿತು. ಮುಖ್ಯ ಬದಲಾವಣೆಗಳ ಗುರಿ ಸ್ಪಷ್ಟೀಕರಣ ಮತ್ತು ನಿಯಮಗಳ ಉತ್ತಮ ಜೋಡಣೆ ಮತ್ತು ಸ್ಪಷ್ಟೀಕರಣ ಕಡೆ ಇತ್ತು.

1979 After five editions of the 1947 Code, a further revision was begun in 1974 with the aimbeing to remove certain anomalies, consolidate various Amendments and Notes, and toachieve greater clarity and simplicity. The new Code of Laws was approved at an MCC Special General Meeting on 21 November, coming into effect in 1980.

೧೯೭೯ ೧೯೪೭ರ ಐದು ಆವೃತ್ತಿಗಳ ನಂತರ, ಕೆಲವು ನ್ಯೂನತೆಗಳನ್ನು ಸರಿಪಡಿಸುವ, ಬೇರೆ ಬೇರೆ ತಿದ್ದುಪಡಿಗಳನ್ನು ಮತ್ತು ಸೂಚನೆಗಳನ್ನು ಕ್ರೋಢೀಕರಿಸು ಮತ್ತು ಹೆಚ್ಚಿನ ಸ್ಪಷ್ಟತೆಗಾಗಿ ಹಾಗೂ ಸರಳತೆಯ ಗುರಿಯೊಂದಿಗೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡಲು ೧೯೭೪ರಲ್ಲಿ ಪ್ರಾರಂಭವಾಯಿತು. ಹೊಸ ನಿಯಮಗಳ ಸಂಹಿತೆಯನ್ನು ನವೆಂಬರ್ ೨೧ರಂದು ಎಂ.ಸಿ.ಸಿ. ಯ ವಿಶೇಷ ಸಾರ್ವತ್ರಿಕ ಸಭೆಯಲ್ಲಿ ೧೯೮೦ರಲ್ಲಿ ಚಾಲ್ತಿಯಲ್ಲಿ ಬರುವಂತೆ ಅಂಗೀಕರಿಸಲಾಯಿತು.

1992 A second edition of the 1980 Code was produced, incorporating all the amendments which were approved during the intervening twelve years.

೧೯೯೨ ಈ ಮಧ್ಯಂತರದ ೧೨ ವರ್ಷಗಳ ಅವಧಿಯಲ್ಲಿ ಅನುಮೋದಿಸಲ್ಪಟ್ಟ ಎಲ್ಲಾ ತಿದ್ದುಪಡಿಗಳನ್ನು ಅಳವಡಿಸಿ ೧೯೮೦ರ ಎರಡನೇ ಆವೃತ್ತಿಯನ್ನು ಹೊರತರಲಾಯಿತು.

2000 A new Code of Laws, including a Preamble defining the Spirit of Cricket, was approved on 3 May.

೨೦೦೦ ಕ್ರಿಕೆಟ್ ಆಟದ ಸ್ಫೂರ್ತಿಯ ವಿವರಣೆಯ ಪೀಠಿಕೆ ಇರುವ ಹೊಸ ನಿಯಮಗಳ ಸಂಹಿತೆಯನ್ನು ಮೇ ೩, ೨೦೦೦ರಂದು ಅನುಮೋದಿಸಲಾಯಿತು.

2007 MCC established the Laws sub-committee, replacing the Laws Working Party.

೨೦೦೭ ಎಂ.ಸಿ.ಸಿ. ನಿಯಮಗಳ ಉಪ ಸಮಿತಿಯನ್ನು, ನಿಯಮಗಳ ಕಾರ್ಯಕಾರಿ ಪಂಗಡದ ಬದಲಾಗಿ ರಚಿಸಲಾಯಿತು.

2010 A fourth edition of the 2000 Code was published. MCC members agreed at a Special General Meeting on 5 May that the MCC Committee is entitled to change the Laws ofCricket without seeking the approval of the members.

೨೦೧೦ ೨೦೦೦ದ ಸಂಹಿತೆಯ ನಾಲ್ಕನೆಯ ಆವೃತ್ತಿಯನ್ನು ಪ್ರಕಟಿಸಲಾಯಿತು. ಮೇ ೫ರಂದು ನಡೆದ ವಿಶೇಷ ಸಾರ್ವತ್ರಿಕ ಸಭೆಯಲ್ಲಿ ಸದಸ್ಯರ ಅನುಮೋದನೆಯನ್ನು ಪಡೆಯದೆ ಎಂ.ಸಿ.ಸಿ. ನಿಯಮಗಳ ಉಪ ಸಮಿತಿ ಕ್ರಿಕೆಟ್ ನಿಯಮಗಳನ್ನು ಬದಲಾಯಿಸುವ ಹಕ್ಕಿಗೆ ಸದಸ್ಯರು ಒಪ್ಪಿಕೊಂಡರು.

2017 After six Editions of the 2000 Code, a new 2017 Code came into effect on 1 October. A second Edition was published in April 2019.

೨೦೧೭ ೨೦೦೦ದ ಸಂಹಿತೆಯ ಆರನೆಯ ಆವೃತ್ತಿಯ ನಂತರ, ೨೦೧೭ರ ಹೊಸ ಸಂಹಿತೆ ಅಕ್ಟೋಬರ್ ೧, ರಿಂದ ಚಾಲ್ತಿಯಲ್ಲಿ ಬಂದಿತು. ಈ ಕೋಡ್ ನ ೨ನೇ ಆವೃತ್ತಿ ೨೦೧೯ರಲ್ಲಿ ಪ್ರಕಟವಾಯಿತು.

Many queries on the Laws are sent to MCC for decision every year. MCC, as the accepted Custodian of the Laws, has always been prepared to answer the queries and to give interpretations. However, MCC reserves the right not to answer queries which it considers to be frivolous or connected in any way with a bet or wager.

ನಿಯಮಗಳನ್ನು ಆಧರಿಸಿದ ಬಹಳಷ್ಟು ಪ್ರಶ್ನೆಗಳನ್ನು ಪ್ರತಿ ವರ್ಷ ಎಂ.ಸಿ.ಸಿ.ಗೆ ಕಳಿಸುತ್ತಾರೆ. ಎಂ.ಸಿ.ಸಿ. ನಿಯಮಗಳ ರಕ್ಷಕನಾಗಿ ಯಾವಾಗಲೂ ಉತ್ತರಿಸಲು ಮತ್ತು ಸ್ಪಷ್ಟೀಕರಿಸಲು ತಯಾರಿದೆ. ಆದರೆ, ಎಂ.ಸಿ.ಸಿ. ಪ್ರಶ್ನೆಗಳು ಕ್ಷುಲ್ಲಕ ಅಥವಾ ಜೂಜಾಟಕ್ಕೆ ಸಂಬಂಧಿಸಿದ್ದು ಎಂದು ಪರಿಗಣಿಸಿದರೆ ಉತ್ತರಿಸದೆ ಇರುವ ಹಕ್ಕನ್ನು ಪಡೆದಿದೆ.

Lord's Cricket Ground
London NW8 8QN
*1 October 2022*

G.W. Lavender
Chief Executive & Secretary, MCC

ಲಾರ್ಡ್ಸ್ ಕ್ರಿಕೆಟ್ ಮೈದಾನ
ಲಂಡನ್ ಎನ್ ಡಬ್ಲ್ಯು ೮ ೮ ಕ್ಯುಎನ್
೧ನೇ ಅಕ್ಟೋಬರ್ ೨೦೨೨

ಜಿ. ಡಬ್ಲ್ಯು. ಲಾವೆಂಡರ
ಮುಖ್ಯ ಕಾರ್ಯವಾಹಕ ಮತ್ತು ಕಾರ್ಯದರ್ಶಿ, ಎಂ.ಸಿ.ಸಿ.

| Laws of Cricket 2017 Code 3rd Edition 2022 | ಕ್ರಿಕೆಟ್ ನಿಯಮಗಳು (೨೦೧೭ ಕೋಡ ೩ ನೇಯ ಆವೃತ್ತಿ ೨೦೨೨) |
|---|---|
| **THE PREAMBLE – THE SPIRIT OF CRICKET** | **ಪೀಠಿಕೆ : ಕ್ರಿಕೆಟ್ ಆಟದ ಸ್ಫೂರ್ತಿ** |
| Cricket owes much of its appeal and enjoyment to the fact that it should be played not only according to the Laws, but also within the Spirit of Cricket.<br>The major responsibility for ensuring fair play rests with the captains, but extends to all players, 0match officials and, especially in junior cricket, teachers, coaches, and parents.<br>Respect is central to the Spirit of Cricket.<br>• Respect your captain, teammates, opponents, and the authority of the umpires.<br>• Play hard and play fair.<br>• Accept the umpire's decision.<br>• Create a positive atmosphere by your own conduct and encourage others to do likewise.<br>• Show self-discipline, even when things go against you.<br>• Congratulate the opposition on their successes and enjoy those of your own team.<br>• Thank the officials and your opposition at the end of the match, | ಕ್ರಿಕೆಟ್ ಆಟವು ತನ್ನದೇ ಆದ ವೈಶಿಷ್ಟ್ಯ ವನ್ನು ಹೊಂದಿದ್ದು, ಆಟವನ್ನು ನಿಯಮಗಳ ಬದ್ಧತೆಯ ಜೊತೆಗೆ ಆಟದ ಸ್ಫೂರ್ತಿಗೆ ಒಳಪಟ್ಟು ಆಡಬೇಕೆಂಬ ವಾಸ್ತವಾಂಶವನ್ನು ನಿರೀಕ್ಷಿಸುತ್ತದೆ.<br>ನಿಯಮ ಬದ್ಧ ಆಟದ ಖಚಿತತೆಯ ಜವಾಬ್ದಾರಿಯೂ ನಾಯಕರಾದ್ದಾಗಿದೆ. ಆದರೂ ಇದು ಎಲ್ಲ ಆಟಗಾರರಿಗೆ, ಪಂದ್ಯದ ಅಧಿಕಾರಿಗಳಿಗೆ ಹಾಗೂ ವಿಶೇಷವಾಗಿ ಕಿರಿಯರ ಕ್ರಿಕೆಟ್ ಆಟದಲ್ಲಿ ಅಧ್ಯಾಪಕರಿಗೆ, ತರಬೇತುದಾರರಿಗೆ ಹಾಗೂ ಪೋಷಕರಿಗೆ ವಿಸ್ತೃತಗೊಳ್ಳುತ್ತದೆ.<br>ಗೌರವಿಸುವುದು ಕ್ರಿಕೆಟ್ ಆಟದ ಸ್ಫೂರ್ತಿಯ ಕೇಂದ್ರಬಿಂದುವಾಗಿದೆ.<br>• ನಿಮ್ಮ ನಾಯಕ, ತಂಡದ ಸದಸ್ಯರು, ಎದುರಾಳಿ ತಂಡದವರು ಹಾಗೂ ಅಂಪೈರ್‌ಗಳನ್ನು ಗೌರವಿಸಿ.<br>• ಶ್ರಮ ವಹಿಸಿ ಹಾಗೂ ನ್ಯಾಯಯುತವಾಗಿ ಆಡಿ.<br>• ಅಂಪೈರುಗಳ ನಿರ್ಣಯವನ್ನು ಒಪ್ಪಿ.<br>• ನಿಮ್ಮ ನಡತೆಯಿಂದ ಸಕಾರಾತ್ಮಕ ವಾತಾವರಣವನ್ನು ಸೃಷ್ಟಿಸಿ, ಇತರರೂ ಅಂತಹ ನಡತೆಯನ್ನು ಹೊಂದಲು ಉತ್ತೇಜಿಸಿ.<br>• ಸಂದರ್ಭಗಳು ನಿಮ್ಮ ವಿರುದ್ಧವಿದ್ದಾಗಲೂ ಶಿಸ್ತಿನ ನಡತೆ ಪ್ರದರ್ಶಿಸಿ.<br>• ಎದುರಾಳಿಯು ಯಶಸ್ವಿಯಾದಾಗ ಅವರನ್ನು ಅಭಿನಂದಿಸಿ ಮತ್ತು ನಿಮ್ಮ ತಂಡದ್ದಕ್ಕೆ ಸಂತೋಷಪಡಿ. |

| | |
|---|---|
| whatever the result.<br><br>Cricket is an exciting game that encourages leadership, friendship, and teamwork, which brings together people from different nationalities, cultures, and religions, especially when played within the Spirit of Cricket<br><br>*The players, umpires, and scorers in a game of cricket may be of any gender, and the Laws apply equally. The use, throughout the text, of pronouns expressing a binary he/she is as inclusive as practicable, whilst retaining clarity. Except where specifically stated otherwise, every provision of the Laws is to be read as applying to all persons, regardless of gender.* | • ಫಲಿತಾಂಶವು ಏನೇ ಇರಲಿ, ಪಂದ್ಯದ ನಂತರ ಅಧಿಕೃತ ವ್ಯಕ್ತಿಗಳಿಗೆ ಹಾಗೂ ಎದುರಾಳಿ ತಂಡದವರಿಗೆ ಧನ್ಯವಾದಗಳನ್ನು ಅರ್ಪಿಸಿ.<br>ಕ್ರಿಕೆಟ್ ಆಟವು ಕುತೂಹಲಕಾರಿ ಆಟವಾಗಿದ್ದು, ನಾಯಕತ್ವ, ಸ್ನೇಹ, ಒಂದು ತಂಡವಾಗಿ ಇರುವುದಕ್ಕೆ ಪ್ರೋತ್ಸಾಹ ನೀಡುತ್ತದೆ ಹಾಗೂ ಕ್ರಿಕೆಟ್ ಆಟದ ಸ್ಪೂರ್ತಿಯ ಮಿತಿಯೊಳಗೆ ಆಡಿದಾಗ, ವಿವಿಧ ರಾಷ್ಟ್ರಗಳ ಜನತೆ, ಸಂಪ್ರದಾಯ, ಧರ್ಮ ಇವುಗಳನ್ನು ಒಂದುಗೂಡಿಸುತ್ತದೆ<br><br>ಕ್ರಿಕೆಟ್ ಆಟದಲ್ಲಿ ಆಟಗಾರರು, ಅಂಪೈರುಗಳು ಹಾಗೂ ಸ್ಕೋರರ್‌ಗಳು ಯಾವುದೇ ಲಿಂಗದವರಾಗಿರಬಹುದು, ಆದರೆ ಆಟದ ನಿಯಮವು ಸಮಾನವಾಗಿ ಅನ್ವಯಿಸುತ್ತದೆ. ಈ ನಿಯಮಗಳಲ್ಲಿ ಎಲ್ಲೆಡೆ ಅವನು/ಅವಳು ಎಂಬ ಬಳಕೆಯೂ ಸಾಧ್ಯವಾದಷ್ಟು ಸ್ಪಷ್ಟತೆಗಾಗಿ ಉಪಯೊಗಿಸಲಾಗಿದೆ. ನಿರ್ದಿಷ್ಟವಾಗಿ ತಿಳಿಯಪಡಿಸದ ಹೊರತು, ನಿಯಮಗಳ ಎಲ್ಲ ಅವಕಾಶಗಳು, ಲಿಂಗ ಭೇಧವಿಲ್ಲದೆ ಎಲ್ಲ ವ್ಯಕ್ತಿಗಳಿಗೆ ಅನ್ವಯವಾಗುತ್ತವೆ ಎಂದು ಪರಿಗಣಿಸತಕ್ಕದ್ದು. |
| **LAW 1 PLAYERS** | **ನಿಯಮ ೧ ಆಟಗಾರರು** |
| **1.1 Number of players**<br>A match is played between two sides, each of eleven players, one of whom shall be captain.<br><br>By agreement a match may be played between sides of fewer than, or more than, eleven players, but not more than eleven players may field at any time. | **೧.೧ ಆಟಗಾರರ ಸಂಖ್ಯೆ**<br>ಒಂದು ಪಂದ್ಯವು ಹನ್ನೊಂದು ಆಟಗಾರರಿರುವ ಎರಡು ತಂಡಗಳ ನಡುವೆ ನಡೆಯಬೇಕು. ಈ ಹನ್ನೊಂದು ಆಟಗಾರರಲ್ಲಿ ಒಬ್ಬರು ನಾಯಕನಾಗಿರಬೇಕು.<br>ಮೊದಲೇ ಒಪ್ಪಂದ ಮಾಡಿಕೊಂಡಿದ್ದಲ್ಲಿ ಪಂದ್ಯವನ್ನು ಹನ್ನೊಂದಕ್ಕಿಂತ ಹೆಚ್ಚು ಅಥವಾ ಕಡಿಮೆ ಆಟಗಾರರಿರುವ ತಂಡಗಳ |

| | |
|---|---|
| If, during the match and for whatever reason, a side is reduced to fewer than the original number of nominated players, the match shall continue as long as it is possible to do so under the Laws or any agreements made before the toss. | ನಡುವೆ ಆಡಬಹುದು. ಆದರೆ ಪಂದ್ಯದ ಯಾವುದೇ ಸಮಯದಲ್ಲಿ ಹನ್ನೊಂದಕ್ಕಿಂತ ಹೆಚ್ಚು ಆಟಗಾರರು ಕ್ಷೇತ್ರ ರಕ್ಷಣೆ ಮಾಡುವಂತಿಲ್ಲ. ಪಂದ್ಯದ ಯಾವುದೇ ಸಮಯದಲ್ಲಿ, ಯಾವುದೇ ಕಾರಣಕ್ಕಾಗಿ, ಒಂದು ತಂಡವು ಮೂಲತಃ ನೇಮಕಗೊಂಡಿದ್ದ ಆಟಗಾರರ ಸಂಖ್ಯೆಗಿಂತ ಕಡಿಮೆಗೊಂಡರೆ, ಪಂದ್ಯವು ನಿಯಮಗಳ ಅಡಿಯಲ್ಲಿ ಅಥವಾ ಪಂದ್ಯದ ಪ್ರಾರಂಭಕ್ಕೆ ಮೊದಲು ಮಾಡಿಕೊಂಡಂಥ ಒಪ್ಪಂದಗಳ ಮೇರೆಗೆ, ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ನಡೆಸಬೇಕು. |
| **1.2 Nomination and replacement of players**<br>1.2.1 Each captain shall nominate his/her players in writing to one of the umpires before the toss.<br><br>1.2.2 No player may be replaced after the nomination without the consent of the opposingcaptain.<br><br>1.2.3 Any replacement player shall be considered the same player as the nominated player he/she replaced for the purposes of these Laws.<br><br>1.2.3.1 A replacement shall not bat in an innings in which the nominated player he/she is replacing has completed his/her innings. | **೧.೨ ಆಟಗಾರರ ನೇಮಕ ಹಾಗೂ ಬದಲಾವಣೆ**<br>೧.೨.೧ ನಾಣ್ಯ ಚಿಮ್ಮುವ ಮೊದಲು, ಆಯಾ ತಂಡದ ನಾಯಕರು ಅವನ / ಅವಳ ತಂಡದ ಆಟಗಾರರ ನೇಮಕದ ಪಟ್ಟಿಯನ್ನು ಬರವಣಿಗೆಯಲ್ಲಿ ಯಾವುದೇ ಒಬ್ಬ ಅಂಪೈರರಿಗೆ ಸಲ್ಲಿಸಬೇಕು.<br>೧.೨.೨ ನೇಮಕಾತಿ ಯ ನಂತರ ಎದುರಾಳಿ ತಂಡದ ನಾಯಕನ /ನಾಯಕಳ ಅನುಮತಿ ಇಲ್ಲದೇ, ಯಾವುದೇ ಆಟಗಾರನನ್ನು/ ಆಟಗಾರಳನ್ನು ಬದಲಿಸುವಂತಿಲ್ಲ.<br>೧.೨.೩ ಈ ಆಟದ ನಿಯಮಗಳಿಗೆ ಯಾವದೇ ಬದಲಾಗಿಬ0ದ ಆಟಗಾರನನ್ನು/ ಆಟಗಾರಳನ್ನು, ಅವನು/ ಅವಳು ಯಾವ ನೆಮಕಾತಿಗೊ0ಡ ಆಟಗಾರನ/ ಆಟಗಾರಳ ಬದಲಾಗಿ ಬ0ದಿರುತ್ತಾನೊ/ ಬ0ದಿರುತ್ತಾಳೂ ಅವರ0ತೆಯೇ ತಿಳಿಯಬೇಕು.<br>.೨.೩.೧ ಒ0ದು ಸರದಿಯಲ್ಲಿ ಬದಲಾಗಿ ಬ0ದ ಆಟಗಾರ ಯಾವ ನೆಮಕಾತಿಗೊ0ಡ ಆಟಗಾರನ/ಳ ಬದಲಾಗಿ ಬ0ದಿರುತ್ತಾನೊ/ |

| | |
|---|---|
| 1.2.3.2 Any unserved Penalty time, warnings, or suspensions, that applied to the original nominated player will be inherited by his/her replacement. | ಬ0ದಿರುತ್ತಾಳೂ, ಆ ಆಟಗಾರ ತನ್ನ ಸರದಿಯನ್ನು ಪೂರ್ಣ ಗೊಳಿಸಿದ್ದರೆ ಆ ಸರದಿಯಲ್ಲಿ ಬ್ಯಾಟಿ0ಗ ಮಾಡುವ0ತಿಲ್ಲ.<br>.೨.೩.೨ ನೇಮಕಾತೂಗೊ0ಡ ಮೊದಲಿನ ಆಟಗಾರ ಯಾವದೇ ಪೂರ್ತಿ ಗೊಳಸದ ದ0ಡದ ಸಮಯ, ಎಚ್ಚರಿಕೆ ಅಥವಾ ಆಮಾನತ್ತುಗೊ0ಡಿದ್ದರೇ ಅವು ಬದಲಾಗಿ ಬ0ದ ಆಟಗಾರನಿಗೆ / ಆಟಗಾರಳಿಗೆ ಅನ್ವಯಿಸುತ್ತದೆ. |
| **1.3 Captain**<br>1.3.1 If at any time the captain is not available, a deputy shall act for him/her.<br>1.3.2 If a captain is not available to nominate the players, then any person associated with that team may act as his/her deputy to do so. See 1.2.<br>1.3.3 At any time after the nomination of the players, only a nominated player can act as deputy in discharging the duties and responsibilities of the captain as stated in these Laws, including at the toss. See Law 13.4 (The toss). | **೧.೩ ನಾಯಕ**<br>೧.೩.೧ ಪಂದ್ಯದ ಯಾವುದೇ ಸಮಯದಲ್ಲಿ, ನಾಯಕನು /ನಾಯಕಳು ಲಭ್ಯವಿಲ್ಲದಿದ್ದರೆ, ಅವನ/ಅವಳ ಪರವಾಗಿ ಉಪನಾಯಕ ತಂಡವನ್ನು ಪ್ರತಿನಿಧಿಸಬೇಕು.<br>೧.೩.೨ ಆಟಗಾರರನ್ನು ನೇಮಕ ಮಾಡಲು ನಾಯಕನು/ನಾಯಕಳು ಇಲ್ಲದಿದ್ದರೆ, ತಂಡಕ್ಕೆ ಸಂಬಂಧಿಸಿದ ಯಾವುದೇ ವ್ಯಕ್ತಿಯು ಅವನನ್ನು/ಅವಳನ್ನು ಪ್ರತಿನಿಧಿ ಬಹುದು. ೧.೨ ನೋಡಿ.<br>೧.೩.೩ ತಂಡದ ಆಟಗಾರರ ನೇಮಕದ ಪಟ್ಟಿಯನ್ನು ಸಿದ್ಧಪಡಿಸಿದ ನಂತರ, ಈ ನಿಯಮಗಳಲ್ಲಿ ಸೂಚಿಸಿರುವ ನಾಯಕರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು, ಆ ಪಟ್ಟಿಯಲ್ಲಿ ಹೆಸರಿಸಿರುವ ಯಾವುದೇ ಆಟಗಾರ, ನಾಣ್ಯ ಚಿಮ್ಮುವಿಕೆಯನ್ನೂ ಒಳಗೊಂಡಂತೆ, ನಿರ್ವಹಿಸಬೇಕು. |
| **1.4 Responsibility of captains**<br>The captains are responsible at all times for ensuring that play is conducted within The Spirit of Cricket as well as | **೧.೪ ನಾಯಕರ ಜವಾಬ್ದಾರಿ**<br>ಪಂದ್ಯದ ಎಲ್ಲ ಸಮಯದಲ್ಲಿ, ಆಟವು ಆಟದ ನಿಯಮಗಳಿಗೆ ಹಾಗೂ ಕ್ರಿಕೆಟ್ ಆಟದ ಸ್ಪೂರ್ತಿ ಹಾಗೂ ಸಂಪ್ರದಾಯಗಳಿಗಣುವಾಗಿ |

| | |
|---|---|
| within the Laws. See the Preamble – The Spirit of Cricket and Law 41.1 (Fair and unfair play – responsibility of captains). | ನಡೆಯುವುದಕ್ಕೆ ಎರಡೂ ತಂಡದ ನಾಯಕರು ಜವಾಬ್ದಾರರಾಗಿರುತ್ತಾರೆ. ಕ್ರಿಕೆಟ್ ಆಟದ ಸ್ಫೂರ್ತಿ ಮತ್ತು ನಿಯಮ ೪೧.೧ (ನಿಯಮ ಬದ್ಧ ಮತ್ತು ನಿಯಮಬಾಹಿರ ಆಟ - ನಾಯಕರ ಜವಾಬ್ದಾರಿ)- ಗಮನಿಸಿ. |
| **LAW 2 THE UMPIRES** | **ನಿಯಮ ೨ - ಅಂಪೈರ್** |
| **2.1 Appointment and attendance**<br>Before the match, two umpires shall be appointed, one for each end, to control the match as required by the Laws, with absolute impartiality. The umpires shall be present on the ground and report to the Executive of the ground at least 45 minutes before the scheduled start of each day's play. | **೨.೧ ನಿಯುಕ್ತಿ ಮತ್ತು ಹಾಜರಾತಿ**<br>ಪಂದ್ಯಕ್ಕೆ ಮೊದಲು ಒಂದೊಂದು ತುದಿಗೆ ಒಬ್ಬರಂತೆ ಆಟವನ್ನು ನಿಷ್ಪಕ್ಷಪಾತವಾಗಿ (ತಟಸ್ಥತನದಿಂದ) ನಿಯಂತ್ರಿಸಲು ಇಬ್ಬರು ಅಂಪೈರ್‌ಗಳನ್ನು ನೇಮಕಗೊಳಿಸಬೇಕು. ಅಂಪೈರ್‌ಗಳು ಪ್ರತಿ ದಿನದ ಪಂದ್ಯ ಪ್ರಾರಂಭಗೊಳ್ಳುವುದಕ್ಕೆ ಕನಿಷ್ಠ ೪೫ ನಿಮಿಷ ಮೊದಲು ಹಾಜರಿದ್ದು, ಆಟದ ಮೈದಾನದ ಮುಖ್ಯಸ್ಥರ ಬಳಿ ವರದಿ ಮಾಡಿಕೊಳ್ಳಬೇಕು. |
| **2.2 Change of umpire**<br>An umpire shall not be changed during the match, other than in exceptional circumstances, unless he/she is injured or ill. If there has to be a change of umpire, the replacement shall act only as the striker's end umpire unless the captains agree that the replacement should take full responsibility as an umpire. | **೨.೨ ಅಂಪೈರ್ ಬದಲಾವಣೆ**<br>ಪಂದ್ಯ ನಡೆಯುತ್ತಿರುವಾಗ ಯಾವುದೇ ಅಂಪೈರ್‌ನನ್ನು ಅಸ್ವಸ್ಥ ಅಥವಾ ಗಾಯಗೊಳ್ಳದ ಹೊರತು ಇಲ್ಲವೇ ಅನಿವಾರ್ಯ ಕಾರಣವಿಲ್ಲದೆ ಬದಲಿಸುವಂತಿಲ್ಲ. ಒಂದುವೇಳೆ ಅಂಪೈರ್‌ನನ್ನು ಬದಲಾಯಿಸುವ ಅಗತ್ಯ ಬಂದರೆ, ಇಬ್ಬರೂ ನಾಯಕರು ಒಪ್ಪಿದರೆ ಮಾತ್ರ ಆಟದ ಪೂರ್ಣ ಜವಾಬ್ದಾರಿಯನ್ನು ವಹಿಸಬೇಕು, ಇಲ್ಲದಿದ್ದರೆ ಬದಲಿ ಅಂಪೈರ್ ಚೆಂಡನ್ನು ಎದುರಿಸುವ ದಾಂಡಿಗನ ತುದಿಯಲ್ಲಿ ಮಾತ್ರ ಆಟದ ನಿರ್ವಹಣೆ ಮಾಡಬೇಕು. |
| **2.3 Consultation with captains**<br>Before the toss the umpires shall | **೨.೩ ನಾಯಕರೊಡನೆ ಸಮಾಲೋಚನೆ**<br>ಅಂಪೈರ್‌ಗಳು ನಾಣ್ಯ ಚಿಮ್ಮುವ ಮೊದಲು, |

| | |
|---|---|
| 2.3.1 meet with the captains; the umpires shall determine. | ೨.೩.೧ ನಾಯಕರನ್ನು ಭೇಟಿ ಮಾಡಿ ಕೆಳಕಂಡ ಅಂಶಗಳ ಬಗ್ಗೆ ಒಪ್ಪಂದ ಮಾಡಿಕೊಳ್ಳಬೇಕು; |
| 2.3.1.1 the balls to be used during the match. See Law 4 (The ball). | ೨.೩.೧.೧ ಪಂದ್ಯದಲ್ಲಿ ಉಪಯೋಗಿಸುವ ಚೆಂಡುಗಳು. ನಿಯಮ ೪ (ಚೆಂಡು) ಗಮನಿಸಿ. |
| 2.3.1.2 the hours of play and the times and durations of any agreed intervals. In a match of one day’s duration, no specific time need be agreed for the tea interval. It may be agreed instead to take this interval between innings. See Law 11 (Intervals). | ೨.೩.೧.೨ಆಟದ ಸಮಯ (ಅವಧಿ), ಒಪ್ಪಿಕೊಂಡಂತಹ ವಿರಾಮಗಳ ಅವಧಿ ಮತ್ತು ವೇಳೆ. ಒಂದು ದಿನದ ಪಂದ್ಯಗಳಲ್ಲಿ, ಚಹಾ ವಿರಾಮದ ಸಮಯವನ್ನು ನಿಗದಿ ಪಡಿಸುವ ಬದಲಾಗಿ ಸರದಿಗಳ ನಡುವಿನ ಅವಧಿಯಲ್ಲಿ ತೆಗೆದುಕೊಳ್ಳುವುದು. ನಿಯಮ ೧೧ (ವಿರಾಮಗಳು) ಗಮನಿಸಿ. |
| 2.3.1.3 which clock or watch and back-up time piece is to be used during the match. | ೨.೩.೧.೩ ಪಂದ್ಯದ ಅವಧಿಯಲ್ಲಿ ಯಾವ ಗಡಿಯಾರ ಇಲ್ಲವೇ ಕೈಗಡಿಯಾರ ಮತ್ತು ಬೆಂಬಲಿತ ಗಡಿಯಾರವನ್ನು ಉಪಯೋಗಿಸಬೇಕು. |
| 2.3.1.4 the boundary of the field of play and allowances for boundaries, including whether any obstacle within the field of play is to be regarded as a boundary. See Law 19 (Boundaries). | ೨.೩.೧.೪ ಆಟದ ಮೈದಾನದ ಬೌಂಡರಿ (ಪರಿಮಿತಿ) ಮತ್ತು ಬೌಂಡರಿಗಳಿಗೆ ಅನುಮತಿಸುವ ಓಟಗಳು, ಆಟದ ಮೈದಾನದಲ್ಲಿರುವ ಯಾವುದೇ ಅಡೆತಡೆಗಳನ್ನು ಬೌಂಡರಿ ಎಂದು ಪರಿಗಣಿಸಬೇಕೆ ಅಥವಾ ಬೇಡವೇ. ನಿಯಮ ೧೯ (ಬೌಂಡರಿಗಳು) ಗಮನಿಸಿ. |
| 2.3.1.5 the use of covers. See Law 10 (Covering the pitch). | ೨.೩.೧.೫ ಹೊದಿಕೆಗಳನ್ನು (ಕವರ್) ಬಳಸುವಿಕೆಯ ವಿಧಾನ. ನಿಯಮ ೧೦ (ಅಂಕಣಕ್ಕೆ ಹೊದಿಕೆ ಹಾಕುವುದು) ಗಮನಿಸಿ. |
| 2.3.1.6 any special conditions of play affecting the conduct of the match. | ೨.೩.೧.೬ ಪಂದ್ಯ ನಡೆಸಲು, ಪಂದ್ಯದ ಮೇಲೆ ಪರಿಣಾಮ ಬೀರಬಹುದಾದ ಆಟದ ವಿಶೇಷ ನಿಯಮಗಳು. |
| 2.3.2 inform the scorers of agreements in 2.3.1.2, 2.3.1.3, 2.3.1.4 and 2.3.1.6. | |

| | |
|---|---|
| | ೨.೩.೨ ೨.೩.೧.೨, ೨.೩.೧.೩, ೨.೩.೧.೪ ಮತ್ತು ೨.೩.೧.೬ ರಲ್ಲಿನ ಒಪ್ಪಂದಗಳ ಬಗ್ಗೆ ಸ್ಕೋರರ್‌ಗಳಿಗೆ ತಿಳಿಸಬೇಕು. |
| **2.4 The wickets, creases, and boundaries**<br>Before the toss and during the match, the umpires shall satisfy themselves that,<br>2.4.1 the wickets are properly pitched. See Law 8 (The wickets)<br>2.4.2 the creases are correctly marked. See Law 7 (The creases).<br>2.4.3 the boundary of the field of play complies with the requirements of Laws 19.1 (Determining the boundary of the field of play), 19.2 (Identifying and marking the boundary) and 19.3 (Restoring the boundary). | **೨.೪ ಘೂಟಗಳು (ವಿಕೆಟ್ಟುಗಳು), ಕ್ರೀಸ್ ಗಳು ಮತ್ತು ಬೌಂಡರಿಗಳು**<br>ನಾಣ್ಯ ಚಿಮ್ಮುವ ಮೊದಲು ಮತ್ತು ಪಂದ್ಯ ನಡೆಯುವ ಸಮಯದಲ್ಲಿ ಅಂಪೈರ್‌ಗಳು ತಮ್ಮೊಳಗೆ ಕೆಳಕಂಡ ಅಂಶಗಳ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.<br>೨.೪.೧ ಘೂಟಗಳನ್ನು ನಿಯಮಾನುಸಾರ ನೆಟ್ಟಿರುವ ಬಗ್ಗೆ. ನಿಯಮ ೮ (ಘೂಟಗಳು) ಗಮನಿಸಿ.<br>೨.೪.೨ ಕ್ರೀಸ್‌ಗಳನ್ನು ನಿಯಮಾನುಸಾರ ಗುರುತಿಸಿರುವ ಬಗ್ಗೆ. ನಿಯಮ ೭ (ಕ್ರೀಸ್‌ಗಳು) ಗಮನಿಸಿ.<br>೨.೪.೩ ಆಟದ ಮೈದಾನದ ಬೌಂಡರಿ ಗೆರೆಯು ನಿಯಮ ೧೯.೧ ( ಆಟದ ಮೈದಾನದ ಬೌಂಡರಿಯನ್ನು ಗೊತ್ತು ಪಡಿಸುವುದು), ೧೯.೨ (ಬೌಂಡರಿಯನ್ನು ಗೊತ್ತುಪಡಿಸಿ ಗುರುತು ಮಾಡುವುದು) ಮತ್ತು ೧೯.೩. (ಬೌಂಡರಿಯನ್ನು ಸ್ವಸ್ಥಾನಕ್ಕೆ ತರುವುದು) ಗಳಿಗೆ ಅನುಸಾರವಾಗಿ ಇರುವುದು |
| **2.5 Conduct of the match implements and equipment.**<br>Before the toss and during the match, the umpires shall satisfy themselves that,<br>2.5.1 the conduct of the match is strictly in accordance with the Laws. | **೨.೫ ಪಂದ್ಯವನ್ನು ನಡೆಸುವುದು, ಸಲಕರಣೆಗಳು ಮತ್ತು ಸಾಮಗ್ರಿಗಳು**<br>**ನಾಣ್ಯ ಚಿಮ್ಮುವ ಮೊದಲು ಮತ್ತು ಪಂದ್ಯ ನಡೆಯುವಾಗ , ಅಂಪೈರಗಳು**<br>೨.೫.೧ ಪಂದ್ಯವನ್ನು ನಿಯಮಗಳ ಪ್ರಕಾರವೆ ನಡೆಸಬೇಕು. |

| | |
|---|---|
| 2.5.2 the implements used in the match conform to the following: | ೨.೫.೨ ಪಂದ್ಯದಲ್ಲಿ ಉಪಯೋಗಿಸುವ ಸಲಕರಣೆಗಳು ಕೆಳಗಿನ ನಿಬಂಧನೆಗಳ ಅನುಸಾರವಾಗಿರಬೇಕು, |
| 2.5.2.1 Law 4 (The ball). | ೨.೫.೨.೧ ನಿಯಮ ೪ (ಚೆಂಡು) |
| 2.5.2.2 externally visible requirements of Law 5 (The bat) and Appendix B. | ೨.೫.೨.೨ ನಿಯಮ ೫ (ದಾಂಡು)ರ ಬಾಹ್ಯವಾಗಿ ಕಾಣಿಸುವ ಮತ್ತು ಅನುಬಂಧ "ಬ" ರ ಅವಶ್ಯಕತೆಗಳು. |
| 2.5.2.3 either Laws 8.2 (Size of stumps) and 8.3 (The bails) or, if applicable, Law 8.4 (Junior cricket). | ೨.೫.೨.೩ ನಿಯಮ ೮.೨ (ಘೂಟಗಳ ಅಳತೆ) ಮತ್ತು ೮.೩ (ಬೇಲ್ಸ್) ಇಲ್ಲವೇ ೮.೪ (ಕಿರಿಯರ ಕ್ರಿಕೆಟ್). |
| 2.5.3 no player uses equipment other than that permitted. See Appendix A.2. Note particularly therein the interpretation of 'protective helmet'. | ೨.೫.೩ ಯಾವುದೇ ಆಟಗಾರನು ಅನುಮತಿಸಿರುವ ಉಪಕರಣಗಳನ್ನು ಬಿಟ್ಟು ಬೇರೆಯದನ್ನು ಉಪಯೋಗಿಸಬಾರದು. ಅನುಬಂಧ "ಅ" ಗಮನಿಸಿ. |
| 2.5.4 the wicket-keeper's gloves comply with the requirements of Law 27.2 (Gloves). | ೨.೫.೪ ಘೂಟರಕ್ಷಕನ ಕೈಗವಚವು ನಿಯಮ ೨೭.೨ (ಕೈಗವಚಗಳು)ರ ಅವಶ್ಯಕತೆಗಳ ಅನುಸಾರವಾಗಿರಬೇಕು. |
| **2.6 Fair and unfair play**<br><br>The umpires shall be the sole judges of fair and unfair play. | **೨.೬ ನಿಯಮಾನುಸಾರ ಹಾಗೂ ನಿಯಮ ಬಾಹಿರ ಆಟ**<br>ಆಟವು ನಿಯಮಾನುಸಾರ ಇಲ್ಲವೇ ನಿಯಮಬಾಹಿರವಾಗಿ ಸಾಗಿದೆಯೊ ಎಂದು ನಿರ್ಣಾಯಿಸುವ ಅಧಿಕಾರ ಅಂಪೈರ್‌ಗೊಬ್ಬರಿಗೇ ಇದೆ. |
| **2.7 Fitness for play** | **೨.೭ ಆಟ ನಡೆಸಲು ಯುಕ್ತವಾದ ಅಂಶಗಳು** |
| 2.7.1 It is solely for the umpires together to decide whether either condition of ground, weather or light or exceptional circumstances mean that it would be dangerous or unreasonable for play to take place. | **೨.೭.೧** ಆಟದ ಮೈದಾನದ ಪರಿಸ್ಥಿತಿ, ಹವಾಮಾನ ಅಥವಾ ಬೆಳಕು ಅಥವಾ ವಿಶೇಷ ಸಂದರ್ಭಗಳು ಆಟ ನಡೆಸಲು ಅಪಾಯಕಾರಿಯಾಗಿದೆ ಅಥವಾ ಅನುಚಿತವಾಗಿದೆ ಎಂಬುದನ್ನು ಅಂಪೈರ್‌ಗಳಿಬ್ಬರೇ ಒಟ್ಟಾಗಿ ನಿರ್ಧರಿಸಬೇಕು. |

| | |
|---|---|
| Conditions shall not be regarded as either dangerous or unreasonable merely because they are not ideal.<br>The fact that the grass and the ball are wet does not warrant the ground conditions being regarded as unreasonable or dangerous.<br>2.7.2 Conditions shall be regarded as dangerous if there is actual and foreseeable risk to the safety of any player or umpire.<br>2.7.3 Conditions shall be regarded as unreasonable if, although posing no risk to safety, it would not be sensible for play to proceed.<br>2.7.4 If the umpires consider the ground is so wet or slippery as to deprive the bowler of a reasonable foothold, the fielders of the power of free movement, or the batters of the ability to play their strokes or to run between the wickets, then these conditions shall be regarded as so bad that it would be dangerous and unreasonable for play to take place. | ಪರಿಸ್ಥಿತಿಯು ಕೇವಲ ಆದರ್ಶವಾಗಿಲ್ಲ ಎಂಬ ಕಾರಣಕ್ಕಾಗಿ ಅದು ಅಪಾಯಕಾರಿ ಅಥವಾ ಅನುಚಿತ ಎಂದು ಪರಿಗಣಿಸಬಾರದು.<br>ಮೈದಾನದಲ್ಲಿಯ ಹುಲ್ಲು ಮತ್ತು ಚೆಂಡು ತೇವವಾಗಿವೆ ಎಂಬ ಕಾರಣಕ್ಕಾಗಿ ಆಟದ ಮೈದಾನ ಅಪಾಯಕಾರಿ ಅಥವಾ ಅನುಚಿತವಾಗಿದೆ ಎಂದು ಪರಿಗಣಿಸಬಾರದು.<br>೨.೭.೨ ಯಾವುದೇ ಆಟಗಾರ ಅಥವಾ ಅಂಪೈರರಿಗೆ ಸುರಕ್ಷತಾ ದೃಷ್ಟಿಯಿಂದ ಅಪಾಯವಿದೆ ಎಂದು ವಾಸ್ತವಿಕವಾಗಿ ಇಲ್ಲವೇ ಮುಂಜಾಗ್ರತೆಯಿಂದ ಗೊತ್ತಾದರೆ, ಪರಿಸ್ಥಿತಿಯನ್ನು ಅಪಾಯಕಾರಿ ಎಂದು ಪರಿಗಣಿಸಬೇಕು.<br>೨.೭.೩ ಸುರಕ್ಷತೆಗೆ ಯಾವುದೇ ರೀತಿಯ ತೊಂದರೆ ಇಲ್ಲದಿದ್ದರೂ, ಆಟವನ್ನು ಮುಂದುವರೆಸುವುದು ಯುಕ್ತವಲ್ಲ ಎಂದು ಭಾವಿಸಿದರೆ, ಪರಿಸ್ಥಿತಿಯನ್ನು ಅನುಚಿತ ಎಂದು ಪರಿಗಣಿಸಬೇಕು.<br>೨.೭.೪ ಅಂಪೈರ್, ಮೈದಾನವು ಅತಿ ಒದ್ದೆಯಾಗಿ ಇಲ್ಲವೇ ಜಾರಿಕೆಯಾಗಿದ್ದು ಬೌಲರನಿಗೆ ಸರಿಯಾಗಿ ಓಡಲು ಬಾರದ ಸ್ಥಿತಿಯಲ್ಲಿದ್ದರೆ, ಕ್ಷೇತ್ರರಕ್ಷಕರು ಸುಲಭವಾಗಿ ಓಡಾಡಲು ಬಾರದಂತಿದ್ದರೆ ಅಥವಾ ದಾಂಡಿಗರು ತಮ್ಮ ಸಹಜವಾದ ಹೊಡೆತಗಳನ್ನು ಮಾಡಲು ಬಾರದ ಮತ್ತು ಓಟಗಳನ್ನು ಗಳಿಸಲು ತೊಂದರೆಯಾಗುವ ಸ್ಥಿತಿಯಲ್ಲಿದ್ದರೆ, ಅಂಕಣವನ್ನು ಆಟವು ಮುಂದುವರೆಯಲು ಅಪಾಯಕಾರಿ ಮತ್ತು ಅನುಚಿತವೆಂದು ಪರಿಗಣಿಸಬೇಕು. |
| **2.8 Suspension of play in dangerous or unreasonable circumstances** | **೨.೮ ಅಪಾಯಕಾರಿ ಅಥವಾ ಅನುಚಿತ ಸಂದರ್ಭಗಳಲ್ಲಿ ಆಟವನ್ನು ನಿಲ್ಲಿಸುವುದು** |

| | |
|---|---|
| 2.8.1 All references to ground include the pitch. See Law 6.1 (Area of pitch). | ೨.೮.೧ ಆಟದ ಮೈದಾನಕ್ಕೆ ಉಲ್ಲೇಖಿಸಿರುವ ಎಲ್ಲ ಅಂಶಗಳು ಆಟದ ಪಟ್ಟಿಯನ್ನೂ ಒಳಗೊಳ್ಳುತ್ತದೆ. ನಿಯಮ ೬.೧ (ಆಟದ ಪಟ್ಟಿಯ ವಿಸ್ತೀರ್ಣ) ಗಮನಿಸಿ. |
| 2.8.2 The Umpires shall immediately suspend play, or not allow play to start or to recommence, if either umpire considers that the conditions of ground, weather or light, or any other circumstances are either dangerous or unreasonable. | ೨.೮.೨ ಯಾವುದೇ ಅಂಪೈರ್ ಮೈದಾನದ ಸ್ಥಿತಿ, ಬೆಳಕು ಇಲ್ಲವೇ ಹವಾಮಾನ ಅಥವಾ ಯಾವುದೇ ಸಂದರ್ಭವು ಅಪಾಯಕಾರಿ ಅಥವಾ ಅನುಚಿತ ಎಂದು ಭಾವಿಸಿದರೆ, ಅಂಪೈರ್‌ಗಳಿಬ್ಬರೂ ಆಟವನ್ನು ಆ ಕೂಡಲೇ ನಿಲ್ಲಿಸತಕ್ಕದ್ದು ಅಥವಾ ಆಟವನ್ನು ಪ್ರಾರಂಭಿಸಲು ಅಥವಾ ಪುನರಾರಂಭಿಸಲು ಅನುಮತಿಸಬಾರದು. |
| 2.8.3 When there is a suspension of play it is the responsibility of the umpires to monitor conditions. They shall make inspections as often as appropriate, unaccompanied by any players or officials. Immediately the umpires together agree that the conditions are no longer dangerous or unreasonable they shall call upon the players to resume play. | ೨.೮.೩ ಈ ರೀತಿಯಾಗಿ ಆಟವನ್ನು ನಿಲ್ಲಿಸಿರುವ ಸಮಯದಲ್ಲಿ, ಪರಿಸ್ಥಿತಿಯನ್ನು ಗಮನಿಸುವ ಜವಾಬ್ದಾರಿ ಅಂಪೈರ್‌ಗಳದ್ದು. ಅವರಿಬ್ಬರೇ ತಮ್ಮ ಇಚ್ಛೆಗನುಸಾರವಾಗಿ ಆಟ ಪ್ರಾರಂಭಿಸಲು ವಾತಾವರಣ ಅನುಕೂಲವಾಗಿದೆಯೋ ಇಲ್ಲವೋ ಎಂಬುದನ್ನು, ಆಟಗಾರರು ಅಥವಾ ಅಧಿಕಾರಿಗಳು ಅವರ ಜೊತೆಗಿಲ್ಲದೆ ಮೇಲಿಂದ ಮೇಲೆ ಪರೀಕ್ಷಿಸಬೇಕು. ಅಂಪೈರ್‌ಗಳಿಬ್ಬರೂ ಪರಿಸ್ಥಿತಿಯು ಅಪಾಯಕಾರಿಯಾಗಿಲ್ಲ ಅಥವಾ ಅನುಚಿತವಾಗಿಲ್ಲ ಎಂಬ ತೀರ್ಮಾನಕ್ಕೆ ಬಂದಕೂಡಲೇ ಆಟವನ್ನು ಮುಂದುವರೆಸಲು ಆಟಗಾರರಿಗೆ ಆದೇಶ ನೀಡಬೇಕು. |
| **2.9 Position of umpires** | **೨.೯ ಅಂಪೈರ್ ಸ್ಥಾನ**<br>ಅಂಪೈರ್ ತಾವು ತೆಗೆದುಕೊಳ್ಳುವ ನಿರ್ಣಯಕ್ಕೆ ಯಾವ ಜಾಗದಲ್ಲಿ |

| | |
|---|---|
| The umpires shall stand where they can best see any act upon which their decision may be required.<br>Subject to this over-riding consideration, the bowler's end umpire shall stand in a position so as not to interfere with either the bowler's run-up or the striker's view.<br>The striker's end umpire may elect to stand on the offside instead of the onside of the<br>pitch, provided he/she informs the captain of the fielding side, the striker, and the other umpire. | ನಿಂತುಕೊಂಡರೆ ಸ್ಪಷ್ಟವಾಗಿ ಆಟ ಕಾಣಬಹುದೋ ಅಂತಹ ಜಾಗದಲ್ಲಿ ನಿಂತುಕೊಳ್ಳಬೇಕು.<br>ಮೇಲಿನ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು, ಬೌಲರ್ ತುದಿಯ ಅಂಪೈರ್, ಬೌಲರನ ಓಟಕ್ಕೆ ಹಾಗೂ ಚೆಂಡನ್ನು ಎದುರಿಸುವ ದಾಂಡಿಗನ ನೋಟಕ್ಕೆ ಅಡ್ಡಬರದಂತಹ ಜಾಗದಲ್ಲಿ ನಿಂತುಕೊಳ್ಳಬೇಕು.<br>ಚೆಂಡನ್ನು ಎದುರಿಸುವ ದಾಂಡಿಗನ ತುದಿಯಲ್ಲಿರುವ ಅಂಪೈರ್ ಲೆಗ್ ಸೈಡ್ ಬಿಟ್ಟು ಆಫ್ ಸೈಡ್ ಕಡೆ ನಿಂತುಕೊಳ್ಳಬಹುದು. ಆದರೆ, ಹೀಗೆ ನಿಂತುಕೊಳ್ಳುವಾಗ ತಮ್ಮ ಇಚ್ಚೆಯನ್ನು ಕ್ಷೇತ್ರ ರಕ್ಷಣೆ ಮಾಡುತ್ತಿರುವ ತಂಡದ ನಾಯಕ, ದಾಂಡಿಗರಿಗೆ ಹಾಗೂ ಸಹ ಅಂಪೈರರಿಗೆತಿಳಿಸಬೇಕು. |
| **2.10 Umpires changing ends.**<br>The umpires shall change ends after each side has had one completed innings. See Law 13.3 (Completed innings). | **೨.೧೦ ಅಂಪೈರ್ ತುದಿಯನ್ನು ಬದಲಾಯಿಸುವುದು**<br>ಅಂಪೈರ್ ಎರಡೂ ತಂಡಗಳ ಒಂದೊಂದು ಸರದಿ ಮುಕ್ತಾಯವಾದ ಮೇಲೆ (ನಂತರ) ತಮ್ಮ ತುದಿಯನ್ನು ಬದಲಿಸಬೇಕು. ನಿಯಮ ೧೩.೩ (ಪೂರ್ಣಗೊಂಡ ಸರದಿ) ಗಮನಿಸಿ.. |
| **2.11 Disagreement and dispute**<br>Where there is disagreement or dispute about any matter, the umpires together shall make the final decision. See also Law 31.6 (Consultation by umpires). | **೨.೧೧ ಭಿನ್ನಾಭಿಪ್ರಾಯ ಹಾಗೂ ವಿವಾದ**<br>ಯಾವುದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ಅಥವಾ ವಿವಾದವಿದ್ದಲ್ಲಿ, ಇಬ್ಬರೂ ಅಂಪೈರ್‌ಗಳು ಒಮ್ಮತದಿಂದ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕು. ನಿಯಮ ೩೧.೬ (ಅಂಪೈರ್‌ಗಳ ಸಮಾಲೋಚನೆ) ಗಮನಿಸಿ. |

| | |
|---|---|
| **2.12 Umpire's decision**<br>An umpire may alter any decision provided that such alteration is made promptly and does not contradict Law 20.6 (Dead ball not to be revoked). This apart, an umpire's decision, once made, is final. | **೨.೧೨ ಅಂಪೈರ್ ನಿರ್ಣಯ**<br>ಅಂಪೈರ್ ತಮ್ಮ ನಿರ್ಣಯವನ್ನು ಬದಲಾಯಿಸಬಹುದು, ಆದರೆ ಈ ಬದಲಾವಣೆ ತತ್ ಕ್ಷಣ ಮಾಡಬೇಕು ಮತ್ತು ನಿಯಮ ೨೦.೬ (ಡೆಡ್ ಬಾಲ್ ಹಿಂಪಡೆಯಬಾರದು) ಕ್ಕೆ ವ್ಯತಿರಿಕ್ತ ವಾಗಿರಬಾರದು. ಇದರ ಹೊರತಾಗಿ ಅಂಪೈರ್ ಒಮ್ಮೆ ಮಾಡಿದ ನಿಣಿಯವೆ ಅಂತ್ತಮ. |
| **2.13 Signals**<br>2.13.1 The following code of signals shall be used by umpires:<br>2.13.1.1 Signals made while the ball is in play.<br><br>**Dead ball** - by crossing and re-crossing the wrists below the waist.<br><br>**No ball** - by extending one arm horizontally.<br><br>**Out** - by raising an index finger above the head. (If not out, the umpire shall call Not out.)<br><br>**Wide** - by extending both arms horizontally. | **೨.೧೩ ಸನ್ನೆಗಳು**<br>೨.೧೩.೧ ಅಂಪೈರ್‌ಗಳು ಕೆಳಕಂಡ ಕ್ರೋಢಿಕರಿಸಿದ ಸನ್ನೆಗಳನ್ನು ಉಪಯೋಗಿಸಬೇಕು.<br>೨.೧೩.೧.೧ ಚೆಂಡು ಆಟದ ಗಣನೆಯಲ್ಲಿರುವಾಗ ಮಾಡುವ ಸನ್ನೆಗಳು;<br>**ಡೆಡ್ ಬಾಲ್** ಎರಡೂ ಕೈಗಳ ಮಣಿಕಟ್ಟುಗಳನ್ನು ಸೊಂಟದ ಕೆಳಗೆ ಎಡದಿಂದ ಬಲಕ್ಕೆ ಮತ್ತು ಬಲದಿಂದ ಎಡಕ್ಕೆ ಆಡಿಸುವುದು (ಕತ್ತರಿ ಆಕಾರದಲ್ಲಿ ಮಾಡುವುದು ಹಾಗೂ ಬಿಡುವುದು).<br>**ನೋ ಬಾಲ್** ಒಂದು ಕೈಯನ್ನು ನೆಲಕ್ಕೆ ಸಮಾನಾಂತರದಲ್ಲಿ ಚಾಚುವುದು.<br>**ಔಟ್** ತೋರು ಬೆರಳನ್ನು ತಲೆಯ ಮೇಲೆ ಎತ್ತುವುದು (ನಾಟ್ ಔಟ್ ಇದ್ದರೆ, ನಾಟ್ ಔಟ್ ಎಂದು ಕೂಗಿ ಹೇಳಬೇಕು.)<br>**ವೈಡ್ ಬಾಲ್**ಎರಡೂ ಕೈಗಳನ್ನು ನೆಲಕ್ಕೆ ಸಮಾನಾಂತರವಾಗಿ ಚಾಚುವುದು |

| | |
|---|---|
| 2.13.1.2 When the ball is dead, the bowler's end umpire shall repeat the signals in 2.13.1.1, with the exception of the signal for Out, to the scorers. | ೨.೧೩.೧.೨ ಚೆಂಡು ಆಟದ ಗಣನೆಯಲ್ಲಿ ಇಲ್ಲದಾಗ (ಡೆಡ್ ಆದಾಗ) ಬೌಲರ್ ತುದಿಯ ಅಂಪೈರ್ ೨.೧೩.೧.೧ ರಲ್ಲಿನ ಸನ್ನೆಗಳನ್ನು, ಔಟ್ ಸನ್ನೆಯನ್ನು ಹೊರತುಪಡಿಸಿ, ಸ್ಕೋರರ್‌ಗಳಿಗೆ ಮರುಸನ್ನೆ ಮಾಡಬೇಕು. |
| 2.13.1.3 The signals listed below shall be made to the scorers only when the ball is dead. | ೨.೧೩.೧.೩ ಈ ಕೆಳಗಿನ ಸನ್ನೆಗಳನ್ನು ಸ್ಕೋರರ್‌ಗಳಿಗೆ ಚೆಂಡು ಆಟದ ಗಣನೆಯಲ್ಲಿ ಇಲ್ಲದಾಗ ಮಾತ್ರ ಮಾಡಬೇಕು |
| **Boundary 4** - by waving an arm from side-to-side finishing with the arm across the chest. | **ಬೌಂಡರಿ ೪ -** ಒಂದು ಕೈಯನ್ನು ಎದೆಯ ಮಟ್ಟದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಆಡಿಸಿ ಎದೆಯ ಹತ್ತಿರ ಪೂರ್ಣಗೊಳಿಸುವುದು |
| **Boundary 6** - by raising both arms above the head. | **ಬೌಂಡರಿ ೬ -** ಎರಡೂ ಕೈಗಳನ್ನು ತಲೆಯ ಮೇಲೆ ಎತ್ತಬೇಕು |
| **Bye** - by raising an open hand above the head. | **ಬೈ** ಒಂದು ಕೈಯನ್ನು ತಲೆಯ ಮೇಲೆ ಎತ್ತಿ ಅಂಗೈ ತೋರಿಸುವುದು. |
| **Commencement of last hour** - by pointing to a raised wrist with the other hand. | **ಅಂತಿಮ ತಾಸಿನ ಆಟದ ಪ್ರಾರಂಭ** ಒಂದು ಕೈಯನ್ನು ತಲೆಯ ಮೇಲೆ ಎತ್ತಿ. ಆ ಕೈ ಮುಂಗಟ್ಟನ್ನು ಇನ್ನೊಂದು ಕೈಯಿಂದ ತೋರಿಸುವುದು. |
| **Five Penalty to the batting side -** by repeated tapping of one shoulder runs awarded to with the opposite hand. | **ದಾಂಡಿಗ ತಂಡಕ್ಕೆ ದಂಡದ ೫ ಓಟಗಳ ಅನುದಾನ –** ಒಂದು ಭುಜವನ್ನು ಮತ್ತೊಂದು ಭುಜದ ಕೈಯಿಂದ ಪದೇ ಪದೇ ತಟ್ಟುವುದು. |
| **Five Penalty runs awarded to the fielding side.** by placing one hand on the opposite shoulder. | **ಕ್ಷೇತ್ರ ರಕ್ಷಣೆ ತಂಡಕ್ಕೆ ದಂಡದ ೫ ಓಟಗಳ ಅನುದಾನ -** ಒಂದು ಭುಜದ ಮೇಲೆ ಮತ್ತೊಂದು ಭುಜದ ಕೈಯನ್ನು ಇಡುವುದು |
| | **ಲೆಗ್ ಬೈ -** ಒಂದು ಕೈಯಿಂದ ಮೇಲೆತ್ತಿದ ಮಂಡಿಯನ್ನು ಮುಟ್ಟುವುದು. |

**Leg bye** - by touching a raised knee with the hand.

**New ball** - by holding the ball above the head.

**Revoke last signal** - by touching both shoulders, each with the opposite hand.

**Short run** - by bending one arm upwards and touching the nearer shoulder with the tips of the fingers.

The following signals are for Levels 3 and 4 of the players conduct offences. Each signal has two parts, both of which should be acknowledged separately by the scorers.

**Level 3 conduct –**

**Part 1 -** by putting one arm out to the side of the body and repeatedly raising it and lowering it.

**Part 2** - by raising both hands, all fingers spread, to shoulder height, palms facing towards the scorers.

**Level 4 conduct –**

**Part 1** - by putting one arm out to the side of the body and repeatedly raising it and lowering it.

**ಹೊಸ ಚೆಂಡು -** ಹೊಸ ಚೆಂಡನ್ನು ತಲೆಯ ಮೇಲೆತ್ತಿ ತೋರಿಸುವುದು

**ಈಚಿನ ಸನ್ನೆಯನ್ನು ಹಿಂಪಡೆಯುವುದು -** ಎರಡೂ ಕೈಗಳಿಂದ ವಿರುದ್ಧ ಭುಜಗಳನ್ನು ಮುಟ್ಟುವುದು.

**ಅಪೂರ್ಣ ಓಟ -** ಕೈಯನ್ನು ಸಮಾನಾಂತರವಾಗಿ ಮೇಲೆತ್ತಿ ಸನಿಹದ ಭುಜವನ್ನು ಮುಟ್ಟುವುದು.

ಆಟಗಾರರ ನಡತೆಯ ಉಲ್ಲಂಘನೆಗಾಗಿ ಲೆವೆಲ್ ೩ ಮತ್ತು ಲೆವೆಲ್ ೪ ರ ಮಟ್ಟದಲ್ಲಿ ಕೆಳಕಂಡ ಸನ್ನೆಗಳನ್ನು ಉಪಯೋಗಿಸಬೇಕು. ಪ್ರತಿ ಸನ್ನೆಯು ಎರಡು ಭಾಗಗಳದ್ದಾಗಿದೆ. ಎರಡೂ ಭಾಗಗಳ ಸನ್ನೆಗೆ ಸ್ಕೋರರ್ ಪ್ರತ್ಯೇಕವಾಗಿ ಮರುಸನ್ನೆ ಮಾಡಬೇಕು.

**ಲೆವೆಲ್ ೩ ನಡತೆ**

**ಭಾಗ ೧** : ತೋಳನ್ನು ದೇಹದ ಬದಿಗೆ ತಂದು ಮೇಲೆ ಕೆಳಗೆ ಆಡಿಸಿ ಪುನರಾವರ್ತಿಸುವುದು.

**ಭಾಗ ೨** : ಭುಜದ ಮಟ್ಟಕ್ಕೆ ಎರಡೂ ಕೈಗಳ ಅಂಗೈಯನ್ನು ಎತ್ತಿ ಬೆರಳುಗಳನ್ನು ಹರಡಿ ಸ್ಕೋರರಿಗೆ ತೋರಿಸುವುದು

**ಲೆವೆಲ್ ೪ ನಡತೆ**

**ಭಾಗ ೧ :** ತೋಳನ್ನು ದೇಹದ ಬದಿಗೆ ತಂದು ಮೇಲೆ ಕೆಳಗೆ ಆಡಿಸಿ ಪುನರಾವರ್ತಿಸುವುದು.

**ಭಾಗ ೨** : ದೇಹದ ಬದಿಗೆ ಭುಜದ ಮಟ್ಟಕ್ಕೆ ಎತ್ತಿದ ತೋರುಬೆರಳನ್ನು ಸ್ಕೋರರಿಗೆ ತೋರಿಸುವುದು

| | |
|---|---|
| **Part 2** - by raising an index finger, held at shoulder height, to the side of the body.<br>2.13.1.4 All the signals in 2.13.1.3 are to be made by the bowler's end umpire except that for Short run, which is to be signalled by the umpire at the end where short running occurs. However, the bowler's end umpire shall be responsible both for the final signal of Short run to the scorers and, if more than one run is short, for informing them as to the number of runs to be recorded.<br>2.13.2 The umpire shall wait until each signal to the scorers has been separately acknowledged by a scorer before allowing play to proceed.<br>If several signals are to be used, they should be given in the order that the events occurred. | ೨.೧೩.೧.೪ ಅಪೂರ್ಣ ಓಟದ ಸನ್ನೆಯನ್ನು ಹೊರತುಪಡಿಸಿ, ಮೇಲಿನ ೨.೧.೧೩.೧ ರಲ್ಲಿರುವ ಎಲ್ಲ ಸನ್ನೆಗಳನ್ನು, ಬೌಲರ್ ತುದಿಯಲ್ಲಿರುವ ಅಂಪೈರ್ ಮಾಡಬೇಕು. ಅಪೂರ್ಣ ಓಟದ ಸನ್ನೆಯನ್ನು ಅಪೂರ್ಣ ಓಟವು ಯಾರ ತುದಿಯಲ್ಲಿ ಉಂಟಾಗಿದೆಯೋ ಆ ತುದಿಯಲ್ಲಿರುವ ಅಂಪೈರ್ ಮಾಡಬೇಕು. ಆದರೆ ಸ್ಕೋರರಿಗೆ ಮಾಡುವ ಕೊನೆಯ ಸನ್ನೆ ಮತ್ತು ಒಂದಕ್ಕಿಂತ ಹೆಚ್ಚು ಓಟಗಳು ಅಪೂರ್ಣವಾಗಿದ್ದರೆ ಎಷ್ಟು ಓಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎಂದು ತಿಳಿಸುವ ಜವಾಬ್ದಾರಿ ಬೌಲರ್ ತುದಿಯ ಅಂಪೈರದ್ದು.<br>೨.೧೩.೨ ಅಂಪೈರ್ ತಾವು ಮಾಡುವ ಪ್ರತಿ ಸನ್ನೆಗೆ ಸ್ಕೋರರ್ ಮರುಸನ್ನೆ ಮಾಡಿದ್ದನ್ನು ಖಚಿತ ಪಡಿಸಿಕೊಂಡ ನಂತರವೇ ಆಟವನ್ನು ಮುಂದುವರೆಸಬೇಕು.<br>ಒಂದಕ್ಕಿಂತ ಹೆಚ್ಚು ಸನ್ನೆಗಳನ್ನು ಮಾಡುವ ಪ್ರಸಂಗ ಬಂದರೆ, ಅವುಗಳನ್ನು ಘಟನೆಗಳು ನಡೆದ ಕ್ರಮಾಂಕದಲ್ಲಿ ಮಾಡಬೇಕು |
| **2.14 Informing the umpires.**<br>Throughout the Laws, wherever the umpires are to receive information from captains or other players, it will be sufficient for one umpire to be so informed and for him to inform the other umpire. | **೨.೧೪ ಅಂಪೈರ್‌ಗಳಿಗೆ ತಿಳಿಸುವುದು**<br>ಅಂಪೈರ್‌ಗಳು ಇಡೀ ನಿಯಮಗಳಲ್ಲಿ, ನಾಯಕರು ಅಥವಾ ಇತರೆ ಆಟಗಾರರಿಂದ ಮಾಹಿತಿ ಪಡೆಯುವ ಸಂದರ್ಭದಲ್ಲಿ, ಅಂತಹ ಮಾಹಿತಿಯನ್ನು ಒಬ್ಬ ಅಂಪೈರಿಗೆ ತಿಳಿಸಿದರೆ ಸಾಕು ಮತ್ತು ಅವನು/ಅವಳು ತನ್ನ ಸಹ ಅಂಪೈರರಿಗೆ ತಿಳಿಸಬೇಕು |

| | |
|---|---|
| **2.15 Correctness of scores**<br>Consultation between umpires and scorers on doubtful points is essential. The umpires shall, throughout the match, satisfy themselves as to the correctness of the number of runs scored, the wickets that have fallen and, where appropriate, the number of overs bowled.<br>They shall agree these with the scorers at least at every interval, other than a drinks interval, and at the conclusion of the match. See Laws 3.2 (Correctness of scores), 16.8 (Correctness of result) and 16.10 (Result not to be changed) | **೨.೧೫ ಸ್ಕೋರಿನ ನಿಖರತೆ**<br>ಸಂಶಯಾಸ್ಪದ ವಿಷಯದ ಬಗ್ಗೆ ಅಂಪೈರ್ ಹಾಗೂ ಸ್ಕೋರರ್‌ಗಳ ನಡುವಿನ ಸಮಾಲೋಚನೆ ಅತ್ಯಗತ್ಯ. ಪಂದ್ಯದುದ್ದಕ್ಕೂ ಅಂಪೈರ್‌ಗಳು ಗಳಿಸಿದ ಓಟಗಳ ಮೊತ್ತ, ಪಥನವಾದ ಹುದ್ದರಿಗಳ ಮತ್ತು ಅವಶ್ಯವಿದ್ದಾಗಲೆಲ್ಲ ಬೌಲ್ ಮಾಡಿರುವ ಓವರ್‌ಗಳ ಸಂಖ್ಯೆ ಸರಿಯಾಗಿ ನಮೂದಿಸಲಾಗಿದೆ ಎಂಬುವುದರ ಬಗ್ಗೆ ತೃಪ್ತಿಪಡಿಸಿಕೊಳ್ಳಬೇಕು. ಈ ಅಂಶಗಳ ಬಗ್ಗೆ ಅಂಪೈರುಗಳು ಪಾನೀಯ ವಿರಾಮವನ್ನು ಹೊರತುಪಡಿಸಿ ಉಳಿದ ವಿರಾಮದ ವೇಳೆಯಲ್ಲಿ ಮತ್ತು ಪಂದ್ಯ ಮುಗಿದ ನಂತರ ಸ್ಕೋರರ್‌ಗಳ ಜೊತೆ ಸಮಾಲೋಚಿಸಿ ಒಪ್ಪಿ ಕೊಳ್ಳಬೇಕು. ನಿಯಮ ೩.೨ (ಸ್ಕೋರಿನ ನಿಖರತೆ), ೧೬.೮ (ಫಲಿತಾಂಶದ ನಿಖರತೆ) ಮತ್ತು ೨೧.೧೦ (ಫಲಿತಾಂಶ ಬದಲಿಸತಕ್ಕದ್ದಲ್ಲ) ಗಮನಿಸಿ |
| **LAW 3 THE SCORERS** | **ನಿಯಮ ೩ ಸ್ಕೋರರ್‌ಗಳು** |
| **3.1 Appointment of scorers**<br>Two scorers shall be appointed to record all runs scored, all wickets taken and, where appropriate, number of overs bowled. | **೩.೧ ಸ್ಕೋರರ್‌ಗಳ ನೇಮಕಾತಿ**<br>ಇಬ್ಬರು ಸ್ಕೋರರಗಳನ್ನು ಗಳಿಸಿದ ಎಲ್ಲ ಓಟಗಳು, ಪಡೆದ ಎಲ್ಲ ಹುದ್ದರಿಗಳು ಮತ್ತು ಸೂಕ್ತವಿರುವೆಡೆ ಬೌಲ್ ಮಾಡಲ್ಪಟ್ಟ ಓವರ್‌ಗಳನ್ನು ನೊಂದಾಯಿಸಲು ನೇಮಕಾತಿ ಮಾಡಬೇಕು. |
| **3.2 Correctness of scores**<br>The scorers shall frequently check to ensure that their records agree. They shall agree with the umpires, at least at every interval, other than drinks intervals, and at the | **೩.೨ ಸ್ಕೋರಿನ ನಿಖರತೆ**<br>ಸ್ಕೋರರ್‌ಗಳು ತಾವು ನೊಂದಾಯಿಸಿರುವ ಮಾಹಿತಿ ಗಳು ಪರಸ್ಪರ ಹೊಂದುತ್ತವೆ ಎಂಬುವುದನ್ನು ಮೇಲಿಂದ ಮೇಲೆ ತಾಳೆ ಮಾಡುತ್ತಿರಬೇಕು. ಗಳಿಸಿದ ಎಲ್ಲ ಓಟಗಳು ಪಡೆದ ಎಲ್ಲ ಹುದ್ದರಿಗಳು |

| | |
|---|---|
| conclusion of the match, the runs scored, the wickets that have fallen and, where appropriate, the number of overs bowled. See Law 2.15 (Correctness of scores). | ಮತ್ತು ಸೂಕ್ತವಿರುವೆಡೆ ಬೌಲ್ ಮಾಡಲ್ಪಟ್ಟ ಓವರ್‌ಗಳ ಸಂಖ್ಯೆ ಸರಿಯಾಗಿರುವುದು ಬಗ್ಗೆ ಕನಿಷ್ಠ ಪಾನೀಯ ವಿರಾಮವನ್ನು ಹೊರತುಪಡಿಸಿ, ಉಳಿದ ಪ್ರತಿಯೊಂದು ವಿರಾಮದ ವೇಳೆಯಲ್ಲಿ ಮತ್ತು ಪಂದ್ಯ ಮುಗಿದ ನಂತರ ಅಂಪೈರ್ ಜೊತೆ ಸಮಾಲೋಚಿಸಿ ಒಪ್ಪಂದಕ್ಕೆ ಬರಬೇಕು. ನಿಯಮ ೨.೧೫ (ಸ್ಕೋರಿನ ನಿಖರತೆ) ಗಮನಿಸಿ. |
| **3.3 Acknowledging signals**<br>The scorers shall accept all instructions and signals given to them by the umpires and shall immediately acknowledge each separate signal. | **೩.೩ ಸನ್ನೆಗಳನ್ನು ಅಂಗೀಕರಿಸುವುದು**<br>ಅಂಪೈರ್‌ಗಳು ನೀಡುವ ಎಲ್ಲ ಸೂಚನೆಗಳು ಹಾಗೂ ಸನ್ನೆಗಳನ್ನು ಸ್ಕೋರರ್‌ಗಳು ಅಂಗೀಕರಿಸಬೇಕು ಮತ್ತು ಅವರು ನೀಡಿದ ಎಲ್ಲ ಸನ್ನೆಗಳಿಗೆ ಮರುಸನ್ನೆ ಮಾಡಬೇಕು. |
| **LAW 4 THE BALL** | **ನಿಯಮ ೪ ಚೆಂಡು** |
| **4.1 Weight and size**<br>The ball, when new, shall weigh not less than 5.5 ounces/155.9 g, nor more than 5.75 ounces/163 g, and shall measure not less than 8.81 in/22.4 cm, nor more than 9 in/22.9 cm in circumference. | **೪.೧ ತೂಕ ಮತ್ತು ಅಳತೆ**<br>ಚೆಂಡು ಹೊಸದಾಗಿದ್ದಾಗ, ತೂಕದಲ್ಲಿ ೫.೫ ಔನ್ಸ್/ ೧೫೫.೯ ಗ್ರಾಂ ಗಿಂತ ಕಡಿಮೆ ಇಲ್ಲವೇ ೫.೭೫ ಔನ್ಸ್/ ೧೬೩ ಗ್ರಾಂ ಗಿಂತ ಹೆಚ್ಚಾಗಿರಬಾರದು. ಅದರ ಸುತ್ತಳತೆ ೮.೮೧ ಅಂಗುಲ / ೨೨.೪ ಸೆಂ. ಮೀ. ಗಿಂತ ಕಡಿಮೆ ಇಲ್ಲವೇ ೯ ಅಂಗುಲ/ ೨೨.೯ ಸೆಂ. ಮೀ. ಗಿಂತ ಹೆಚ್ಚು ಇರಬಾರದು. |
| **4.2 Approval and control of balls**<br>**4.2.1** All balls to be used in the match, having been determined by the umpires, shall be in the possession | **೪.೨ ಚೆಂಡುಗಳ ಅನುಮೋದನೆ ಮತ್ತು ನಿಯಂತ್ರಣ**<br>**೪.೨.೧** ಅಂಪೈರ್‌ಗಳು ಅನುಮೋದಿಸಿದ, ಪಂದ್ಯದಲ್ಲಿ ಉಪಯೋಗಿಸಲ್ಪಡುವ ಎಲ್ಲ ಚೆಂಡುಗಳು ನಾಣ್ಯ ಚಿಮ್ಮುವ |

| | |
|---|---|
| of the umpires before the toss and shall remain under their control throughout the match.<br>**4.2.2** The umpire shall take possession of the ball in use at the fall of each wicket, at the start of any interval and at any interruption of play. | ಮೊದಲು ಮತ್ತು ಪಂದ್ಯ ಪೂರ್ಣಗೊಳ್ಳುವವರೆಗೆ ಅಂಪೈರ್‌ಗಳ ನಿಯಂತ್ರಣದಲ್ಲಿರಬೇಕು.<br>**೪.೨.೨** ಅಂಪೈರ್‌ಗಳು ಪ್ರತಿ ವಿಕೆಟ್ ಬಿದ್ದಾಗ, ಯಾವುದೇ ವಿರಾಮ ಪ್ರಾರಂಭಗೊಂಡಾಗ ಹಾಗೂ ಆಟದಲ್ಲಿ ವ್ಯತ್ಯಯ ಬಂದು ನಿಂತಾಗ, ಆಟದಲ್ಲಿ ಉಪಯೋಗಿಸುತ್ತಿರುವ ಚೆಂಡನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. |
| **4.3 New ball**<br>Unless an agreement to the contrary has been made before the match, either captain may demand a new ball at the start of each innings. | **೪.೩ ಹೊಸ ಚೆಂಡು**<br>ಪ್ರತಿ ಸರದಿಯ ಪ್ರಾರಂಭದಲ್ಲಿ ಯಾರಾದರೊಬ್ಬ ನಾಯಕನು ಪಂದ್ಯ ಪ್ರಾರಂಭಕ್ಕೆ ಮೊದಲು ಬೇರಾವುದೇ ಒಪ್ಪಂದವಿಲ್ಲದಿದ್ದರೆ ಹೊಸ ಚೆಂಡಿಗೆ ಬೇಡಿಕೆ ಸಲ್ಲಿಸಬಹುದು. |
| **4.4 New ball in match of more than one day's duration**<br>In a match of more than one day's duration, the captain of the fielding side may demand a new ball when the number of overs, excluding any part overs, bowled with the old one is equal to or greater than 80 overs. The umpire shall inform the other umpire and indicate to the batters and the scorers whenever a new ball is taken into play. | **೪.೪ ಒಂದು ದಿನಕ್ಕಿಂತ ಹೆಚ್ಚಿನ ದಿನಗಳ ಪಂದ್ಯದಲ್ಲಿ ಹೊಸ ಚೆಂಡಿನ ಬಳಕೆ**<br>ಒಂದು ದಿನಕ್ಕಿಂತ ಹೆಚ್ಚಿನ ದಿನಗಳ ಪಂದ್ಯದಲ್ಲಿ, ಹಳೆಯ ಚೆಂಡಿನಿಂದ ಮಾಡಿದ ಭಾಗಶಃ ಓವರನ್ನು ಹೊರತುಪಡಿಸಿ, ೮೦ ಓವರ್‌ಗಳಿಗೆ ಸಮಾನ ಅಥವಾ ಹೆಚ್ಚಿನ ಸಂಖ್ಯೆಯ ಓವರ್‌ಗಳನ್ನು ಮಾಡಿದ್ದಲ್ಲಿ, ಕ್ಷೇತ್ರ ರಕ್ಷಣೆ ತಂಡದ ನಾಯಕನು ಹೊಸ ಚೆಂಡನ್ನು ಕೇಳಬಹುದು. ಆಟದಲ್ಲಿ ಹೊಸ ಚೆಂಡನ್ನು ತೆಗೆದುಕೊಂಡಾಗಲೆಲ್ಲ ಅಂಪೈರ್ ತನ್ನ ಸಹ ಅಂಪೈರರಿಗೆ, ದಾಂಡಿಗರು ಮತ್ತು ಸ್ಕೋರರ್‌ಗಳಿಗೆ ತಿಳಿಸಬೇಕು. |

| | |
|---|---|
| **4.5 Ball lost or becoming unfit for play**<br>If, during play, the ball cannot be found or recovered or the umpires agree that it has become unfit for play through normal use, the umpires shall replace it with a ball which has had wear comparable with that which the previous ball had received before the need for its replacement. When the ball is replaced, the umpire shall inform the batters and the fielding captain. | **೪.೫ ಚೆಂಡು ಕಳೆಯುವುದು ಅಥವಾ ಆಡಲು ಬಾರದ ಸ್ಥಿತಿಯಲ್ಲಿರುವುದು**<br>ಆಟದ ಸಮಯದಲ್ಲಿ ಚೆಂಡು ಕಳೆದರೆ ಅಥವಾ ಮರಳಿ ಸಿಗದ ಸ್ಥಿತಿಯಲ್ಲಿದ್ದರೆ ಅಥವಾ ಸಾಮಾನ್ಯ ಬಳಕೆಯಿಂದ ಆಟಕ್ಕೆ ಉಪಯೊಗಿಸಲಾಗಿದೆ ಸ್ಥಿತಿಯಲ್ಲಿದೆ ಎಂದು ಅಂಪೈರ್‌ಗಳು ಒಪ್ಪಿ ಚೆಂಡನ್ನು ಬದಲಾಯಿಸುವ ಅಗತ್ಯತೆ ಕಂಡು ಬಂದರೆ, ಹಳೆಯ ಚೆಂಡಿನಷ್ಟೇ ಉಪಯೋಗಿಸಲ್ಪಟ್ಟ ಬೇರೊಂದು ಚೆಂಡನ್ನು ಆಟಕ್ಕೆ ಕೊಡಬೇಕು. ಈ ರೀತಿ ಚೆಂಡನ್ನು ಬದಲಾಯಿಸಿದಾಗ ಅಂಪೈರ್ ದಾಂಡಿಗರಿಗೆ ಮತ್ತು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ತಿಳಿಸಬೇಕು. |
| **4.6 Specifications**<br>The specifications as described in 4.1 shall apply to men's cricket only. The following specifications shall apply to:<br><br>**4.6.1 Women's cricket**<br>**Weight**: from 4.94 ounces/140 g to 5.31 ounces/151 g<br>**Circumference**: from 8.25 in/21.0 cm to 8.88 in/22.5 cm.<br><br>**4.6.2 Junior cricket – Under 13**<br>**Weight:** from 4.69 ounces/133 g to 5.06 ounces/144 g<br>**Circumference:** from 8.06 in/20.5 cm to 8.69 in/22.0 cm. | **೪.೬ ಮಾಪನ ಗಳು**<br>ಮೇಲಿನ ೪.೧ರಲ್ಲಿ ವಿವರಿಸಿರುವ ಮಾಪನಗಳು ಕೇವಲ ಪುರುಷರ ಕ್ರಿಕೆಟಿಗೆ ಮಾತ್ರ ಅನ್ವಯಿಸುತ್ತದೆ**.** ಇತರೆ ಮಾಪನಗಳು ಈ ಕೆಳಗಿನಂತೆ ಅನ್ವಯಿಸುತ್ತದೆ.<br>**೪.೬.೧ ಮಹಿಳೆಯರ ಕ್ರಿಕೆಟ್**<br>**ತೂಕ** : ೪.೯೪ ಔನ್ಸ್ / ೧೪೦ ಗ್ರಾಂ ನಿಂದ ೫.೩೧ ಔನ್ಸ್ / ೧೫೧ ಗ್ರಾಂ ವರೆಗೆ.<br>**ಸುತ್ತಳತೆ**: ೮.೨೫ ಅಂಗುಲ / ೨೧.೦ ಸೆಂ. ಮೀ. ನಿಂದ ೮.೮೮ ಅಂಗುಲ / ೨೨.೫ ಸೆಂ. ಮೀ. ವರೆಗೆ.<br>**೪.೬.೨ ಕಿರಿಯರ ಕ್ರಿಕೆಟ್**<br>**ತೂಕ** : ೪.೬೯ ಔನ್ಸ್ / ೧೩೩ ಗ್ರಾಂ ನಿಂದ ೫.೦೬ ಔನ್ಸ್ / ೧೪೪ ಗ್ರಾಂ ವರೆಗೆ. |

| | |
|---|---|
| | **ಸುತ್ತಳತೆ** : ೮.೦೬ ಅಂಗುಲ / ೨೦.೫ ಸೆಂ. ಮೀ. ನಿಂದ ೮.೬೯ ಅಂಗುಲ / ೨೨.೦ ಸೆಂ. ಮೀ. ವರೆಗೆ |
| **LAW 5 THE BAT** | **ನಿಯಮ ೫ ದಾಂಡು** |
| **5.1 The bat**<br>5.1.1 The bat consists of two parts, a handle and a blade.<br>5.1.2 The basic requirements and measurements of the bat are set out in this Law with detailed specifications in Appendix B. | **೫.೧ ದಾಂಡು**<br>೫.೧.೧ ದಾಂಡು ಎರಡು ಭಾಗಗಳನ್ನು ಒಳಗೊಂಡಿದೆ. ಒಂದು ಹಿಡಿಕೆ ಮತ್ತೊಂದು ಆಡುವ ಭಾಗ (ಬ್ಲೇಡ್).<br>೫.೧.೨ ದಾಂಡಿನ ಮೂಲ ಅಗತ್ಯತೆ ಹಾಗೂ ಅಳತೆಗಳನ್ನು ಈ ನಿಯಮದಲ್ಲಿ ತಿಳಿಸಲಾಗಿದೆ. ನಿರ್ದಿಷ್ಟ ಮಾಪನಗಳನ್ನು ಅನುಬಂಧ – "ಬಿ" ದಲ್ಲಿ ವಿವರಿಸಲಾಗಿದೆ. |
| **5.2 The handle**<br>5.2.1 The handle is to be made principally of cane and/or wood.<br>5.2.2 The part of the handle that is wholly outside the blade is defined to be the upper portion of the handle. It is a straight shaft for holding the bat.<br>5.2.3 The upper portion of the handle may be covered with a grip as defined in Appendix B.2.2. | **೫.೨ ಹಿಡಿಕೆ**<br>೫.೨.೧ ಹಿಡಿಕೆಯನ್ನು ಮೂಲತಃ ಬೆತ್ತದಿಂದ ಹಾಗೂ/ಅಥವಾ ಮರದಿಂದ ಮಾಡಿರಬೇಕು.<br>೫.೨.೨ ಆಡುವ ಭಾಗ (ಬ್ಲೇಡ್) ದ ಹೊರಗೆ ಇರುವ ಹಿಡಿಕೆಯ ಇಡೀ ಭಾಗವನ್ನು ಹಿಡಿಕೆಯ ಮೇಲ್ಭಾಗ ಎಂದು ವಿವರಿಸಲಾಗಿದೆ. ದಾಂಡನ್ನು ಹಿಡಿದುಕೊಳ್ಳುವ ಈ ಭಾಗವನ್ನು ನೇರವಾಗಿ ಇರಿಸಲಾಗಿದೆ.<br>೫.೨.೩ ಹಿಡಿಕೆಯ ಮೇಲ್‌ಭಾಗವನ್ನು ಅನುಬಂಧ ಬಿ೨.೨ ರಲ್ಲಿ ವಿವರಿಸಿರುವಂತೆ ಗ್ರಿಪ್‌ನಿಂದ ಮುಚ್ಚಬಹುದು. |
| **5.3 The blade**<br>5.3.1 The blade comprises the whole of the bat apart from the handle as defined 5.2 and in Appendix B.3. | **೫.೩ ಆಡುವ ಭಾಗ (ಬ್ಲೇಡ್)**<br>೫.೩.೧ ಮೇಲಿನ ೫.೨ ರಲ್ಲಿ ಹಾಗೂ ಅನುಬಂಧ ಬಿ೩ ರಲ್ಲಿ ವಿವರಿಸಿದಂತೆ ಹಿಡಿಕೆಯನ್ನು ಹೊರತು ಪಡಿಸಿ, ಬ್ಲೇಡ್ ದಾಂಡಿನ ಇಡೀ ಭಾಗವನ್ನು |

| | |
|---|---|
| 5.3.2 The blade shall consist solely of wood.<br>5.3.3 All bats may have commercial identifications on the blade, the size of which must comply with the relevant specification in Appendix B.6. | ಒಳಗೊಂಡಿದೆ.<br>೫.೩.೨ ಬ್ಲೇಡ್‌ನ ಭಾಗವು ಕೇವಲ ಮರದಿಂದ ಮಾಡಿರಬೇಕು.<br>೫.೩.೩ ಎಲ್ಲ ದಾಂಡುಗಳ ಬ್ಲೇಡ್‌ಗಳ ಮೇಲೆ ವಾಣಿಜ್ಯ ಗುರುತುಗಳು ಇರಬಹುದು. ಈ ಗುರುತುಗಳ ಅಳತೆಗಳು ಅನುಬಂಧ ಬಿ೬ ರ ಅನುಸಾರ ಇರಬೇಕು. |
| **5.4 Protection and repair**<br>Subject to the specifications in Appendix B.4 and providing 5.5 is not contravened,<br>5.4.1 solely for the purposes of<br>either protection from surface damage to the face, sides and shoulders of the blade<br>or repair to the blade after surface damage, material that is not rigid, either at the time of its application to the blade or subsequently, may be placed on these surfaces.<br>**5.4.2 for repair of the blade after damage other than surface damage**<br>5.4.2.1 solid material may be inserted into the blade.<br>5.4.2.2 The only material permitted for any insertion is wood with minimal essential adhesives. | **೫.೪ ರಕ್ಷಣೆ ಮತ್ತು ದುರಸ್ತಿ**<br>ಕೆಳಗಿನ ೫.೫ ಕ್ಕೆ ಧಕ್ಕೆ ಬರದಂತೆ ಅನುಬಂಧ ಬಿ೪ ರಲ್ಲಿ ವಿವರಿಸಿದ ಮಾಪನಗಳಿಗೆ ಅನುಸಾರವಾಗಿರಬೇಕು.<br>೫.೪.೧ ಈ ನಿರ್ದಿಷ್ಟ ಉದ್ದೇಶಗಳಿಗೆ ಮಾತ್ರ:<br>ಬ್ಲೇಡ್‌ನ ಮುಖ, ಬದಿ ಹಾಗೂ ಭುಜದ ಭಾಗಗಳನ್ನು ಹಾನಿಗೊಳ್ಳುವುದರಿಂದ ರಕ್ಷಿಸುವುದಕ್ಕಾಗಿ ಅಥವಾ<br>ಹಾನಿಗೊಂಡ ನಂತರ ಬ್ಲೇಡನ್ನು ದುರಸ್ತಿಗೊಳಿಸುವುದಕ್ಕಾಗಿ, ಬ್ಲೇಡಿನ ಮುಖದ ಮೇಲೆ ಅಳವಡಿಸುವಾಗ ಅಥವಾ ತದನಂತರ ಬಿರುಸಾಗದಂತಹ ವಸ್ತುವನ್ನು ಉಪಯೋಗಿಸಬೇಕು.<br>**೫.೪.೨ ಹೊರ ಮೈ ಹೊರತುಪಡಿಸಿ ಹಾನಿಗೊಂಡ ಬ್ಲೇಡಿನ ದುರಸ್ತಿ**<br>೫.೪.೨.೧ ಘನರೂಪದ ವಸ್ತುವನ್ನು ಬ್ಲೇಡಿನಲ್ಲಿ ಅಳವಡಿಸಬಹುದು.<br>೫.೪.೨.೨ ಆಳವಡಿಸುವಿಕೆಗಾಗಿ ಕೇವಲ ಮರದ ವಸ್ತುವನ್ನು ಕನಿಷ್ಠ ಪ್ರಮಾಣದ ಅಂಟಿನೊಂದಿಗೆ ಉಪಯೋಗಿಸಬೇಕು. |

| | |
|---|---|
| 5.4.3 to prevent damage to the toe, material may be placed on that part of the blade but shall not extend over any part of the face, back or sides of the blade. | ೫.೪..೩ ದಾಂಡಿನ ತಳಭಾಗ ಹಾನಿಯಾಗುವುದನ್ನು ತಪ್ಪಿಸಲು, ಆ ಭಾಗಕ್ಕೆ ಮಾತ್ರ ವಸ್ತುವನ್ನು ಉಪಯೋಗಿಸಬಹುದು, ಆದರೆ ಅಂತಹ ವಸ್ತು ಬ್ಲೇಡ್‌ನ ಮುಖಭಾಗ, ಬದಿ ಮತ್ತು ಹಿಂಭಾಗಕ್ಕೆ ವಿಸ್ತರಿಸಬಾರದು. |
| **5.5 Damage to the ball**<br>5.5.1 For any part of the bat, covered or uncovered, the hardness of the constituent materials and the surface texture thereof shall not be such that either or both could cause unacceptable damage to the ball.<br>5.5.2 Any material placed on any part of the bat, for whatever purpose, shall similarly not be such that it could cause unacceptable damage to the ball.<br>5.5.3 For the purpose of this Law, unacceptable damage is any change that is greater than normal wear and tear caused by the ball striking the uncovered wooden surface of the blade. | **೫.೫ ಚೆಂಡಿಗೆ ಹಾನಿ**<br>೫.೫.೧ ದಾಂಡಿನ ಯಾವುದೇ ಭಾಗಕ್ಕೆ ಉಪಯೋಗಿಸಿದ ವಸ್ತುವಿನ ಬಿರುಸುತನ, ಅದಕ್ಕೆ ಹೊದಿಕೆ ಹಾಕಿರಲಿ ಅಥವಾ ಇಲ್ಲದಿರಲಿ ಹಾಗೂ ಅದರ ಮೇಲ್ಮೈ ವಿನ್ಯಾಸ, ಇವೆರಡರಲ್ಲಿ ಯಾವುದಾದರೂ ಒಂದು ಅಥವಾ ಅವೆರಡೂ ಚೆಂಡಿಗೆ ಅಂಗೀಕಾರಾರ್ಹವಲ್ಲದ ಹಾನಿಯನ್ನು ಮಾಡಬಾರದು.<br>೫.೫.೨ ಯಾವುದೇ ಉದ್ದೇಶಕ್ಕಾಗಿ, ದಾಂಡಿನ ಯಾವುದೇ ಭಾಗದಲ್ಲಿ ಅಳವಡಿಸಿರುವ ವಸ್ತುವು ಚೆಂಡಿಗೆ ಅಂಗೀಕಾರಾರ್ಹವಲ್ಲದ ಹಾನಿಯನ್ನು ಮಾಡುವ ರೀತಿಯಲ್ಲಿ ಇರಬಾರದು.<br>೫.೫.೩ ಈ ನಿಯಮದ ಉದ್ದೇಶಕ್ಕಾಗಿ, ಅಂಗೀಕಾರಾರ್ಹವಲ್ಲದ ಹಾನಿ ಎಂದರೆ, ಚೆಂಡು ಹೊದಿಕೆ ಇಲ್ಲದ ಬ್ಲೇಡಿಗೆ ಬಡಿದಾಗ ಉಂಟಾಗುವ ಸಾಮಾನ್ಯ ಸವೆತಕ್ಕಿಂತ ಹೆಚ್ಚಿನ ಹಾನಿ. |
| **5.6 Contact with the ball**<br>In these Laws,<br>5.6.1 reference to the bat shall imply that the bat is held in the batter's hand, or a glove worn on his/her hand, unless stated otherwise.<br>5.6.2 contact between the ball and any of 5.6.2.1 to 5.6.2.4 | **೫.೬ ಚೆಂಡಿನೊಂದಿಗೆ ಸಂಪರ್ಕ**<br>ಈ ನಿಯಮಗಳಲ್ಲಿ<br>೫.೬.೧ ಬೇರೆ ರೀತಿಯಲ್ಲಿ ವ್ಯಕ್ತಪಡಿಸದ ಹೊರತು, ದಾಂಡು ಎಂದರೆ ದಾಂಡಿಗನ ಕೈಯಲ್ಲಿ ಹಿಡಿಯಲ್ಪಟ್ಟಿರುವುದು ಅಥವಾ ಅವನ/ಅವಳ ಕೈಗೆ ತೊಟ್ಟಿರುವ ಕೈಗವಚದಲ್ಲಿ ಹಿಡಿದಿರುವುದು ಎಂದರ್ಥ. |

| | |
|---|---|
| 5.6.2.1 the bat itself<br>5.6.2.2 the batter’s hand holding the bat.<br>5.6.2.3 any part of a glove worn on the batter’s hand holding the bat.<br>5.6.2.4 any additional materials permitted under 5.4<br>shall be regarded as the ball striking or touching the bat or being struck by the bat. | ೫.೬.೨ ಚೆಂಡು ಮತ್ತು ೫.೬.೨.೧ ರಿಂದ ೫.೬.೨.೪ ರಲ್ಲಿ ನಮೂದಿಸಿರುವ ಯಾವುದಾದರೊಂದಿಗಿನ ಸಂಪರ್ಕ, ಚೆಂಡು ದಾಂಡಿಗೆ ಬಡಿದಿದೆ ಅಥವಾ ತಾಗಿದೆ ಅಥವಾ ದಾಂಡಿನಿಂದ ಹೊಡೆಯಲಾಗಿದೆ ಎಂದು ಪರಿಗಣಿಸಬೇಕು<br>೫.೬.೨.೧ ದಾಂಡು.<br>೫.೬.೨.೨ ದಾಂಡನ್ನು ಹಿಡಿದಿರುವ ದಾಂಡಿಗನ ಕೈ.<br>೫.೬.೨.೩ ದಾಂಡನ್ನು ಹಿಡಿದಿರುವ ದಾಂಡಿಗನ ಕೈಗೆ ಧರಿಸಿರುವ ಕೈಗವಚದ ಯಾವುದೇ ಭಾಗ.<br>೫.೬.೨.೪ ಮೇಲಿನ ೫.೪ ರಲ್ಲಿ ಅನುಮತಿಸಿರುವ ಯಾವುದೇ ಹೆಚ್ಚುವರಿ ವಸ್ತು.. |
| **5.7 Bat size limits**<br>5.7.1 The overall length of the bat, when the lower portion of the handle is inserted, shall not be more than 38 in/96.52 cm.<br>5.7.2 The blade of the bat shall not exceed the following dimensions:<br>Width: 4.25in / 10.8 cm<br>Depth: 2.64in / 6.7 cm<br>Edges: 1.56in / 4.0cm. | **೫.೭ ದಾಂಡಿನ ಅಳತೆಯ ಮಿತಿ**<br>೫.೭.೧ ಹಿಡಿಕೆಯ ಕೆಳಭಾಗವನ್ನು ಬ್ಲೇಡಿನ ಒಳಗೆ ಸೇರಿಸಿದಾಗ, ದಾಂಡಿನ ಒಟ್ಟಾರೆ ಉದ್ದಳತೆಯು ೩೮ ಅಂಗುಲ /೯೮ ಸೆಂ. ಮೀ. ಗಿಂತ ಹೆಚ್ಚಿಗಿರಬಾರದು.<br>೫.೭.೨ ದಾಂಡಿನ ಬ್ಲೇಡ್‌ನ ಭಾಗವು ಕೆಳಕಂಡ ಅಳತೆಯನ್ನು ಮೀರಬಾರದು.<br>ಅಗಲ = ೪.೨೫ ಅಂಗುಲ / ೧೦.೮ ಸೆಂ.ಮೀ.<br>ಆಳ = ೨.೬೪ ಅಂಗುಲ / ೬.೭ ಸೆಂ.ಮೀ.<br>ಅಂಚುಗಳು = ೧.೫೬ ಅಂಗುಲ / ೪.೦ ಸೆಂ.ಮೀ.<br>ಇದಲ್ಲದೆ, ಅನುಬಂಧ ಬಿ೮ ರಲ್ಲಿ ವಿವರಿಸಿದಂತೆ, ದಾಂಡನ್ನು ಅಳೆಯುವ ಸಾಧನದಲ್ಲಿ ದಾಂಡು ಹಾದು ಹೋಗಬೇಕು. |

| | |
|---|---|
| Furthermore, it should also be able to pass through a bat gauge as described in Appendix B.8.<br>5.7.3 Except for bats of size 6 and less, the handle shall not exceed 52% of the overall length of the bat.<br>5.7.4 The material permitted for covering the blade in 5.4.1 shall not exceed 0.04 in/0.1 cm in thickness.<br>5.7.5 The maximum permitted thickness of protective material placed on the toe of the blade is 0.12 in/0.3 cm. | ೫.೭.೩ ೬ ನೇಯ ನಂಬರ ಅಥವಾ ಕಡಿಮೆ ಗಾತ್ರದ(size) ದಾಂಡಿನ್ನು ಹೊರತುಪಡಿಸಿ , ಹಿಡಿಕೆಯು ದಾಂಡಿನ ಒಟ್ಟಾರೆ ಉದ್ದದ ೫೨% ಮೀರಬಾರದು.<br>೫.೭.೪ ೫.೪.೧ರಲ್ಲಿ ಅನುಮತಿಸಿರುವ ಪದಾರ್ಥವು ೦.೦೪ ಅಂಗುಲ/ ೦.೧ ಸೆಂ. ಮೀ. ಕ್ಕಿಂತ ದಪ್ಪಗಿರಬಾರದು.<br>೫.೭.೫ ದಾಂಡಿನ ತಳ ಭಾಗದಲ್ಲಿ ಅನುಮತಿಸಿರುವ ರಕ್ಷಣಾತ್ಮಕ ಕವಚದ ವಸ್ತು ೦.೧೨ ಅಂಗುಲ / ೦.೩ ಸೆಂ. ಮೀ. ಕ್ಕಿಂತ ದಪ್ಪಗಿರಬಾರದು |
| **5.8 Categories of bat**<br>5.8.1 Types A, B and C are bats conforming to 5.1 to 5.7 inclusive.<br>5.8.2 Type A bats may be used at any level of cricket.<br>5.8.3 The specifications for Type D bats are described in Appendix B.7 and are for use by junior players in junior cricket only.<br>5.8.4 Bats of Type B, Type C, Type D and any other bats may be used only at or below levels determined by the Governing Body for cricket in the country concerned. | **೫.೮ ದಾಂಡಿನ ವರ್ಗೀಕರಣಗಳು**<br>೫.೮.೧ ಅ, ಬ ಮತ್ತು ಕ ಎಂದು ವರ್ಗೀಕರಿಸಲ್ಪಟ್ಟಿರುವ ದಾಂಡುಗಳು ೫.೧ ರಿಂದ ೫.೭ ಗಳಿಗನುಸಾರವಾಗಿರಬೇಕು.<br>೫.೮.೨ ಅ ನಮೂನೆಯ ದಾಂಡುಗಳನ್ನು ಯಾವುದೇ ಮಟ್ಟದ ಆಟದಲ್ಲಿ ಉಪಯೋಗಿಸಬಹುದು.<br>೫.೮.೩ ಡ ನಮೂನೆಯ ದಾಂಡುಗಳ ಮಾಪನಗಳನ್ನು ಅನುಬಂಧ ಬಿ೭ರಲ್ಲಿ ವಿವರಿಸಲಾಗಿದ್ದು, ಅವುಗಳನ್ನು ಕಿರಿಯ ಆಟಗಾರರು ಕಿರಿಯರ ಮಟ್ಟದ ಕ್ರಿಕೆಟಿನಲ್ಲಿ ಮಾತ್ರ ಉಪಯೋಗಿಸಬೇಕು.<br>೫.೮.೪ ಬ, ಕ ಮತ್ತು ಡ ನಮೂನೆಯ ದಾಂಡುಗಳನ್ನು ಆಯಾ ದೇಶದ ಕ್ರಿಕೆಟ್ ಮಂಡಳಿಯ ಆಡಳಿತ ಪ್ರಾಧಿಕಾರಗಳು ಗೊತ್ತುಪಡಿಸಿರುವ ಮಟ್ಟ ಅಥವಾ ಅದಕ್ಕಿಂತ ಕೆಳ ಮಟ್ಟದ ಆಟದಲ್ಲಿ ಉಪಯೋಗಿಸಬೇಕು. |

| | |
|---|---|
| 5.8.5 Bats that do not qualify for any of the four categories A to D, are not recognised in the Laws. | ೫.೮.೫ “ಅ” ಇಂದ “ಡ” ನಮೂನೆಗಳಲ್ಲಿ ಬಾರದ ದಾಂಡುಗಳನ್ನು ಈ ನಿಯಮಗಳಲ್ಲಿ ಮಾನ್ಯಗೊಳಿಸಲಾಗುವುದಿಲ್ಲ. |
| **LAW 6 THE PITCH** | **ನಿಯಮ ೬ ಆಟದ ಪಟ್ಟಿ (ಪಿಚ್)** |
| **6.1 Area of pitch**<br>The pitch is a rectangular area of the ground 22 yards/20.12 m in length and 10 ft/3.05 m in width. It is bounded at either end by the bowling creases and on either side by imaginary lines, one each side of the imaginary line joining the centres of the two middle stumps, each parallel to it and 5 ft/1.52 m from it. If the pitch is next to an artificial pitch which is closer than 5 ft/1.52 m from the middle stumps, the pitch on that side will extend only to the junction of the two surfaces. See Laws 8.1 (Description, width, and pitching), 8.4 (Junior cricket) and 7.2 (The bowling crease). | **೬.೧ ಆಟದ ಪಟ್ಟಿಯ ವಿಸ್ತೀರ್ಣ**<br>ಆಟದ ಪಟ್ಟಿಯು ಆಯತಾಕಾರದ್ದಾಗಿದ್ದು, ಇದರ ಉದ್ದ ೨೨ ಗಜಗಳು / ೨೦.೧೨ ಮೀ. ಮತ್ತು ಅಗಲ ೧೦ ಅಡಿ / ೩.೦೫ ಮೀ. ಇದರ ಎರಡೂ ತುದಿಗಳಲ್ಲಿ ಬೌಲಿಂಗ್ ರೇಖೆಗಳಿದ್ದು, ಎರಡೂ ಬದಿಗೆ, ಆಟದ ಪಟ್ಟಿಯ ಎರಡೂ ತುದಿಯ ಮಧ್ಯದ ಘೂಟಗಳನ್ನು ಜೋಡಿಸುವ ಕಾಲ್ಪನಿಕ ರೇಖೆಯ ಎರಡೂ ಬದಿಗೆ ೫ ಅಡಿ / ೧.೫೨ ಮೀ. ಸಮಾನಾಂತರದಲ್ಲಿ ಎರಡು ಕಾಲ್ಪನಿಕ ರೇಖೆಗಳಿರಬೇಕು. ಒಂದು ವೇಳೆ ಪಕ್ಕದಲ್ಲಿ ಕೃತಕ ಅಂಕಣ, ಮಧ್ಯದ ಘೂಟಗಳಿಂದ ೫ ಅಡಿ / ೧೦.೫೨ ಮೀ. ಗಳಿಗಿಂತ ಸಮೀಪದಲ್ಲಿದ್ದರೆ, ಆ ಭಾಗದಲ್ಲಿ ಆಟದ ಪಟ್ಟಿಯ ಅಗಲ ಈ ಎರಡೂ ಅಂಕಣಗಳು ಸೇರುವ ಜಾಗದವರೆಗೆ ಮಾತ್ರ. ನಿಯಮ ೮.೧ (ವಿವರಣೆ, ಅಗಲ ಮತ್ತು ನೆಡುವಿಕೆ), ೮.೪ (ಕಿರಿಯರ ಕ್ರಿಕೆಟ್) ಹಾಗೂ ೭.೨ (ಬೌಲಿಂಗ್ ರೇಖೆ) ಗಮನಿಸಿ. |
| **6.2 Fitness of pitch for play**<br>The umpires shall be the sole judges of the fitness of the pitch for play. See Laws 2.7 (Fitness for play) and 2.8 (Suspension of play in dangerous or unreasonable conditions). | **೬.೨ ಆಡಲು ಆಟದ ಪಟ್ಟಿಯ ಯುಕ್ತತೆ (Fitness)**<br>ಅಂಪೈರ್‌ಗಳು ಆಡಲು ಆಟದ ಪಟ್ಟಿಯ ಯುಕ್ತತೆಯನ್ನು ನಿರ್ಧರಿಸುವ ಏಕಮಾತ್ರ ತೀರ್ಪುಗಾರರಾಗಿರುತ್ತಾರೆ. ನಿಯಮ ೨.೭ (ಆಟ ನಡೆಸಲು ಯುಕ್ತವಾದ ಅಂಶಗಳು.) ಮತ್ತು ೨.೮ (ಅಪಾಯಕಾರಿ |

| | |
|---|---|
| | ಅಥವಾ ಅನುಚಿತ ಸಂದರ್ಭಗಳಲ್ಲಿ ಆಟವನ್ನು ನಿಲ್ಲಿಸುವುದು.) ಗಮನಿಸಿ. |
| **6.3 Selection and preparation.**<br>Before the match, the Ground Authority shall be responsible for the selection and preparation of the pitch. During the match, the umpires shall control its use and maintenance. | **೬.೩ ಆಯ್ಕೆ ಮತ್ತು ಸಿದ್ಧತೆ**<br>ಪಂದ್ಯಕ್ಕೆ ಮುಂಚೆ, ಆಟದ ಪಟ್ಟಿಯ ಆಯ್ಕೆ ಹಾಗೂ ಸಿದ್ಧತೆಯ ಜವಾಬ್ದಾರಿ ಆಟದ ಮೈದಾನದ ಅಧಿಕಾರಿಗಳದ್ದಾಗಿರುತ್ತದೆ. ಪಂದ್ಯ ನಡೆಯುವ ಸಮಯದಲ್ಲಿ ಅಂಪೈರ್‌ಗಳು ಅದರ ಬಳಕೆ ಮತ್ತು ಉಸ್ತುವಾರಿಯನ್ನು ನಿಯಂತ್ರಿಸಬೇಕು. |
| **6.4 Changing the pitch**<br>The pitch shall not be changed during the match unless the umpires decide that it is dangerous or<br>unreasonable for play to continue on it and then only with the consent of both captains. | **೬.೪ ಆಟದ ಪಟ್ಟಿಯ ಬದಲಾವಣೆ**<br>ಪಂದ್ಯ ನಡೆದಿರುವಾಗ, ಆಟವನ್ನು ಮುಂದುವರೆಸಲು ಆಟದ ಪಟ್ಟಿಯು ಅಪಾಯಕಾರಿಯಾಗಿದೆ ಅಥವಾ ಅನುಚಿತವಾಗಿದೆ ಎಂದು ಅಂಪೈರು ನಿರ್ಧರಿಸದ ಹೊರತು ಬದಲಾಯಿಸುವಂತಿಲ್ಲ. ಒಂದು ವೇಳೆ ಬದಲಾಯಿಸಬೇಕಾದರೆ ಇಬ್ಬರೂ ನಾಯಕರ ಸಮ್ಮತಿ ಇರಬೇಕು. |
| **6.5 Non-turf pitches**<br>In the event of a non-turf pitch being used, the artificial surface shall conform to the following measurements:<br><br>Length – a minimum of 58 ft/17.68 m<br>Width – a minimum of 6 ft/1.83 m<br>See Law 9.8 (Non-turf pitches). | **೬.೫ ಹುಲ್ಲಿನಲ್ಲದ ಆಟದ ಪಟ್ಟಿ.**<br>ಹುಲ್ಲಿನಲ್ಲದ ಆಟದ ಪಟ್ಟಿಯನ್ನು ಉಪಯೋಗಿಸುತ್ತಿದ್ದರೆ, ಅಂತಹ ಆಟದ ಪಟ್ಟಿಯ ಕೃತಕ ಮೇಲ್ಭಾಗದ ಅಳತೆ ಮುಂದೆ ಸೂಚಿಸಿರುವ ಪರಿಮಿತಿಯಲ್ಲಿರಬೇಕು;<br>ಉದ್ದ : ಕನಿಷ್ಠ ೫೮ ಅಡಿ / ೧೭.೬೮ ಮೀ.<br>ಅಗಲ : ಕನಿಷ್ಠ ೬ ಅಡಿ / ೧.೮೩ ಮೀ.<br>ನಿಯಮ ೯.೮ (ಹುಲ್ಲಿನಲ್ಲದ ಆಟದ ಪಟ್ಟಿ) ಗಮನಿಸಿ. |

| | |
|---|---|
| **6.6 Junior Cricket**<br>The Governing Body for cricket in the country concerned shall determine the length of the pitch for junior cricket. | **೬ . ೬ ಕಿರಿಯರ ಕ್ರಿಕೆಟ್**<br>ಕಿರಿಯರ ಕ್ರಿಕೆಟ್ ಆಟದ ಪಟ್ಟಿಯ ಉದ್ದವನ್ನು ಆಯಾ ದೇಶಗಳ ಕ್ರಿಕೆಟ್ ಆಡಳಿತ ಮ0ಡಳಿಗಳು ನಿರ್ಧರಿಸಬೇಕು |
| **LAW 7 THE CREASES** | **ನಿಯಮ ೭ ಕ್ರೀಸ್‌ಗಳು** |
| **7.1 The creases**<br>The positions of a bowling crease, a popping crease and two return creases shall be marked by white lines, as set out in 7.2, 7.3 and 7.4, at each end of the pitch. See Appendix C. | ೭.೧ **ಕ್ರೀಸ್‌ಗಳು**<br>ಆಟದ ಪಟ್ಟಿಯ ಪ್ರತಿ ತುದಿಯಲ್ಲಿ ೭.೨, ೭.೩ ಮತ್ತು ೭.೪ ರಲ್ಲಿ ತಿಳಿಸಿರುವಂತೆ ಬಿಳಿ ಬಣ್ಣದಲ್ಲಿ ಒಂದೊಂದು ಬೌಲಿಂಗ್, ಪೊಪಿಂಗ್ ಮತ್ತು ಎರಡು ರಿಟರ್ನ್ ಕ್ರೀಸ್‌ಗಳನ್ನು (ರೇಖೆ) ಹಾಕಬೇಕು. ಅನುಬಂಧ "ಸಿ" ಗಮನಿಸಿ. |
| **7.2 The bowling crease**<br>The bowling crease, which is the back edge of the crease marking is the line that marks the end of the pitch, as in Law 6.1 (Area of pitch). It shall be 8 ft 8 in/2.64 m in length. | **೭.೨ ಬೌಲಿಂಗ್ ಕ್ರೀಸ್**<br>ಬೌಲಿಂಗ್ ಕ್ರೀಸ್, ಕ್ರೀಸ್ ಗುರುತಿನ ಹಿಂಬದಿಯ ಅಂಚಾಗಿದ್ದು, ಇದು ೮ ಅಡಿ ೮ ಇಂಚು / ೨.೬೪ ಮೀ. ಉದ್ದವಿರಬೇಕು. ನಿಯಮ ೬.೧ (ಆಟದ ಪಟ್ಟಿಯ ವಿಸ್ತೀರ್ಣ) ರಲ್ಲಿ ತಿಳಿಸಿರುವಂತೆ ಆಟದ ಪಟ್ಟಿಯ ಕೊನೆಯನ್ನು ಗುರುತಿಸುವ ಗೆರೆಯಾಗಿರುತ್ತದೆ. |
| **7.3 The popping crease**<br>The popping crease, which is the back edge of the crease marking, shall be in front of and parallel to the bowling crease and shall be 4 ft/1.22 m from it. The popping crease shall be marked to a minimum of 6 ft/1.83 m on either side of the imaginary line joining the centres of the two middle stumps and shall be considered to be unlimited in length. | **೭.೩ ಪೊಪಿಂಗ್ ಕ್ರೀಸ್**<br>ಪೊಪಿಂಗ್ ಕ್ರೀಸ್, ಕ್ರೀಸ್ ಗುರುತಿನ ಹಿಂಬದಿಯ ಅಂಚಾಗಿದ್ದು, ಬೌಲಿಂಗ್ ಕ್ರೀಸ್‌ನ ಮುಂಭಾಗದಲ್ಲಿ ೪ ಅಡಿ / ೧.೨೨ ಮೀ. ಅಂತರದಲ್ಲಿ ಸಮಾನಾಂತರವಾಗಿ ಇರಬೇಕು. ಪೊಪಿಂಗ್ ಕ್ರೀಸನ್ನು ಎರಡೂ ಬದಿಯ ಮಧ್ಯದ ಘೂಟಗಳ ಮಧ್ಯಭಾಗಗಳನ್ನು ಜೋಡಿಸುವ ಕಾಲ್ಪನಿಕ ರೇಖೆಯ ಎರಡೂ ಬದಿಯಲ್ಲಿ ಕನಿಷ್ಠ ೬ |

| | |
|---|---|
| | ಅಡಿ / ೧.೮೩ ಮೀ. ಗಳವರೆಗೆ ಹಾಕಬೇಕು ಮತ್ತು ಇದರ ಉದ್ದಕ್ಕೆ ಮಿತಿ ಇಲ್ಲ ಎಂದು ಭಾವಿಸಬೇಕು. |
| **7.4 The return creases**<br>The return creases, which are the inside edges of the crease markings, shall be at right angles to the popping crease at a distance of 4 ft 4 in/1.32 m either side of the imaginary line joining the centres of the two middle stumps. Each return crease shall be marked from the popping crease to a minimum of 8 ft/2.44 m behind it and shall be considered to be unlimited in length. | **೭.೪ ರಿಟರ್ನ್ ಕ್ರೀಸ್**<br>ರಿಟರ್ನ್ ಕ್ರೀಸ್‌ಗಳು, ಕ್ರೀಸ್ ಗುರುತಿನ ಒಳ ಅಂಚಾಗಿದ್ದು, ಇವು ಪೊಪಿಂಗ್ ಕ್ರೀಸ್‌ಗೆ ಲಂಬಕೋನವಾಗಿರಬೇಕು. ಇದನ್ನು ಎರಡೂ ಬದಿಯ ಮಧ್ಯದ ಘೂಟಗಳ ಮಧ್ಯಭಾಗಗಳನ್ನು ಜೋಡಿಸುವ ಕಾಲ್ಪನಿಕ ರೇಖೆಯ ಎರಡೂ ಬದಿಯಲ್ಲಿ ೪ ಅಡಿ ೪ ಇಂಚು / ೧.೨೨ ಮೀ. ಅಂತರದಲ್ಲಿ ಹಾಕಬೇಕು. ಪ್ರತಿ ರಿಟರ್ನ್ ಕ್ರೀಸನ್ನು ಪೊಪಿಂಗ್ ಕ್ರೀಸ್‌ನ ಹಿಂಭಾಗದಲ್ಲಿ ಕನಿಷ್ಠ ೮ ಅಡಿ / ೨.೪೪ ಮೀ. ಉದ್ದಕ್ಕೆ ಹಾಕಬೇಕು ಹಾಗೂ ಇದರ ಉದ್ದಕ್ಕೆ ಮಿತಿ ಇಲ್ಲ ಎಂದು ಭಾವಿಸಬೇಕು. |
| **LAW 8 THE WICKETS** | **ನಿಯಮ ೮ ಘೂಟಗಳು (ವಿಕೆಟ್ ಗಳು)** |
| **8.1 Description, width, and pitching**<br>Two sets of wickets shall be pitched opposite and parallel to each other in the centres of the bowling creases. Each set shall be 9 in/22.86 cm wide and shall consist of three wooden stumps with two wooden bails on top. See Appendix D. | **೮.೧ ವಿವರಣೆ, ಅಗಲ ಮತ್ತು ನೆಡುವಿಕೆ**<br>ಎರಡು ಜೊತೆ ವಿಕೆಟ್‌ಗಳನ್ನು (ಘೂಟಗಳನ್ನು), ಬೌಲಿಂಗ್ ಕ್ರೀಸ್‌ಗಳ ಮಧ್ಯಭಾಗದಲ್ಲಿ ೨೨ ಗಜಗಳ /೨೦.೧೨ ಮೀ. ಅಂತರದಲ್ಲಿ ಪರಸ್ಪರ ಅಭಿಮುಖವಾಗಿ ಸಮಾನಾಂತರದಲ್ಲಿ ನೆಡಬೇಕು. ಪ್ರತಿಯೊಂದು ಜೊತೆ ೯ ಇಂಚು / ೨೨.೮೬ ಸೆಂ.ಮೀ. ಅಗಲವಿದ್ದು ಮೂರು ಮರದ ಘೂಟಗಳನ್ನು ಹೊಂದಿದ್ದು ಮೇಲೆ ಎರಡು ಬೆಲ್‌ಗಳಿರಬೇಕು. ಅನುಬಂಧ “ಡಿ” ಗಮನಿಸಿ. |

| | |
|---|---|
| **8.2 Size of stumps**<br>The tops of the stumps shall be 28 in/71.12 cm above the playing surface and shall be<br>dome shaped except for the bail grooves. The portion of a stump above the playing surface shall be cylindrical apart from the domed top, with circular section of diameter not less than 1.38 in/3.50 cm nor more than 1.5 in/3.81 cm. See Appendix D. | **೮.೨ ಘೂಟಗಳ ಅಳತೆ**<br>ಘೂಟಗಳ ಮೇಲಿನ ತುದಿಯು ಆಟದ ಪಟ್ಟಿಯ ಮೇಲ್ಭಾಗದಿಂದ ೨೮ ಅಂಗುಲ / ೭೧.೧೨ ಸೆಂ. ಮೀ. ಎತ್ತರದಲ್ಲಿದ್ದು, ಅವುಗಳ ಮೇಲ್ಭಾಗ ಬೇಲ್ಸ್ ಇಡಲು ಮಾಡಿದ ಒಂದು ಕಚ್ಚಿನ ಹೊರತಾಗಿ ಅರ್ಧ ವರ್ತುಳಾಕಾರವಾಗಿರಬೇಕು. ಆಟದ ಪಟ್ಟಿಯ ಮೇಲಿನ ಘೂಟದ ಭಾಗವು ಕೊಳವೆಯಾಕಾರದ್ದಾಗಿದ್ದು ಅದರ ತುದಿಯು ಅರ್ಧ ವರ್ತುಳಾಕಾರವಾಗಿರಬೇಕು ಹಾಗೂ ವೃತ್ತಾಕಾರದ ವ್ಯಾಸವು ೧.೩೮ ಅಂಗುಲ / ೩.೫೦ ಸೆಂ.ಮೀ. ಗಿಂತ ಕಡಿಮೆ ಅಥವಾ ೧.೫ ಅಂಗುಲ / ೩.೮೧ ಸೆಂ.ಮೀ. ಗಿಂತ ಅಧಿಕವಾಗಿರಬಾರದು. ಅನುಬಂಧ "ಡಿ" ಗಮನಿಸಿ. |
| **8.3 The bails**<br>8.3.1 The bails, when in position on top of the stumps,<br>- shall not project more than 0.5 in/1.27 cm above them.<br>- shall fit between the stumps without forcing them out of the vertical.<br>8.3.2 Each bail shall conform to the following specifications (see Appendix D):<br>Overall length 4.31 in/10.95 cm<br>Length of barrel 2.13 in /5.40 cm<br>Longer spigot 1.38 in/3.50 cm<br>Shorter spigot 0.81 in/2.06 cm. | **೮.೩ ಬೇಲ್ಸ್**<br>೮.೩.೧ ಘೂಟಗಳ ಮೇಲೆ ಬೇಲ್ಸ್‌ಗಳನ್ನು ಇಟ್ಟಾಗ,<br>- ೦.೫ ಅಂಗುಲ / ೧.೨೭ ಸೆಂ.ಮೀ. ಗಿಂತ ಮೇಲೆ ಬರಬಾರದು.<br>- ಘೂಟಗಳ ಮಧ್ಯೆ ಸರಳವಾಗಿ ಕಚ್ಚಿನಲ್ಲಿ ಕೂಡಬೇಕು.<br>೮.೩.೨ ಪ್ರತಿಯೊಂದು ಬೇಲ್ ಈ ಕೆಳಗಿನ ನಿರ್ದಿಷ್ಟತೆಗೆ ಒಳಪಟ್ಟಿರಬೇಕು. ಅನುಬಂಧ "ಡಿ" ಗಮನಿಸಿ.<br>ಒಟ್ಟಾರೆ ಉದ್ದಳತೆ ೪.೩೧ ಅಂಗುಲ / ೧೦.೯೫ ಸೆಂ.ಮೀ.<br>ಬ್ಯಾರಲ್ ಉದ್ದಳತೆ ೨.೧೩ ಅಂಗುಲ / ೫.೪೦ ಸೆಂ.ಮೀ.<br>ಉದ್ದದ ಸ್ಪಿಗೋಟ್ ೧.೩೮ ಅಂಗುಲ / ೩.೫೦ ಸೆಂ.ಮೀ.<br>ಚಿಕ್ಕ ಸ್ಪಿಗೋಟ್ ೦.೮೧ ಅಂಗುಲ / ೨.೦೬ ಸೆಂ.ಮೀ |

| | |
|---|---|
| 8.3.3 The two spigots and the barrel shall have the same centre line.<br>8.3.4 Devices aimed at protecting player safety by limiting the distance that a bail can travel off the stumps will be allowed, subject to the approval of the Governing Body for the match and the ground authority. | ೮.೩.೩ ಎರಡೂ ಸ್ಪಿಗೋಟ್‌ಗಳು ಹಾಗೂ ಬ್ಯಾರಲ್ ಸಮಾನ ಮಧ್ಯ ರೇಖೆಯನ್ನು ಹೊಂದಿರಬೇಕು.<br>೮.೩.೪ ಆಟಗಾರರ ಸುರಕ್ಷತೆಯ ದೃಷ್ಟಿಯಿಂದ ಬೆಲ್ಸ್‌ಗಳು ಘೂಟಗಳಿಂದ ಎಷ್ಟು ದೂರ ಚಲಿಸಬಹುದೆಂದು ಪಂದ್ಯದ ಆಡಳಿತ ಮಂಡಳಿ ಮತ್ತು ಮೈದಾನದ ಪದಾಧಿಕಾರಿಗಳು ನಿರ್ಧರಿಸಿ ಅದಕ್ಕೆ ತಕ್ಕ ಸಲಕರಣೆಯನ್ನು ಉಪಯೋಗಿಸಬಹುದು. |
| **8.4 Junior cricket**<br>The Governing Body for Cricket in the country concerned shall determine the dimensions of the stumps and bails. | **೮.೪ ಕಿರಿಯರ ಕ್ರಿಕೆಟ್**<br>ಆಯಾ ದೇಶದ ಕ್ರಿಕೆಟ್ ಆಡಳಿತ ಮಂಡಳಿಯು, ಘೂಟಗಳ ಮತ್ತು ಬೇಲ್ಸ್‌ಗಳ ಅಳತೆ ನಿರ್ಧರಿಸಬೇಕು. |
| **8.5 Dispensing with bails**<br>The umpires may agree to dispense with the use of bails, if necessary. If they so agree, then no bails shall be used at either end. The use of bails shall be resumed as soon as conditions permit. See Law 29.4 (Dispensing with bails). | **೮.೫ ಬೇಲ್ಸ್‌ಗಳನ್ನು ಉಪಯೋಗಿಸದಿರುವುದು**<br>ಅವಶ್ಯವೆಂದು ಕಂಡುಬಂದರೆ, ಅಂಪೈರ್‌ಗಳು ಆಟದಲ್ಲಿ ಬೇಲ್ಸ್‌ಗಳನ್ನು ಬಳಸದಿರಲು ನಿರ್ಧರಿಸಬಹುದು. ಅವರು ಹಾಗೆ ನಿರ್ಧರಿಸಿದರೆ, ಎರಡೂ ಬದಿಯಲ್ಲಿ ಬೇಲ್ಸ್‌ಗಳನ್ನು ಉಪಯೋಗಿಸುವಂತಿಲ್ಲ. ಪರಿಸ್ಥಿತಿ ಸುಧಾರಿಸಿದ ಕೂಡಲೇ ಬೇಲ್ಸ್‌ಗಳ ಬಳಕೆಯನ್ನು ಮುಂದುವರೆಸಬೇಕು. ನಿಯಮ ೨೯.೪ (ಬೇಲ್ಸ್‌ಗಳನ್ನು ತೆಗೆಯುವುದು) ಗಮನಿಸಿ. |

## LAW 9 PREPARATION AND MAINTENANCE OF THE PLAYING AREA

## ನಿಯಮ ೯ ಆಟದ ಮೈದಾನವನ್ನು ಸಿದ್ಧಪಡಿಸುವುದು ಮತ್ತು ಉಸ್ತುವಾರಿ

**9.1 Rolling**

The pitch shall not be rolled during the match except as permitted in 9.1.1 and 9.1.2.

9.1.1 Frequency and duration of rolling

During the match the pitch may be rolled at the request of the captain of the batting side, for a period of not more than 7 minutes, before the start of each innings, other than the first innings of the match, and before the start of each subsequent day's play. See 9.1.4.

9.1.2 Rolling after a delayed start.

In addition to the rolling permitted above, if, after the toss and before the first innings of the match, the start is delayed, the captain of the batting side may request that the pitch be rolled for not more than 7 minutes. However, if the umpires together agree that the delay has had no significant effect on the state of the pitch, they shall refuse such request for rolling of the pitch.

**೯.೧ ರೋಲಿಂಗ್ (ಉರುಳುಕಲ್ಲು ಉರುಳಿಸುವುದು)**

ಆಟದ ಪಟ್ಟಿಯ ಮೇಲೆ ೯.೧.೧ ಮತ್ತು ೯.೧.೨ರಲ್ಲಿ ಅನುಮತಿಸಿರುವುದನ್ನು ಹೊರತುಪಡಿಸಿ ಪಂದ್ಯದ ಸಮಯದಲ್ಲಿ ರೋಲಿಂಗ್ ಮಾಡುವಂತಿಲ್ಲ.

**೯.೧.೧ ರೋಲಿಂಗ್ ಅವಧಿ ಮತ್ತು ಸಂದರ್ಭ**

ಪಂದ್ಯ ನಡೆಯುವ ಸಮಯದಲ್ಲಿ, ದಾಂಡಿಗ ತಂಡದ ನಾಯಕನ ಕೋರಿಕೆಯ ಮೇರೆಗೆ ೭ ನಿಮಿಷ ಮೀರದ ಅವಧಿಗೆ, ಪಂದ್ಯದ ಮೊದಲ ಸರದಿಯನ್ನು ಹೊರತುಪಡಿಸಿ , ಉಳಿದ ಪ್ರತಿ ಸರದಿಯ ಪ್ರಾರಂಭಕ್ಕೆ ಮೊದಲು ಮತ್ತು ಪ್ರತಿ ಮುಂದಿನ ದಿನದ ಆಟ ಪ್ರಾರಂಭಕ್ಕೆ ಮೊದಲು ಆಟದ ಪಟ್ಟಿಯ ಮೇಲೆ ರೋಲಿಂಗ್ ಮಾಡಬಹುದು.

**೯.೧.೨ ತಡವಾಗಿ ಆರಂಭಗೊಂಡ ನಂತರ ರೋಲಿಂಗ್**

ಮೇಲೆ ಅನುಮತಿಸಿರುವುದರ ಜೊತೆಗೆ, ನಾಣ್ಯ ಚಿಮ್ಮುವಿಕೆಯ ನಂತರ ಮತ್ತು ಪಂದ್ಯದ ಮೊದಲ ಸರದಿ ಪ್ರಾರಂಭವಾಗುವ ಮೊದಲು ಆಟದ ಪ್ರಾರಂಭ ವಿಳಂಬಗೊಂಡರೆ, ದಾಂಡಿಗ ತಂಡದ ನಾಯಕನು ೭ ನಿಮಿಷಗಳನ್ನು ಮೀರದ ಅವಧಿಗೆ ರೋಲಿಂಗ್ ಕೋರಬಹುದು. ಆದರೆ, ಅಂಪೈರುಗಳು, ವಿಳಂಬವು ಆಟದ ಪಟ್ಟಿಯ ಮೇಲೆ ಗಮನಾರ್ಹ ಪರಿಣಾಮ ಬೀರಿಲ್ಲವೆಂದು

| | |
|---|---|
| 9.1.3 Choice of rollers<br>If there is more than one roller available, the captain of the batting side shall choose which one is to be used.<br><br>9.1.4 Timing of permitted rolling<br>The rolling permitted (maximum 7 minutes) before play begins on any day shall be started not more than 30 minutes before the time scheduled or rescheduled for play to begin. The captain of the batting side may, however, delay the start of such rolling until not less than 10 minutes before the time scheduled or rescheduled for play to begin. | ತೀರ್ಮಾನಿಸಿದರೆ, ಅವರು ಇಂತಹ ಕೋರಿಕೆಯನ್ನು ತಿರಸ್ಕರಿಸಬೇಕು.<br>**೯.೧.೩ ಉರುಳುಕಲ್ಲಿನ (ರೋಲರ್) ಆಯ್ಕೆ**<br>ಒಂದಕ್ಕಿಂತ ಹೆಚ್ಚು ಉರುಳುಕಲ್ಲುಗಳು (ರೋಲರ್) ಲಭ್ಯವಿದ್ದರೆ, ದಾಂಡಿಗ ತಂಡದ ನಾಯಕನು ಯಾವುದೇ ಒಂದನ್ನು ಆಯ್ದುಕೊಳ್ಳಬಹುದು.<br>**೯.೧.೪ ಅನುಮತಿಸಿದ ರೋಲಿಂಗ್‌ನ ವೇಳೆ**<br>ಯಾವುದೇ ದಿನದ ಆಟದ ಪ್ರಾರಂಭಕ್ಕೆ ಮುಂಚೆ ೭ ನಿಮಿಷಕ್ಕೆ ಮೀರದಂತೆ ಅನುಮತಿಸಿದ ರೋಲಿಂಗ್, ಆಟ ಪ್ರಾರಂಭದ ನಿಗದಿತ ವೇಳೆ ಅಥವಾ ಪುನರ್ ನಿಗದಿತ ವೇಳೆಯ ೩೦ ನಿಮಿಷಗಳಿಗಿಂತ ಮುಂಚೆ ಪ್ರಾರಂಭಿಸುವಂತಿಲ್ಲ. ದಾಂಡಿಗ ತಂಡದ ನಾಯಕನು ರೋಲಿಂಗನ್ನು, ಆಟ ಪ್ರಾರಂಭದ ನಿಗದಿತ ವೇಳೆ ಅಥವಾ ಪುನರ್ ನಿಗದಿತ ವೇಳೆಯ ೧೦ ನಿಮಿಷಗಳ ಮುಂಚಿನವರೆಗೆ ವಿಳಂಬಿಸಬಹುದು. |
| **9.2 Clearing debris from the pitch.**<br>9.2.1 The pitch shall be cleared of any debris.<br>9.2.1.1 before the start of each day's play. This shall be after the completion of mowing and before any rolling, not earlier than 30 minutes nor later than 10 minutes before the time or any rescheduled time for start of play. | **೯.೨ ಆಟದ ಪಟ್ಟಿಯ ಮೇಲಿನ ಕಸವನ್ನು ತೆಗೆಯುವುದು**<br>೯.೨.೧ ಆಟದ ಪಟ್ಟಿಯ ಮೇಲಿನ ಯಾವುದೇ ಕಸವನ್ನು ತೆಗೆಯಬೇಕು.<br>೯.೨.೧.೧ ಪ್ರತಿ ದಿನ ಆಟ ಪ್ರಾರಂಭವಾಗುವುದಕ್ಕೆ ಮುಂಚೆ, ಆಟದ ಪಟ್ಟಿಯ ಮೇಲಿನ ಹುಲ್ಲು ಕತ್ತರಿಸಿದ ನಂತರ ಮತ್ತು ಯಾವುದೇ ರೋಲಿಂಗ್‌ಗಿಂತ ಮುಂಚೆ, ಆಟ ಪ್ರಾರಂಭಕ್ಕೆ ನಿಗದಿತ ವೇಳೆ ಅಥವಾ ಪುನರ್ ನಿಗದಿತ ವೇಳೆಯ ೩೦ |

| | |
|---|---|
| 9.2.1.2 between innings. This shall precede rolling if any is to take place.<br>9.2.1.3 at all intervals for meals.<br>9.2.2 The clearance of debris in 9.2.1 shall be done by sweeping, except where the umpires consider that this may be detrimental to the surface of the pitch. In this case the debris must be cleared from that area by hand, without sweeping.<br>9.2.3 In addition to 9.2.1, debris may be cleared from the pitch by hand, without sweeping, before mowing and whenever either umpire considers it necessary. | ನಿಮಿಷಗಳಿಗಿಂತ ಮುಂಚೆ ಅಥವಾ ೧೦ ನಿಮಿಷಗಳ ನಂತರ ಮಾಡುವಂತಿಲ್ಲ.<br>೯.೨.೧.೨ ಸರದಿಗಳ ನಡುವೆ, ರೋಲಿಂಗ್ ಏನಾದರೂ ಇದ್ದರೆ, ಅದಕ್ಕೆ ಮೊದಲು.<br>೯.೨.೧.೩ ಎಲ್ಲ ಭೋಜನದ ವಿರಾಮಗಳಲ್ಲಿ.<br>೯.೨.೨ ಮೇಲಿನ ೯.೨.೧ರಲ್ಲಿ ತಿಳಿಸಿರುವಂತೆ ಗುಡಿಸುವ ಮೂಲಕ ಕಸವನ್ನು ತೆಗೆಯಬೇಕು, ಆದರೆ ಇದರಿಂದ ಆಟದ ಪಟ್ಟಿಯ ಮೇಲ್ಭಾಗಕ್ಕೆ ಹಾನಿಯಾಗುತ್ತದೆ ಎಂದು ಅಂಪೈರು ಪರಿಗಣಿಸಿದರೆ ಕಸವನ್ನು ಗುಡಿಸದೆ**,** ಕೈಯಿಂದ ತೆಗೆಯಬೇಕು.<br>೯.೨.೩ ಮೇಲಿನ ೯.೨.೧ ತಿಳಿಸಿರುವುದರ ಜೊತೆಗೆ, ಹುಲ್ಲು ಕತ್ತರಿಸುವ ಮೊದಲು ಮತ್ತು ಯಾವುದೇ ಅಂಪೈರ್ ಬೇಕೆನಿಸಿದಾಗ ಗುಡಿಸದೆ, ಕೈಯಿಂದ ಕಸವನ್ನು ತೆಗೆಯಬಹುದು. |
| **9.3 Mowing**<br>9.3.1 **Responsibility for mowing**<br>9.3.1.1 All mowing which are carried out before the match shall be the sole responsibility of the Ground Authority.<br>9.3.1.2 All subsequent mowing shall be carried out under the supervision of the umpires.<br>9.3.2 **The pitch and outfield**<br>In order that throughout the match the ground conditions should be as nearly the same for both sides as possible, | **೯.೩ ಹುಲ್ಲು ಕತ್ತರಿಸುವುದು**<br>**೯.೩.೧ ಹುಲ್ಲು ಕತ್ತರಿಸುವ ಜವಾಬ್ದಾರಿ**<br>೯.೩.೧.೧ ಪಂದ್ಯ ಪ್ರಾರಂಭವಾಗುವುದಕ್ಕೆ ಮೊದಲು, ಎಲ್ಲ ತರದ ಹುಲ್ಲು ಕತ್ತರಿಸುವಿಕೆಯ ಜವಾಬ್ದಾರಿ ಮೈದಾನದ ಅಧಿಕಾರಿಗಳದ್ದು.<br>೯.೩.೧.೨ ಅನಂತರದ ಎಲ್ಲ ಹುಲ್ಲು ಕತ್ತರಿಸುವ ಕೆಲಸ**,** ಅಂಪೈರ್‌ಗಳ ಮೇಲ್ವಿಚಾರಣೆಯಲ್ಲಿ ನಡೆಯಬೇಕು**.**<br>**೯.೩.೨ ಆಟದ ಪಟ್ಟಿ ಮತ್ತು ಮೈದಾನ**<br>ಪಂದ್ಯದ ಪೂರ್ತಿ ಅವಧಿಗೆ, ಎರಡೂ ತಂಡಗಳಿಗೆ ಮೈದಾನದ ಸ್ಥಿತಿಯು ಸಾಧ್ಯವಾದಷ್ಟೂ ಒಂದೇ ರೀತಿಯದ್ದಾಗಿರಲು, ಹವಾಮಾನ |

both the pitch and the outfield shall be mown on each day of the match on which play is expected to take place, if ground and weather conditions permit.

If, for reasons other than conditions of ground or weather, complete mowing of the outfield is not possible, the Ground Authority shall notify the captains and umpires of the procedure to be adopted for such mowing during the match.

**9.3.3 Timing of mowing**

9.3.3.1 Mowing of the pitch on any day shall be completed not later than 30 minutes before the time scheduled or rescheduled for play to begin on that day, before any sweeping prior to rolling. If necessary, debris may be removed from the pitch before mowing, by hand, without sweeping. See 9.2.3.

9.3.3.2 Mowing of the outfield on any day shall be completed not later than 15 minutes before the time scheduled or rescheduled for play to begin on that day.

ಹಾಗೂ ಮೈದಾನದ ಸ್ಥಿತಿ ಅನುಕೂಲವಾಗಿದ್ದಲ್ಲಿ, ಆಟವು ಪ್ರಾರಂಭಗೊಳ್ಳುತ್ತದೆ ಎಂದು ನಿರೀಕ್ಷೆ ಇರುವ ಪ್ರತಿ ದಿನದಂದು ಆಟದ ಪಟ್ಟಿ ಮತ್ತು ಮೈದಾನದ ಹುಲ್ಲನ್ನು ಕತ್ತರಿಸಬೇಕು.

ಮೈದಾನದ ಅಥವಾ ಹವಾಮಾನದ ಪರಿಸ್ಥಿತಿಯನ್ನು ಹೊರತುಪಡಿಸಿ ಇತರ ಕಾರಣಗಳಿಗಾಗಿ ಪೂರ್ತಿ ಮೈದಾನದ ಹುಲ್ಲನ್ನು ಕತ್ತರಿಸಲು ಆಗದಿದ್ದಲ್ಲಿ, ಪಂದ್ಯದ ಅವಧಿಯಲ್ಲಿ ಹುಲ್ಲು ಕತ್ತರಿಸುವಿಕೆಯ ಕ್ರಮದ ಬಗ್ಗೆ ಮೈದಾನದ ಅಧಿಕಾರಿಗಳು ಅಂಪೈರ್‌ಗಳಿಗೆ ಮತ್ತು ನಾಯಕರುಗಳಿಗೆ ತಿಳಿಸಬೇಕು.

**೯.೩.೩ ಹುಲ್ಲು ಕತ್ತರಿಸುವ ಸಮಯ**

೯.೩.೩.೧ ಪಂದ್ಯದ ಯಾವುದೇ ದಿನ ಆಟದ ಪಟ್ಟಿಯ ಹುಲ್ಲು ಕತ್ತರಿಸುವಿಕೆಯು, ಆಯಾ ದಿನದ ಆಟ ಪ್ರಾರಂಭವಾಗುವುದಕ್ಕೆ ನಿಗದಿತ ಅಥವಾ ಪುನರ್‌ನಿಗದಿತ ವೇಳೆಗಿಂತ ೩೦ ನಿಮಿಷಗಳ ಒಳಗೆ ರೋಲಿಂಗ್‌ಗೆ ಮೊದಲು ಕಸಗುಡಿಸುವ ಮೊದಲೇ ಪೂರ್ತಿಗೊಳ್ಳಬೇಕು. ಅವಶ್ಯವಿದ್ದಲ್ಲಿ ಆಟದ ಪಟ್ಟಿಯ ಮೇಲಿನ ಕಸವನ್ನು ಗುಡಿಸುವ ಬದಲು ಕೈಯಿಂದ ತೆಗೆಯಬಹುದು. ೯.೨.೩ ಗಮನಿಸಿ.

೯.೩.೩.೨ ಪಂದ್ಯದ ಯಾವುದೇ ದಿನ ಪೂರ್ತಿ ಮೈದಾನದ ಹುಲ್ಲು ಕತ್ತರಿಸುವಿಕೆಯು, ಆಯಾ ದಿನದ ಆಟ ಪ್ರಾರಂಭವಾಗುವುದಕ್ಕೆ ನಿಗದಿತ ಅಥವಾ ಪುನರ್‌ನಿಗದಿತ ವೇಳೆಗಿಂತ ೧೫ ನಿಮಿಷಗಳ ಒಳಗೆ ಪೂರ್ತಿಗೊಳ್ಳಬೇಕು.

| | |
|---|---|
| **9.4 Watering the pitch.**<br>The pitch shall not be watered during the match. | **೯.೪ ಆಟದ ಪಟ್ಟಿಗೆ ನೀರು ಹನಿಸುವುದು**<br>ಪಂದ್ಯದ ಅವಧಿಯಲ್ಲಿ ಆಟದ ಪಟ್ಟಿಗೆ ನೀರನ್ನು ಹನಿಸುವಂತಿಲ್ಲ. |
| **9.5 Re-marking creases**<br>Creases shall be re-marked whenever either umpire considers it necessary. | **೯.೫ ಕ್ರೀಸ್‌ಗಳನ್ನು ಮರಳಿ ಗುರುತು ಮಾಡುವುದು**<br>ಕ್ರೀಸ್‌ಗಳನ್ನು ಯಾವುದೇ ಅಂಪೈರ್ ಅಗತ್ಯವೆಂದು ಪರಿಗಣಿಸಿದಾಗಲೆಲ್ಲ ಮರು ಗುರುತು ಮಾಡಬೇಕು. |
| **9.6 Maintenance of foot holes**<br>The umpires shall ensure that the holes made by the bowlers and batters are cleaned out and dried whenever necessary to facilitate play.<br>In matches of more than one day's duration, the umpires shall allow, if necessary, the returfing of foot holes made by the bowlers in their delivery strides, or the use of quick-setting fillings for the same purpose. | **೯.೬ ಹೆಜ್ಜೆಯ ಗುರುತುಗಳನ್ನು ಸರಿಪಡಿಸುವುದು**<br>ಆಟವು ಸುಗಮವಾಗಿ ಸಾಗಲು ಅಂಪೈರ್‌ಗಳು ಬೌಲರ್ ಹಾಗೂ ದಾಂಡಿಗರ ಹೆಜ್ಜೆಯಿಂದಾದ ಗುರುತುಗಳನ್ನು ಅವಶ್ಯವಿದ್ದಾಗಲೆಲ್ಲ ಸ್ವಚ್ಛವಾಗಿರಿಸಿ ಒಣಗಿಸಬೇಕು.<br>ಒಂದು ಇಲ್ಲವೇ ಹೆಚ್ಚಿನ ದಿನದ ಪಂದ್ಯಗಳಲ್ಲಿ ಅಂಪೈರ್ ಅವಶ್ಯವೆನಿಸಿದರೆ, ಬೌಲರನು ಚೆಂಡು ಎಸೆಯುವ ಅಂತಿಮ ಹೆಜ್ಜೆಯಲ್ಲಿ ಮಾಡಿರುವ ಗುರುತನ್ನು ಸರಿಪಡಿಸಲು ಆ ಜಾಗದಲ್ಲಿ ಹುಲ್ಲನ್ನು ನೆಡಲು ಇಲ್ಲವೇ ಶೀಘ್ರವಾಗಿ ಆವರಿಸಿಕೊಂಡು ಹೊಂದಿಕೊಳ್ಳುವ ಪದಾರ್ಥವನ್ನು ಉಪಯೋಗಿಸಲು ಅನುಮತಿ ಕೊಡಬೇಕು. |
| **9.7 Securing of footholds and maintenance of pitch.**<br>During play, umpires shall allow the players to secure their footholds by the use of sawdust provided that no damage to the pitch is caused and that Law 41 (Unfair play) is not contravened. | **೯.೭ ಹೆಜ್ಜೆಯ ಗುರುತುಗಳನ್ನು ಭದ್ರಪಡಿಸುವುದು ಮತ್ತು ಆಟದ ಪಟ್ಟಿಯ ಉಸ್ತುವಾರಿ**<br>ಆಟದ ಅವಧಿಯಲ್ಲಿ ಆಟಗಾರರು ತಮ್ಮ ಕಾಲನ್ನು ಭದ್ರವಾಗಿ ಊರಲು ಸಹಾಯಕವಾಗಲು ಮರದ ಹೊಟ್ಟನ್ನು ಉಪಯೋಗಿಸಲು ಸಮ್ಮತಿಸಬಹುದು. ಆದರೆ ಇದರಿಂದ ಆಟದ ಪಟ್ಟಿಗೆ ಯಾವುದೇ ಹಾನಿ ಆಗಬಾರದು ಮತ್ತು ನಿಯಮ ೪೧ (ನಿಯಮಬದ್ಧ ಮತ್ತು ನಿಯಮ ಬಾಹಿರ ಆಟ) ದ ಉಲ್ಲಂಘನೆ ಆಗಬಾರದು. |

| | |
|---|---|
| **9.8 Non-turf pitches**<br>Wherever appropriate, the provisions set out in 9.1 to 9.7 shall apply. | **೯.೮ ಹುಲ್ಲಿನದಲ್ಲದ ಆಟದ ಪಟ್ಟಿ**<br>ಸೂಕ್ತವೆನಿಸುವ ಕಡೆಗಳಲ್ಲಿ ೯.೧ ರಿಂದ ೯.೭ ರಲ್ಲಿ ಗೊತ್ತುಪಡಿಸಿರುವ ನಿಬಂಧನೆಗಳು ಅನ್ವಯಿಸುತ್ತವೆ. |
| **LAW 10 COVERING THE PITCH** | **ನಿಯಮ ೧೦ ಆಟದ ಪಟ್ಟಿಯನ್ನು ಹೊದಿಸುವುದು** |
| **10.1 Before the match**<br>The use of covers before the match is the responsibility of the Ground Authority and may include full covering if required.<br>However, the Ground Authority shall grant suitable facility to the captains to inspect the pitch before the nomination of their players and to the umpires to discharge their duties as laid down in Laws 2 (The umpires), 6 (The pitch), 7 (The creases), 8 (The wickets), and 9 (Preparation and maintenance of the playing area). | **೧೦.೧ ಪಂದ್ಯಕ್ಕೆ ಮೊದಲು**<br>ಪಂದ್ಯಕ್ಕೆ ಮೊದಲು ಆಟದ ಪಟ್ಟಿಗೆ ಹೊದಿಕೆ ಹಾಕುವ ಜವಾಬ್ದಾರಿ ಮೈದಾನದ ಅಧಿಕಾರಿಗಳದ್ದಾಗಿರುತ್ತದೆ.<br>ಆದಾಗ್ಯೂ, ಆಟದ ಮೈದಾನದ ಅಧಿಕಾರಿಗಳು ನಾಯಕರುಗಳಿಗೆ ತಮ್ಮ ತಮ್ಮ ತಂಡಗಳನ್ನು ನಾಮಾಂಕಿತ ಮಾಡುವ ಮೊದಲು ಆಟದ ಪಟ್ಟಿಯನ್ನು ಪರಿಶೀಲಿಸಲು ಮತ್ತು ಅಂಪೈರ್‌ಗಳಿಗೆ ನಿಯಮ ೨ (ಅಂಪೈರ್‌ಗಳು), ೬ (ಆಟದ ಪಟ್ಟಿ), ೭ (ಕ್ರೀಸ್‌ಗಳು), ೮ (ಘೂಟಗಳು) ಮತ್ತು ೯ (ಸಿದ್ಧತೆ ಮತ್ತು ಉಸ್ತುವಾರಿ)ಗಳ ಪ್ರಕಾರ ನಿಗದಿತ ಕರ್ತವ್ಯಗಳನ್ನು ನಿರ್ವಹಿಸಲು ಸೂಕ್ತ ವ್ಯವಸ್ಥೆ ಮಾಡಬೇಕು. |
| **10.2 During the match**<br>Unless determined otherwise before the toss, on each night of the match and in inclement weather at any time during the match.<br>10.2.1 the whole pitch and a minimum of 4 ft/1.22 m beyond it at each end shall be covered.<br>10.2.2 the bowlers' run-ups, where possible, shall be covered. | **೧೦.೨ ಪಂದ್ಯದ ಅವಧಿಯಲ್ಲಿ**<br>ನಿಬಂಧನೆಗಳ ಮೂಲಕ ಇತರೆ ಅವಕಾಶವನ್ನು ಕಲ್ಪಿಸದಿದ್ದಲ್ಲಿ ಅಥವಾ ನಾಣ್ಯ ಚಿಮ್ಮುವುದಕ್ಕೆ ಮೊದಲು ಒಪ್ಪಂದ ಮಾಡಿಕೊಂಡಿರದಿದ್ದಲ್ಲಿ, ಪಂದ್ಯದ ಪ್ರತಿ ರಾತ್ರಿ ಹಾಗೂ ಪಂದ್ಯ ನಡೆಯುವ ಸಮಯದಲ್ಲಿ ಕೆಟ್ಟ ಹವಾಮಾನವಿದ್ದಾಗ;<br>೧೦.೨.೧ ಇಡೀ ಆಟದ ಪಟ್ಟಿ ಹಾಗೂ ಪಟ್ಟಿಯನ್ನು ದಾಟಿ ಕನಿಷ್ಠ ೪ ಅಡಿ/೧.೨೨ ಮೀ. ಗಳಷ್ಟು ಹೊದಿಕೆ ಹಾಕಬೇಕು. |

| | |
|---|---|
| | ೧೦.೨.೨ ಸಾಧ್ಯವಾದರೆ ಬೌಲರ್‌ನ ಓಟದ ಪಥವನ್ನೂ ಹೊದಿಸಬೇಕು. |
| **10.3 Removal of covers**<br>10.3.1 If after the toss the pitch is covered overnight, the covers shall be removed as soon as practicable on each day that play is expected to take place.<br>10.3.2 If covers are used during the day as protection from inclement weather, or if inclement weather delays the removal of overnight covers, they shall be removed promptly as soon as conditions allow. | **೧೦. ೩ ಹೊದಿಕೆಯನ್ನು ತೆಗೆಯುವುದು**<br>**೧೦.೩.೧** ನಾಣ್ಯ ಚಿಮ್ಮುವಿಕೆಯನಂತರ, ಆ ದಿನದ ರಾತ್ರಿ ಆಟದ ಪಟ್ಟಿಯನ್ನು ಹೊದಿಸಿದ್ದರೆ, ನಂತರದ ಪ್ರತಿ ದಿನದಂದು, ಆಟ ನಡೆಯುವ ಸಾಧ್ಯತೆ ಇದ್ದರೆ, ಬೆಳಗ್ಗೆ ಸಾಧ್ಯವಾದಷ್ಟೂ ಬೇಗನೆ ಹೊದಿಕೆಯನ್ನು ತೆಗೆಯಬೇಕು.<br>೧೦.೩.೨ ಆಟದ ದಿನದ ಅವಧಿಯಲ್ಲಿ, ಪ್ರತಿಕೂಲ ಹವಾಮಾನದಿಂದ ರಕ್ಷಿಸಲು, ಹೊದಿಕೆಯನ್ನು ಉಪಯೋಗಿಸಿದ್ದರೆ ಅಥವಾ ಪ್ರತಿಕೂಲ ಹವಾಮಾನದಿಂದ ರಾತ್ರಿ ಮುಚ್ಚಿದ ಹೊದಿಕೆಯನ್ನು ತೆಗೆಯಲು ವಿಳಂಬವಾದರೆ, ಅವುಗಳನ್ನು ಪರಿಸ್ಥಿತಿ ಸುಧಾರಿಸಿದ ಕೂಡಲೇ ತೆಗೆಯಬೇಕು. |
| **LAW 11 INTERVALS** | **ನಿಯಮ ೧೧ ವಿರಾಮಗಳು** |
| 11.1 **An interval**<br>11.1.1 The following shall be classed as intervals:<br>➢ The period between close of play on one day and the start of the next day's play.<br>➢ Intervals between innings.<br>➢ Intervals for meals.<br>➢ Intervals for drinks.<br>➢ Any other agreed interval. | **೧೧.೧ ವಿರಾಮವೆಂದರೆ**<br>೧೧.೧.೧ ಈ ಕೆಳಗಿನವುಗಳನ್ನು ವಿರಾಮವೆಂದು ವರ್ಗೀಕರಿಸಬೇಕು.<br>➢ ಒಂದು ದಿನದ ಆಟ ಮುಕ್ತಾಯವಾದ ಸಮಯದಿಂದ ಮರು ದಿನದ ಆಟ ಪ್ರಾರಂಭವಾಗುವ ನಡುವಿನ ಅವಧಿ.<br>➢ ಎರಡು ಸರದಿಗಳ ನಡುವಿನ ಅವಧಿ.<br>➢ ಊಟದ ವಿರಾಮ.<br>➢ ಪಾನೀಯ ವಿರಾಮ.<br>➢ ಯಾವುದೇ ಇತರ ಒಪ್ಪಿದ ವಿರಾಮ. |

| | |
|---|---|
| 11.1.2 Only these intervals shall be considered as scheduled breaks for the purposes of Law 24.2.6. | ೧೧.೧.೨ ನಿಯಮ ೨೪.೬ ರ ಉದ್ದೇಶಕ್ಕಾಗಿ ಈ ಎಲ್ಲ ವಿರಾಮಗಳನ್ನು ಮಾತ್ರ ನಿಗದಿತ ವಿರಾಮ ಎಂದು ಪರಿಗಣಿಸಬೇಕು. |
| **11.2 Duration of intervals**<br>11.2.1 An interval for lunch or tea shall be of the duration determined under Law 2.3<br>(Consultation with captains), taken from the call of Time before the interval until the call of Play on resumption after the interval.<br><br>11.2.2 An interval between innings shall be 10 minutes, commencing from the close of an innings until the call of Play for the start of the next innings. See, however, 11.3, 11.5 and 11.6. | **೧೧.೨ ವಿರಾಮಗಳ ಅವಧಿ**<br>೧೧.೨.೧ ಊಟ ಅಥವಾ ಚಹಾ ವಿರಾಮದ ಅವಧಿಯು, ನಿಯಮ ೨.೩ (ನಾಯಕರೊಂದಿಗೆ ಸಮಾಲೋಚನೆ) ರಲ್ಲಿ ಒಪ್ಪಿದ ಅವಧಿಯದಾಗಿದ್ದು, ಇದು ವಿರಾಮದ ಮೊದಲು "ಟೈಂ" ಕರೆದ ಸಮಯದಿಂದ ಆ ವಿರಾಮ ಮುಗಿದನಂತರದ ಆಟ ಪ್ರಾರಂಭಗೊಳ್ಳುವ ಮೊದಲು "ಪ್ಲೇ" ಎಂದು ಕರೆಯುವ ಸಮಯದ ನಡುವಿನ ಅವಧಿ.<br>೧೧.೨.೨ ಎರಡು ಸರದಿಯ ನಡುವಿನ ವಿರಾಮ ೧೦ ನಿಮಿಷಗಳದ್ದಾಗಿದ್ದು, ಇದು ಒಂದು ಸರದಿಯ ಮುಕ್ತಾಯದಿಂದ ಮತ್ತೊಂದು ಸರದಿಯ ಪ್ರಾರಂಭಕ್ಕೆ "ಪ್ಲೇ" ಎಂದು ಕರೆಯುವ ನಡುವಿನ ಅವಧಿ. ಆದಾಗ್ಯೂ, ಕೆಳಗಿನ ೧೧.೩ ೧೧.೫ ಮತ್ತು ೧೧.೬ ಗಮನಿಸಿ. |
| **11.3 Allowance for interval between innings**<br>In addition to the provisions of 11.5 and 11.6,<br>11.3.1 if an innings ends when 10 minutes or less remains before the time agreed for close of play on any day, there shall be no further play on that day. No change shall be | **೧೧.೩ ಸರದಿಗಳ ನಡುವಿನ ವಿರಾಮದ ಅವಧಿ**<br>೧೧.೫ ಮತ್ತು ೧೧.೬ರ ಅವಕಾಶಗಳೊಂದಿಗೆ,<br>೧೧.೩.೧ ಯಾವುದೇ ದಿನದ ಆಟ ಮುಗಿಯಲು ೧೦ ನಿಮಿಷ ಅಥವಾ ಕಡಿಮೆ ಸಮಯ ಇದ್ದಾಗ, ಒಂದು ಸರದಿಯ **(innings)** ಮುಕ್ತಾಯವಾದರೆ ಆಟವನ್ನು ಮುಂದುವರೆಸಬಾರದು (ಅಲ್ಲಿಗೇ ಮುಕ್ತಾಯಗೊಳಿಸಬೇಕು). ಮರುದಿವಸದ ಆಟದ |

| | |
|---|---|
| made to the time for the start of play on the following day on account of the 10-minute interval between innings. | ಪ್ರಾರಂಭದ ಸಮಯಕ್ಕೆ ಯಾವುದೇ ಬದಲಾವಣೆ ಈ ಸರದಿಯ ಮಧ್ಯದ ೧೦ ನಿಮಿಷಗಳ ವಿರಾಮಕ್ಕೋಸ್ಕರ ಮಾಡಬಾರದು. |
| 11.3.2 if a captain declares an innings closed or forfeits an innings during an interruption in play of more than 10 minutes duration, provided that at least 10 minutes remains of the interruption, no adjustment shall be made to the time for resumption of play on account of the 10 minutes interval between innings, which shall be considered as included in the interruption. If less than 10 minutes remains of the interruption when the captain declares the innings closed, or forfeits an innings, the next innings shall commence 10 minutes after the declaration or forfeiture is made. | ೧೧.೩.೨ ದಾಂಡಿಗ ತಂಡದ ನಾಯಕನು ತನ್ನ ಸರದಿ ಮುಕ್ತಾಯವಾಯಿತೆಂದು, ಅಥವಾ ತ್ಯಜಿಸಿದೆನೆ0ದು ಯಾವುದೇ ಅಡಚಣೆಯಿಂದ ಆಟ ೧೦ ನಿಮಿಷಕ್ಕಿಂತ ಹೆಚ್ಚಿನ ಅವಧಿಗೆ ಸ್ಥಗಿತಗೊಂಡಿದ್ದಾಗ ಘೋಷಿಸಿದರೆ ಮತ್ತು ಆಗ ಆಟದ ಪ್ರಾರಂಭಕ್ಕೆ ೧೦ ನಿಮಿಷ ಅಥವಾ ಹೆಚ್ಚಿಗೆ ಸಮಯವಿದ್ದರೆ, ಸರದಿಗಳ ನಡುವಿನ ೧೦ ನಿಮಿಷಗಳ ವಿರಾಮವು ಅಡಚಣೆ ಅವಧಿಯಲ್ಲಿ ಸೇರಿದೆ ಎಂದು ತಿಳಿಯಬೇಕು. ಒಂದು ವೇಳೆ ಅಡಚಣೆಯ ಅವಧಿಯಲ್ಲಿ ೧೦ ನಿಮಿಷಕ್ಕಿಂತ ಕಡಿಮೆ ಸಮಯವಿದ್ದಾಗ ನಾಯಕನು ಸರದಿಯ ಸಮಾಪ್ತಿಯನ್ನು ಘೋಷಿಸಿದರೆ ಇಲ್ಲವೇ ಸರದಿಯನ್ನು ಬಿಟ್ಟು ಕೊಟ್ಟರೆ/ ತ್ಯಜಿಸಿದರೆ ಮುಂದಿನ ಸರದಿಯು ಘೋಷಣೆಯ ಸಮಯದಿಂದ ೧೦ ನಿಮಿಷಗಳ ನಂತರ ಪ್ರಾರಂಭವಾಗಬೇಕು. |
| 11.3.3 if a captain declares an innings closed or forfeits an innings during any interval other than an interval for drinks, provided that at least 10 minutes remains of the interval, the interval shall be of the agreed duration and shall be considered to include the 10 minutes interval between innings. If less than 10 minutes remains of the | ೧೧.೩.೩ ದಾಂಡಿಗ ತಂಡದ ನಾಯಕನು ತನ್ನ ಸರದಿ, ಪಾನಿಯ ವಿರಾಮವನ್ನು ಬಿಟ್ಟು ಬೇರಾವುದೇ ವಿರಾಮದಲ್ಲಿ ಕನಿಷ್ಠ ೧೦ ನಿಮಿಷ ಉಳಿದಿರುವಾಗ ಮುಕ್ತಾಯವಾಯಿತೆಂದು ಅಥವಾ ತ್ಯಜಿಸಿದೆನೆ0ದು ಘೋಷಿಸಿದರೆ, ವಿರಾಮವು ನಿರ್ಧಾರಿತ ಸಮಯದ್ದೇ ಇರಬೇಕು ಮತ್ತು ೧೦ ನಿಮಿಷಗಳ ಸರದಿ ಮಧ್ಯದ ವಿರಾಮ ಈ ವಿರಾಮದಲ್ಲಿ ವಿಲೀನಗೊಂಡಿದೆ ಎಂದು ಭಾವಿಸಬೇಕು. ಒಂದು ವೇಳೆ ವಿರಾಮದ ಅವಧಿಯಲ್ಲಿ ೧೦ |

| | |
|---|---|
| interval when the captain declares the innings closed, or forfeits an innings, the interval shall be extended as necessary, and the next innings shall commence 10 minutes after the declaration or forfeiture is made. | ನಿಮಿಷಕ್ಕಿಂತ ಕಡಿಮೆ ಸಮಯವಿದ್ದಾಗ ನಾಯಕನು ಸರದಿಯ ಸಮಾಪ್ತಿಯನ್ನು ಘೋಷಿಸಿದರೆ ಇಲ್ಲವೇ ಸರದಿಯನ್ನು ಬಿಟ್ಟು ಕೊಟ್ಟರೆ/ ತ್ಯಜಿಸಿದರೆ, ವಿರಾಮವನ್ನು ಅಗತ್ಯವಿರುವ ಅವಧಿಗೆ ಹೆಚ್ಚಿಸಿ ಮುಂದಿನ ಸರದಿಯ ಘೋಷಣೆಯ ಸಮಯದಿಂದ ೧೦ ನಿಮಿಷಗಳ ನಂತರ ಪ್ರಾರಂಭವಾಗಬೇಕು. |
| **11.4 Changing agreed times of intervals.**<br>If, at any time during the match, either Playing time is lost through adverse conditions of ground, weather or light or in exceptional circumstances, or the players have occasion to leave the field other than at a scheduled interval, the time of the lunch interval or of the tea interval may be changed if the two umpires and both captains so agree, providing the requirements of 11.2 and 11.5, 11.6, 11.7 and 11.8.3 are not contravened. | **೧೧.೪ ವಿರಾಮಗಳ ನಿರ್ಧಾರಿತ ಅವಧಿಯನ್ನು ಬದಲಾಯಿಸುವುದು**<br>ಪಂದ್ಯದ ಯಾವುದೇ ಸಮಯದಲ್ಲಿ,<br>ಆಟದ ಸಮಯ**,** ಮೈದಾನದ ಸ್ಥಿತಿ, ಪ್ರತಿಕೂಲ ಹವಾಮಾನ ಅಥವಾ ಬೆಳಕು ಅಥವಾ ವಿಶೇಷ ಕಾರಣಗಳಿಗಾಗಿ ಹಾಳಾಗಿದ್ದರೆ ಅಥವಾ ನಿರ್ಧಾರಿತ ವಿರಾಮಗಳ ಹೊರತಾಗಿ ಆಟಗಾರರು ಮೈದಾನದಿಂದ ಹೊರ ಬಂದರೆ, ಊಟದ ಮತ್ತು ಚಹಾ ವಿರಾಮದ ನಿಗದಿತ ಸಮಯವನ್ನು ಇಬ್ಬರೂ ಅಂಪೈರ್‌ಗಳು ಮತ್ತು ಇಬ್ಬರೂ ನಾಯಕರು ಒಪ್ಪಿದರೆ, ನಿಯಮ ೧೧.೨ ರ ಅಗತ್ಯಗಳನುಸಾರವಾಗಿ ಮತ್ತು ನಿಯಮ ೧೧.೫, ೧೧.೬, ೧೧.೭ ಮತ್ತು ೧೧.೮.೩ ಗಳನ್ನು ಉಲ್ಲಂಘಿಸದೆ ಬದಲಾಯಿಸಬಹುದು. |
| **11.5 Changing agreed time for lunch interval**<br>11.5.1 If an innings ends when 10 minutes or less remains before the agreed time for lunch, the interval shall be taken immediately. It shall be of the agreed duration and shall be considered to include the 10 minutes interval between innings. | **೧೧.೫ ಊಟದ ವಿರಾಮದ ನಿರ್ಧಾರಿತ ಸಮಯವನ್ನು ಬದಲಾಯಿಸುವುದು**<br>೧೧.೫.೧ ಒಂದು ವೇಳೆ ಊಟದ ವಿರಾಮದ ನಿಗದಿತ ವೇಳೆಗೆ ೧೦ ನಿಮಿಷ ಅಥವಾ ಕಡಿಮೆ ಸಮಯವಿರಬೇಕಾದರೆ, ಒಂದು ಸರದಿಯ ಸಮಾಪ್ತಿಯಾದರೆ. ಊಟದ ವಿರಾಮವನ್ನು ಕೂಡಲೇ ತೆಗೆದುಕೊಳ್ಳಬೇಕು ಮತ್ತು ಅದು ನಿಗದಿತ |

| | |
|---|---|
| | ಅವಧಿಯದ್ದಾಗಿರಬೇಕು ಮತ್ತು ಈ ಅವಧಿ ೧೦ ನಿಮಿಷದ ಸರದಿಗಳ ಮಧ್ಯದ ಅವಧಿಯನ್ನು ಒಳಗೊಂಡಿದೆ ಎಂದು ಪರಿಗಣಿಸಬೇಕು. |
| 11.5.2 If because of adverse conditions of ground, weather or light, or in exceptional circumstances, a stoppage occurs when 10 minutes or less remains before the agreed time for lunch, then, whether or not agreement is reached in the circumstances of 11.4, the interval shall be taken immediately. It shall be of the agreed duration. Play shall resume at the end of this interval or as soon after as conditions permit. | ೧೧.೫.೨ ಒಂದು ವೇಳೆ ಪ್ರತಿಕೂಲ ಹವಾಮಾನ, ಬೆಳಕು ಅಥವಾ ಮೈದಾನದ ಸ್ಥಿತಿಯಿಂದ ಅಥವಾ ವಿಶೇಷ ಕಾರಣಗಳಿಗಾಗಿ ಊಟದ ವಿರಾಮದ ನಿರ್ಧಾರಿತ ಸಮಯದ ೧೦ ನಿಮಿಷಗಳ ಒಳಗೆ ಆಟ ಸ್ಥಗಿತಗೊಂಡರೆ, ನಿಯಮ ೧೧.೪ರ ಪ್ರಕಾರ ಒಪ್ಪಂದ ಮಾಡಿಕೊಂಡಿರಲಿ ಅಥವಾ ಇಲ್ಲದಿರಲಿ, ಊಟದ ವಿರಾಮವನ್ನು ಕೂಡಲೇ ತೆಗೆದುಕೊಳ್ಳಬೇಕು. ವಿರಾಮವು ನಿರ್ಧಾರಿತ ಅವಧಿಯದಿದ್ದು, ಆಟ ವಿರಾಮದ ಅವಧಿ ಮುಗಿದ ಮೇಲೆ ಅಥವಾ ಪರಿಸ್ಥಿತಿ ಸುಧಾರಿಸಿದ ಕೂಡಲೇ ಆಟವನ್ನು ಮುಂದುವರೆಸಬೇಕು. |
| 11.5.3 If the players have occasion to leave the field for any reason when more than 10 minutes remains before the agreed time for lunch then, unless the umpires and captains together agree to alter it, lunch shall be taken at the agreed time. | ೧೧.೫.೩ ನಿರ್ಧಾರಿತ ಊಟದ ವಿರಾಮಕ್ಕೆ ೧೦ಕ್ಕಿಂತ ಹೆಚ್ಚು ನಿಮಿಷಗಳಿರಬೇಕಾದರೆ, ಯಾವುದೇ ಕಾರಣಕ್ಕಾಗಿ ಆಟಗಾರರು ಮೈದಾನ ಬಿಟ್ಟು ಬಂದರೆ, ಅಂಪೈರ್‌ಗಳು ಮತ್ತು ಇಬ್ಬರೂ ನಾಯಕರು ಒಪ್ಪದ ಹೊರತು, ಊಟದ ವಿರಾಮವನ್ನು ನಿರ್ಧಾರಿತ ಸಮಯಕ್ಕೆ ತೆಗೆದುಕೊಳ್ಳಬೇಕು. |
| **11.6 Changing agreed time for tea interval.**<br>11.6.1 If an innings ends when 30 minutes or less remains before the agreed time for tea, the interval shall be taken immediately. It shall be of the agreed duration and shall | **೧೧.೬ ಚಹಾ ವಿರಾಮದ ನಿರ್ಧಾರಿತ ಸಮಯವನ್ನು ಬದಲಾಯಿಸುವುದು**<br>೧೧.೬.೧ ನಿರ್ಧಾರಿತ ಚಹಾ ವಿರಾಮದ ಸಮಯಕ್ಕೆ ೩೦ ಅಥವಾ ಕಡಿಮೆ ನಿಮಿಷಗಳಿದ್ದಾಗ, ಸರದಿಯ ಸಮಾಪ್ತಿಯಾದರೆ, ಚಹಾ |

| | |
|---|---|
| be considered to include the 10 minutes interval between innings. | ವಿರಾಮವನ್ನು ಕೂಡಲೇ ತೆಗೆದುಕೊಳ್ಳಬೇಕು. ವಿರಾಮವು ನಿರ್ಧಾರಿತ ಅವಧಿಯದ್ದಾಗಿರಬೇಕು ಹಾಗೂ ಸರದಿಗಳ ಮಧ್ಯದ ೧೦ ನಿಮಿಷಗಳ ಅವಧಿಯನ್ನು ಒಳಗೊಂಡಿದೆ ಎಂದು ಪರಿಗಣಿಸಬೇಕು. |
| 11.6.2 If, when 30 minutes remains before the agreed time for tea, an interval between innings is already in progress, play shall resume at the end of the 10 minutes interval if conditions permit. | ೧೧.೬.೨ ನಿರ್ಧಾರಿತ ಚಹಾ ವಿರಾಮದ ಸಮಯಕ್ಕೆ ೩೦ ನಿಮಿಷಗಳಿದ್ದಾಗ, ಸರದಿಗಳ ನಡುವಿನ ವಿರಾಮ ಚಾಲ್ತಿಯಲ್ಲಿದ್ದರೆ, ಆ ೧೦ ನಿಮಿಷಗಳ ವಿರಾಮ ಮುಗಿದ ನಂತರ ಪರಿಸ್ಥಿತಿ ಪ್ರತಿಕೂಲ ವಿಲ್ಲದಿದ್ದರೆ, ಆಟವನ್ನು ಮುಂದುವರೆಸಬೇಕು. |
| 11.6.3 If, because of adverse conditions of ground, weather or light, or in exceptional circumstances, a stoppage occurs when 30 minutes or less remains before the agreed time for tea, then unless<br>either there is an agreement to change the time for tea, as permitted in 11.4<br>or the captains agree to forgo the tea interval, as permitted in 11.9<br>the interval shall be taken immediately. The interval shall be of the agreed duration.<br>Play shall resume at the end of the interval or as soon after as conditions permit. | ೧೧.೬.೩ ನಿರ್ಧಾರಿತ ಚಹಾ ವಿರಾಮದ ಸಮಯಕ್ಕೆ ೩೦ ನಿಮಿಷ ಅಥವಾ ಕಡಿಮೆ ಸಮಯವಿದ್ದಾಗ, ಪ್ರತಿಕೂಲ ಹವಾಮಾನ, ಬೆಳಕು ಅಥವಾ ಮೈದಾನದ ಸ್ಥಿತಿಯಿಂದ ಅಥವಾ ವಿಶೇಷ ಕಾರಣಗಳಿಗಾಗಿ ಆಟ ಸ್ಥಗಿತಗೊಂಡರೆ,<br>ನಿಯಮ ೧೧.೪ ರ ಪ್ರಕಾರ ಚಹಾ ವಿರಾಮದ ಸಮಯವನ್ನು ಬದಲಾಯಿಸಲು ಒಪ್ಪಂದವಿರದಿದ್ದರೆ,<br>ಅಥವಾ ೧೧.೯ ಪ್ರಕಾರ ಚಹ ವಿರಾಮವನ್ನು ತ್ಯಜಿಸಲು ಒಪ್ಪಿಲ್ಲದಿದ್ದರೆ,<br>ವಿರಾಮವನ್ನು ಕೂಡಲೇ ತೆಗೆದುಕೊಳ್ಳಬೇಕು. ವಿರಾಮವು ನಿರ್ಧಾರಿತ ಅವಧಿಯದ್ದಿರಬೇಕು. ಆಟವು ವಿರಾಮದ ಅವಧಿ ಮುಗಿದನಂತರ ಇಲ್ಲವೇ ಪರಿಸ್ಥಿತಿ ಸುಧಾರಿಸಿದ ಕೂಡಲೇ ಮುಂದುವರೆಸಬೇಕು. |

| | |
|---|---|
| 11.6.4 If a stoppage is already in progress when 30 minutes remains before the agreed time for tea, 11.4 shall apply. | ೧೧.೬.೪ ನಿರ್ಧಾರಿತ ಚಹಾ ವಿರಾಮಕ್ಕೆ ೩೦ ನಿಮಿಷಗಳಿರುವಾಗ ಆಟ ಸ್ಥಗಿತಗೊಂಡಿದ್ದರೆ ನಿಯಮ ೧೧.೪ ಅನ್ವಯಿಸುತ್ತದೆ |
| **11.7 Lunch or tea interval – 9 wickets down**<br>For the lunch interval and for the tea interval if either 9 wickets are already down when 3 minutes remains to the agreed time for the interval,<br>or the 9th wicket falls within this 3 minute, or at any time up to and including the final ball of the over in progress at the agreed time for the interval,<br>then the provisions of Law 12.5.2 shall not apply and the interval will not be taken until the end of the over that is in progress 30 minutes after the originally agreed time for the interval, unless the players have cause to leave the field of play or the innings is completed earlier.<br>For the purposes of this section of Law, the retirement of a batter is not to be considered equivalent to the fall of a wicket. | **೧೧.೭ ಊಟದ ಅಥವಾ ಚಹಾ ವಿರಾಮ – ೯ ಹುದ್ದರಿಗಳ ಪಥನ**<br>ಊಟದ ಮತ್ತು ಚಹಾ ವಿರಾಮಗಳಿಗೆ, ವಿರಾಮದ ನಿರ್ಧಾರಿತ ಸಮಯಕ್ಕೆ ೩ ನಿಮಿಷಗಳಿರುವಾಗ, ೯ ಹುದ್ದರಿಗಳ ಪಥನವಾಗಿದ್ದರೆ ಅಥವಾ ೯ನೇ ಹುದ್ದರಿ ವಿರಾಮದ ೩ ನಿಮಿಷಗಳ ಒಳಗೆ ಅಥವಾ ನಿರ್ಧಾರಿತ ಸಮಯದಲ್ಲಿ ಚಾಲ್ತಿಯಲ್ಲಿರುವ ಓವರಿನ ಕೊನೆಯ ಎಸೆತವನ್ನೂ ಸೇರಿ ೯ ನೇಯ ಹುದ್ದರಿಯ ಪಥನವಾದರೆ, ನಿಯಮ ೧೨.೫ರ ನಿಬಂಧನೆಗಳು ಅನ್ವಯವಾಗುವುದಿಲ್ಲ ಮತ್ತು ನಿರ್ಧಾರಿತ ಸಮಯದ ೩೦ ನಿಮಿಷಗಳ ನಂತರ ಚಾಲ್ತಿಯಲ್ಲಿರುವ ಓವರಿನ ಮುಕ್ತಾಯದ ನಂತರ, ಆಟಗಾರರು ಯಾವುದೇ ಕಾರಣಕ್ಕಾಗಿ ಮೈದಾನದಿಂದ ಹೊರಬರದ ಹೊರತು ಅಥವಾ ಸರದಿಯು ಮುಕ್ತಾಯವಾಗದ ಹೊರತು, ವಿರಾಮವನ್ನು ತೆಗೆದುಕೊಳ್ಳಬೇಕು.<br>ನಿಯಮದ ಈ ಭಾಗದ ಉದ್ದೇಶಕ್ಕಾಗಿ, ದಾಂಡಿಗನೊಬ್ಬನ ನಿವೃತ್ತಿಯನ್ನು ಹುದ್ದರಿಯ ಪಥನವೆಂದು ಪರಿಗಣಿಸಬಾರದು. |
| **11.8 Intervals for drinks**<br>11.8.1 If on any day the umpires determine that there shall be intervals for drinks, the option to take such drinks shall be available to either side. Each interval shall be kept as short as possible and, in any case, shall not exceed 5 minutes. | **೧೧.೮ ಪಾನೀಯ ವಿರಾಮ**<br>೧೧.೮.೧ ಯಾವುದೇ ದಿನದ ಆಟದಂದು ಅಂಪೈರ್‌ಗಳು ಪಾನೀಯ ವಿರಾಮವಿರುತ್ತದೆಂದು ನಿರ್ಧರಿಸಿದರೆ, ಪಾನೀಯ ವಿರಾಮವನ್ನು ತೆಗೆದುಕೊಳ್ಳುವ ಅವಕಾಶ ಎರಡೂ ತಂಡಗಳಿಗೆ ಇರುತ್ತದೆ. ಪ್ರತಿ |

| | |
|---|---|
| | ಪಾನೀಯ ವಿರಾಮವು ಗರಿಷ್ಠ ೫ ನಿಮಿಷಗಳಿಗೆ ಮೀರದಂತೆ, ಸಾಧ್ಯವಾದಷ್ಟೂ ಕಡಿಮೆ ಅವಧಿಗೆ ಸೀಮಿತಗೊಳಿಸಬೇಕು. |
| 11.8.2 Unless, as permitted in 11.9, the captains agree to forgo it, a drinks interval shall be taken at the end of the over in progress when the agreed time is reached. If, however, a wicket falls, or a batter retires within 5 minutes of the agreed time then drinks shall be taken immediately. | ೧೧.೮.೨ ನಿಯಮ ೧೧.೯ ರಲ್ಲಿ ಅನುಮತಿಸಿರುವಂತೆ ಇಬ್ಬರೂ ನಾಯಕರು ಈ ವಿರಾಮವನ್ನು ತ್ಯಜಿಸಲು ಒಪ್ಪಿರದಿದ್ದರೆ, ಪಾನೀಯ ವಿರಾಮವನ್ನು ಅದರ ನಿರ್ಧಾರಿತ ಸಮಯದಲ್ಲಿ ಚಾಲ್ತಿ ಇರುವ ಓವರ್ ಮುಗಿದನಂತರ ತೆಗೆದುಕೊಳ್ಳಬೇಕು. ಆದರೆ, ನಿರ್ಧಾರಿತ ಸಮಯದ ೫ ನಿಮಿಷಗಳ ಒಳಗೆ ಹುದ್ದರಿಯ ಪಥನವಾದರೆ ಅಥವಾ ದಾಂಡಿಗನು ನಿವೃತ್ತನಾದರೆ, ಪಾನೀಯ ವಿರಾಮವನ್ನು ಕೂಡಲೇ ತೆಗೆದುಕೊಳ್ಳಬೇಕು. |
| No other variation in the timing of drinks intervals shall be permitted except as provided for in 11.8.3. | ಪಾನೀಯ ವಿರಾಮದ ವೇಳೆಯಲ್ಲಿ ೧೧.೮.೩ ರಲ್ಲಿ ತಿಳಿಸಿರುವುದನ್ನು ಬಿಟ್ಟು, ಬೇರಾವುದೇ ಬದಲಾವಣೆಯನ್ನು ಮಾಡಬಾರದು. |
| 11.8.3 If an innings ends or the players have to leave the field of play for any other reason within 30 minutes of the agreed time for a drink's interval, the umpires and captains together may rearrange the timing of drinks intervals in that session. | ೧೧.೮.೩ ಪಾನೀಯ ವಿರಾಮದ ನಿರ್ಧಾರಿತ ಸಮಯದ ೩೦ ನಿಮಿಷಗಳೊಳಗೆ, ಸರದಿ ಸಮಾಪ್ತಿಯಾದರೆ ಅಥವಾ ಆಟಗಾರರು ಯಾವುದೇ ಕಾರಣಕ್ಕಾಗಿ ಮೈದಾನದಿಂದ ಹೊರಬಂದರೆ, ಅಂಪೈರ್‌ಗಳು ಮತ್ತು ಇಬ್ಬರೂ ನಾಯಕರು ಒಟ್ಟಿಗೆ ಆಟದ ಆ ಭಾಗದ ಪಾನೀಯ ವಿರಾಮದ ಸಮಯವನ್ನು ಪುನರ್ ನಿಗದಿ ಪಡಿಸಬಹುದು. |
| 11.8.4 Intervals for drinks may not be taken during the last hour of the match, as defined in Law 12.6 (Last hour of match – number of overs). Subject to this limitation, the umpires shall determine the times for such intervals, if any, before the toss and on each subsequent day not later than 10 minutes before play is scheduled to start. | ೧೧.೮.೪ ನಿಯಮ ೧೨.೬ (ಪಂದ್ಯದ ಕೊನೆಯ ಒಂದು ಘಂಟೆಯ ಅವಧಿ – ಓವರ್‌ಗಳ ಸಂಖ್ಯೆ) ರಲ್ಲಿ ವಿವರಿಸಿರುವಂತೆ, ಪಂದ್ಯದ ಕೊನೆಯ ಒಂದು ಘಂಟೆಯ ಅವಧಿಯಲ್ಲಿ ಪಾನೀಯ ವಿರಾಮವನ್ನು ತೆಗೆದುಕೊಳ್ಳಬಾರದು. ಈ ನಿಬಂಧನೆಗೆ ಒಳಪಟ್ಟು ಅಂಪೈರ್‌ಗಳು ಪಾನೀಯ ವಿರಾಮದ ಸಮಯವನ್ನು ನಾಣ್ಯ ಚಿಮ್ಮುವ ಮೊದಲು |

| | |
|---|---|
| | ಮತ್ತು ತದನಂತರದ ಪ್ರತಿ ದಿನದ ಆಟ ಪ್ರಾರಂಭವಾಗುವ ನಿರ್ಧಾರಿತ ಸಮಯಕ್ಕಿಂತ ೧೦ ನಿಮಿಷಗಳ ಮೊದಲು ನಿರ್ಧರಿಸಬಹುದು. |
| **11.9 Agreement to forgo intervals.**<br>At any time during the match, the captains may agree to forgo the tea interval or any of the drink's intervals. The umpires shall be informed of the decision.<br>When play is in progress, the batters at the wicket may deputise for their captain in making an agreement to forgo a drinks interval in that session. | **೧೧.೯ ವಿರಾಮಗಳನ್ನು ತ್ಯಜಿಸಲು ಒಪ್ಪಂದ**<br>ಪಂದ್ಯದ ಯಾವುದೇ ಸಮಯದಲ್ಲಿ, ಇಬ್ಬರೂ ನಾಯಕರು ಚಹಾ ಅಥವಾ ಯಾವುದೇ ಪಾನೀಯ ವಿರಾಮಗಳನ್ನು ತ್ಯಜಿಸಲು ಒಪ್ಪಿಕೊಳ್ಳಬಹುದು. ಈ ನಿರ್ಧಾರವನ್ನು ಅಂಪೈರ್‌ಗಳಿಗೆ ತಿಳಿಸಬೇಕು.<br>ಆಟವು ಚಾಲ್ತಿಯಲ್ಲಿದ್ದರೆ, ಆಟದ ಪಟ್ಟಿ ಮೇಲಿರುವ ದಾಂಡಿಗರು ಆಟದ ಆ ಭಾಗದ ಪಾನೀಯ ವಿರಾಮ ತ್ಯಜಿಸಲು ನಾಯಕನನ್ನು ಪ್ರತಿನಿಧಿಸಬಹುದು. |
| **11.10 Scorers to be informed.**<br>The umpires shall ensure that the scorers are informed of all agreements about hours of play and intervals and of any changes made thereto as permitted under this Law. | **೧೧.೧೦ಸ್ಕೋರರ್‌ಗಳಿಗೆ ತಿಳಿಸುವುದು**<br>ಅಂಪೈರ್‌ಗಳು ಸ್ಕೋರರ್‌ಗಳಿಗೆ, ಆಟದ ಅವಧಿ ಮತ್ತು ವಿರಾಮಗಳ ಸಮಯದ ಬಗ್ಗೆ ಮತ್ತು ಅದರಲ್ಲಿ ನಿಯಮಗಳಿಗಾನುಸಾರವಾಗಿ ಏನಾದರೂ ಬದಲಾವಣೆ ಮಾಡಿದ್ದರೆ, ಅದರ ಬಗ್ಗೆ ತಿಳಿದಿದೆ ಎಂದು ಖಚಿತಪಡಿಸಿಕೊಳ್ಳಬೇಕು. |
| **LAW 12 START OF PLAY; CESSATION OF PLAY** | **ನಿಯಮ ೧೨ ಆಟದ ಪ್ರಾರಂಭ ಮತ್ತು ಮುಕ್ತಾಯ** |
| **12.1 Call of Play**<br>The bowler's end umpire shall call Play before the first ball of the match and on the resumption of play after any interval or interruption. | **೧೨.೧ "ಪ್ಲೇ" ಕರೆಯುವುದು**<br>ಬೌಲರ್ ತುದಿಯಲ್ಲಿರುವ ಅಂಪೈರ್ "ಪ್ಲೇ" ಎಂದು, ಪಂದ್ಯದ ಮೊದಲನೆಯ ಚೆಂಡು ಬೌಲ್ ಮಾಡುವ ಮೊದಲು ಮತ್ತು ಯಾವುದೇ |

| | |
|---|---|
| | ವಿರಾಮದ ಹಾಗೂ ತಡೆಯ ನಂತರ ಆಟದ ಮುಂದುವರಿಕೆಯ ಮೊದಲು ಕರೆಯಬೇಕು. |
| **12.2 Call of Time**<br>The bowler's end umpire shall call Time, when the ball is dead, at the end of any session of play or as required by the Laws. See also Law 20.3 (Call of Over or Time). | **೧೨.೨ "ಟೈಂ" ಕರೆಯುವುದು**<br>ಬೌಲರ್ ತುದಿಯಲ್ಲಿರುವ ಅಂಪೈರ್ "ಟೈಂ" ಎಂದು ಯಾವುದೇ ಆಟದ ಭಾಗದ ಕೊನೆಗೆ (ವಿರಾಮದ ಮೊದಲು) ಚೆಂಡು ಡೆಡ್ ಆದಾಗ ಅಥವಾ ನಿಯಮಾನುಸಾರ ಯಾವಾಗ ಕರೆಯಬೇಕೋ ಆವಾಗ ಕರೆಯಬೇಕು. ನಿಯಮ ೨೦.೩ (ಓವರ್ ಇಲ್ಲವೇ "ಟೈಂ" ಕರೆಯುವುದು) ಗಮನಿಸಿ. |
| **12.3 Removal of bails**<br>After the call of Time, the bails shall be removed from both wickets | **೧೨.೩ ಬೇಲ್ಸ್‌ಗಳನ್ನು ತೆಗೆಯುವುದು**<br>"ಟೈಂ" ಎಂದು ಕರೆದ ನಂತರ ಎರಡೂ ಬದಿಯ ವಿಕೆಟ್‌ಗಳಿಂದ ಬೇಲ್ಸ್‌ಗಳನ್ನು ತೆಗೆಯಬೇಕು. |
| **12.4 Starting a new over**<br>Another over shall always be started at any time during the match, unless an interval is to be taken in the circumstances set out in 12.5.2, if the umpire, walking at normal pace, has arrived at the position behind the stumps at the bowler's end before the time agreed for the next interval, or for the close of play, has been reached. | **೧೨.೪ ಹೊಸ ಓವರ್ ಪ್ರಾರಂಭಿಸುವುದು**<br>೧೨.೫.೨ರಲ್ಲಿ ತಿಳಿಸಿರುವಂತೆ ವಿರಾಮವನ್ನು ತೆಗೆದುಕೊಳ್ಳಬೇಕಾದ ಸಂದರ್ಭದ ಹೊರತಾಗಿ, ಯಾವುದೇ ವಿರಾಮ ಅಥವಾ ದಿನದ ಆಟದ ಮುಕ್ತಾಯದ ನಿರ್ಧಾರಿತ ವೇಳೆಯ ಮೊದಲು ಅಂಪೈರ್ ತನ್ನ ಸಹಜ ನಡಿಗೆಯಲ್ಲಿ ಬೌಲಿಂಗ್ ತುದಿಯ ವಿಕೆಟ್ ಹಿಂದೆ ತನ್ನ ಸ್ಥಾನವನ್ನು ತಲುಪಿದರೆ, ಮತ್ತೊಂದು ಓವರ್ ಪ್ರಾರಂಭಿಸಬೇಕು. |
| **12.5 Completion of an over**<br>Other than at the end of the match, | **೧೨.೫ ಓವರ್ ಪೂರ್ಣಗೊಳಿಸುವುದು**<br>ಪಂದ್ಯದ ಸಮಾಪ್ತಿಯನ್ನು ಹೊರತುಪಡಿಸಿ, |

| | |
|---|---|
| 12.5.1 if the agreed time for an interval is reached during an over, the over shall be completed before the interval is taken, except as provided for in 12.5.2.<br>12.5.2 when less than 3 minutes remains before the time agreed for the next interval, the interval shall be taken immediately if<br>either a batter is dismissed or retires.<br>or the players have occasion to leave the field<br>whether this occurs during an over or at the end of an over. Except at the end of an innings, if an over is thus interrupted it shall be completed on the resumption of play. | ೧೨.೫.೧ ಓವರ್ ಚಾಲ್ತಿಯಲ್ಲಿರುವಾಗ ವಿರಾಮದ ನಿರ್ಧಾರಿತ ಸಮಯ ತಲುಪಿದರೆ, ೧೨.೫.೨ರಲ್ಲಿ ಸೂಚಿಸಿರುವುದರ ವಿನಹ ಬೇರೆ ಸಮಯದಲ್ಲಿ ಪೂರ್ಣಗೊಳಿಸಬೇಕು.<br>೧೨.೫.೨ ಮುಂದಿನ ವಿರಾಮದ ನಿರ್ಧಾರಿತ ವೇಳೆಗೆ ೩ ನಿಮಿಷಗಳಿಗಿಂತ ಕಡಿಮೆ ಅವಧಿ ಇದ್ದಾಗ, ಓವರಿನ ಮಧ್ಯದಲ್ಲಿ ಅಥವಾ ಕೊನೆಯಲ್ಲಿ; ಹುದ್ದರಿಯ ಪಥನವಾದರೆ ಇಲ್ಲವೇ ದಾಂಡಿಗ ನಿವೃತ್ತನಾದರೆ ಅಥವಾ<br>ಆಟಗಾರರು ಮೈದಾನ ಬಿಡುವ ಸಂದರ್ಭ ಬಂದರೆ,<br>ಸರದಿಯ ಮುಕ್ತಾಯವನ್ನು ಬಿಟ್ಟು ಬೇರೆ ಸಂದರ್ಭಗಳಲ್ಲಿ ವಿರಾಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಒಂದು ವೇಳೆ ಈ ರೀತಿಯಾಗಿ ಓವರ್ ಅಪೂರ್ಣಗೊಂಡಿದ್ದರೆ, ಆಟವು ಪುನಃ ಆರಂಭವಾದಾಗ ಪೂರ್ಣಗೊಳಿಸಬೇಕು. |
| **12.6 Last hour of match – number of overs**<br>When one hour of Playing time of the match remains, according to the agreed hours of play, the over in progress shall be completed. The next over shall be the first of a minimum of 20 overs which must be bowled, provided that a result is not reached earlier and provided that there is no interval or interruption in play.<br>The bowler’s end umpire shall indicate the commencement of these 20 overs to the players and to the scorers. The | **೧೨.೬ ಪಂದ್ಯದ ಕೊನೆಯ ಒಂದು ಘಂಟೆ – ಓವರ್‌ಗಳ ಸಂಖ್ಯೆ**<br>ಪಂದ್ಯದ ನಿರ್ಧಾರಿತ ಅವಧಿಯ ಪ್ರಕಾರ, ಪಂದ್ಯದ ಕೊನೆಯ ಒಂದು ಘಂಟೆ ಬಾಕಿ ಇರುವಾಗ ಚಾಲ್ತಿಯಲ್ಲಿರುವ ಓವರ್ ಪೂರ್ಣಗೊಳಿಸಬೇಕು. ಮುಂಚಿತವಾಗಿ ಫಲಿತಾಂಶ ಬರದಿದ್ದರೆ ಇಲ್ಲವೇ ವಿರಾಮ ಇಲ್ಲವೇ ತಡೆ ಬರದ ಹೊರತು, ಮುಂದಿನ ಓವರ್, ಬೌಲ್ ಮಾಡಬೇಕಾದ ಕನಿಷ್ಠ ೨೦ ಓವರ್‌ಗಳ ಮೊದಲ ಓವರ್ ಆಗಿರುತ್ತದೆ.<br>ಬೌಲರ್ ತುದಿಯಲ್ಲಿರುವ ಅಂಪೈರ್, ಆಟಗಾರರಿಗೆ ಮತ್ತು ಸ್ಕೋರರ್‌ಗಳಿಗೆ ಈ ೨೦ ಓವರ್‌ಗಳ ಪ್ರಾರಂಭದ ಬಗ್ಗೆ ಸನ್ನೆ |

| | |
|---|---|
| period of play thereafter shall be referred to as the last hour, whatever its actual duration.<br>When the minimum number of overs have been bowled in the last hour, further overs can be started only if the original time for the close of play has not been reached. See 12.7 and 12.8. | ಮಾಡಬೇಕು. ಇದರಿಂದಾಚೆಯ ಅವಧಿ, ವಾಸ್ತವಿಕವಾಗಿ ಅದು ಎಷ್ಟೇ ಇದ್ದರೂ, ಪಂದ್ಯದ ಕೊನೆಯ ಒಂದು ಘಂಟೆಯ ಅವಧಿ ಎಂದು ಪರಿಗಣಿಸಬೇಕು.<br>ಪಂದ್ಯದ ಮೊದಲೇ ನಿರ್ಧರಿಸಿದ ಪಂದ್ಯ ಮುಗಿಯುವ ನಿರ್ಧಾರಿತ ಸಮಯದ ಮೊದಲೇ ಈ ಕನಿಷ್ಠ ೨೦ ಓವರ್‌ಗಳು ಮುಗಿದರೆ ಮತ್ತಷ್ಟು ಓವರ್‌ಗಳನ್ನು ಮಾಡಬಹುದು. ನಿಯಮ ೧೨.೭ ಮತ್ತು ೧೨.೮ ಗಮನಿಸಿ. |
| **12.7 Last hour of match – interruptions of play**<br>If there is an interruption in play during the last hour of the match, the minimum number of overs to be bowled shall be reduced from 20 as follows.<br>12.7.1 The time lost for an interruption is counted from the call of Time until the time for resumption as decided by the umpires.<br>12.7.2 One over shall be deducted for every complete 3 minutes of time lost.<br>12.7.3 In the case of more than one such interruption, the minutes lost shall not be aggregated; the calculation shall be made for each interruption separately. | **೧೨.೭ ಪಂದ್ಯದ ಕೊನೆಯ ಒಂದು ಘಂಟೆ –ಆಟದಲ್ಲಿ ತಡೆಗಳು**<br>ಪಂದ್ಯದ ಕೊನೆಯ ಒಂದು ಘಂಟೆ  ಆಟದ ಅವಧಿಯಲ್ಲಿ ತಡೆ ಉಂಟಾದರೆ, ಬೌಲ್ ಮಾಡಬೇಕಾಗಿರುವ ಕನಿಷ್ಠ ೨೦ ಓವರ್‌ಗಳ ಸಂಖ್ಯೆಯನ್ನು ಈ ರೀತಿಯಾಗಿ ಕಡಿಮೆ ಮಾಡಬೇಕು;<br>೧೨.೭.೧ ತಡೆಗಳ ಅವಧಿಯನ್ನು ಅಂಪೈರ್ "ಟೈಂ" ಕರೆದಾಗಿನಿಂದ ಅವರು ನಿರ್ಧರಿಸುವ ಆಟದ ಪುನರ್ ಆರಂಭದ ಸಮಯದವರೆಗೆ ಲೆಕ್ಕ ಮಾಡಬೇಕು.<br>೧೨.೭.೨ ವ್ಯರ್ಥವಾದ ಪ್ರತಿ ಪೂರ್ಣ ೩ ನಿಮಿಷಗಳಿಗೆ ಒಂದು ಓವರ್ ಕಳೆಯಬೇಕು.<br>೧೨.೭.೩ ಒಂದಕ್ಕಿಂತ ಹೆಚ್ಚಿನ ತಡೆಗಳಾದ ಸಂದರ್ಭಗಳಲ್ಲಿ, ವ್ಯರ್ಥವಾದ ನಿಮಿಷಗಳನ್ನು ಒಟ್ಟಾಗಿ ಲೆಕ್ಕ ಹಾಕದೆ ಪ್ರತಿ ತಡೆಗೆ ಪ್ರತ್ಯೇಕವಾಗಿ ಲೆಕ್ಕ ಮಾಡಬೇಕು.<br>೧೨.೭.೪ ಒಂದು ಘಂಟೆಯ ಆಟದ ಅವಧಿ ಬಾಕಿ ಇದ್ದಾಗ, ಅಡಚಣೆ ಚಾಲ್ತಿಯಲ್ಲಿದ್ದರೆ; |

| | |
|---|---|
| 12.7.4 If, when one hour of Playing time remains, an interruption is already in progress.<br>12.7.4.1 only the time lost after this moment shall be counted in the calculation.<br>12.7.4.2 the over in progress at the start of the interruption shall be completed on resumption and shall not count as one of the minimum number of overs to be bowled.<br><br>12.7.5 If, after the start of the last hour, an interruption occurs during an over, the over shall be completed on resumption of play. The two part-overs shall between them count as one over of the minimum number to be bowled. | ೧೨.೭.೪.೧ ಓವರ್‌ಗಳ ಲೆಕ್ಕಾಚಾರಕ್ಕಾಗಿ, ಆ ಕ್ಷಣದಿಂದ ವ್ಯರ್ಥವಾದ ಸಮಯವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು.<br>೧೨.೭.೪.೨ ತಡೆಯ ಆರಂಭದಲ್ಲಿ ಚಾಲ್ತಿಯಲ್ಲಿರುವ ಓವರನ್ನು ಆಟ ಮತ್ತೆ ಆರಂಭವಾದ ಮೇಲೆ ಪೂರ್ಣಗೊಳಿಸಬೇಕು ಮತ್ತು ಅದನ್ನು ಮಾಡಬೇಕಾದ ಕನಿಷ್ಠ ಓವರುಗಳ ಲೆಕ್ಕದ ಗಣನೆಗೆ ತೆಗೆದುಕೊಳ್ಳಬಾರದು.<br>೧೨.೭.೫ ಕೊನೆಯ ಒಂದು ಘಂಟೆಯ ಆಟ ಪ್ರಾರಂಭಗೊಂಡ ನಂತರ, ಓವರ್ ಚಾಲ್ತಿಯಲ್ಲಿದ್ದಾಗ ತಡೆ ಉಂಟಾದರೆ, ಆ ಓವರನ್ನು ಆಟ ಪುನಃ ಆರಂಭವಾದಾಗ ಪೂರ್ಣಗೊಳಿಸಬೇಕು. ಎರಡು ಭಾಗಗಳಲ್ಲಿ ಪೂರ್ಣಗೊಂಡ ಈ ಓವರನ್ನು ಮಾಡಬೇಕಾದ ಕನಿಷ್ಠ ಓವರುಗಳ ಪೈಕಿ ಒಂದು ಎಂದು ಲೆಕ್ಕಹಾಕಬೇಕು. |
| **12.8 Last hour of match – intervals between innings**<br>If an innings ends so that a new innings is to be started during the last hour of the match, the interval starts with the end of the innings and is to end 10 minutes later.<br><br>12.8.1 If this interval is already in progress at the start of the last hour, then, to determine the number of overs to be | ೧೨.೮ **ಪಂದ್ಯದ ಕೊನೆಯ ಒಂದು ಘಂಟೆ – ಸರದಿಗಳ ನಡುವಿನ ವಿರಾಮಗಳು**<br>ಪಂದ್ಯದ ಕೊನೆಯ ಒಂದು ಘಂಟೆಯ ಆಟದ ಅವಧಿಯಲ್ಲಿ ಸರದಿಯು ಮುಗಿದು ಮತ್ತೊಂದು ಸರದಿಯು ಆರಂಭವಾದರೆ, ಸರದಿಗಳ ನಡುವಿನ ವಿರಾಮವು ಒಂದು ಸರದಿ ಮುಗಿದಾಗಿನಿಂದ ೧೦ ನಿಮಿಷಗಳ ನಂತರ ಅಂತ್ಯಗೊಳ್ಳಬೇಕು.<br>**೧೨.೮.೧** ಈ ವಿರಾಮವು ಪಂದ್ಯದ ಕೊನೆಯ ಘಂಟೆಯ ಆರಂಭದಲ್ಲಿ ಚಾಲ್ತಿಯಲ್ಲಿದ್ದರೆ, ಹೊಸ ಸರದಿಯಲ್ಲಿ ಬೌಲ್ ಮಾಡಬೇಕಾದ |

| | |
|---|---|
| bowled in the new innings, calculations are to be made as set out in 12.7. | ಕನಿಷ್ಠ ಓವರ್‌ಗಳನ್ನು ೧೨.೭ ರಲ್ಲಿ ತಿಳಿಸಿರುವಂತೆ ಲೆಕ್ಕ ಮಾಡಬೇಕು. |
| 12.8.2 If the innings ends after the last hour has started, two calculations are to be made, as set out in 12.8.3 and 12.8.4. The greater of the numbers yielded by these two calculations is to be the minimum number of overs to be bowled in the new innings. | **೧೨.೮.೨** ಸರದಿಯು ಕೊನೆಯ ಘಂಟೆ ಪ್ರಾರಂಭವಾದಮೇಲೆ ಸಮಾಪ್ತಿಯಾದರೆ, ೧೨.೮.೩ ಮತ್ತು ೧೨.೮.೪ರಲ್ಲಿ ತಿಳಿಸಿರುವಂತೆ ಎರಡು ಲೆಕ್ಕಗಳನ್ನು ಮಾಡಬೇಕು. ಈ ಎರಡು ಲೆಕ್ಕಗಳಲ್ಲಿ ಯಾವುದರಲ್ಲಿ ಹೆಚ್ಚಿನ ಸಂಖ್ಯೆಯ ಓವರುಗಳು ಬರುತ್ತವೆಯೋ ಅವುಗಳು ಹೊಸ ಸರದಿಯಲ್ಲಿ ಮಾಡಬೇಕಾದ ಕನಿಷ್ಠ ಓವರುಗಳು. |
| 12.8.3 **Calculation based on overs remaining:**<br>- At the conclusion of the innings, the number of overs that remain to be bowled, of the minimum in the last hour, to be noted.<br>- If this is not a whole number it is to be rounded up to the next whole number.<br>- Three overs, for the interval, to be deducted from the resulting number to determine the number of overs still to be bowled | **೧೨.೮.೩ ಬಾಕಿ ಇರುವ ಓವರ್‌ಗಳನ್ನು ಆಧರಿಸಿದ ಲೆಕ್ಕಾಚಾರ**<br>- ಸರದಿ ಮುಗಿದ ನಂತರ, ಕೊನೆಯ ಘಂಟೆಯಲ್ಲಿ ಮಾಡಬೇಕಾದ ಕನಿಷ್ಠ ಓವರ್‌ಗಳಲ್ಲಿ ಬಾಕಿ ಇರುವ ಓವರ್‌ಗಳನ್ನು ನೊಂದಾಯಿಸಿಕೊಳ್ಳಬೇಕು.<br>- ಇದು ಪೂರ್ಣ ಸಂಖ್ಯೆ ಅಲ್ಲದಿದ್ದರೆ ಅದನ್ನು ಮುಂದಿನ ಪೂರ್ಣ ಸಂಖ್ಯೆಗೆ ಪರಿವರ್ತಿಸಬೇಕು.<br>- ಮಾಡಬೇಕಾದ ಓವರುಗಳ ಸಂಖ್ಯೆಯನ್ನು ನಿರ್ಧರಿಸಲು, ಈ ಸಂಖ್ಯೆಯಿಂದ ಸರದಿಗಳ ನಡುವಿನ ವಿರಾಮಕ್ಕಾಗಿ ೩ ಓವರ್‌ಗಳನ್ನು ಕಳೆಯಬೇಕು. |

| | |
|---|---|
| **.12.8.4 Calculation based on time remaining:**<br>- At the conclusion of the innings, the time remaining until the agreed time for close of play to be noted.<br>- 10 minutes, for the interval, to be deducted from this time to determine the Playing time remaining.<br>- A calculation to be made of one over for every complete 3 minutes of the Playing time remaining, plus one more over if a further part of 3 minutes remains. | **೧೨.೮.೪ ಬಾಕಿ ಇರುವ ಅವಧಿಯನ್ನು ಆಧರಿಸಿದ ಲೆಕ್ಕಾಚಾರ**<br>- ಸರದಿ ಮುಗಿದ ನಂತರ, ನಿರ್ಧಾರಿತ ಆಟದ ಮುಕ್ತಾಯದ ಸಮಯಕ್ಕೆ ಬಾಕಿ ಇರುವ ಅವಧಿಯನ್ನು ನೊಂದಾಯಿಸಿಕೊಳ್ಳಬೇಕು.<br>- ಉಳಿದಿರುವ ಆಟದ ಸಮಯವನ್ನು ಕಂಡುಕೊಳ್ಳಲು ಈ ಸಮಯದಿಂದ ೧೦ ನಿಮಿಷಗಳ ಸರದಿಯ ವಿರಾಮದ ಅವಧಿಯನ್ನು ಕಳೆಯಬೇಕು.<br>- ಈ ಆಟದ ಅವಧಿಯಲ್ಲಿ, ಪ್ರತಿ ಪೂರ್ಣ ೩ ನಿಮಿಷಗಳಿಗೆ ಒಂದರಂತೆ ಮತ್ತು ೩ ನಿಮಿಷಗಳಿಗಿಂತ ಕಡಿಮೆ ಸಮಯ ಬಾಕಿ ಇದ್ದರೆ ಅದಕ್ಕೆ ಒಂದು ಓವರ್ ಎಂದು ಲೆಕ್ಕ ಮಾಡಬೇಕು. |
| **12.9 Conclusion of match**<br>12.9.1 The match is concluded.<br>12.9.1.1 as soon as a result as defined in Laws 16.1 to 16.4 and 16.5.1 (The result) is reached.<br>12.9.1.2 as soon as both the minimum number of overs for the last hour are completed and the agreed time for close of play is reached, unless a result is reached earlier.<br>12.9.1.3 in the case of an agreement under Law 13.1.2 as soon as the final innings is completed as defined in Law 13.3.5. | **೧೨.೯ ಪಂದ್ಯದ ಮುಕ್ತಾಯ**<br>೧೨.೯.೧ ಪಂದ್ಯವು ಯಾವಾಗ ಮುಕ್ತಾಯಗೊಳ್ಳುತ್ತದೆಂದರೆ,<br>೧೨.೯.೧.೧ ನಿಯಮ ೧೬.೧ ರಿಂದ ೧೬.೪ ಮತ್ತು ೧೬.೫.೧ (ಫಲಿತಾಂಶ) ತಿಳಿಸಿರುವಂತೆ ಫಲಿತಾಂಶ ಬಂದಕೂಡಲೇ.<br>೧೨.೯.೧.೨ ಮೊದಲೇ ಫಲಿತಾಂಶ ಬರದ ಹೊರತು, ಕೆಳಗಿನವೆರಡೂ ಆದ ಕೂಡಲೇ, ಕೊನೆಯ ಘಂಟೆಯಲ್ಲಿಯ ಕನಿಷ್ಠ ಓವರುಗಳು ಪೂರ್ಣಗೊಂಡಕೂಡಲೇ ಮತ್ತು ಆಟದ ಮುಕ್ತಾಯದ ನಿರ್ಧಾರಿತ ಸಮಯ ತಲುಪಿದ ಕೂಡಲೇ.<br>೧೨.೯.೧.೩ ನಿಯಮ ೧೩.೧.೨ರಲ್ಲಿಯಂತೆ ಮಾಡಿಕೊಂಡಿರುವ ಒಪ್ಪಂದದ ಮೇರೆಗೆ, ನಿಯಮ ೧೩.೩.೫ರಲ್ಲಿ ವಿವರಿಸಿದಂತೆ ಅಂತಿಮ ಸರದಿಯು ಮುಗಿದ ಕೂಡಲೇ. |

| | |
|---|---|
| 12.9.2 The match is concluded if, without a conclusion having been reached under 12.9.1, the players leave the field for adverse conditions of ground, weather or light, or in exceptional circumstances, and no further play is possible. | ೧೨.೯.೨ ಮೇಲಿನ ೧೨.೯.೧ರ ಅನುಸಾರ ಪಂದ್ಯ ಮುಕ್ತಾಯವಾಗದೆ, ಪ್ರತಿಕೂಲ ಮೈದಾನದ ಸ್ಥಿತಿ, ಹವಾಮಾನ ಅಥವಾ ಬೆಳಕು ಅಥವಾ ವಿಶೇಷ ಪರಿಸ್ಥಿತಿಗಳಲ್ಲಿ ಮೈದಾನ ಬಿಟ್ಟು ಬಂದ ನಂತರ ಆಟ ಮುಂದುವರೆಯದಿದ್ದರೆ, ಪಂದ್ಯವು ಮುಕ್ತಾಯವಾದಂತೆ. |
| **12.10 Completion of last over of match**<br>The over in progress at the close of play on the final day shall be completed unless<br>either a result has been reached<br>or the players have occasion to leave the field. In this case there shall be no resumption of play except in the circumstances of Law 16.9 (Mistakes in scoring) and the match shall be at an end. | **೧೨.೧೦ ಪಂದ್ಯದ ಕೊನೆಯ ಓವರನ್ನು ಪೂರ್ಣಗೊಳಿಸುವುದು**<br>ಪಂದ್ಯದ ನಿಗದಿತ ಸಮಾಪ್ತಿಯ ಸಮಯದಲ್ಲಿ ಚಾಲ್ತಿಯಲ್ಲಿರುವ ಓವರನ್ನು ಈ ಕೆಳಗಿನ ಕಾರಣಗಳನ್ನು ಹೊರತುಪಡಿಸಿ ಪೂರ್ಣಗೊಳಿಸಬೇಕು.<br>ಫಲಿತಾಂಶ ಬಂದರೆ ಅಥವಾ<br>ಆಟಗಾರರು ಮೈದಾನ ಬಿಡುವ ಪ್ರಸಂಗ ಬಂದರೆ, ನಿಯಮ ೧೬.೯ (ಸ್ಕೋರಿಂಗ್‌ನಲ್ಲಿಯ ಲೋಪ)ದ ಹೊರತಾಗಿ ಆಟವನ್ನು ಮುಂದುವರೆಸುವಂತಿಲ್ಲ ಮತ್ತು ಆಟವು ಮುಗಿದಂತೆ. |
| **12.11 Bowler unable to complete an over during last hour of match.**<br>If, for any reason, a bowler is unable to complete an over during the last hour, Law 17.8 (Bowler incapacitated or suspended during an over) shall apply. The separate parts of such an over shall count as one over of the minimum to be bowled. | **೧೨.೧೧ ಪಂದ್ಯದ ಕೊನೆಯ ಘಂಟೆಯ ಅವಧಿಯಲ್ಲಿ ಬೌಲರ್ ಓವರನ್ನು ಪೂರ್ಣಗೊಳಿಸಲಾಗದಿರುವುದು**<br>ಪಂದ್ಯದ ಕೊನೆಯ ಘಂಟೆಯ ಅವಧಿಯಲ್ಲಿ ಬೌಲರ್ ಯಾವುದೇ ಕಾರಣಕ್ಕಾಗಿ ಓವರನ್ನು ಪೂರ್ಣಗೊಳಿಸಲಾಗದಿದ್ದರೆ, ನಿಯಮ ೧೭.೮ ( ಬೌಲರ್ ಓವರಿನ ಮಧ್ಯದಲ್ಲಿ ಅಸ್ವಸ್ಥನಾಗುವುದು ಇಲ್ಲವೇ ಅಮಾನತ್ತುಗೊಳ್ಳುವುದು) ಅನ್ವಯಿಸುತ್ತದೆ. ಇಂತಹ ಓವರಿನ ಬೇರೆ ಬೇರೆ ಭಾಗಗಳನ್ನು ಕನಿಷ್ಠ ಓವರಗಳಲ್ಲಿ ಒಂದು ಓವರ್ ಎಂದು ಪರಿಗಣಿಸಬೇಕು. |

| LAW 13 INNINGS | ನಿಯಮ ೧೩ ಸರದಿ (ಇನ್ನಿಂಗ್ಸ್) |
| --- | --- |
| **13.1 Number of innings**<br>13.1.1 A match shall be one or two innings for each side according to agreement reached before the match.<br>13.1.2 It may be agreed to limit any innings to a number of overs or to a period of time. If such an agreement is made, then<br>13.1.2.1 in a one-innings match a similar agreement shall apply to both innings.<br>13.1.2.2 in a two-innings match similar agreements shall apply.<br>to the first innings of each side<br>or to the second innings of each side<br>or to both innings of each side.<br>For both one-innings and two-innings matches, the agreement must also include criteria for determining the result when neither of Laws 16.1 (A Win – two-innings match) or 16.2 (A Win – one-innings match) applies. | **೧೩.೧ ಸರದಿಗಳ ಸಂಖ್ಯೆ**<br>೧೩.೧.೧ ಒಂದು ಪಂದ್ಯವು ಪಂದ್ಯದ ಮೊದಲೇ ಒಪ್ಪಂದ ಮಾಡಿಕೊಂಡಂತೆ ಪ್ರತಿ ತಂಡಕ್ಕೆ ಒಂದು ಇಲ್ಲವೇ ಎರಡು ಸರದಿಯದಾಗಿರಬೇಕು.<br>೧೩.೧.೨ ಯಾವುದೇ ಸರದಿಯನ್ನು ಒಪ್ಪಂದ ಮಾಡಿಕೊಂಡರೆ, ಓವರ್‌ಗಳಿಗೆ ಇಲ್ಲವೇ ಅವಧಿಗೆ ಸೀಮಿತಗೊಳಿಸಬಹುದು.<br>೧೩.೧.೨.೧ ಒಂದು ಸರದಿಯ ಪಂದ್ಯದಲ್ಲಿ ಎರಡೂ ಸರದಿಗಳಿಗೆ ಒಂದೇ ರೀತಿಯ ಒಪ್ಪಂದ ಇರಬೇಕು.<br>೧೩.೧.೨.೨ ಎರಡು ಸರದಿಯ ಪಂದ್ಯದಲ್ಲಿ, ಒಂದೇ ರೀತಿಯ ಒಪ್ಪಂದವು ಈ ಕೆಳಗಿನಂತೆ ಇರಬೇಕು;<br>ಪ್ರತಿ ತಂಡದ ಮೊದಲನೆಯ ಸರದಿಗೆ<br>ಇಲ್ಲವೇ ಪ್ರತಿ ತಂಡದ ಎರಡನೆಯ ಸರದಿಗೆ<br>ಇಲ್ಲವೇ ಪ್ರತಿ ತಂಡದ ಎರಡೂ ಸರದಿಗಳಿಗೆ<br>ಒಂದು ಮತ್ತು ಎರಡು ಸರದಿಯ ಪಂದ್ಯಗಳಲ್ಲಿ, ನಿಯಮ ೧೬.೧ (ಗೆಲವು ಎರಡು ಸರದಿಯ ಪಂದ್ಯ) ಇಲ್ಲವೇ ೧೬.೨ (ಗೆಲವು ಒಂದು ಸರದಿಯ ಪಂದ್ಯ) ಅನ್ವಯಿಸದಿದ್ದರೆ, ಒಪ್ಪಂದವು ಹೇಗೆ ಫಲಿತಾಂಶ ನಿರ್ಧರಿಸುವುದೆಂಬುದನ್ನು ಒಳಗೊಂಡಿರಬೇಕು. |
| **13.2 Alternate innings**<br>In a two-innings match each side shall take their innings alternately except in the cases provided for in Law 14 (The | **೧೩.೨ ಅದಲು ಬದಲು ಸರದಿ**<br>ಎರಡು ಸರದಿಯ ಪಂದ್ಯದಲ್ಲಿ ನಿಯಮ ೧೪ (ಮರಳಿ ಸರದಿಯ ಮುಂದುವರಿಕೆ) ಇಲ್ಲವೇ ನಿಯಮ ೧೫.೨ (ಸರದಿಯನ್ನು |

| | |
|---|---|
| follow-on) or in Law 15.2 (Forfeiture of an innings). | ತ್ಯಜಿಸುವುದು) ಗಳ ಸಂದರ್ಭಗಳನ್ನು ಬಿಟ್ಟು ಪ್ರತಿ ತಂಡವು ಅದಲು ಬದಲಾಗಿ ತಮ್ಮ ಸರದಿಯನ್ನು ತೆಗೆದುಕೊಳ್ಳಬೇಕು. |
| **13.3 Completed innings.**<br>A side's innings is to be considered as completed if any of the following applies:<br>13.3.1 the side is all out.<br>13.3.2 at the fall of a wicket or the retirement of a batter, further balls remain to be bowled but no further batter is available to come in.<br>13.3.3 the captain declares the innings closed.<br>13.3.4 the captain forfeits the innings.<br>13.3.5 in the case of an agreement under 13.1.2, either the prescribed number of overs has been bowled or the prescribed time has expired as appropriate. | **೧೩.೩ ಪೂರ್ಣಗೊಂಡ ಸರದಿ**<br>ಕೆಳಗಿನ ಸಂದರ್ಭಗಳಲ್ಲಿ ಒಂದು ತಂಡದ ಸರದಿ ಮುಗಿದಿದೆ ಎಂದು ಪರಿಗಣಿಸಬೇಕು.<br>೧೩.೩.೧ ತಂಡದ ಎಲ್ಲ ಹುದ್ದರಿಗಳ ಪಥನವಾದಾಗ.<br>೧೩.೩.೨ ಹುದ್ದರಿಯ ಪಥನವಾದಾಗ ಇಲ್ಲವೇ ದಾಂಡಿಗನು ನಿವೃತ್ತನಾದಾಗ, ಬೌಲ್ ಮಾಡಲು ಎಸೆತಗಳು ಉಳಿದಿದ್ದು, ಆಡಲು ಬರಲು ದಾಂಡಿಗರಿಲ್ಲದಿದ್ದಾಗ.<br>೧೩.೩.೩ ನಾಯಕನು ತನ್ನ ಸರದಿ ಮುಗಿದಿದೆ ಎಂದು ಘೋಷಿಸಿದಾಗ.<br>೧೩.೩.೪ ನಾಯಕನು ತನ್ನ ಸರದಿಯನ್ನು ತ್ಯಜಿಸಿದಾಗ.<br>೧೩.೩.೫ ೧೩.೧.೨ರಲ್ಲಿನ ಒಪ್ಪಂದದ ಪ್ರಕಾರ; ನಿಗದಿತ ಸಂಖ್ಯೆಯ ಓವರ್‌ಗಳನ್ನು ಮಾಡಿದಾಗ ಇಲ್ಲವೇ ನಿಗದಿತ ಅವಧಿಯು ಮುಕ್ತಾಯವಾದಾಗ. |
| **13.4 The toss**<br>The captains shall toss a coin for the choice of innings, on the field of play and in the presence of one or both of the umpires, not earlier than 30 minutes, nor later than 15 minutes before the scheduled or any rescheduled time for the start of play. Note, however, the provisions of Law 1.3 (Captain). | **೧೩.೪ ನಾಣ್ಯ ಚಿಮ್ಮುವಿಕೆ**<br>ಆಟ ಪ್ರಾರಂಭವಾಗಲು ನಿಗದಿತ ಸಮಯದ ಇಲ್ಲವೇ ಪುನರ್ ನಿಗದಿತ ಸಮಯದ ೩೦ ನಿಮಿಷಗಳ ಒಳಗೆ ಆದರೆ ೧೫ ನಿಮಿಷಗಳಿಗಿಂತ ಮುಂಚೆ, ನಾಯಕರುಗಳು ಆಟದ ಮೈದಾನದಲ್ಲಿ ಒಬ್ಬ ಅಥವಾ ಇಬ್ಬರೂ ಅಂಪೈರ್‌ಗಳ ಸಮ್ಮುಖದಲ್ಲಿ ಸರದಿಗಳನ್ನು ನಿರ್ಧರಿಸಲು ನಾಣ್ಯ ಚಿಮ್ಮಬೇಕು. ಆದರೂ, ನಿಯಮ ೧.೩ (ನಾಯಕ)ರಲ್ಲಿಯ ಅಂಶಗಳನ್ನು ಗಮನಿಸಿ. |

| | |
|---|---|
| **13.5 Decision to be notified.**<br>As soon as the toss is completed, the captain of the side winning the toss shall decide whether to bat or to field and shall notify the opposing captain and the umpires of this decision. Once notified, the decision cannot be changed. | **೧೩.೫ ನಿರ್ಧಾರವನ್ನು ತಿಳಿಸುವುದು**<br>ನಾಣ್ಯ ಚಿಮ್ಮುವಿಕೆ ಮುಗಿದ ಕೂಡಲೇ, ನಾಣ್ಯ ಚಿಮ್ಮುವಿಕೆಯಲ್ಲಿ ಗೆದ್ದ ನಾಯಕನು, ಎದುರಾಳಿ ನಾಯಕನಿಗೆ ಮತ್ತು ಅಂಪೈರ್‌ಗೆ ಬ್ಯಾಟಿಂಗ್ ಅಥವಾ ಕ್ಷೇತ್ರ ರಕ್ಷಣೆ ಮಾಡುವ ತನ್ನ ನಿರ್ಧಾರವನ್ನು ತಿಳಿಸಬೇಕು. ಒಮ್ಮೆ ತಿಳಿಸಿದ ನಿರ್ಧಾರವನ್ನು ಬದಲಾಯಿಸುವಂತಿಲ್ಲ. |
| **LAW 14 THE FOLLOW-ON** | **ನಿಯಮ ೧೪ ಮರಳಿ ಸರದಿಯ ಮುಂದುವರಿಕೆ** |
| 14.1 **Lead on first innings**<br>14.1.1 In a two-innings match of 5 days or more, the side which bats first and leads by at least 200 runs shall have the option of requiring the other side to follow their innings.<br>14.1.2 The same option shall be available in two-innings matches of shorter duration with the minimum leads as follows:<br>- 150 runs in a match of 3 or 4 days.<br>- 100 runs in a 2-day match.<br>- 75 runs in a 1-day match. | **೧೪.೧ ಮೊದಲನೆಯ ಸರದಿಯಲ್ಲಿ ಮುನ್ನಡೆ**<br>೧೪.೧.೧ ೫ ಅಥವಾ ಹೆಚ್ಚಿನ ದಿನಗಳ ಎರಡು ಸರದಿಗಳ ಪಂದ್ಯದಲ್ಲಿ, ಮೊದಲು ಬ್ಯಾಟಿಂಗ್ ಮಾಡಿದ ಪಂಗಡವು ಕನಿಷ್ಠ ೨೦೦ ಒಟಗಳ ಮುನ್ನಡೆ ಪಡೆದರೆ, ಎದುರಾಳಿ ತಂಡವನ್ನು ತನ್ನ ಸರದಿಯನ್ನು ಮರಳಿ ಮುಂದುವರೆಸಲು ಕೋರುವ ಅವಕಾಶವನ್ನು ಪಡೆಯುತ್ತದೆ.<br>೧೪.೧.೨ ಇದೇ ಅವಕಾಶವು ಕಡಿಮೆ ದಿನಗಳ ಎರಡು ಪಾಳಿಗಳ ಪಂದ್ಯಗಳಲ್ಲಿ, ಕನಿಷ್ಠ ಒಟಗಳ ಮುನ್ನಡೆಯೊಂದಿಗೆ ಕೆಳಕಂಡಂತೆ ಲಭ್ಯವಿದೆ;<br>- ೩ ಅಥವಾ ೪ ದಿನಗಳ ಪಂದ್ಯದಲ್ಲಿ ೧೫೦ ಒಟಗಳು<br>- ೨ ದಿನಗಳ ಪಂದ್ಯದಲ್ಲಿ ೧೦೦ ಒಟಗಳು<br>- ೧ ದಿನದ ಪಂದ್ಯದಲ್ಲಿ ೭೫ ಒಟಗಳು |

| | |
|---|---|
| **14.2 Notification**<br>A captain shall notify the opposing captain and the umpires of his/her intention to take up this option. Once notified, the decision cannot be changed. | **೧೪.೨ ಅಧಿಸೂಚನೆ (ತಿಳಿಸುವುದು)**<br>ಒಬ್ಬ ನಾಯಕನು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಎದುರಾಳಿ ನಾಯಕನಿಗೆ ಮತ್ತು ಅಂಪೈರ್‌ಗಳಿಗೆ ತಿಳಿಸಬೇಕು. ಒಮ್ಮೆ ತಿಳಿಸಿದ ನಿರ್ಧಾರವನ್ನು ಬದಲಾಯಿಸುವಂತಿಲ್ಲ. |
| **14.3 First day's play lost.**<br>If no play takes place on the first day of a match of more than one day's duration, 14.1 shall apply in accordance with the number of days remaining from the start of play. The day on which play first commences shall count as a whole day for this purpose, irrespective of the time at which play starts.<br>Play will have taken place as soon as, after the call of Play, the first over has started. See Law 17.2 (Start of an over). | **೧೪.೩ ಮೊದಲ ದಿನದ ಆಟ ಆಗದಿದ್ದರೆ**<br>ಒಂದಕ್ಕಿಂತ ಹೆಚ್ಚಿನ ದಿನದ ಪಂದ್ಯಗಳಲ್ಲಿ, ಮೊದಲ ದಿನದ ಆಟ ಆಗದೇ ಇದ್ದರೆ, ನಿಯಮ ೧೪.೧, ಆಟವು ಪ್ರಾರಂಭವಾದ ದಿನದಿಂದ ಎಷ್ಟು ದಿನ ಇರುತ್ತದೋ, ಅದರಂತೆ ಅನ್ವಯಿಸುತ್ತದೆ. ಈ ಉದ್ದೇಶಕ್ಕಾಗಿ, ಆಟವು ದಿನದ ಯಾವುದೇ ಸಮಯದಲ್ಲಿ ಪ್ರಾರಂಭಗೊಂಡರೂ ಆ ದಿನವನ್ನು ಪೂರ್ತಿ ದಿನವೆಂದು ಪರಿಗಣಿಸಬೇಕು.<br>"ಪ್ಲೇ" ಎಂದು ಕರೆದ ಮೇಲೆ, ಮೊದಲ ಓವರ್ ಪ್ರಾರಂಭಗೊಂಡ ಕೂಡಲೇ ದಿನದ ಆಟ ಪ್ರಾರಂಭ ಆದಂತೆ. ನಿಯಮ ೧೭.೨ (ಓವರ್ ಪ್ರಾರಂಭ) ಗಮನಿಸಿ. |
| **LAW 15 DECLARATION AND FORFEITURE** | **ನಿಯಮ ೧೫ ಸರದಿಯ ಸಮಾಪ್ತಿಯ ಘೋಷಣೆ ಮತ್ತು ತ್ಯಜಿಸುವುದು** |
| **15.1 Time of declaration**<br>The captain of the side batting may declare an innings closed, when the ball is dead, at any time during the innings. A declared innings shall be considered to be a completed innings. | **೧೫.೧ ಸರದಿ ಸಮಾಪ್ತಿಗೊಳಿಸುವ ಸಮಯ**<br>ದಾಂಡಿಗ ತಂಡದ ನಾಯಕನು/ಅವಳು ತನ್ನ ತಂಡದ ಸರದಿಯ ಯಾವುದೇ ಸಮಯದಲ್ಲಿ, ಚೆಂಡು ಗಣನೆಯಲ್ಲಿ ಇಲ್ಲದಿರುವಾಗ, ಸರದಿ ಸಮಾಪ್ತಿಗೊಂಡಿದೆ ಎಂದು ಘೋಷಿಸಬಹುದು. ಸರದಿ ಸಮಾಪ್ತಿ ಎಂದು ಘೋಷಿಸಿದ ಸರದಿಯನ್ನು ಪೂರ್ಣಗೊಂಡ ಸರದಿ ಎಂದು ಪರಿಗಣಿಸಬೇಕು. |

| | |
|---|---|
| **15.2 Forfeiture of an innings**<br>A captain may forfeit either of his/her side's innings at any time before the commencement of that innings. A forfeited innings shall be considered to be a completed innings. | **೧೫.೨ ಸರದಿಯನ್ನು ತ್ಯಜಿಸುವುದು**<br>ನಾಯಕನು/ನಾಯಕಳು, ತನ್ನ ತಂಡದ ಯಾವುದೇ ಸರದಿ ಪ್ರಾರಂಭಗೊಳ್ಳುವ ಮೊದಲು ತ್ಯಜಿಸಬಹುದು. ಹೀಗೆ ತ್ಯಜಿಸಿದ ಸರದಿಯನ್ನು ಪೂರ್ಣಗೊಂಡ ಸರದಿ ಎಂದು ಪರಿಗಣಿಸಬೇಕು. |
| **15.3 Notification**<br>A captain shall notify the opposing captain and the umpires of any decision to declare or to forfeit an innings. Once notified, the decision cannot be changed. | **೧೫.೩ ತಿಳಿಸುವುದು**<br>ಒಬ್ಬ ನಾಯಕನು/ನಾಯಕಳು ಸರದಿಯು ಸಮಾಪ್ತಿಗೊಂಡ ಅಥವಾ ತ್ಯಜಿಸಿದ ಬಗ್ಗೆ ಎದುರಾಳಿ ನಾಯಕನಿಗೆ ಮತ್ತು ಅಂಪೈರ್‌ಗಳಿಗೆ ತಿಳಿಸಬೇಕು. ಒಮ್ಮೆ ತಿಳಿಸಿದ ನಿರ್ಧಾರವನ್ನು ಬದಲಾಯಿಸುವಂತಿಲ್ಲ. |
| **LAW 16 THE RESULT** | **ನಿಯಮ ೧೬ ಫಲಿತಾಂಶ** |
| 16.1 **A Win – two-innings match**<br>The side which has scored a total of runs in excess of that scored in the two completed innings of the opposing side shall win the match. See Law 13.3 (Completed innings). Note also 16.6. | **೧೬.೧ ಗೆಲವು – ಎರಡು ಪಾಳಿಗಳ ಪಂದ್ಯ**<br>ಯಾವ ತಂಡವು ಎದುರಾಳಿ ತಂಡದ ಎರಡು ಪೂರ್ಣಗೊಂಡ ಸರದಿಗಳಲ್ಲಿ ಗಳಿಸಿದ ಓಟಗಳಿಗಿಂತ ಹೆಚ್ಚು ಓಟಗಳನ್ನು ಗಳಿಸುತ್ತದೋ, ಆ ತಂಡ ಪಂದ್ಯವನ್ನು ಗೆದ್ದಂತೆ. ನಿಯಮ ೧೩.೩ (ಸರದಿಯ ಮುಕ್ತಾಯ) ಗಮನಿಸಿ. ೧೬.೬ನ್ನು ಸಹ ಗಮನಿಸಿ. |
| **16.2 A Win – one-innings match**<br>The side which has scored in its one innings a total of runs in excess of that scored by the opposing side in its one completed innings shall win the match. See Law 13.3 (Completed innings). Note also 16.6. | **೧೬.೨ ಗೆಲವು – ಒಂದು ಸರದಿಯ ಪಂದ್ಯ**<br>ಒಂದು ಸರದಿಯಲ್ಲಿ ಯಾವ ತಂಡ ಎದುರಾಳಿ ತಂಡದ ಪೂರ್ಣಗೊಂಡ ಸರದಿಯಲ್ಲಿ ಗಳಿಸಿದ ಓಟಗಳಿಗಿಂತ ಹೆಚ್ಚು ಓಟಗಳನ್ನು ಗಳಿಸುತ್ತದೋ, ಆ ತಂಡ ಪಂದ್ಯವನ್ನು ಗೆದ್ದಂತೆ. ನಿಯಮ ೧೩.೩ (ಸರದಿಯ ಮುಕ್ತಾಯ) ಗಮನಿಸಿ. ೧೬.೬ನ್ನು ಸಹ ಗಮನಿಸಿ. |

**16.3 Umpires awarding a match.**

Regardless of any agreement under Law 13.1.2 (Number of innings),

16.3.1 a match shall be lost by a side which,

16.3.1.1 concedes defeat,

16.3.1.2 in the opinion of the umpires refuses to play. If so, the umpires shall award the match to the other side.

16.3.2 if an umpire considers that an action by any player or players might constitute a refusal by either side to play then the umpires together shall ascertain the cause of the action. If they then decide together that this action does constitute a refusal to play by one side, they shall so inform the captain of that side. If the captain persists in the action the umpires shall award the match in accordance with 16.3.1. See also Law 42.6.1 (Captain refusing to remove a player from the field).

**೧೬.೩ ಅಂಪೈರ್ ಪಂದ್ಯವನ್ನು ಅನುದಾನಿಸುವುದು**

ನಿಯಮ ೧೩.೧.೨ (ಸರದಿಗಳ ಸಂಖ್ಯೆ) ರ ಅನುಸಾರ ಮಾಡಿಕೊಂಡ ಯಾವುದೇ ಒಪ್ಪಂದಗಳ ಹೊರತಾಗಿಯೂ;

೧೬.೩.೧ ಒಂದು ತಂಡ ಕೆಳಗಿನ ಕಾರಣಗಳಿಂದ ಪಂದ್ಯ ಸೋತಂತೆ.

೧೬.೩.೧.೧ ಸೋಲನ್ನು ಒಪ್ಪಿಕೊಂಡರೆ

೧೬.೩.೧.೨ ಅಂಪೈರ್‌ಗಳ ಅಭಿಪ್ರಾಯದಲ್ಲಿ ಆಟವನ್ನು ಮುಂದುವರೆಸಲು ನಿರಾಕರಿಸಿದರೆ, ಪಂದ್ಯವನ್ನು ಅಂಪೈರ್‌ಗಳು ಎದುರಾಳಿ ತಂಡಕ್ಕೆ ಅನುದಾನಿಸಬೇಕು.

೧೬.೩.೨ ಯಾವುದೇ ಅಂಪೈರ್ ಅಭಿಪ್ರಾಯದಲ್ಲಿ, ಯಾವುದೇ ಆಟಗಾರನ ಇಲ್ಲವೇ ಆಟಗಾರರ ವರ್ತನೆ ಅವರವರ ತಂಡ ಆಟ ಆಡುವುದಕ್ಕೆ ನಿರಾಕರಿಸುತ್ತಿದೆ ಎಂದಾದರೆ, ಇಬ್ಬರೂ ಅಂಪೈರ್‌ಗಳು ಅಂತಹ ವರ್ತನೆಯ ಕಾರಣವನ್ನು ತಿಳಿದುಕೊಳ್ಳಬೇಕು. ಇಬ್ಬರೂ ಅಂಪೈರ್‌ಗಳ ಅಭಿಪ್ರಾಯದಲ್ಲಿ ಅಂತಹ ವರ್ತನೆ ಆಟ ಮುಂದುವರೆಸಲು ನಿರಾಕರಿಸುವುದಕ್ಕೆ ಕಾರಣವೆಂದಾದರೆ, ಆ ತಂಡದ ನಾಯಕನಿಗೆ ಇದರ ಬಗ್ಗೆ ತಿಳಿಸಬೇಕು. ಆದರೂ ನಾಯಕನು ಆ ವರ್ತನೆಯನ್ನು ಮುಂದುವರೆಸಿದರೆ, ನಿಯಮ ೧೬.೩.೧ರ ಪ್ರಕಾರ ಅಂಪೈರ್‌ಗಳು ಪಂದ್ಯವನ್ನು ಅನುದಾನಿಸಬೇಕು. ನಿಯಮ ೪೨.೬.೧ (ನಾಯಕನು ಒಬ್ಬ ಆಟಗಾರರನ್ನು ಮೈದಾನದ ಹೊರಗೆ ಕಳಿಸಲು ನಿರಾಕರಿಸುವುದು) ಗಮನಿಸಿ.

| | |
|---|---|
| 16.3.3 if action as in 16.3.2 takes place after play has started and does not constitute a refusal to play,<br>- Playing time shall be counted as lost from the call of Time to the call of Play, excluding intervals (Law 11) and suspensions of play (Law 2.8).<br>- the time for close of play on that day shall be extended by this length of time.<br>- if applicable, no overs shall be deducted during the last hour of the match solely on account of this time. | ೧೬.೩.೩ ಮೇಲಿನ ೧೬.೩.೨ರಲ್ಲಿಯಂತಹ ವರ್ತನೆ ಪಂದ್ಯ ಪ್ರಾರಂಭವಾದ ನಂತರ ಕಂಡುಬಂದರೆ ಮತ್ತು ಇದು ಆಟ ಮುಂದುವರೆಸಲು ನಿರಾಕರಿಸಲು ಕಾರಣವಲ್ಲ ಎಂದಾದರೆ,<br>– ನಷ್ಟವಾದ ಆಟದ ಅವಧಿಯನ್ನು "ಟೈಂ" ಕರೆ ಇಂದ "ಪ್ಲೇ" ಕರೆಯುವವರೆಗೆ, ವಿರಾಮಗಳ (ನಿಯಮ ೧೧) ಮತ್ತು ಆಟ ತಾತ್ಕಾಲಿಕವಾಗಿ ನಿಂತ (ನಿಯಮ ೨.೮) ಸಮಯವನ್ನು ಹೊರತುಪಡಿಸಿ, ಲೆಕ್ಕಹಾಕಬೇಕು.<br>– ಆ ದಿನದ ಆಟದ ಮುಕ್ತಾಯದ ಸಮಯವನ್ನು ಹೀಗೆ ನಷ್ಟವಾದ ಅವಧಿಯಷ್ಟು ಹೆಚ್ಚಿಸಬೇಕು.<br>– ಅನ್ವಯಿತವಾದಲ್ಲಿ, ಕೇವಲ ಈ ಅವಧಿಗೋಸ್ಕರ, ಪಂದ್ಯದ ಕೊನೆಯ ಘಂಟೆಯ ಆಟದಲ್ಲಿ ಯಾವುದೇ ಓವರ್‌ಗಳನ್ನು ಕಡಿಮೆ ಮಾಡಬಾರದು. |
| **16.4 Matches in which there is an agreement under Law 13.1.2.**<br>For any match in which there is an agreement under Law 13.1.2 (Number of innings), if the result is not determined in any of the ways stated in 16.1, 16.2 or 16.3, then the result shall be as laid down in that agreement. | **೧೬.೪ ನಿಯಮ ೧೩.೧.೨ರ ಅನುಸಾರ ಒಪ್ಪಂದಗಳುಳ್ಳ ಪಂದ್ಯಗಳು**<br>ನಿಯಮ ೧೩.೧.೨(ಸರದಿಗಳ ಸಂಖ್ಯೆ) ರ ಅನುಸಾರ ಒಪ್ಪಂದಗಳಿರುವ ಪಂದ್ಯಗಳಲ್ಲಿ, ೧೬.೧, ೧೬.೨ ಇಲ್ಲವೇ ೧೬.೩ರ ಅನುಸಾರ ಫಲಿತಾಂಶ ಗೊತ್ತುಪಡಿಸಲಾಗದಿದ್ದರೆ, ಫಲಿತಾಂಶವು ಒಪ್ಪಂದದ ಅನುಸಾರ ಇರಬೇಕು. |
| **16.5 All other matches – A Tie or Draw**<br>16.5.1 A Tie | **೧೬.೫ ಇತರ ಎಲ್ಲಾ ಪಂದ್ಯಗಳು – ಟೈ ಅಥವಾ ಸಮ (ಡ್ರಾ)**<br>**೧೬.೫.೧ ಟೈ** |

| | |
|---|---|
| The result of a match shall be a Tie when all innings have been completed and the scores are equal.<br>**16.5.2 A Draw**<br>The result of a match shall be a Draw when it is not determined in any of the ways stated in 16.1, 16.2, 16.3, 16.4 or 16.5.1. or when Law 42.6.2 (Captain refusing to remove a player from the field) is applied. | ಎಲ್ಲ ಸರದಿಗಳು ಮುಗಿದಾಗ ಎರಡೂ ತಂಡಗಳ ಓಟಗಳ ಮೊತ್ತ ಸಮನಾಗಿದ್ದರೆ ಪಂದ್ಯದ ಫಲಿತಾಂಶ "ಟೈ" ಎಂದಾಗುತ್ತದೆ.<br>**೧೬.೫.೨ ಸಮ (ಡ್ರಾ)**<br>೧೬.೧, ೧೬.೨, ೧೬.೩, ೧೬. ಇಲ್ಲವೇ ೧೬.೫.೧ರಲ್ಲಿ ತಿಳಿಸಿರುವಂತೆ ನಿರ್ಣಯ ಬರದಿದ್ದರೆ ಅಥವಾ ೪೨.೬(ಇಬ್ಬರೂ ನಾಯಕರು ತಮ್ಮ ತಮ್ಮ ಆಟಗಾರರನ್ನು/ ಆಟಗಾರಳನ್ನು ಆಟದ ಮೈದಾನದಿ0ದ ಹೊರ ತೆಗೆಯಲು ನಿರಾಕರಿಸುವುದು) ಅನ್ವಯಿಸಿದಾಗ ಪಂದ್ಯದ ಫಲಿತಾಂಶ " ಸಮ" ಎನ್ನಬೇಕು. |
| **16.6 Winning hit or extras**<br>16.6.1 As soon as a result is reached as defined in 16.1, 16.2, 16.3, 16.4 or 16.5.1, the match is at an end. Nothing that happens thereafter, except as in Law 41.18.2 (Penalty runs), shall be regarded as part of it. Note also 16.9.<br>16.6.2 The side batting last will have scored enough runs to win only if its total of runs is sufficient without including any runs completed by the batters before the completion of a catch, or the obstruction of a catch, from which the striker could be dismissed.<br>16.6.3 If a boundary is scored before the batters have completed sufficient runs to win the match, the whole of | **೧೬.೬ ಗೆಲುವಿನ ಹೊಡೆತ ಇಲ್ಲವೇ ಅತಿರಿಕ್ತ ಓಟಗಳು**<br>೧೬.೬.೧ ಮೇಲಿನ ೧೬.೧, ೧೬.೨, ೧೬.೩, ೧೬. ಇಲ್ಲವೇ ೧೬.೫.೧ರಲ್ಲಿ ತಿಳಿಸಿರುವಂತೆ ಫಲಿತಾಂಶ ಬಂದಕೂಡಲೇ ಪಂದ್ಯ ಮುಗಿದಂತೆ. ಆ ಕ್ಷಣದಿಂದಾಗುವ ಯಾವುದೇ ಘಟನೆಯನ್ನು ನಿಯಮ ೪೧.೮.೨ (ದಂಡದ ಓಟಗಳು)ನ್ನು ಹೊರತು ಪಡಿಸಿ, ಆಟದ ಭಾಗವೆಂದು ಪರಿಗಣಿಸಬಾರದು. ೧೬.೯ ಸಹ ಗಮನಿಸಿ.<br>೧೬.೬.೨ ಕೊನೆಯ ಸರದಿಯಲ್ಲಿ ಬ್ಯಾಟ್ ಮಾಡುವ ತಂಡದ ಓಟಗಳ ಮೊತ್ತ, ದಾಂಡಿಗರು ಬುತ್ತಿ (ಕ್ಯಾಚ್) ಹಿಡಿಯುವ ಪ್ರಯತ್ನ ಪೂರ್ತಿಗೊಳ್ಳುವ ಮೊದಲು ಇಲ್ಲವೇ ಬುತ್ತಿ ಹಿಡಿಯುವುದಕ್ಕೆ ಅಡಚಣೆ ಮಾಡುವುದರಿಂದ ಚೆಂಡನ್ನು ಎದುರಿಸುವ ದಾಂಡಿಗನು ಔಟ್ ಆಗುವ ಸಂದರ್ಭದ ಮೊದಲು |

| | |
|---|---|
| the boundary allowance shall be credited to the side's total and, in the case of a hit by the bat, to the striker's score. | ಪೂರ್ತಿಗೊಳಿಸಿದ ಒಟಗಳ ಹೊರತಾಗಿ ಪಂದ್ಯ ಗೆಲ್ಲಲು ಸಾಕಷ್ಟು ಇರಬೇಕು.<br>೧೬.೬.೩ ಪಂದ್ಯ ಗೆಲ್ಲಲು ಅಗತ್ಯವಾದ ಒಟಗಳನ್ನು ಓಡಿ ಪೂರ್ತಿಗೊಳಿಸುವ ಮೊದಲು ಬೌಂಡರಿ ಗಳಿಕೆಯಾದರೆ, ಆ ಬೌಂಡರಿಯ ಒಟಗಳನ್ನು ತಂಡದ ಒಟಗಳ ಮೊತ್ತಕ್ಕೆ ಸೇರಿಸಬೇಕು ಮತ್ತು ದಾಂಡಿನಿಂದ ಹೊಡೆದಿದ್ದರೆ ದಾಂಡಿಗನ ಖಾತೆಗೂ ಸೇರಿಸಬೇಕು. |
| **16.7 Statement of result**<br>If the side batting last wins the match without losing all its wickets, the result shall be stated as a win by the number of wickets still then to fall.<br>If, without having scored a total of runs in excess of the total scored by the opposing side, the innings of the side batting last has been completed, but as the result of an award of 5 Penalty runs its total of runs is then sufficient to win, the result shall be stated as a win to that side by Penalty runs.<br>If the side fielding last wins the match, the result shall be stated as a win by runs. | **೧೬.೭ ಫಲಿತಾಂಶದ ವ್ಯಾಖ್ಯೆ**<br>ಕೊನೆಯ ಸರದಿಯ ದಾಂಡಿಗ ತಂಡವು ತನ್ನ ಎಲ್ಲ ಹುದ್ದರಿಗಳನ್ನು ಕಳೆದುಕೊಳ್ಳದೇ ಪಂದ್ಯವನ್ನು ಗೆದ್ದರೆ, ಗೆದ್ದಾಗ ಎಷ್ಟು ಹುದ್ದರಿಗಳ ಪತನವಾಗಬೇಕಿತ್ತೊ ಅಷ್ಟು ಹುದ್ದರಿಗಳಿಂದ ಗೆದ್ದಂತೆ.<br>ಕೊನೆಯ ಸರದಿಯ ದಾಂಡಿಗ ತಂಡವು ಎದುರಾಳಿ ತಂಡವು ಗಳಿಸಿದ ಒಟ್ಟಾರೆ ಒಟಗಳನ್ನು ಗಳಿಸದೇ ತನ್ನ ಸರದಿಯನ್ನು ಮುಕ್ತಾಯಗೊಳಿಸಿ, ದಂಡದ ೫ ಒಟಗಳಿಂದ, ಅದರ ಒಟಗಳ ಮೊತ್ತ ಪಂದ್ಯ ಗೆಲ್ಲಲು ಸಾಕಾದರೆ, ದಂಡದ ಒಟಗಳಿಂದ ಗೆದ್ದಿದೆ ಎಂದು ಹೇಳಬೇಕು.<br>ಕೊನೆಯ ಸರದಿಯಲ್ಲಿ ಕ್ಷೇತ್ರ ರಕ್ಷಣೆ ಮಾಡುವ ತಂಡ ಗೆದ್ದರೆ, ಫಲಿತಾಂಶವನ್ನು ಒಟಗಳಿಂದ ಗೆದ್ದಿದೆ ಎಂದು ಹೇಳಬೇಕು.<br>ಪಂದ್ಯದ ಫಲಿತಾಂಶವನ್ನು ಯಾವುದೇ ತಂಡ ಸೋಲನ್ನು ಒಪ್ಪಿಕೊಳ್ಳುವ ಇಲ್ಲವೇ ಆಡಲು ನಿರಾಕರಿಸುವ ಮೂಲಕ ನಿರ್ಧರಿಸಿದರೆ, |

| | |
|---|---|
| If the match is decided by one side conceding defeat or refusing to play, the result shall be stated as Match Conceded or Match Awarded, as the case may be. | ಫಲಿತಾಂಶವನ್ನು ಸೋಲನ್ನು ಒಪ್ಪಿಕೊಂಡಿದೆ ಇಲ್ಲವೇ ಪಂದ್ಯವನ್ನು ಅನುದಾನಿಸಿದೆ ಎಂದು ನೊಂದಾಯಿಸಬೇಕು. |
| **16.8 Correctness of result**<br>Any decision as to the correctness of the scores shall be the responsibility of the umpires.<br>See Law 2.15 (Correctness of scores). | **೧೬.೮ ಸರಿಯಾದ ಫಲಿತಾಂಶ**<br>ಓಟಗಳ ಮೊತ್ತ ಸರಿಯಾಗಿದೆಯೋ ಇಲ್ಲವೋ ಎಂದು ನಿರ್ಧರಿಸುವ ಜವಾಬ್ದಾರಿ ಅಂಪೈರ್‌ಗಳದ್ದು.<br>ನಿಯಮ ೨೧.೫ (ಸ್ಕೋರಿನ ನಿಖರತೆ) ಗಮನಿಸಿ. |
| **16.9 Mistakes in scoring**<br>If, after the players and umpires have left the field in the belief that the match has been concluded, the umpires discover that a mistake in scoring has occurred which affects the result then, subject to 16.10, they shall adopt the following procedure.<br>16.9.1 If, when the players leave the field, the side batting last has not completed its innings and<br>either the number of overs to be bowled in the last hour, or in that innings, has not been completed.<br>or the agreed time for close of play, or for the end of the innings, has not been reached.<br>then, unless one side concedes defeat, the umpires shall order play to resume. | **೧೬.೯ ಸ್ಕೋರಿಂಗ್‌ನಲ್ಲಿ ಲೋಪಗಳು**<br>ಅಂಪೈರ್‌ಗಳು ಮತ್ತು ಆಟಗಾರರು ನಿರ್ಣಯ ಬಂದಿದೆ ಎಂದು ಮೈದಾನದ ಹೊರಬಂದು, ಅಂಪೈರ್‌ಗಳು ಪಂದ್ಯದ ಮೇಲೆ ಪರಿಣಾಮ ಬೀರುವಂತಹ ತಪ್ಪನ್ನು ಸ್ಕೋರಿಂಗ್‌ನಲ್ಲಿ ಕಂಡುಹಿಡಿದರೆ, ಅಂಶ ೧೬.೧೦ಕ್ಕೆ ಒಳಪಟ್ಟು, ಕೆಳಕಂಡ ಕ್ರಮಗಳನ್ನು ಅನುಸರಿಸಬೇಕು.<br>೧೬.೯.೧ ಆಟಗಾರರು ಮೈದಾನ ಬಿಟ್ಟಾಗ, ಕೊನೆಗೆ ದಾಂಡು ಮಾಡುತ್ತಿರುವ ತಂಡದ ಸರದಿ ಪೂರ್ತಿಯಾಗಿರದಿದ್ದರೆ ಮತ್ತು<br>ಕೊನೆಯ ಘಂಟೆಯಲ್ಲಿ ಮಾಡಬೇಕಾದ ಕನಿಷ್ಠ ಓವರುಗಳು ಇಲ್ಲವೇ ಆ ಸರದಿಯಲ್ಲಿ ಮಾಡಬೇಕಾದ ಓವರುಗಳು ಮುಗಿದಿರದಿದ್ದರೆ<br>ಇಲ್ಲವೇ ಪಂದ್ಯದ ಮುಕ್ತಾಯಕ್ಕೆ ಇಲ್ಲವೇ ಆ ಸರದಿಯ ಮುಕ್ತಾಯಕ್ಕೆ ನಿರ್ಧರಿಸಿದ ಸಮಯ ಆಗಿರದಿದ್ದರೆ<br>ಒಂದು ತಂಡ ಸೋಲನ್ನು ಒಪ್ಪಿಕೊಳ್ಳದಿದ್ದರೆ, ಅಂಪೈರ್‌ಗಳು ಆಟವನ್ನು ಮುಂದುವರೆಸಲು ನಾಯಕರಿಗೆ ಆದೇಶಿಸಬೇಕು. |

| | |
|---|---|
| Unless a result is reached sooner, play will then continue, if conditions permit, until the prescribed number of overs has been completed and either time for close of play has been reached or the allotted time for the innings has expired, as appropriate. The number of overs and time remaining shall be taken as they were at the call of Time for the supposed conclusion of the match. No account shall be taken of the time between that moment and the resumption of play.<br>16.9.2 If, at this call of Time, the overs have been completed and no Playing time remains,<br>or if the side batting last has completed its innings, the umpires shall immediately inform both captains of the necessary corrections to the scores and to the result. | ಶೀಘ್ರವೇ ಫಲಿತಾಂಶ ಬರದಿದ್ದರೆ, ಪರಿಸ್ಥಿತಿಯು ಅನುಮತಿಸಿದರೆ, ಆಟವು ನಿಗದಿತ ಓವರ್‌ಗಳನ್ನು ಮುಗಿಸುವವರೆಗೆ ಮತ್ತು ನಿಗದಿತ ಆಟದ ಮುಕ್ತಾಯದ ಸಮಯ ಆಗುವವರೆಗೆ ಅಥವಾ ಆ ಸರದಿಗೆ ನಿಗದಿಪಡಿಸಿದ ಅವಧಿ ಮುಗಿಯುವವರೆಗೆ ಮುಂದುವರೆಸಬೇಕು. ಉಳಿದಿರುವ ಓವರುಗಳು ಇಲ್ಲವೇ ಸಮಯವನ್ನು ಆಟ ಮುಗಿದಿದೆ ಎಂದು ಈ ಮೊದಲು "ಟೈಂ" ಕರೆದಾಗ ಹೇಗಿತ್ತೋ ಹಾಗೇ ತೆಗೆದುಕೊಳ್ಳಬೇಕು. ಆ ಕ್ಷಣದಿಂದ ಆಟ ಪುನರಾರಂಭಗೊಂಡ ನಡುವಿನ ಅವಧಿಯನ್ನು ಗಣನೆಗೆ ತೆಗೆದುಕೊಳ್ಳಬಾರದು.<br>೧೬.೯.೨ "ಟೈಂ" ಎಂದು ಕರೆದಾಗ, ಓವರುಗಳು ಪೂರ್ಣಗೊಂಡಿದ್ದರೆ ಮತ್ತು ಆಟದ ಅವಧಿ ಮುಗಿದಿದ್ದರೆ ಅಥವಾ ಕೊನೆಯ ಸರದಿಯಲ್ಲಿ ದಾಂಡು ಮಾಡುತ್ತಿದ್ದ ತಂಡ ತನ್ನ ಸರದಿ ಮುಗಿಸಿದ್ದರೆ, ಅಂಪೈರ್‌ಗಳು ಕೂಡಲೇ ಇಬ್ಬರೂ ನಾಯಕರಿಗೆ ಸ್ಕೋರ್‌ಗೆ ಮತ್ತು ಫಲಿತಾಂಶಕ್ಕೆ ಮಾಡಿದ ತಿದ್ದುಪಡಿ ತಿಳಿಸಬೇಕು. |
| **16.10 Result not to be changed.**<br>Once the umpires have agreed with the scorers the correctness of the scores at the conclusion of the match – see Laws 2.15 (Correctness of scores) and 3.2 (Correctness of scores) – the result cannot thereafter be changed. | **೧೬.೧೦ ಫಲಿತಾಂಶ ಬದಲಿಸಬಾರದು**<br>ಸ್ಕೋರರ್‌ಗಳು ಮತ್ತು ಅಂಪೈರ್‌ಗಳು ಸ್ಕೋರ್ ಸರಿ ಇದೆ ಎಂದು ಪಂದ್ಯದ ಮುಕ್ತಾಯದನಂತರ ಒಪ್ಪಿಕೊಂಡ ನಂತರ – ನಿಯಮ ೨.೧೫ (ಸ್ಕೋರ್‌ನ ನಿಖರತೆ) ಮತ್ತು ೩.೨ (ಸ್ಕೋರ್‌ನ ನಿಖರತೆ) ಗಮನಿಸಿ- ಫಲಿತಾಂಶವನ್ನು ಬದಲಿಸಬಾರದು. |

| **LAW 17 THE OVERS** | **ನಿಯಮ ೧೭ ಓವರ್** |
|---|---|
| **17.1 Number of balls**<br>The ball shall be bowled from each end alternately in overs of 6 balls. | **೧೭.೧ ಎಸೆತಗಳ ಸಂಖ್ಯೆ**<br>ಚೆಂಡನ್ನು ಎರಡೂ ತುದಿಯಿಂದ ಅದಲು ಬದಲಾಗಿ ೬ ಎಸೆತಗಳ ಓವರ್ ರೂಪದಲ್ಲಿ ಬೌಲ್ ಮಾಡಬೇಕು. |
| **17.2 Start of an over**<br>An over has started when the bowler starts his/her run-up or, if there is no run-up, starts his/her action for the first delivery of that over. | **೧೭.೨ ಓವರ್ ಪ್ರಾರಂಭ**<br>ಆಯಾ ಓವರಿನ ಮೊದಲಿನ ಎಸೆತಕ್ಕಾಗಿ ಬೌಲರ್ ಓಡಲು ಪ್ರಾರಂಭಿಸಿದೊಡನೆ ಇಲ್ಲವೇ ರನ್ ಅಪ್ ಇಲ್ಲದಿದ್ದರೆ ಓಡದೆ ಬೌಲ್ ಮಾಡಲು ಪ್ರಾರಂಭಿಸಿದೊಡನೆ, ಓವರ್ ಪ್ರಾರಂಭವಾದಂತೆ. |
| **17.3 Validity of balls**<br>17.3.1 A ball shall not count as one of the 6 balls of the over unless it is delivered, even though, as in Law 38.3 (Non-striker leaving his/her ground early) a batter may be dismissed, or some other incident occurs without the ball having been delivered.<br>17.3.2 A ball delivered by the bowler shall not count as one of the 6 balls of the over<br>17.3.2.1 if it is called dead, or is to be considered dead, before the striker has had an opportunity to play it. See Law 20.6 (Dead ball; ball counting as one of over). | **೧೭.೩ ಎಸೆತಗಳ ನಿಯಮ ಬದ್ಧತೆ**<br>೧೭.೩.೧ ನಿಯಮ ೩೮.೩(ಬೌಲರ್ ತುದಿಯ ದಾಂಡಿಗನು/ದಾಂಡಿಗಳು ತನ್ನ ನೆಲವನ್ನು ಮುಂಚಿತವಾಗಿ ಬಿಡುವುದು)ರಲ್ಲಿ ತಿಳಿಸಿರುವಂತೆ ದಾಂಡಿಗನೊಬ್ಬನನ್ನು ಔಟ್ ಮಾಡಬಹುದಾಗಿದ್ದರೂ, ಇಲ್ಲವೇ ಬೇರಾವುದೇ ಘಟನೆ ಬೌಲ್ ಮಾಡದೆ ನಡೆದರೂ ಸಹ, ಚೆಂಡನ್ನು ಬೌಲ್ ಮಾಡದ ಹೊರತು ಆ ಎಸೆತ ಓವರಿನಲ್ಲಿಯ ೬ ಎಸೆತಗಳಲ್ಲಿ ಒಂದು ಎಸೆತ ಎಂದು ಎಣಿಸಬಾರದು.<br>೧೭.೩.೨ ಈ ಕೆಳಗಿನ ಸಂದರ್ಭಗಳಲ್ಲಿ ಬೌಲರ್ ಬೌಲ್ ಮಾಡಿದ ಎಸೆತ ಓವರಿನ ೬ ಎಸೆತಗಳಲ್ಲಿ ಒಂದು ಎಂದು ಎಣಿಸಬಾರದು,<br>೧೭.೩.೨.೧ ಚೆಂಡನ್ನು ಎದುರಿಸುವ ದಾಂಡಿಗನು, ಚೆಂಡನ್ನು ಆಡಲು ಅವಕಾಶ ಹೊಂದುವ ಮೊದಲು , ಆ ಚೆಂಡನ್ನು ಡೆಡ್ ಎಂದು ಕರೆದರೆ ಇಲ್ಲವೇ ಡೆಡ್ ಎಂದು ಪರಿಗಣಿಸಿದರೆ. ನಿಯಮ ೨೦.೬ |

17.3.2.2 if it is called dead in the circumstances of Law 20.4.2.6.Note also the special provisions of Law 20.4.2.5 (Umpire calling and signalling Dead ball).

17.3.2.3 if it is a No ball. See Law 21 (No ball).

17.3.2.4 if it is a Wide. See Law 22 (Wide ball).

17.3.2.5 when any of Laws 24.4 (Player returning without permission), 28.2 (Fielding the ball), 41.4 (Deliberate attempt to distract striker), or 41.5 (Deliberate distraction, deception or obstruction of batter) is applied.

17.3.3 Any deliveries other than those listed in 17.3.1 and 17.3.2 shall be known as valid balls. Only valid balls shall count towards the 6 balls of the over.

(ಡೆಡ್ ಬಾಲ್: ಚೆಂಡನ್ನು ಓವರಿನ ಒಂದು ಎಸೆತ ಎಂದು ಎಣಿಸುವುದು.) ಗಮನಿಸಿ.

| | |
|---|---|
| ೧೭.೨.೨.೨ | ನಿಯಮ ೨೦.೪.೨.೬ರ ಅನುಸಾರ ಡೆಡ್ ಎಂದು ಕರೆದಾಗ. ನಿಯಮ ೨೦.೪.೨.೫ರ ವಿಶೇಷ ಅವಕಾಶಗಳನ್ನು ಗಮನಿಸಿ. |
| ೧೭.೨.೨.೩ | ಎಸೆತವು ನೋ ಬಾಲ್ ಎಂದಾದರೆ. ನಿಯಮ ೨೧ (ನೋ ಬಾಲ್ ಗಮನಿಸಿ). |
| ೧೭.೩.೨.೪ | ಎಸೆತವು ವೈಡ್ ಆದರೆ. ನಿಯಮ ೨೨ (ವೈಡ್) ಗಮನಿಸಿ. |
| ೧೭.೩.೨.೫ | ನಿಯಮ ೨೪.೪ (ಅನುಮತಿ ಇಲ್ಲದೇ ಆಟಗಾರನು ಮೈದಾನದೊಳಗೆ ಹಿಂತಿರುಗಿ ಬರುವುದು.). ೨೮.೨ (ಚೆಂಡಿನ ಕ್ಷೇತ್ರ ರಕ್ಷಣೆ), ೪೧.೪ (ಚೆಂಡನ್ನು ಎದುರಿಸುವ ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಚಿತ್ತ ವಿಚಲಿತಗೊಳಿಸುವುದು), ಇಲ್ಲವೇ ೪೧.೫ (ಉದ್ದೇಶಪೂರ್ವಕವಾಗಿ ದಾಂಡಿಗನ ಚಿತ್ತ ವಿಚಲಿಸುವುದು, ವಂಚಿಸುವುದು ಅಥವಾ ಅಡ್ಡಿಪಡಿಸುವುದು.) ಗಳಲ್ಲಿ ಯಾವುದಾದರೂ ಅನ್ವಯವಾದಾಗ. |
| ೧೭.೩.೩ | ೧೭.೩.೧ ಹಾಗೂ ೧೭.೩.೨ರಲ್ಲಿ ಸೂಚಿಸಿರುವ ಎಸೆತಗಳನ್ನು ಹೊರತುಪಡಿಸಿ, ಬೌಲ್ ಮಾಡಿದ ಯಾವುದೇ ಎಸೆತವನ್ನು ನಿಯಮಬದ್ಧ ಎಸೆತವೆನ್ನಬೇಕು. ನಿಯಮಬದ್ಧ ಎಸೆತಗಳು ಮಾತ್ರ ಓವರಿನ ೬ ಎಸೆತಗಳಲ್ಲಿ ಎಣಿಸಬೇಕು. |

| | |
|---|---|
| **17.4 Call of Over**<br>When 6 valid balls have been bowled and when the ball becomes dead, the umpire shall call Over before leaving the wicket. See also Law 20.3 (Call of Over or Time). | **೧೭.೪ ಓವರ್ ಕರೆಯುವುದು**<br>ನಿಯಮಬದ್ಧವಾದ ೬ ಎಸೆತಗಳನ್ನು ಬೌಲ್ ಮಾಡಿದನಂತರ ಚೆಂಡು ಡೆಡ್ ಆದಾಗ, ಅಂಪೈರ್ ತಮ್ಮ ಜಾಗವನ್ನು ಬಿಡುವ ಮೊದಲು "ಓವರ್" ಎಂದು ಕರೆಯಬೇಕು. |
| **17.5 Umpire miscounting**<br>17.5.1 If the umpire miscounts the number of valid balls, the over as counted by the umpire shall stand.<br>17.5.2 If, having miscounted, the umpire allows an over to continue after 6 valid balls have been bowled, he/she may subsequently call Over when the ball becomes dead after any delivery, even if that delivery is not a valid ball. | **೧೭.೫ ಅಂಪೈರ್ ತಪ್ಪಾಗಿ ಎಣಿಸುವುದು**<br>೧೭.೫.೧ ಅಂಪೈರ್ ನಿಯಮಬದ್ಧ ಎಸೆತಗಳನ್ನು ತಪ್ಪಾಗಿ ಎಣಿಸಿದರೆ, ಆ ಓವರ್ ಅಂಪೈರ್ ಎಣಿಸಿದಂತೆಯೇ ಇರಬೇಕು.<br>೧೭.೫.೨ ಅಂಪೈರ್ ತಪ್ಪಾಗಿ ಎಣಿಸಿದ ಕಾರಣ, ೬ ನಿಯಮಬದ್ಧವಾದ ಎಸೆತಗಳನ್ನು ಬೌಲ್ ಮಾಡಿದನಂತರವೂ ಒಂದು ಓವರನ್ನು ಮುಂದುವರೆಸಿ, ನಂತರದ ಯಾವುದೇ ಎಸೆತದ ನಂತರ, ಆ ಎಸೆತ ನಿಯಮಬಾಹಿರವಾಗಿದ್ದರೂ ಸಹ, ಚೆಂಡು ಡೆಡ್ ಆದಮೇಲೆ ಓವರ್ ಕರೆಯಬಹುದು. |
| **17.6 Bowler changing ends.**<br>A bowler shall be allowed to change ends as often as desired, provided he/she does not bowl two overs consecutively, nor bowl parts of each of two consecutive overs, in the same innings. | **೧೭.೬ ಬೌಲರ್ ತುದಿ ಬದಲಾಯಿಸುವುದು**<br>ಒಬ್ಬ ಬೌಲರ್ ಎರಡು ಸತತ ಓವರ್‌ಗಳನ್ನು ಇಲ್ಲವೇ ಅವುಗಳ ಭಾಗವನ್ನು ಮಾಡದಂತೆ ಎಷ್ಟುಸಲ ಬೇಕಾದರೂ ತುದಿ ಬದಲಾಯಿಸಬಹುದು. |
| **17.7 Finishing an over.**<br>17.7.1 Other than at the end of an innings, a bowler shall finish an over in progress unless incapacitated or suspended under any of the Laws. | **೧೭.೭ ಓವರ್ ಪೂರ್ಣಗೊಳಿಸುವುದು**<br>೧೭.೭.೧ ಸರದಿಯೊಂದು ಮುಕ್ತಾಯಗೊಳ್ಳುವುದನ್ನು ಹೊರತುಪಡಿಸಿ, ಒಬ್ಬ ಬೌಲರ್ ಅಸ್ವಸ್ಥನಾಗದ ಅಥವಾ ಯಾವುದೇ |

| | |
|---|---|
| 17.7.2 If for any reason, other than the end of an innings, an over is left uncompleted at the start of an interval or interruption, it shall be completed on resumption of play. | ನಿಯಮಗಳಿಗನುಸಾರವಾಗಿ ಅಮಾನತ್ತುಗೊಳ್ಳದ ಹೊರತು, ಪ್ರಗತಿಯಲ್ಲಿರುವ ಓವರನ್ನು ಪೂರ್ಣಗೊಳಿಸಬೇಕು.<br>೧೭.೭.೨ ಸರದಿಯೊಂದು ಮುಕ್ತಾಯಗೊಳ್ಳುವುದನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕಾಗಿ, ವಿರಾಮದ ಅಥವಾ ಅಡಚಣೆಯ ಪ್ರಾರಂಭದಲ್ಲಿ ಓವರ್ ಅಪೂರ್ಣಗೊಂಡಿದ್ದರೆ, ಆಟವು ಪುನರಾರಂಭವಾದಾಗ ಅದನ್ನು ಪೂರ್ತಿಗೊಳಿಸಬೇಕು |
| **17.8 Bowler incapacitated or suspended during an over**<br>If for any reason a bowler is incapacitated while running up to deliver the first ball of an over, or is incapacitated during an over, the umpire shall call and signal Dead ball. If a bowler is incapacitated or suspended during an over, Another bowler shall complete the over from the same end, provided that he/she does not bowl two overs consecutively, nor bowl parts of each of two consecutive overs, in that innings. | **೧೭.೮ ಓವರಿನ ಮಧ್ಯದಲ್ಲಿ ಬೌಲರ್ ಅಸ್ವಸ್ಥನಾಗುವುದು ಇಲ್ಲವೇ ಅಮಾನತ್ತುಗೊಳ್ಳುವುದು**<br>ಯಾವುದೇ ಕಾರಣಕ್ಕಾಗಿ, ಒಬ್ಬ ಬೌಲರ್ ಓವರಿನ ಮೊದಲ ಎಸೆತಕ್ಕೆ ಓಡಿ ಬರುವಾಗ ಅಸ್ವಸ್ಥನಾದರೆ ಇಲ್ಲವೇ ಓವರ್ ನಡೆದಾಗ ಅಸ್ವಸ್ಥನಾದರೆ, ಅಂಪೈರ್ ಡೆಡ್ ಬಾಲ್ ಎಂದು ಕೂಗಿ ಸನ್ನೆ ಮಾಡಬೇಕು. ಒಬ್ಬ ಬೌಲರ್ ಓವರ್ ನಡೆದಾಗ ಅಸ್ವಸ್ಥನಾದರೆ ಇಲ್ಲವೇ ಅಮಾನತ್ತುಗೊಂಡರೆ ಇನ್ನೊಬ್ಬ ಬೌಲರ್ ಅದೇ ತುದಿಯಿಂದ ಓವರನ್ನು ಪೂರ್ಣಗೊಳಿಸಬೇಕು. ಆದರೆ ಆ ಬೌಲರ್ ಆ ಸರದಿಯಲ್ಲಿ ಸತತವಾಗಿ ಎರಡು ಓವರ್ ಇಲ್ಲವೇ ಅವುಗಳ ಭಾಗವನ್ನು ಮಾಡಬಾರದು. |
| **LAW 18 SCORING RUNS** | **ನಿಯಮ ೧೮ ಓಟಗಳ ಗಳಿಕೆ** |
| **18.1 A run**<br>The score shall be reckoned by runs. A run is scored.<br>18.1.1 so often as the batters, at any time while the ball is in play, have crossed and made good their ground from end to end. | **೧೮.೧ ಓಟ**<br>ಮೊತ್ತವನ್ನು ಓಟಗಳಿಂದ ಲೆಕ್ಕ ಮಾಡಬೇಕು. ಓಟ ಯಾವಾಗ ಗಳಿಕೆಯಾಗುತ್ತದೆ ಎಂದರೆ,<br>೧೮.೧.೧ ಚೆಂಡು ಆಟದಲ್ಲಿ ಇದ್ದಾಗ, ಎಷ್ಟು ಸಲ ಇಬ್ಬರೂ ದಾಂಡಿಗರು ಒಬ್ಬರನ್ನೊಬ್ಬರು ದಾಟಿ ಒಂದು ತುದಿಯಿಂದ |

| | |
|---|---|
| 18.1.2 when a boundary is scored. See Law 19 (Boundaries).<br>18.1.3 when Penalty runs are awarded. See 18.6. | ಇನ್ನೊಂದು ತುದಿಯ ನಿಗದಿತ ಜಾಗವನ್ನು ಮುಟ್ಟುತ್ತಾರೋ ಅಷ್ಟು.<br>೧೮.೧.೨ ಬೌಂಡರಿ ಗಳಿಸಿದಾಗ ನಿಯಮ ೧೯ (ಬೌಂಡರಿಗಳು) ಗಮನಿಸಿ<br>೧೮.೧.೩ ದಂಡದ ಓಟಗಳನ್ನು ಅನುದಾನಿಸಿದಾಗ. ೧೮.೬ ಗಮನಿಸಿ. |
| **18.2 Runs disallowed and runs not scored.**<br>Wherever in these Laws provision is made for the scoring of runs or awarding of penalties, such runs and penalties will be subject to any provisions that may be applicable for a run to be disallowed or a run not to be scored (see Appendix A.11) or for the non-award of penalties.<br>When runs are disallowed, the one run penalty for No ball or Wide shall stand and 5 run penalties shall be allowed, except for Penalty runs under Law 28.3 (Protective helmets belonging to the fielding side). | **೧೮.೨ ಅನುಮತಿಸದ ಓಟಗಳು ಮತ್ತು ಗಳಿಕೆಯಾಗದ ಓಟಗಳು.**<br>ಈ ನಿಯಮಗಳಲ್ಲಿ ಎಲ್ಲೆಲ್ಲಿ ಓಟಗಳ ಗಳಿಕೆಗೆ ಅಥವಾ ದಂಡದ ಓಟಗಳನ್ನು ಅನುದಾನಿಸುವುದಕ್ಕೆ ಅವಕಾಶವಿದೆಯೋ, ಅಂತಹ ಅಥವಾ ದಂಡದಓಟಗಳು, ಓಟಗಳನ್ನು ರದ್ದುಗೊಳಿಸುವದು ಅಥವಾ ಓಟಗಳು ಗಳಿಕೆಯಾಗದಿರುವದು (ಅನುಭ೦ದ ಅ-೧೧ ನೋಡಿರಿ) ಅಥವಾ ಓಟಗಳನ್ನು ಅನುದಾನಿಸದಿರುವದಕ್ಕೆ ಇರುವ ಅವಕಾಶಗಳಿಗೆ ಒಳಪಟ್ಟಿರುತ್ತದೆ.<br>ಓಟಗಳನ್ನು ರದ್ದುಗೊಳಿಸಿದಾಗ, ನೋಬಾಲ್ ಅಥವಾ ವೈಡ್ ಬಾಲ್‌ಗೆ ಕೊಡುವಂತಹ ದಂಡದ ಒಂದು ಓಟ ರದ್ದಾಗುವುದಿಲ್ಲ ಮತ್ತು ದಂಡದ ೫ ಓಟಗಳನ್ನು ನಿಯಮ ೨೮.೩ (ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ)ದ ಅನುಸಾರ ಅನುದಾನಿಸುವ ಓಟಗಳನ್ನು ಹೊರತುಪಡಿಸಿ ಅನುಮತಿಸಬೇಕು. |
| **18.3 Short runs**<br>18.3.1 A run is short if a batter fails to make good his/her ground in turning for a further run.<br>18.3.2 Although a short run shortens the succeeding one, the latter if completed shall not be regarded as short. A striker | **೧೮.೩ ಅಪೂರ್ಣ ಓಟಗಳು**<br>೧೮.೩.೧ ದಾಂಡಿಗನು ಮತ್ತೊಂದು ಓಟಕ್ಕಾಗಿ ಒಂದು ತುದಿಯ ನಿಗದಿತ ಜಾಗವನ್ನು ಮುಟ್ಟದೆ ತಿರುಗಿ ಓಡಿದರೆ, ಆ ಓಟ ಅಪೂರ್ಣವಾಗುತ್ತದೆ. |

| | |
|---|---|
| setting off for the first run from in front of the popping crease may do so also without penalty. | ೧೮.೩.೨ ಒಂದು ಅಪೂರ್ಣ ಓಟವು ಮುಂದಿನ ಓಟವನ್ನು ಮೊಟಕುಗೊಳಿಸಿದರೂ, ನಂತರದ ಓಟವನ್ನು ಪೂರ್ತಿಗೊಳಿಸಿದರೆ, ಆ ಓಟವನ್ನು ಅಪೂರ್ಣ ಎಂದು ಪರಿಗಣಿಸಬಾರದು. ಚೆಂಡನ್ನು ಎದುರಿಸುವ ದಾಂಡಿಗನು ಪಾಪಿಂಗ್ ಕ್ರೀಸ್‌ನ ಹೊರಗಡೆಯಿಂದ ಮೊದಲ ಓಟವನ್ನು ದಂಡವಿಲ್ಲದೆ ಓಡಬಹುದು. |
| **18.4 Unintentional short runs**<br>Except in the circumstances of 18.5,<br>18.4.1 if either batter runs a short run, the umpire concerned shall, unless a boundary is scored, call and signal Short run as soon as the ball becomes dead and that run shall not be scored.<br>18.4.2 if, after either or both batters run short, a boundary is scored the umpire concerned shall disregard the short running and shall not call or signal Short run, unless the boundary is a result of an overthrow or wilful act of a fielder (see Law 19.8 – Overthrow or wilful act of fielder).<br>18.4.3 if both batters run short in one and the same run, this shall be regarded as only one short run. | **೧೮.೪ ಉದ್ದೇಶರಹಿತ ಅಪೂರ್ಣ ಓಟ**<br>೧೮.೫ ರಲ್ಲಿರುವುದನ್ನು ಹೊರತುಪಡಿಸಿ,<br>೧೮.೪.೧ ಬೌಂಡರಿ ಗಳಿಕೆಯಾಗದ ಹೊರತು, ಯಾವುದೇ ದಾಂಡಿಗ ಅಪೂರ್ಣ ಓಟ ಓಡಿದಾಗ, ಚೆಂಡು ಡೆಡ್ ಆದ ಕೂಡಲೇ, ಸಂಬಂಧಿತ ಅಂಪೈರ್ ಅಪೂರ್ಣ ಓಟ ಎಂದು ಕರೆದು ಸನ್ನೆ ಮಾಡಬೇಕು ಮತ್ತು ಆ ಓಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು.<br>೧೮.೪.೨ ಮೇರೆ ಮೀರಿದ ಎಸೆತ ಇಲ್ಲವೇ ಕ್ಷೇತ್ರರಕ್ಷಕನ ಉದ್ದೇಶಪೂರಿತ ಕೃತ್ಯ (ನಿಯಮ ೧೯.೮ ಮೇರೆ ಮೀರಿದ ಎಸೆತ ಅಥವಾ ಕ್ಷೇತ್ರ ರಕ್ಷಕರ ಉದ್ದೇಶ ಪೂರಿತ ಕೃತ್ಯ) ದಿ0ದ ಬೌ0ಡರಿ ಬರದ ಹೊರತು.ಒಬ್ಬ ಅಥವಾ ಇಬ್ಬರೂ ದಾಂಡಿಗರು ಅಪೂರ್ಣ ಓಟ ಓಡಿದ ನಂತರ ಬೌಂಡರಿ ಗಳಿಕೆಯಾದರೆ, ಆ ಅಪೂರ್ಣ ಓಟವನ್ನು ಪರಿಗಣಿಸಬಾರದು ಮತ್ತು ಅಪೂರ್ಣ ಓಟವೆಂದು ಕರೆಯಬಾರದು ಮತ್ತು ಸನ್ನೆ ಮಾಡಬಾರದು.<br>೧೮.೪.೩ ಒಂದು ವೇಳೆ ಒಂದೇ ಓಟದಲ್ಲಿ ಇಬ್ಬರೂ ದಾಂಡಿಗರು ಅಪೂರ್ಣ ಓಟ ಓಡಿದರೆ, ಒಂದೇ ಓಟ ಅಪೂರ್ಣ ಎಂದು ಪರಿಗಣಿಸಬೇಕು. |

| | |
|---|---|
| 18.4.4 if more than one run is short then, subject to 18.4.2 and 18.4.3, all runs called as short shall not be scored.<br><br>18.4.5 if there has been more than one short run, the umpire shall inform the scorers as to the number of runs to be recorded. | ೧೮.೪.೪ ಒಂದಕ್ಕಿಂತ ಹೆಚ್ಚು ಅಪೂರ್ಣ ಓಟಗಳಿದ್ದರೆ, ೧೮.೪.೨ ಹಾಗೂ ೧೮.೪.೩ರ ಅನುಸಾರ ಅಪೂರ್ಣ ಎಂದು ಕರೆದ ಎಲ್ಲಾ ಓಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು.<br>೧೮.೪.೫ ಒಂದಕ್ಕಿಂತ ಹೆಚ್ಚು ಅಪೂರ್ಣ ಓಟಗಳಿದ್ದರೆ, ಅಂಪೈರ್ ಸ್ಕೋರರ್‌ಗೆ ಎಷ್ಟು ಓಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸಬೇಕು. |
| **18.5 Deliberate short runs**<br>18.5.1 If either umpire considers that one or both batters deliberately ran short at that umpire's end, the umpire concerned shall, when the ball is dead, call and signal Short run and inform the other umpire of what has occurred and apply 18.5.2.<br><br>18.5.2 The bowler's end umpire shall<br>- disallow all runs to the batting side<br><br>- return any not out batter to his/her original end<br><br>- signal No ball or Wide to the scorers, if applicable<br><br>- repeat the Short run signal to the scorers | **೧೮.೫ ಉದ್ದೇಶಪೂರ್ವಕ ಅಪೂರ್ಣ ಓಟಗಳು**<br>೧೮.೫.೧ ಯಾವುದೇ ಒಬ್ಬ ಅಂಪೈರ್ ತನ್ನ ತುದಿಯಲ್ಲಿ ಯಾವುದೇ ದಾಂಡಿಗ ಅಥವಾ ಇಬ್ಬರೂ ದಾಂಡಿಗರು ಉದ್ದೇಶಪೂರ್ವಕವಾಗಿ ಅಪೂರ್ಣ ಓಟ ಓಡಿದ್ದಾರೆ ಎಂದು ಪರಿಗಣಿಸಿದರೆ, ಬಾಲ್ ಡೆಡ್ ಆದ ಕೂಡಲೇ ಆ ಅಂಪೈರ್, ಅಪೂರ್ಣ ಓಟ ಎಂದು ಕೂಗಿ ಸನ್ನೆ ಮಾಡಬೇಕು ಮತ್ತು ತನ್ನ ಸಹವರ್ತಿ ಅಂಪೈರರಿಗೆ ಏನು ನಡೆಯಿತೆಂದು ತಿಳಿಸಬೇಕು ಮತ್ತು ನಿಯಮ ೧೮.೫.೨ನ್ನು ಅನ್ವಯಿಸಬೇಕು.<br>೧೮.೫.೨ ಬೌಲರ್ ತುದಿಯ ಅಂಪೈರ್;<br>➢ ದಾಂಡಿಗ ತಂಡ ಗಳಿಸಿದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು.<br>➢ ಯಾವುದೇ ದಾಂಡಿಗ ಔಟ್ ಆಗದಿದ್ದಲ್ಲಿ, ಆತನನ್ನು/ಆಕೆಯನ್ನು ಸ್ವಸ್ಥಾನಕ್ಕೆ ಮರಳಿಸಬೇಕು.<br>➢ ಅನ್ವಯಿಸಿದ್ದಲ್ಲಿ, ನೋ ಬಾಲ್ ಅಥವಾ ವೈಡ್ ಸನ್ನೆ ಮಾಡಬೇಕು.<br>➢ ಅಪೂರ್ಣ ಓಟದ ಸನ್ನೆಯನ್ನು ಸ್ಕೋರರಿಗೆ ಮರಳಿ ಮಾಡಬೇಕು |

| | |
|---|---|
| - award 5 Penalty runs to the fielding side<br>- award any other 5-run Penalty that is applicable except for Penalty runs under Law 28.3 (Protective helmets belonging to the fielding side)<br>- inform the scorers as to the number of runs to be recorded<br>- inform the captain of the fielding side and, as soon as practicable, the captain of the batting side of the reason for this action.<br><br>18.5.3 The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ಕ್ಷೇತ್ರ ರಕ್ಷಣೆ ತಂಡಕ್ಕೆ ೫ ದಂಡದ ಓಟಗಳನ್ನು ಅನುದಾನಿಸಬೇಕು.<br>➢ ನಿಯಮ ೨೮.೩ (ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ)ದ ಅಡಿಯಲ್ಲಿನ ೫ ದಂಡದ ಓಟಗಳನ್ನು ಹೊರತುಪಡಿಸಿ, ಅನ್ವಯವಾಗುವ ಇತರೆ ಯಾವುದೇ ೫ ದಂಡದ ಓಟಗಳನ್ನು ಅನುದಾನಿಸಬೇಕು.<br>➢ ಎಷ್ಟು ಓಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಸ್ಕೋರರ್ ಗೆ ತಿಳಿಸಬೇಕು.<br>➢ ಕೈಕೊಂಡ ಕ್ರಮದ ಬಗ್ಗೆ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ವ್ಯವಹಾರಿಕವಾಗಿ ಆದಷ್ಟು ಶೀಘ್ರವಾಗಿ ದಾಂಡಿಗ ತಂಡದ ನಾಯಕನಿಗೆ ತಿಳಿಸಬೇಕು.<br>೧೮.೫.೩ ಅಂಪೈರ್‌ಗಳಿಬ್ಬರೂ ಕೂಡಿ ಪಂದ್ಯ ಮುಗಿದ ಮೇಲೆ ಆದಷ್ಟು ಶೀಘ್ರವಾಗಿ ತಪ್ಪೆಸಗಿದ ತಂಡದ ಅಧಿಕಾರಿಗಳಿಗೆ ಮತ್ತು ಪಂದ್ಯದ ಹೊಣೆಗಾರಿಕೆ ಹೊತ್ತ ಆಡಳಿತ ಸಂಸ್ಥೆಯ ಪದಾಧಿಕಾರಿಗಳಿಗೆ ನಡೆದ ಘಟನೆಯ ಬಗ್ಗೆ ವರದಿ ಸಲ್ಲಿಸಬೇಕು, ಅಧಿಕಾರಿಗಳು ನಾಯಕ, ಸಂಬಂಧಿತ ಇತರೆ ಯಾವುದೇ ಆಟಗಾರ ಮತ್ತು ಯುಕ್ತವೆಂದು ಕಂಡುಬಂದಲ್ಲಿ ತಂಡದ ಮೇಲೆ ಯುಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. |
| **18.6 Runs awarded for penalties.**<br>Runs shall be awarded for penalties under 18.5, and Laws 21 (No ball), 22 (Wide ball), 24.4(Player returning without | **೧೮.೬ ಅನುದಾನಿಸುವ ದಂಡದ ಓಟಗಳು**<br>೧೮.೫ ಮತ್ತು ನಿಯಮ ೨೧ (ನೋ ಬಾಲ್), ೨೨ (ವೈಡ್ ಬಾಲ್), ೨೪.೪ (ಅನುಮತಿ ಇಲ್ಲದೇ ಆಟಗಾರ ಮೈದಾನದೊಳಗೆ |

| | |
|---|---|
| permission), 26.4 (Penalties for contravention), 27.4.2 (Illegal Movement by Wicketkeeper), 28.2 (Fielding the ball), 28.3 (Protective helmets belonging to the fielding side), 28.6.3 (Illegal Movement by Fielder) 41 (Unfair play) and 42 (Players' conduct).<br>Note, however, the restrictions on the award of Penalty runs in Laws 18.5, 23.3 (Leg byes not to be awarded), 25.6.5 (Dismissal and conduct of a batter and his/her runner), 25.7 (Restriction on the striker's runner), 28.3 (Protective helmets belonging to the fielding side), 34 (Hit the ball twice), 41.14 (Batter damaging the pitch) and 41.15 (Striker in protected area). | ಹಿಂತಿರುಗುವುದು), ೨೬.೪ (ಉಲ್ಲಂಘನೆಗಾಗಿ ದಂಡ), ೨೭.೪.೨ (ಘೂಟ ರಕ್ಷಕನು ಇಂತಹ ನಿಯಮಬಾಹಿರ ಚಲನೆ), (೨೮.೨ (ಚೆಂಡಿನ ಕ್ಷೇತ್ರ ರಕ್ಷಣೆ), ೨೮.೩ (ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ), ೨೮.೬.೩ (ಕ್ಷೇತ್ರ ರಕ್ಷಕನ ನಿಯಮಬಾಹಿರ ಚಲನೆ) ೪೧ (ನಿಯಮಬಾಹಿರ ಆಟ) ಹಾಗೂ ೪೨(ಆಟಗಾರರ ನಡತೆ) ಗಳ ಅಡಿಯಲ್ಲಿ ದಂಡದ ಓಟಗಳನ್ನು ಅನುದಾನಿಸಬಹುದು.<br>ಆದರೂ, ನಿಯಮ ೧೮.೫, ೨೩.೩ (ಲೆಗ್ ಬೈ ಕೊಡಬಾರದು), ೨೫.೬.೫ (ದಾಂಡಿಗ ಮತ್ತು ಅವನ/ಅವಳ ಓಟಗಾರನನ್ನು ಔಟ್ ಮಾಡುವುದು ಹಾಗೂ ನಡತೆ), ೨೫.೭ (ಚೆಂಡನ್ನು ಎದುರಿಸುವ ದಾಂಡಿಗನ ಬದಲಿ ಓಟಗಾರನ ಮೇಲಿನ ನಿರ್ಬಂಧಗಳು), ೨೮.೩ (ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ) ಮತ್ತು ೩೪ (ಚೆಂಡನ್ನು ಎರಡುಸಲ ಹೊಡೆಯುವುದು), ೪೧.೧೪ (ದಾಂಡಿಗನು ಆಟದ ಪಟ್ಟಿಯನ್ನು ಹಾಳುಮಾಡುವುದು) ಮತ್ತು ೪೧.೧೫ (ಕಾಪಾಡಬೇಕಾದ ಜಾಗದಮೇಲೆ ಚೆಂಡನ್ನೆದುರಿಸುವ ದಾಂಡಿಗ) ಗಳಲ್ಲಿಯ ದಂಡದ ಓಟಗಳನ್ನು ಅನುದಾನಿಸುವ ನಿರ್ಭಂದಗಳನ್ನು ಗಮನಿಸಿ. |
| **18.7 Runs scored for boundaries.**<br>Runs shall be scored for boundary allowances under Law 19 (Boundaries). | **೧೮.೭ ಬೌಂಡರಿಗಳಿಂದ ಓಟ ಗಳಿಕೆ**<br>ನಿಯಮ ೧೯ ರ ಅನ್ವಯ ಬೌಂಡರಿಗಳಿಂದ ಗಳಿಸಿದ ಓಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. |
| **18.8 Runs scored when a batter is dismissed.**<br>When a batter is dismissed, any runs for penalties awarded to either side shall stand. | **೧೮.೮ ದಾಂಡಿಗನು ಔಟ್ ಆದಾಗ ಓಟಗಳ ಗಳಿಕೆ**<br>ಯಾವುದೇ ದಾಂಡಿಗನು ಔಟ್ ಆದಾಗ, ಯಾವುದೇ ತಂಡಕ್ಕೆ ದಂಡದ ಓಟಗಳನ್ನು ಅನುದಾನಿಸಿದರೆ, ಅವು ಲೆಕ್ಕಕ್ಕೆ ಬರುತ್ತವೆ. ಈ ಕೆಳಗಿನ |

| | |
|---|---|
| No other runs shall be credited to the batting side, except as follows.<br>18.8.1 If a batter is dismissed Obstructing the field, the batting side shall also score any runs completed before the offence.<br>If, however, the obstruction prevented a catch being made, no runs other than penalties shall be scored.<br>18.8.2 If a batter is dismissed Run out, the batting side shall also score any runs completed before the wicket was put down.<br>If, however, a striker who has a runner is himself/herself dismissed Run out under Law 25.6.5 (Dismissal and conduct of a batter and his/her runner), any runs completed by the runner and the other batter shall be disallowed. | ಸಂದರ್ಭಗಳನ್ನು ಹೊರತುಪಡಿಸಿ, ಬೇರಾವುದೇ ಓಟಗಳನ್ನು ದಾಂಡಿಗ ತಂಡದ ಓಟಗಳಿಗೆ ಸೇರಿಸುವಂತಿಲ್ಲ.<br>೧೮.೮.೧ ಒಬ್ಬ ದಾಂಡಿಗನು ಕ್ಷೇತ್ರ ರಕ್ಷಣೆಗೆ ಅಡಚಣೆ ಉಂಟುಮಾಡಿದ್ದಕ್ಕಾಗಿ ಔಟ್ ಆದಾಗ. ದಾಂಡಿಗ ತಂಡ ಅಂತಹ ತಪ್ಪನ್ನು ಎಸಗುವ ಮುಂಚೆ ಪೂರ್ಣಗೊಳಿಸಿದ ಓಟಗಳನ್ನು ಗಳಿಸುತ್ತದೆ.<br>ಆದರೆ, ಬುತ್ತಿ (ಕ್ಯಾಚ್) ಹಿಡಿಯುವಾಗ ಅಂತಹ ಅಡಚಣೆ ಮಾಡಿದ್ದರೆ, ದಂಡದ ಓಟಗಳನ್ನು ಹೊರತುಪಡಿಸಿ ಬೇರಾವುದೇ ಓಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು.<br>೧೮.೨.೨ ಒಬ್ಬ ದಾಂಡಿಗನು ರನ್ ಔಟ್ ಆದಾಗ. ದಾಂಡಿಗ ತಂಡ, ಘೂಟಗಳನ್ನು ಬೀಳಿಸುವ ಮೊದಲು ಪೂರ್ಣಗೊಳಿಸಿದ ಓಟಗಳನ್ನು ಗಳಿಸುತ್ತದೆ.<br>ಆದರೆ, ನಿಯಮ ೨೫.೬.೫ (ಒಬ್ಬ ದಾಂಡಿಗ ಮತ್ತು ಅವನ/ಅವಳ ಬದಲಿ ಓಟಗಾರನ/ಓಟಗಾರಳ ವರ್ತನೆ ಮತ್ತು ಔಟ್ ಆಗುವುದು.) ರ ಅನ್ವಯ ಬದಲಿ ಓಟಗಾರನನ್ನು ಹೊಂದಿದ ಚೆಂಡನ್ನು ಎದುರಿಸುವ ದಾಂಡಿಗನೇ/ದಾಂಡಿಗಳೇ ರನ್ ಔಟ್ ಆದರೆ, ಬದಲಿ ಓಟಗಾರ ಮತ್ತು ಮತ್ತೊಬ್ಬ ದಾಂಡಿಗ ಪೂರ್ಣಗೊಳಿಸಿದ ಓಟಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. |
| **18.9 Runs scored when the ball becomes dead other than at the fall of a wicket.**<br>When the ball becomes dead for any reason other than the fall of a wicket, or is called dead by an umpire, unless there | **೧೮.೯ ದಾಂಡಿಗನು ಔಟ್ ಆದ ಸಂದರ್ಭಗಳನ್ನು ಹೊರತುಪಡಿಸಿ, ಚೆಂಡು ಡೆಡ್ ಆದಾಗ ಪರಿಗಣಿಸಬೇಕಾದ ಓಟಗಳು.**<br>ದಾಂಡಿಗನೊಬ್ಬನು ಔಟ್ ಆದ ಸಂದರ್ಭಗಳನ್ನು ಹೊರತುಪಡಿಸಿ ಯಾವುದೇ ಕಾರಣಕ್ಕಾಗಿ ಬಾಲ್ ಡೆಡ್ ಆದಾಗ ಅಥವಾ ಅಂಪೈರ್ |

| | |
|---|---|
| is specific provision otherwise in the Laws, any runs for penalties awarded to either side shall be scored. Note however the provisions of Laws 23.3 (Leg byes not to be awarded) and 28.3 (Protective helmets belonging to the fielding side).<br>Additionally, the batting side shall be credited with, all runs completed by the batters before the incident or call of Dead ball and the run-in progress if the batters had already crossed at the instant of the incident<br>or call of Dead ball. Note specifically, however, the provisions of Law 41.5.8 (Deliberate distraction, deception or obstruction of batter). | ಡೆಡ್ ಬಾಲ್ ಎಂದು ಕರೆದಾಗ, ನಿಯಮಗಳಲ್ಲಿಯ ನಿರ್ದಿಷ್ಟ ಅವಕಾಶಗಳನ್ನು ಹೊರತುಪಡಿಸಿ, ಯಾವುದೇ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬಹುದು. ಆದರೂ ನಿಯಮ ೨೩.೩ (ಲೆಗ್ ಬೈ ಕೊಡಬಾರದು) ಮತ್ತು ೨೮.೩ (ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ), ಗಮನಿಸಿ.<br>ಇವುಗಳ ಜೊತೆಗೆ ದಾಂಡಿಗ ತಂಡದ ಓಟಗಳಿಗೆ,<br>ಡೆಡ್ ಬಾಲ್ ಎಂದು ಕರೆಯುವುದಕ್ಕೆ ಅಥವಾ ಕರೆಯುವ ಸಂದರ್ಭದ ಮೊದಲು ದಾಂಡಿಗರು ಪೂರ್ಣಗೊಳಿಸಿದ ಓಟಗಳನ್ನು<br>ಮತ್ತು ಡೆಡ್ ಬಾಲ್ ಎಂದು ಕರೆದಾಗ ಇಲ್ಲವೇ ಕರೆಯುವ ಸಂದರ್ಭದ ಮೊದಲು ಚಾಲ್ತಿಯಲ್ಲಿರುವ ಓಟದಲ್ಲಿ ದಾಂಡಿಗರು ಒಬ್ಬರನ್ನೊಬ್ಬರು ದಾಟಿದ್ದರೆ, ಆ ಓಟವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಆದರೂ, ನಿಯಮ ೪೧.೫.೮ (ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಚಿತ್ತ ಭ್ರಮಣೆ ಅಥವಾ ವಂಚಿಸುವುದು ಇಲ್ಲವೇ ಅಡ್ಡಿಪಡಿಸುವುದು) ರಲ್ಲಿಯ ನಿರ್ದಿಷ್ಟ ಅವಕಾಶಗಳನ್ನು ಗಮನಿಸಿ. |
| **18.10 Crediting of runs scored.**<br>Unless stated otherwise in any of the Laws,<br>18.10.1 if the ball is struck by the bat, all runs scored by the batting side shall be credited to the striker, except for the following: | **೧೮.೧೦ ಗಳಿಸಿದ ಓಟಗಳನ್ನು ಗಣನೆಗೆ ತೆಗೆದುಕೊಳ್ಳುವುದು**<br>ಯಾವುದೇ ನಿಯಮಗಳಲ್ಲಿ ಅನ್ಯಥಾ ತಿಳಿಸಿರದ ಹೊರತು,<br>೧೮.೧೦.೧ ಚೆಂಡನ್ನು ದಾಂಡಿನಿಂದ ಹೊಡೆದಿದ್ದರೆ, ಈ ಕೆಳಗಿನ ಸಂದರ್ಭಗಳನ್ನು ಹೊರತು ಪಡಿಸಿ, ದಾಂಡಿಗ ತಂಡವು |

| | |
|---|---|
| - an award of 5 Penalty runs, which shall be scored as Penalty runs<br>- the one run penalty for a No ball, which shall be scored as a No balls extra.<br>18.10.2 if the ball is not struck by the bat, runs shall be scored as Penalty runs, Byes, Leg byes, No ball extras or Wides as the case may be. If Byes or Leg byes accrue from a No ball, only the one run penalty for No ball shall be scored as such, and the remainder as Byes or Leg byes as appropriate.<br><br>18.10.3 the bowler shall be debited with:<br>- all runs scored by the striker<br>- all runs scored as No ball extras<br>- all runs scored as Wides. | ಗಳಿಸಿದ ಒಟಗಳನ್ನು ಚೆಂಡನ್ನು ಎದುರಿಸಿದ ದಾಂಡಿಗನ ಲೆಕ್ಕಕ್ಕೆ ಸೇರಿಸಬೇಕು.<br>➢ ಅನುದಾನಿಸಿದ ದಂಡದ ೫ ಒಟಗಳನ್ನು, ದಂಡದ ಒಟಗಳೆಂದೇ ಲೆಕ್ಕಿಸಬೇಕು.<br>➢ ನೋ ಬಾಲ್ ಪ್ರಯುಕ್ತದ ದಂಡದ ೧ ಒಟವನ್ನು ನೋ ಬಾಲ್ ಅತಿರಿಕ್ತ ಒಟ ಎಂದೇ ಲೆಕ್ಕಿಸಬೇಕು.<br>೧೮.೧೦.೨ ಚೆಂಡನ್ನು ದಾಂಡಿನಿಂದ ಹೊಡೆದಿರದಿದ್ದರೆ, ಒಟಗಳನ್ನು ಸಂದರ್ಭಾನುಸಾರ ದಂಡದ ಒಟಗಳು, ಬೈಸ್, ಲೆಗ್ ಬೈಸ್, ನೋ ಬಾಲ್ ಅತಿರಿಕ್ತ ಅಥವಾ ವೈಡ್ ಎಂದು ಲೆಕ್ಕಿಸಬೇಕು. ನೋ ಬಾಲ್ ಎಸೆತದಿಂದ ಬೈಸ್ ಇಲ್ಲವೇ ಲೆಗ್ ಬೈಸ್ ಒಟಗಳು ಲಭ್ಯವಾದರೆ ಒಂದು ಒಟವನ್ನು ನೋ ಬಾಲ್ ಎಂದು ಹಾಗೂ ಉಳಿದವುಗಳನ್ನು ಬೈಸ್ ಅಥವಾ ಲೆಗ್ ಬೈಸ್ ಯಾವುದು ಸರಿಯೋ ಹಾಗೇ ಲೆಕ್ಕಿಸಬೇಕು.<br>೧೮.೧೦.೩ ಬೌಲರ್ ಲೆಕ್ಕಕ್ಕೆ ಒಟಗಳನ್ನು ಈ ಕೆಳಗಿನಂತೆ ಪರಿಗಣಿಸಬೇಕು.<br>➢ ಚೆಂಡನ್ನು ಎದುರಿಸಿದ ದಾಂಡಿಗನು ಗಳಿಸಿದ ಎಲ್ಲಾ ಒಟಗಳು.<br>➢ ನೋ ಬಾಲ್ ಅತಿರಿಕ್ತ ಎಂದು ಗಳಿಸಿದ ಎಲ್ಲಾ ಒಟಗಳು.<br>➢ ವೈಡ್ ಎಂದು ಗಳಿಸಿದ ಎಲ್ಲಾ ಒಟಗಳು. |
| **18.11 Batter returning to original end**<br>18.11.1 When the striker is dismissed in any of the circumstances in 18.11.1.1 to 18.11.1.6, the not out batter shall return to his/her original end. | **೧೮.೧೧ ದಾಂಡಿಗರು ತಾವು ಬಿಟ್ಟ ತುದಿಗೆ ಮರಳಿ ಬರುವುದು.**<br>೧೮.೧೧.೧ ಚೆಂಡನ್ನು ಎದುರಿಸುವ ದಾಂಡಿಗ ೧೮.೧೧.೧.೧ದಿಂದ ೧೮.೧೧.೧.೬ ರ ಸಂದರ್ಭಗಳನ್ವಯ ಔಟ್ ಆದಾಗ, ಔಟ್ ಆಗದಿರುವ ದಾಂಡಿಗ ತನ್ನ ಮೂಲ ತುದಿಗೆ ಮರಳಿ ಬರಬೇಕು. |

| | |
|---|---|
| 18.11.1.1 A dismissal in the circumstances of Law 25.6.4 or 25.6.5 (Dismissal and conduct of a batter and his/her runner). | ೧೮.೧೧.೧.೧ ನಿಯಮ ೨೫.೬.೪ ಅಥವಾ ೨೫.೬.೫ (ಒಬ್ಬ ದಾಂಡಿಗ ಮತ್ತು ಅವನ/ಅವಳ ಬದಲಿ ಓಟಗಾರನ/ಓಟಗಾರಳ ವರ್ತನೆ ಮತ್ತು ಔಟ್ ಆಗುವುದು.) |
| 18.11.1.2 Bowled. | ೧೮.೧೧.೧.೨ ಬೌಲ್ಡ್. |
| 18.11.1.3 Stumped. | ೧೮.೧೧.೧.೩ ಸ್ಟಂಪ್ಡ್. |
| 18.11.1.4 Hit the ball twice. | ೧೮.೧೧.೧.೪ ಚೆಂಡನ್ನು ಎರಡು ಸಾರಿ ಹೊಡೆಯುವುದು. |
| 18.11.1.5 LBW. | ೧೮.೧೧.೧.೫ ಎಲ್. ಬಿ. ಡಬ್ಲ್ಯು. |
| 18.11.1.6 Hit wicket. | ೧೮.೧೧.೧.೬ ಹಿಟ್ ವಿಕೆಟ್. |
| 18.11.1.7 Caught | ೧೮.೧೧.೧.೭ ಬುತ್ತಿ ಹಿಡಿದು (ಕ್ಯಾಚ್) |
| 18.11.1.8 Obstructing the field, where the obstruction or distraction prevents the striker being out Caught. | ೧೮.೧೧.೧.೮ ಕ್ಷೇತ್ರ ರಕ್ಷಣೆಗೆ ಅಡಚಣೆ, ಅಡಚಣೆ ಅಥವಾ ಚಿತ್ತ ಭ್ರಮಣೆ, ಚೆ0ಡನ್ನೆದಿರುಸುವ ದಾ0ಡಿಗ ಬುತ್ತಿ (ಕ್ಯಾಚ್) ಹಿಡಿದು ಔಟ್ ಆಗುವುದಕ್ಕೆ ಆದರೆ. |
| 18.11.2 The batters shall return to their original ends in any of the cases of 18.11.2.1 to 18.11.2.3. | ೧೮.೧೧.೨ ೧೮.೧೧.೨.೧ ರಿಂದ ೧೮.೧೧.೨.೩ರ ಸಂದರ್ಭಗಳಲ್ಲಿ ದಾಂಡಿಗರು ತಮ್ಮ ಮೂಲ ತುದಿಗೆ ಮರಳಿ ಬರಬೇಕು. |
| 18.11.2.1 A boundary is scored unless as a result of an overthrow or wilful act of a fielder (see Law 19.8). | ೧೮.೧೧.೨.೧ ಬೌಂಡರಿ ಗಳಿಸಿದಾಗ ಅದು ಮೇರೆ ಮೀರಿದ ಎಸೆತ ಇಲ್ಲವೇ ಕ್ಷೇತ್ರರಕ್ಷಕನ ಉದ್ದೆಶಪೂರಿತ ಕೃತ್ಯ (ನಿಯಮ ೧೯.೮ ನೋಡಿ)ದಿಂದ ಬರದ ಹೊರತು. |
| 18.11.2.2 Runs are disallowed for any reason. | ೧೮.೧೧.೨.೨ ಯಾವುದೇ ಕಾರಣಕ್ಕಾಗಿ ಓಟಗಳನ್ನು ರದ್ದುಗೊಳಿಸಿದಾಗ. |
| 18.11.2.3 A decision by the batters at the wicket to do so, under Law 41.5 (Deliberate distraction, deception or obstruction of batter). | ೧೮.೧೧.೨.೩ ಆಟದ ಪಟ್ಟಿಯ ಮೇಲಿರುವ ದಾಂಡಿಗನು ನಿಯಮ ೪೧.೫ (ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಚಿತ್ತ |

| | |
|---|---|
| | ಭ್ರಮಣೆ ಅಥವಾ ವಂಚಿಸುವುದು ಇಲ್ಲವೇ ಅಡ್ಡಿಪಡಿಸುವುದು)ರ ಅನ್ವಯ ಹಾಗೇ ನಿರ್ಧರಿಸಿದಲ್ಲಿ. |
| **18.12 Batter returning to wicket he/she has left**<br>18.12.1 When a batter is dismissed in any of the ways in 18.12.1.1 to 18.12.1.3, the not out batter shall return to the wicket he/she has left but only if the batters had not already crossed at the instant of the incident causing the dismissal. If runs are to be disallowed, however, the not out batter shall return to his/her original end.<br>18.12.1.1 Obstructing the field where the obstruction or distraction does not prevent the striker being out Caught.<br>18.12.1.೨ Run out other than under Law 25.6.4 or 25.6.5 (Dismissal and conduct of a batter and his/her runner).<br>18.12.2 If, while a run is in progress, the ball becomes dead for any reason other than the dismissal of a batter, the batters shall return to the wickets they had left, but only if they had not already crossed in running when the ball became dead. If, however, any of the circumstances of 18.11.2.1 to 18.11.2.3 apply, the batters shall return to their original ends. | **೧೮.೧೨ ದಾಂಡಿಗರು ತಾವು ಬಿಟ್ಟ ವಿಕೆಟ್‌ಗೆ ಮರಳಿ ಬರುವುದು**<br>೧೮.೧೨.೧ ದಾಂಡಿಗನೊಬ್ಬನು ೧೮..೧೨.೧ರಿಂದ ೧೮.೧೨.೬ರ ಅನ್ವಯ ಔಟ್ ಆದರೆ, ಔಟ್ ಆಗದೇ ಇರುವ ದಾಂಡಿಗನು ತಾನು ಬಿಟ್ಟ **ವಿ**ಕೆಟ್‌ಗೆ ಒಬ್ಬ ದಾಂಡಿಗನು ಔಟ್ ಆಗುವ ಕ್ಷಣದಲ್ಲಿ ಪರಸ್ಪರ ದಾಟಿರದಿದ್ದರೆ ಮರಳಿ ಬರಬೇಕು. ಒಂದು ವೇಳೆ ಓಟಗಳನ್ನು ರದ್ದುಪಡಿಸಿದರೂ ಔಟ್ ಆಗದೇ ಇರುವ ದಾಂಡಿಗ ತಾನು ಬಿಟ್ಟ ತುದಿಗೆ ಮರಳಿ ಬರಬೇಕು.<br>೧೮.೧೨.೧.೧ ಕ್ಷೇತ್ರ ರಕ್ಷಣೆಗೆ ಅಡಚಣೆ, ಅಡಚಣೆ ಅಥವಾ ಚಿತ್ತ ಭ್ರಮಣೆ, ಚೆಂಡನ್ನೆದಿರುಸುವ ದಾಂಡಿಗ ಬುತ್ತಿ (ಕ್ಯಾಚ್) ಹಿಡಿದು ಔಟ್ ಆಗುವುದಕ್ಕೆ ಆಗಿರದಿದ್ದರೆ.<br>೧೮.೧೨.೧.೨ ನಿಯಮ ೨೫.೬.೪ ಇಲ್ಲವೇ ೨೫.೬.೫ (ಒಬ್ಬ ದಾಂಡಿಗ ಮತ್ತು ಅವನ/ಅವಳ ಬದಲಿ ಓಟಗಾರನ/ಅವಳ ವರ್ತನೆ ಮತ್ತು ಔಟ್ ಆಗುವುದು.) ಗಳನ್ನು ಹೊರತುಪಡಿಸಿ ರನ್ ಔಟ್ ಆಗುವುದು.<br>೧೮.೧೨.೨ ಓಟವು ಪ್ರಗತಿಯಲ್ಲಿದ್ದಾಗ, ದಾಂಡಿಗನು ಔಟ್ ಆದದ್ದನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕಾಗಿ ಚೆಂಡು ಡೆಡ್ ಆದರೆ, ಆ ಕ್ಷಣದಲ್ಲಿ ದಾಂಡಿಗರು ಪರಸ್ಪರ ಒಬ್ಬರನ್ನೊಬ್ಬರು ದಾಟಿರದಿದ್ದರೆ, ತಾವು ಬಿಟ್ಟ ತುದಿಗೆ ಮರಳಿ ಬರಬೇಕು. ಆದಾಗ್ಯೂ, ೧೮.೧೧.೨.೧ ರಿಂದ ೧೮.೧೧.೨.೩ರ ಸಂದರ್ಭಗಳು |

| | |
|---|---|
| | ಅನ್ವಯಿಸಿದರೆ, ದಾಂಡಿಗರು ತಮ್ಮ ಮೂಲ ತುದಿಗೆ ಮರಳಬೇಕು. |
| **LAW 19 BOUNDARIES** | **ನಿಯಮ ೧೯ ಬೌಂಡರಿಗಳು** |
| 19.1 **Determining the boundary of the field of play.**<br>19.1.1 Before the toss, the umpires shall determine the boundary of the field of play, which shall be fixed for the duration of the match. See Law 2.3.1.4 (Consultation with captains).<br>19.1.2 The boundary shall be determined such that no part of any sight-screen will, at any stage of the match, be within the field of play. | **೧೯.೧ ಆಟದ ಮೈದಾನದ ಸೀಮಾ ರೇಖೆಯನ್ನು ನಿರ್ಧರಿಸುವುದು**<br>೧೯.೧.೧ ನಾಣ್ಯಚಿಮ್ಮುವ ಮೊದಲು ಅಂಪೈರ್‌ಗಳು ಇಡೀ ಪಂದ್ಯದ ಅವಧಿಗೆ ಆಟದ ಮೈದಾನದ ಸೀಮಾ (ಬೌಂಡರಿ) ರೇಖೆಯನ್ನು ನಿಗದಿಪಡಿಸಬೇಕು. ನಿಯಮ ೨.೩.೧.೪ ಗಮನಿಸಿ.<br>೧೯.೧.೨ ಸೀಮಾ ರೇಖೆಯನ್ನು ಹೇಗೆ ನಿರ್ಧರಿಸಬೇಕೆಂದರೆ, ನೋಟದ ಪರದೆಯ ಯಾವುದೇ ಭಾಗವು ಪಂದ್ಯದ ಯಾವುದೇ ಹಂತದಲ್ಲಿ ಸೀಮಾ ರೇಖೆಯ ಒಳಗಿರಬಾರದು. |
| **19.2 Identifying and marking the boundary.**<br>19.2.1 Wherever practicable, the boundary shall be marked by means of a continuous white line or by an object in contact with the ground.<br>19.2.2 If the boundary is marked by means of a white line,<br>19.2.2.1 the edge of the line nearest the pitch shall be the boundary.<br>19.2.2.2 an object such as a flag, post or board, used merely to highlight the position of a line marked on the ground, | **೧೯.೨ ಸೀಮಾ ರೇಖೆಯನ್ನು ಗುರುತಿಸುವುದು**<br>೧೯.೨.೧ ಸಾಧ್ಯವಿರುವೆಡೆಯಲ್ಲೆಲ್ಲ, ಬೌಂಡರಿ ರೇಖೆಯನ್ನು ಬಿಳಿಯ ಗೆರೆಯಿಂದ ಇಲ್ಲವೇ ಮೈದಾನದ ನೆಲಕ್ಕೆ ಸಂಪರ್ಕವಿರುವಂತೆ ಒಂದು ವಸ್ತುವಿನಿಂದ ಮೈದಾನದ ಇಡೀ ಉದ್ದಕ್ಕೆ ಗುರುತಿಸಬೇಕು.<br>೧೯.೨.೨ ಸೀಮಾ ರೇಖೆಯನ್ನು ಬಿಳಿಗೆರೆಯಿಂದ ಗುರುತು ಮಾಡಿದ್ದರೆ,<br>೧೯.೨.೧ ಆಟದ ಪಟ್ಟಿಗೆ ಹತ್ತಿರವಾಗಿರುವ ರೇಖೆಯ ಅಂಚು ಬೌಂಡರಿಯಾಗಿರುತ್ತದೆ.<br>೧೯.೨.೨ ಸೀಮಾ ರೇಖೆಯನ್ನು ಸ್ಪಷ್ಟಪಡಿಸಲು ಬಾವುಟ, ಘೂಟ ಅಥವಾ ಫಲಕವನ್ನು ಉಪಯೋಗಿಸಿದರೆ, ಅದನ್ನು ಸೀಮಾ |

must be placed beyond the boundary and is not itself to be regarded as being the boundary.

19.2.3 If the boundary is marked by means of an object that is in contact with the ground the boundary will be the edge of the grounded part of the object which is nearest the pitch.

19.2.4 Where there is no white line or object providing continuous marking, objects such as flags, posts or boards may be used to mark specific points on the boundary. The boundary shall be the imaginary straight line on the ground joining the two nearest marked points.

19.2.5 A boundary that cannot be identified as in 19.2.2, 19.2.3 or 19.2.4 shall be determined by the umpires before the toss.

19.2.6 An obstacle within the field of play, other than as in 19.2.7, shall not be regarded as a boundary unless so determined by the umpires before the toss. See Law 2.3.1.4 (Consultation with captains).

ರೇಖೆಯ ಹೊರ ಅಂಚಿನ ಆಚೆ ಇಡತಕ್ಕದ್ದು ಮತ್ತು ಅದನ್ನೇ ಬೌಂಡರಿ ಎಂದು ಪರಿಗಣಿಸಬಾರದು.

೧೯.೨.೩ ಬೌಂಡರಿಯನ್ನು ಮೈದಾನದ ನೆಲಕ್ಕೆ ಸಂಪರ್ಕವಿರುವಂತೆ ಒಂದು ವಸ್ತುವಿನಿಂದ ಗುರುತಿಸಿದ್ದರೆ, ಆಟದ ಪಟ್ಟಿಗೆ ಹತ್ತಿರವಿರುವ ಆ ವಸ್ತುವಿನ ನೆಲಕ್ಕೆ ಸಂಪರ್ಕಿಸಿರುವ ಅಂಚು ಬೌಂಡರಿ ಆಗಿರುತ್ತದೆ.

೧೯.೨.೪ ಮೈದಾನದ ಇಡೀ ಉದ್ದಕ್ಕೆ ಬೌಂಡರಿಯನ್ನು ಗುರುತಿಸಲು ಬಿಳಿ ಗೆರೆ ಅಥವಾ ವಸ್ತುವನ್ನು ಉಪಯೋಗಿಸಿರದಿದ್ದರೆ, ಅಲ್ಲಲ್ಲಿ ನಿರ್ದಿಷ್ಟ ಸ್ಥಳಗಳನ್ನು ಗುರುತಿಸಲು ಬಾವುಟ, ಘೂಟ ಅಥವಾ ಫಲಕವನ್ನು ಉಪಯೋಗಿಸಬಹುದು. ಇಂತಹ ಸಂದರ್ಭದಲ್ಲಿ ಬೌಂಡರಿಯು ಹೀಗೆ ಗುರುತಿಸಿದ ಎರಡು ನಿರ್ದಿಷ್ಟ ಗುರುತುಗಳನ್ನು ಜೋಡಿಸುವ ಕಾಲ್ಪನಿಕ ಸರಳ ರೇಖೆಯಾಗಿರುತ್ತದೆ.

೧೯.೨.೫ ಒಂದು ವೇಳೆ ಬೌಂಡರಿಯನ್ನು ೧೯.೨.೨, ೧೯.೨.೩ ಮತ್ತು ೧೯.೨.೪ರಲ್ಲಿರುವಂತೆ ಗುರುತು ಮಾಡಲು ಆಗದಿದ್ದರೆ, ಅಂಪೈರ್‌ಗಳು ನಾಣ್ಯ ಚಿಮ್ಮುವ ಮೊದಲು ಬೌಂಡರಿ ಯಾವುದೆಂದು ನಿರ್ಧರಿಸಬೇಕು.

೧೯.೨.೬ ಆಟದ ಮೈದಾನದಲ್ಲಿರುವ ಅಡೆತಡೆಗಳನ್ನು ೧೯.೨.೭ನಲ್ಲಿ ತಿಳಿಸಿರುವುದನ್ನು ಹೊರತುಪಡಿಸಿ ಬೌಂಡರಿ ಎಂದು ನಾಣ್ಯ ಚಿಮ್ಮುವ ಮೊದಲು ನಿರ್ಧರಿಸಿರದಿದ್ದರೆ ಅದನ್ನು ಬೌಂಡರಿ

| | |
|---|---|
| | ಎಂದು ಪರಿಗಣಿಸಬಾರದು. ನಿಯಮ ೨.೩.೧.೪ (ನಾಯಕರೊಡನೆ ಸಮಾಲೋಚನೆ) ಗಮನಿಸಿ. |
| 19.2.7 A person, animal or object coming onto the field of play while the ball is in play shall not be regarded as a boundary unless the umpires determine otherwise at the time that contact between the ball and such a person, animal or object is made. The decision shall be made for each separate occurrence. See also Law 20.4.2.12 (Umpire calling and signalling Dead ball). | ೧೯.೨.೭ ಚೆಂಡು ಆಟದಲ್ಲಿದ್ದಾಗ ಒಬ್ಬ ವ್ಯಕ್ತಿ ಅಥವಾ ಪ್ರಾಣಿ ಅಥವಾ ವಸ್ತು ಆಟದ ಮೈದಾನದೊಳಗೆ ಬಂದು ಚೆಂಡಿನ ಸಂಪರ್ಕದಲ್ಲಿ ಬಂದರೆ, ಚೆಂಡು ಒಬ್ಬ ವ್ಯಕ್ತಿ ಅಥವಾ ಪ್ರಾಣಿ ಅಥವಾ ವಸ್ತುವಿನ ಸಂಪರ್ಕಕ್ಕೆ ಬಂದ ಕ್ಷಣದಲ್ಲಿ ಅಂಪೈರ್ ಬೌಂಡರಿ ಎಂದು ನಿರ್ಧರಿಸದ ಹೊರತು ಬೌಂಡರಿ ಎಂದು ಪರಿಗಣಿಸಬಾರದು. ಅಂಪೈರ್ ಪ್ರತಿ ಸಂದರ್ಭವನ್ನು ಪ್ರತ್ಯೇಕವಾಗಿ ಪರಿಗಣಿಸಿ ನಿರ್ಧರಿಸಬೇಕು. ನಿಯಮ ೨೦.೪.೨.೧೨ (ಅ0ಪೈರ್ ಡೆಡ್ ಬಾಲ್ ಕರೆದು ಸನ್ನೆ ಮಾಡುವುದು) ಸಹ ನೋಡಿರಿ |
| **19.3 Restoring the boundary.**<br>If a solid object used to mark the boundary is disturbed for any reason, then<br>19.3.1 the boundary shall be considered to be in its original position.<br>19.3.2 the object shall be returned to its original position as soon as is practicable; if play is taking place, this shall be as soon as the ball is dead.<br>19.3.3 if some part of a fence or other marker has come within the field of play, that part shall be removed from the field | **೧೯.೩ ಸೀಮಾ ರೇಖೆಯನ್ನು ಸ್ವಸ್ಥಾನಕ್ಕೆ ತರುವುದು**<br>ಬೌಂಡರಿಯನ್ನು ಗುರುತಿಸಲು ಉಪಯೋಗಿಸಿದ ಘನ ವಸ್ತು ಯಾವುದೇ ಕಾರಣಕ್ಕಾಗಿ ಸ್ಥಾನಪಲ್ಲಟವಾದಾಗ;<br>೧೯.೩.೧ ಘನ ವಸ್ತು ಇದ್ದ ಮೂಲ ಸ್ಥಾನವೇ ಬೌಂಡರಿ.<br>೧೯.೩.೨ ಆ ಘನ ವಸ್ತುವನ್ನು ಪ್ರಾಯೋಗಿಕವಾಗಿ ಎಷ್ಟು ಶೀಘ್ರವೋ ಅಷ್ಟು ಶೀಘ್ರವಾಗಿ ಸ್ವಸ್ಥಾನಕ್ಕೆ ಮರಳಿಸಬೇಕು. ಒಂದು ವೇಳೆ ಆಟ ಚಾಲ್ತಿಯಲ್ಲಿದ್ದರೆ ಚೆಂಡು ಡೆಡ್ ಆದಮೇಲೆ ಮರಳಿಸಬೇಕು.<br>೧೯.೩.೩ ಬೇಲಿಯ ಯಾವುದೇ ಭಾಗ ಇಲ್ಲವೇ ಇತರ ಗುರುತುಗಳು ಮೈದಾನದ ಒಳಗೆ ಬಂದರೇ, ಆ ಭಾಗವನ್ನು ಪ್ರಾಯೋಗಿಕವಾಗಿ ಎಷ್ಟು ಶೀಘ್ರವೋ ಅಷ್ಟು ಶೀಘ್ರವಾಗಿ |

| | |
|---|---|
| of play as soon as is practicable; if play is taking place, this shall be as soon as the ball is dead. | ಮೈದಾನದ ಹೊರ ಹಾಕಬೇಕು. ಒಂದು ವೇಳೆ ಆಟ ಚಾಲ್ತಿಯಲ್ಲಿದ್ದರೆ ಚೆಂಡು ಡೆಡ್ ಆದಮೇಲೆ ಹೊರ ಹಾಕಬೇಕು. |
| **19.4 Ball grounded beyond the boundary.**<br>19.4.1 The ball in play is grounded beyond the boundary if it touches.<br>- the boundary or any part of an object used to mark the boundary.<br>- the ground beyond the boundary,<br>- any object that is grounded beyond the boundary.<br><br>19.4.2 The ball in play is to be regarded as being grounded beyond the boundary if,<br>- a fielder, grounded beyond the boundary as in 19.5, touches the ball,<br>- a fielder, after catching the ball within the boundary, becomes grounded beyond the boundary while in contact with the ball, before completing the catch. | **೧೯.೪ ಚೆಂಡು ಬೌಂಡರಿಯಾಚೆ ನೆಲಕ್ಕೆ ತಾಗುವುದು**<br>೧೯.೪.೧ ಆಟದಲ್ಲಿರುವ ಚೆಂಡು ಬೌಂಡರಿಯಾಚೆ ನೆಲಕ್ಕೆ ತಾಗಿದೆ ಎಂದು ಈ ಕೆಳಗಿನ ಸಂದರ್ಭಗಳಲ್ಲಿ ಪರಿಗಣಿಸಬೇಕು.<br>➢ ಬೌಂಡರಿ ಅಥವಾ ಬೌಂಡರಿಯನ್ನು ಗುರುತು ಮಾಡಲು ಉಪಯೋಗಿಸುವ ಯಾವುದೇ ವಸ್ತುವಿನ ಸಂಪರ್ಕಕ್ಕೊಳಗಾದರೆ,<br>➢ ಬೌಂಡರಿಯಾಚೆ ಇರುವ ನೆಲದ ಸಂಪರ್ಕಕ್ಕೊಳಗಾದರೆ,<br>➢ ಬೌಂಡರಿಯಾಚೆ ನೆಲಕ್ಕೆ ಸಂಪರ್ಕಿಸಿರುವ ಯಾವುದೇ ವಸ್ತುವಿನ ಸಂಪರ್ಕಕ್ಕೊಳಗಾದರೆ,<br>೧೯.೪.೨ ಆಟದಲ್ಲಿರುವ ಚೆಂಡು ಈ ಕೆಳಗಿನ ಸಂದರ್ಭಗಳಲ್ಲಿ ಬೌಂಡರಿಯಾಚೆ ನೆಲಕ್ಕೆ ತಾಗಿದಂತೆ;<br>➢ ಕ್ಷೇತ್ರ ರಕ್ಷಕ ೧೯.೫ರಲ್ಲಿ ತಿಳಿಸಿರುವಂತೆ ಬೌಂಡರಿಯಾಚೆಯ ನೆಲದ ಸಂಪರ್ಕದಲ್ಲಿದ್ದಾಗ ಚೆಂಡನ್ನು ಸಂಪರ್ಕಿಸಿದರೆ.<br>➢ ಕ್ಷೇತ್ರ ರಕ್ಷಕ ಬೌಂಡರಿಯೊಳಗೆ ಬುತ್ತಿ ಹಿಡಿದು, ಬುತ್ತಿಯ ಕ್ರಿಯೆ ಯನ್ನು ಪೂರ್ತಿಗೊಳಿಸುವ ಮೊದಲು ಚೆಂಡಿನೊಡನೆ ಬೌಂಡರಿಯಾಚೆಯ ನೆಲದ ಸಂಪರ್ಕಕ್ಕೆ ಬಂದರೆ. |
| **19.5 Fielder grounded beyond the boundary.**<br>19.5.1 A fielder is grounded beyond the boundary if some part of his/her person is in contact with any of the following: | **೧೯.೫ ಕ್ಷೇತ್ರ ರಕ್ಷಕನು ಬೌಂಡರಿಯಾಚೆ ನೆಲದ ಸಂಪರ್ಕದಲ್ಲಿರುವುದು**<br>೧೯.೫.೧ ಕ್ಷೇತ್ರ ರಕ್ಷಕನ/ರಕ್ಷಕಳ ದೇಹದ ಯಾವುದೇ ಭಾಗ ಕೆಳಗಿನ ಯಾವುದಾದರೊಂದಿಗೆ ಸಂಪರ್ಕಿಸಿದರೆ ಅವನು/ಅವಳು |

| | |
|---|---|
| - the boundary or any part of an object used to mark the boundary,<br>- the ground beyond the boundary,<br>- any object that is in contact with the ground beyond the boundary,<br>- another fielder who is grounded beyond the boundary, if the umpire considers that it was the intention of either fielder that the contact should assist in the fielding of the ball.<br>19.5.2 A fielder who is not in contact with the ground is considered to be grounded beyond the boundary if his/her final contact with the ground, before his/her first contact with the ball after it has been delivered by the bowler, was not entirely within the boundary. | ಬೌಂಡರಿಯಾಚೆ ಇದ್ದಂತೆ.<br>– ಬೌಂಡರಿ ಅಥವಾ ಬೌಂಡರಿಯನ್ನು ಗುರುತಿಸಲು ಉಪಯೋಗಿಸುವ ಯಾವುದೇ ವಸ್ತು.<br>– ಬೌಂಡರಿಯಾಚೆಯ ನೆಲ.<br>– ಬೌಂಡರಿಯಾಚೆ ನೆಲಕ್ಕೆ ಸಂಪರ್ಕಿಸಿರುವ ಯಾವುದೇ ವಸ್ತು.<br>– ಬೌಂಡರಿಯಾಚೆ ನೆಲದ ಸಂಪರ್ಕದಲ್ಲಿರುವ ಬೇರೊಬ್ಬ ಕ್ಷೇತ್ರ ರಕ್ಷಕನ ಸಂಪರ್ಕದಲ್ಲಿ ಬಂದರೆ ಮತ್ತು ಈ ಕೃತ್ಯ ಅಂಪೈರ್ ಅಭಿಪ್ರಾಯದಲ್ಲಿ ಯಾವುದೇ ಕ್ಷೇತ್ರ ರಕ್ಷಕನ ಉದ್ದೇಶ ಕ್ಷೇತ್ರ ರಕ್ಷಣೆಗೆ ಸಹಾಯವಾಗುತ್ತೆಂದಾದರೆ.<br>೧೯.೫.೨ ಬೌಂಡರಿ ಒಳಗೆ ಇರುವ ಕ್ಷೇತ್ರ ರಕ್ಷಕ, ಬೌಲರ್ ಚೆಂಡನ್ನು ಬೌಲ್ ಮಾಡಿದ ನಂತರ, ಚೆಂಡಿನ ಜೊತೆಗಿನ ಅವನ/ಅವಳ ಮೊದಲ ಸಂಪರ್ಕದ ಮುಂಚೆ ಅವನ/ಅವಳ ನೆಲದ ಅಂತಿಮ ಸಂಪರ್ಕವು ಬೌಂಡರಿಯೊಳಗೆ ಸಂಪೂರ್ಣವಾಗಿ ಇಲ್ಲದಿದ್ದರೆ, ಬೌಂಡರಿಯಾಚೆ ನೆಲದ ಸಂಪರ್ಕದಲ್ಲಿದ್ದಾನೆಂದು ಪರಿಗಣಿಸಬೇಕು |
| **19.6 Boundary allowances**<br>19.6.1 Before the toss the umpires shall determine the runs to be allowed for boundaries with both captains. In deciding the allowances, the umpires and captains shall be guided by the prevailing custom of the ground. | **೧೯.೬ ಬೌಂಡರಿ ಗಳಿಕೆ**<br>೧೯.೬.೧ ನಾಣ್ಯ ಚಿಮ್ಮುವ ಮೊದಲು ಅಂಪೈರ್‌ಗಳು, ಇಬ್ಬರೂ ನಾಯಕರೊಡಗೂಡಿ ಬೌಂಡರಿ ಬಾರಿಸಿದಾಗ ಕೊಡುವ ಓಟಗಳ ಸಂಖ್ಯೆಯನ್ನು ನಿರ್ಧರಿಸಬೇಕು. ಹೀಗೆ ನಿರ್ಧರಿಸುವಾಗ ಅಂಪೈರ್‌ಗಳು ಮತ್ತು ನಾಯಕರು ಮೈದಾನದಲ್ಲಿ ಅನುಸರಿಸುವ ಪದ್ಧತಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. |

| | |
|---|---|
| 19.6.2 Unless determined differently under 19.6.1, 6 runs shall be allowed for a boundary 6; and 4 runs for a boundary 4. See also 19.7. | ೧೯.೬.೨ ೧೯.೬.೧ರ ಅನ್ವಯ ಬೇರೆ ರೀತಿಯಾಗಿ ಒಪ್ಪಂದ ಆಗಿರದ ಹೊರತು, ಬೌಂಡರಿ ೬ ಗೆ ೬ ಒಟಗಳನ್ನು ಮತ್ತು ಬೌಂಡರಿ ೪ ಗೆ ೪ ಒಟಗಳನ್ನು ಕೊಡಬೇಕು. ೧೯.೭ನ್ನೂ ಸಹ ಗಮನಿಸಿ. |
| **19.7 Runs scored from boundaries.**<br>19.7.1 A Boundary 6 will be scored if and only if the ball has been struck by the bat and is first grounded beyond the boundary without having been in contact with the ground within the field of play. This shall apply even if the ball has previously touched a fielder.<br>19.7.2 A Boundary 4 will be scored when a ball that is grounded beyond the boundary.<br>- whether struck by the bat or not, was first grounded within the boundary, or<br>- has not been struck by the bat.<br>19.7.3 When a boundary is scored, the batting side, except in the circumstances of 19.8, shall be awarded whichever is the greater of<br>19.7.3.1 the allowance for the boundary<br>19.7.3.2 the runs completed by the batters together with the run-in progress if they had already crossed at the instant the boundary is scored. | **೧೯.೭ ಬೌಂಡರಿಗಳಿಂದ ಒಟಗಳ ಗಳಿಕೆ**<br>೧೯.೭.೧ ದಾಂಡಿನಿಂದ ಹೊಡೆಯಲ್ಪಟ್ಟ ಚೆಂಡು ಸೀಮಾ ರೇಖೆಯ ಒಳಗೆ ನೆಲಕ್ಕೆ ತಾಗದೆ ಸೀಮಾ ರೇಖೆಯ ಹೊರಗೆ ಮೊದಲ ಪುಟಿಗೆಯಾದಲ್ಲಿ ಬೌಂಡರಿ ೬ ಗಳಿಕೆಯಾದಂತೆ. ಇದು, ಚೆಂಡು ಮೊದಲೇ ಯಾವುದೇ ಕ್ಷೇತ್ರ ರಕ್ಷಕನಿಗೆ ತಗಲಿದ್ದರೂ ಸಹ ಅನ್ವಯಿಸುತ್ತದೆ.<br>೧೯.೭.೨ ಚೆಂಡು ಸೀಮಾ ರೇಖೆಯ ಹೊರಗೆ ನೆಲಕ್ಕೆ ತಾಗಿದಾಗ ಬೌಂಡರಿ ೪ ಯಾವಾಗ ಗಳಿಕೆಯಾಗುತ್ತದೆಂದರೆ;<br>➢ ದಾಂಡಿನಿಂದ ಹೊಡೆದಿರಲಿ ಬಿಡಲಿ, ಸೀಮಾ ರೇಖೆಯ ಒಳಗೆ ನೆಲಕ್ಕೆ ತಾಗಿದ್ದರೆ,<br>➢ ದಾಂಡಿನಿಂದ ಹೊಡೆದಿರದಿದ್ದರೆ.<br>೧೯.೭.೩ ಬೌಂಡರಿ ಗಳಿಕೆಯಾದಾಗ ೧೯.೭.೮ರ ಸಂದರ್ಭಗಳನ್ನು ಹೊರತುಪಡಿಸಿ ಕೆಳಗಿನವುಗಳಲ್ಲಿ ಯಾವುದು ಹೆಚ್ಚೋ, ಆ ಒಟಗಳನ್ನು ಕೊಡಬೇಕು.<br>೧೯.೭.೩.೧ ಬೌಂಡರಿಗೆ ನಿರ್ಧರಿಸಿದ ಒಟಗಳು.<br>೧೯.೭.೩.೨ ಬೌಂಡರಿ ಗಳಿಸಿದ ಕ್ಷಣದಲ್ಲಿ ದಾಂಡಿಗರು ಪರಸ್ಪರರನ್ನು ದಾಟಿದ್ದರೆ ಚಾಲ್ತಿಯಲ್ಲಿರುವ ಒಟವನ್ನೂ ಸೇರಿ ಪೂರ್ತಿಗೊಳಿಸಿದ ಒಟಗಳು. |

| | |
|---|---|
| 19.7.4 When the runs in 19.7.3.2 exceed the boundary allowance they shall replace the boundary allowance for the purposes of Law 18.12.2 (Batter returning to wicket he/she has left).<br><br>19.7.5 The scoring of Penalty runs by either side is not affected by the scoring of a boundary. | ೧೯.೭.೪ ೧೯.೭.೩.೨ರ ಅನ್ವಯ ಗಳಿಸಿದ ಒಟಗಳು ಬೌಂಡರಿಗೆ ನಿರ್ಧರಿಸಿದ ಒಟಗಳಿಗಿಂತ ಹೆಚ್ಚಿಗಿದ್ದರೆ ಅವುಗಳನ್ನು ನಿಯಮ ೧೮.೧೨.೨(ದಾಂಡಿಗರು ತಾವು ಬಿಟ್ಟ ಘೂಟಗಳ ತುದಿಗೆ ಮರಳಿ ಬರುವುದು)ರ ಉದ್ದೇಶಕ್ಕಾಗಿ ಬೌಂಡರಿ ಬದಲಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು.<br><br>೧೯.೭.೫ ಬೌಂಡರಿ ಬಾರಿಸಿದಾಗ ಯಾವುದೇ ತಂಡ ಗಳಿಸಿದ ದಂಡದ ಒಟಗಳಿಗೆ ಧಕ್ಕೆ ಬರುವುದಿಲ್ಲ. |
| **19.8 Overthrow or wilful act of fielder**<br>If the boundary results from an overthrow or from the wilful act of a fielder, the runs scored shall be<br>any runs for penalties awarded to either side<br>and the allowance for the boundary<br>and the runs completed by the batters, together with the run-in progress if they had already crossed at the instant of the throw or act of the fielder.<br>Law 18.12.2 (Batter returning to wicket he/she has left) shall apply as from the instant of the throw or act of the fielder. | **೧೯.೮ ಮೇರೆ ಮೀರಿದ ಎಸೆತ ಅಥವಾ ಕ್ಷೇತ್ರ ರಕ್ಷಕರ ಉದ್ದೇಶ ಪೂರಿತ ಕೃತ್ಯ**<br>ಕ್ಷೇತ್ರ ರಕ್ಷಕರ ಮೇರೆ ಮೀರಿದ ಎಸೆತ ಅಥವಾ ಉದ್ದೇಶ ಪೂರಿತ ಕೃತ್ಯದಿಂದ ಬೌಂಡರಿ ಗಳಿಕೆಯಾದರೆ, ಗಳಿಸಿದ ಒಟಗಳು;<br>ಯಾವುದೇ ತಂಡಕ್ಕೆ ಅನುದಾನಿಸಿದ ದಂಡದ ಒಟಗಳು<br>ಮತ್ತು ಬೌಂಡರಿಗೆ ನಿರ್ಧರಿಸಿದ ಒಟಗಳು<br>ಮತ್ತು ಮೇರೆ ಮೀರಿದ ಎಸೆತದ ಇಲ್ಲವೇ ಕ್ಷೇತ್ರ ರಕ್ಷಕನ ಉದ್ದೇಶಪೂರಿತ ಕೃತ್ಯದ ಕ್ಷಣದಲ್ಲಿ ದಾಂಡಿಗರು ಒಬ್ಬರನ್ನೊಬ್ಬರು ದಾಟಿದ್ದರೆ ಚಾಲ್ತಿಯಲ್ಲಿರುವ ಒಟವನ್ನು ಸೇರಿ ಪೂರ್ತಿಗೊಳಿಸಿದ ಒಟಗಳು.<br>ನಿಯಮ ೧೮.೧೨.೨(ದಾಂಡಿಗರು ತಾವು ಬಿಟ್ಟ ಘೂಟಗಳ ತುದಿಗೆ ಮರಳಿ ಬರುವುದು)ನ್ನು ಎಸೆತದ ಇಲ್ಲವೇ ಕೃತ್ಯದ ಕ್ಷಣದಲ್ಲಿ ಅನ್ವಯಿಸಬೇಕು. |
| **LAW 20 DEAD BALL** | **ನಿಯಮ ೨೦ ಡೆಡ್ ಬಾಲ್** |
| **20.1 Ball is dead.**<br>20.1.1 The ball becomes dead when, | **೨೦.೧ ಬಾಲ್ ಡೆಡ್ ಆಗಿದೆ**<br>೨೦.೧.೧ ಬಾಲ್ ಡೆಡ್ ಯಾವಾಗ ಆಗುತ್ತದೆಂದರೆ. |

| | |
|---|---|
| 20.1.1.1 it is finally settled in the hands of the wicketkeeper or of the bowler. | ೨೦.೧.೧.೧ ಘೂಟ ರಕ್ಷಕ ಅಥವಾ ಬೌಲರ್ ಕೈಯಲ್ಲಿ ಅಂತಿಮವಾಗಿ ನೆಲೆಸಿದಾಗ. |
| 20.1.1.2 a boundary is scored. See Law 19.7 (Runs scored from boundaries). | ೨೦.೧.೧.೨ ಬೌಂಡರಿ ಬಾರಿಸಿದಾಗ ನಿಯಮ ೧೯.೭ (ಬೌಂಡರಿಗಳಿಂದ ಓಟಗಳ ಗಳಿಕೆ) ಗಮನಿಸಿ. |
| 20.1.1.3 a batter is dismissed. The ball will be deemed to be dead from the instant of the incident causing the dismissal. | ೨೦.೧.೧.೩ ದಾಂಡಿಗನು ಔಟ್ ಆದಾಗ. ಔಟ್ ಆಗಲು ಕಾರಣವಾದ ಘಟನೆಯ ಕ್ಷಣದಿಂದ ಬಾಲ್ ಡೆಡ್ ಎಂದು ಪರಿಗಣಿಸಬೇಕು. |
| 20.1.1.4 whether played or not it becomes trapped between the bat and person of a batter or between items of his/her clothing or equipment. | ೨೦.೧.೧.೪ ಆಡಿರಲಿ ಬಿಡಲಿ ಅದು ದಾಂಡು ಮತ್ತು ದಾಂಡಿಗನ ದೇಹದ ನಡುವೆ ಇಲ್ಲವೇ ಅವನ/ಅವಳ ಉಡಿಗೆ ಅಥವಾ ಉಪಕರಣಗಳ ನಡುವೆ ಸಿಕ್ಕಿಹಾಕಿಕೊಂಡರೆ. |
| 20.1.1.5 whether played or not it lodges in the clothing or equipment of a batter or the clothing of an umpire. | ೨೦.೧.೧.೫ ಆಡಿರಲಿ ಬಿಡಲಿ ಅದು ದಾಂಡಿಗನ ಉಡುಗೆಯಲ್ಲಿ ಅಥವಾ ಉಪಕರಣದಲ್ಲಿ ಅಥವಾ ಅಂಪೈರ್ ಉಡುಗೆಯಲ್ಲಿ ಸಿಕ್ಕಿಹಾಕಿಕೊಂಡರೆ. |
| 20.1.1.6 under either of Laws 24.4 (Player returning without permission) or 28.2 (Fielding the ball) there is an offence resulting in an award of Penalty runs. The ball shall not count as one of the over. | ೨೦.೧.೧.೬ ನಿಯಮ ೨೪.೪ (ಆಟಗಾರನು ಅನುಮತಿ ಇಲ್ಲದೇ ಹಿಂತಿರುಗುವುದು) ಅಥವಾ ೨೮.೨ (ಚೆಂಡಿನ ಕ್ಷೇತ್ರ ರಕ್ಷಣೆ) ಅನ್ವಯ ದಂಡದ ಓಟಗಳನ್ನು ಅನುದಾನಿಸಿದಾಗ. ಬೌಲ್ ಮಾಡಲ್ಪಟ್ಟ ಎಸೆತವನ್ನು ಆ ಓವರಿನ ಒಂದು ಎಸೆತವೆಂದು ಪರಿಗಣಿಸಬಾರದು. |
| 20.1.1.7 there is contravention of Law 28.3 (Protective helmets belonging to the fielding side). | ೨೦೧.೧.೭ ನಿಯಮ ೨೮.೩ (ಕ್ಷೇತ್ರ ರಕ್ಷಣೆ ತಂಡದ ಸುರಕ್ಷಾ ಶಿರಸ್ತ್ರಾಣ)ರ ಉಲ್ಲಂಘನೆ ಆದಾಗ. |
| 20.1.1.8 the match is concluded in any of the ways stated in Law 12.9 (Conclusion of match). | ೨೦.೧.೧.೮ ನಿಯಮ ೧೨.೯(ಪಂದ್ಯದ ಮುಕ್ತಾಯ)ರನ್ವಯ ಯಾವುದೇ ರೀತಿಯಲ್ಲಿ ಪಂದ್ಯ ಮುಗಿದಾಗ. |

| | |
|---|---|
| 20.1.2 The ball shall be considered to be dead when it is clear to the bowler’s end umpire that the fielding side and both batters at the wicket have ceased to regard it as in play. | ೨೦.೧.೨ ಕ್ಷೇತ್ರ ರಕ್ಷಣೆ ತಂಡ ಹಾಗೂ ಘೂಟಗಳ ಬಳಿ ಇರುವ ಇಬ್ಬರೂ ದಾಂಡಿಗರು ಚೆಂಡು ಆಟದಲ್ಲಿಲ್ಲ ಎಂದು ಭಾವಿಸಿದ್ದಾರೆ ಎಂದು ಬೌಲರ್ ತುದಿಯಲ್ಲಿರುವ ಅಂಪೈರರಿಗೆ ಸ್ಪಷ್ಟವಾದಾಗ, ಚೆಂಡನ್ನು ಡೆಡ್ ಎಂದು ಪರಿಗಣಿಸಬೇಕು. |
| **20.2 Ball finally settled.**<br>Whether the ball is finally settled or not is a matter for the umpire alone to decide. | **೨೦.೨ ಚೆಂಡು ಅಂತಿಮವಾಗಿ ಕೈ ಸೇರುವುದು**<br>ಚೆಂಡು ಅಂತಿಮವಾಗಿ ಕೈ ಸೇರಿದೆಯೋ ಇಲ್ಲವೋ ಎಂಬುದನ್ನು ಅಂಪೈರ್ ಮಾತ್ರ ನಿರ್ಧರಿಸಬೇಕು. |
| **20.3 Call of Over or Time**<br>Neither the call of Over (see Law 17.4), nor the call of Time (see Law 12.2) is to be made until the ball is dead, either under 20.1 or under 20.4. | **೨೦.೩ ಓವರ್ ಅಥವಾ “ಟೈಂ” ಕರೆಯುವುದು**<br>೨೦.೧ ಅಥವಾ ೨೦.೪ರ ಅನ್ವಯ ಚೆಂಡು ಡೆಡ್ ಆಗುವವರೆಗೆ ಓವರ್ (ನಿಯಮ ೧೭.೪ ಗಮನಿಸಿ) ಇಲ್ಲವೇ “ಟೈಂ” (ನಿಯಮ ೧೨.೨ ಗಮನಿಸಿ) ಎಂದು ಕರೆಯಬಾರದು. |
| **20.4 Umpire calling and signalling Dead ball**<br>20.4.1 When the ball has become dead under 20.1, the bowler’s end umpire may call and signal Dead ball if it is necessary to inform the players.<br>20.4.2 Where either umpire is required to call and signal Dead ball under 20.4.2.1 to 20.4.2.14, the ball will be considered to be dead at the instant of the incident causing the ball to become dead. However, where the Law specifically provides for the call to be delayed, so as not to disadvantage the non-offending side, under Law 25.7 (Restriction on the Striker’s | **೨೦.೪ ಅಂಪೈರ್ “ಡೆಡ್ ಬಾಲ್” ಎಂದು ಕರೆದು ಸನ್ನೆ ಮಾಡುವುದು**<br>೨೦.೪.೧ ೨೦.೧ರ ಅನ್ವಯ ಚೆಂಡು ಡೆಡ್ ಆದಾಗ, ಆಟಗಾರರಿಗೆ ತಿಳಿಸುವುದು ಅವಶ್ಯವೆನಿಸಿದರೆ, ಬೌಲರ್ ತುದಿಯ ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು.<br>೨೦.೪.೨ ಯಾವದೇ ಅ0ಪೈರ್ ನಿಯಮ ೨೦.೪.೨.೧ ರಿ0ದ ೨೦.೪.೨.೧೪ ಅಡಿಯಲ್ಲಿ ಡೆಡ್ ಬಾಲ್ ಎ0ದು ಕರೆದು ಸನ್ನೆ ಮಾಡ ಬೇಕಾಗಿ ಬ0ದರೆ ಚೆ0ಡು ಬಾಲ್ ಡೆಡ್ ಆಗಲು ಕಾರಣವಾದ ಸ0ದರ್ಭದ ಕ್ಷಣದಿ0ದ ಡೆಡ್ ಎ0ದು ಪರಿಗಣಿಸಬೇಕು. ಆದಾಗ್ಯೂ ಎಲ್ಲೆಲ್ಲಿ ನಿಯಮಗಳು ನಿಖರವಾಗಿ ನಿಯಮ 25.7 (ದಾಂಡಿಗನ ಬದಲಿ ಓಟಗಾರನ/ಳ ಮೇಲಿನ ನಿರ್ಬ0ದ), ನಿಯಮ ೩೪.೪ (ನಿಯಮ |

| | |
|---|---|
| Runner), Law 34.4 (Runs permitted from the ball lawfully struck more than once), Law 41.2.1 (Unfair actions) and Law 42.1.2 (Unacceptable conduct), the ball will be considered to be dead at the point of the call. | ಬದ್ಧವಾಗಿ ಒ0ದಕ್ಕಿ0ತ ಹೆಚ್ಚಿನ ಸಲ ಹೊಡೆಯುವುದು), ನಿಯಮ ೪೧.೨.೧ (ನಿಯಮ ಬಾಹಿರ ಕೃತ್ಯ) ಮತ್ತು ನಿಯಮ ೪೨.೨.೨ (ಅ0ಗಿಕಾರವಲ್ಲದ ಕೃತ್ಯ) ಗಳಲ್ಲಿ ತಪ್ಪು ಮಾಡದ ತ0ಡಕ್ಕೆ ಅನಾನುಕೂಲವಾಗಬಾರದೆ0ದು, ಡೆಡ್ ಬಾಲ್ ಕರೆಯನ್ನು ತಡವಾಗಿ ಮಾಡಬೇಕೆ0ದು ತಿಳಿಸಿದೆಯೋ ಅ0ಥಹ ಸ0ದರ್ಭಗಳಲ್ಲಿ ಅಂಪೈರ್ ಡೆಡ ಬಾಲ್ ಎಂದು ಕರೆದ ತತಕ್ಷಣ ಬಾಲ್ ಡೆಡ ಎಂದು ಪರಿಗಣಿಸಬೇಕು |
| Either umpire shall call and signal Dead ball when | ಈ ಕೆಳಗಿನ ಸಂದರ್ಭಗಳಲ್ಲಿ ಇಬ್ಬರಲ್ಲೊಬ್ಬ ಅಂಪೈರ್ "ಡೆಡ್ ಬಾಲ್" ಕರೆದು ಸನ್ನೆ ಮಾಡಬೇಕು. |
| 20.4.2.1 intervening in a case of unfair play. | ೨೦.೪.೨.೧ ನಿಯಮಬಾಹಿರ ಆಟದಲ್ಲಿ ಮಧ್ಯೆ ಪ್ರವೇಶಿಸ ಬೇಕಾದಾಗ. |
| 20.4.2.2 a possibly serious injury to a player or umpire occurs. | ೨೦.೪.೨.೨ ಆಟಗಾರನಿಗೆ ಅಥವಾ ಅಂಪೈರಿಗೆ, ಭವಿಷ್ಯ ತೀವ್ರ ಸ್ವರೂಪದ ಗಾಯ ಆಗಿದೆ ಎಂದಾಗ. |
| 20.4.2.3 leaving his/her normal position for consultation. | ೨೦.೪.೨.೩ ಸಮಾಲೋಚನೆಗಾಗಿ ಅವನ/ಅವಳ ನಿಯಮಿತ ಸ್ಥಾನದಿಂದ ಹೊರಡುವಾಗ. |
| 20.4.2.4 one or both bails fall from the striker's wicket before the striker has had the opportunity of playing the ball. | ೨೦.೪.೨.೪ ಒಂದು ಅಥವಾ ಎರಡೂ ಬೇಲ್ಸ್‌ಗಳು ಚೆಂಡನ್ನು ಎದುರಿಸುವ ದಾಂಡಿಗನು ಚೆಂಡನ್ನು ಆಡುವ ಅವಕಾಶ ಪಡೆಯುವ ಮೊದಲೇ ಚೆಂಡನ್ನು ಎದುರಿಸುವ ದಾಂಡಿಗನ ತುದಿಯ ಘೂಟಗಳಿಂದ ಬಿದ್ದರೆ. |
| 20.4.2.5 the striker is not ready for the delivery of the ball and, if the ball is delivered, makes no attempt to play it. Provided the umpire is satisfied that the striker had | ೨೦.೪.೨.೫ ಚೆಂಡನ್ನು ಎದುರಿಸುವ ದಾಂಡಿಗನು ಚೆಂಡನ್ನು ಎದುರಿಸಲು ಸಿದ್ಧನಾಗಿಲ್ಲದಾಗ, ಚೆಂಡನ್ನು ಬೌಲ್ ಮಾಡಿದರೆ, ಅದನ್ನು ಆಡಲು ಯಾವುದೇ ಪ್ರಯತ್ನ ಮಾಡದಿದ್ದಾಗ. ಆದರೆ, |

| | |
|---|---|
| adequate reason for not being ready, the ball shall not count as one of the over. | ಅಂಪೈರರಿಗೆ ಚೆಂಡನ್ನು ಎದುರಿಸುವ ದಾಂಡಿಗನು ಆಡಲು ಸಿದ್ಧವಿಲ್ಲದೆ ಇರಲು ಸಾಕಷ್ಟು ಕಾರಣಗಳಿತ್ತು ಎಂದು ತೃಪ್ತಿ ಯಾಗಿರಬೇಕು. ಬೌಲ್ ಮಾಡಲ್ಪಟ್ಟ ಎಸೆತವನ್ನು ಆ ಓವರಿನ ಒಂದು ಎಸೆತವೆಂದು ಪರಿಗಣಿಸಬಾರದು. |
| 20.4.2.6 the striker is distracted by any noise or movement or in any other way while preparing to receive or receiving a delivery. This shall apply whether the source of the distraction is within the match or outside it. Note also 20.4.2.7. The ball shall not count as one of the over. | ೨೦.೪.೨.೬ ದಾಂಡಿಗನು ಚೆಂಡನ್ನು ಎದುರಿಸಲು ಸಿದ್ಧನಾಗುವಾಗ ಅಥವಾ ಎದುರಿಸುವಾಗ ಯಾವುದೇ ಶಬ್ದ ಇಲ್ಲವೇ ಚಲನೆ ಅಥವಾ ಇತರ ಕಾರಣಗಳಿಂದ ಗಮನ ವಿಚಲಿತವಾದಾಗ. ಹೀಗೆ ವಿಚಲಿತವಾಗುವ ಕಾರಣ ಪಂದ್ಯದ ಒಳಗಡೆ ಅಥವಾ ಹೊರಗಡೆಯಿಂದ ಬಂದರೂ ಅನ್ವಯವಾಗುತ್ತದೆ.<br>ಬೌಲ್ ಮಾಡಲ್ಪಟ್ಟ ಎಸೆತವನ್ನು ಆ ಓವರಿನ ಒಂದು ಎಸೆತವೆಂದು ಪರಿಗಣಿಸಬಾರದು. |
| 20.4.2.7 there is an instance of a deliberate attempt to distract under either of Laws 41.4 (Deliberate attempt to distract striker) or 41.5 (Deliberate distraction, deception or obstruction of batter). The ball shall not count as one of the over. | ೨೦.೪.೨.೭ ನಿಯಮ ೪೧.೪ (ಚೆಂಡನ್ನು ಎದುರಿಸುವ ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಬೆದರಿಸುವ ಪ್ರಯತ್ನ) ಅಥವಾ ೪೧.೫ (ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಬೆದರಿಸುವ, ವಂಚಿಸುವ ಇಲ್ಲವೇ ವಿಚಲಿತಗೊಳಿಸುವ ಪ್ರಯತ್ನ) ಇವೆರಡರಲ್ಲಿ ಯಾವುದಾದರೊಂದರನ್ವಯ ಉದ್ದೇಶಪೂರ್ವಕವಾಗಿ ಬೆದರಿಸುವ ಪ್ರಯತ್ನವಾದಾಗ. ಬೌಲ್ ಮಾಡಲ್ಪಟ್ಟ ಎಸೆತವನ್ನು ಆ ಓವರಿನ ಒಂದು ಎಸೆತವೆಂದು ಪರಿಗಣಿಸಬಾರದು. |
| 20.4.2.8 the bowler drops the ball accidentally before delivery. | ೨೦.೪.೨.೮ ಬೌಲರ್, ಬೌಲ್ ಮಾಡುವ ಮೊದಲೇ ಚೆಂಡನ್ನು ಆಕಸ್ಮಿಕವಾಗಿ ಕೈಯಿಂದ ಬೀಳಿಸಿದರೆ. |

20.4.2.9 the bowler throws the ball towards the striker's end before entering his/her delivery stride.

20.4.2.10 the ball does not leave the bowler's hand for any reason other than an attempt to run out the non-striker under Law 38.3 (Non-striker leaving his/her ground early).

20.4.2.11 satisfied that the ball in play cannot be recovered.

20.4.2.12 he/she considers that either side has been disadvantaged by a person, animal, or other object within the field of play. However, if both umpires consider the ball would have reached the boundary regardless of the intervention, the boundary should stand (see Law 19.2.7 – Identifying and marking the boundary).

20.4.2.13 the striker attempts to play the ball and no part of his/her person, whether grounded or raised, remains within the pitch as defined in Law 6.1 (Area of pitch).

೨೦.೪.೨.೯ ಬೌಲರ್ ಚೆ0ಡನ್ನು ಎದುರಿಸುವ ದಾಂಡಿಗ ತುದಿಗೆ ತನ್ನ ನಿಯಮಿತ ಚೆ0ಡನ್ನೆಸೆಯುವ ಕೊನೆಯ ಎರಡು ಹೆಜ್ಜೆಗೆ ಬರುವ ಮೊದಲೆ ಎಸೆಯುವುದು.

೨೦.೪.೨.೧೦ ಬೌಲರ್ ತುದಿಯಲ್ಲಿರುವ ದಾಂಡಿಗನನ್ನು ನಿಯಮ ೩೮.೩ (ಬೌಲರ್ ತುದಿಯಲ್ಲಿರುವ ದಾಂಡಿಗ ತನ್ನ ಜಾಗದಿಂದ ನಿಗದಿತ ಸಮಯದ ಮೊದಲೇ ಹೊರಬರುವುದು)ರ ಅಡಿಯಲ್ಲಿ ರನ್ ಔಟ್ ಮಾಡುವುದನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕಾಗಿ ಬೌಲರ್ ಕೈಯಿಂದ ಹೊರಬರದಿದ್ದರೆ.

೨೦.೪.೨.೧೧ ಆಟದಲ್ಲಿರುವ ಚೆಂಡನ್ನು ಮರುಪಡೆಯಲಾಗುವುದಿಲ್ಲವೆಂದು ಖಾತ್ರಿಯಾದರೆ.

೨೦.೪.೨.೧೨ ಆಟದ ಮೈದಾನದಲ್ಲಿರುವ ಯಾವುದೇ ಮನುಷ್ಯ, ಪ್ರಾಣಿ ಇಲ್ಲವೇ ಬೆರಾವುದೆ ವಸ್ತುವಿನಿ0ದ ಒ0ದು ತ0ಡಕ್ಕೆ ಅನಾನುಕೂಲ ವಾಗುತ್ತದೆ0ದು ಅವನು/ಳು ಪರಿಗಣಿಸಿದರೆ, ಆದರೇ ಇಬ್ಬರೂ ಅ0ಪೈರಗಳು ಈ ಹಸ್ತಕ್ಷೇಪದ ಹೊರತಾಗಿಯೂ ಚೆ0ಡು ಬೌ0ಡರಿ ತಲುಪುತ್ತಿತ್ತು ಎಂದು ತೀರ್ಮಾನಿಸಿದರೆ ಬೌ0ಡರಿ ಕೊಡಬೇಕು. (ನಿಯಮ ೧೯.೨.೭- ಸೀಮಾ ರೇಖೆಯನ್ನು ಗುರುತಿಸುವುದು)

೨೦.೪.೨.೧೩ ಚೆ0ಡನ್ನೆದಿರುಸುವ ದಾ0ಡಿಗ ಆಡಲು ಪ್ರಯತ್ನಿಸುವಾಗ ಅವನ/ಅವಳ ದಾ0ಡು ಅಥವಾ ಅ0ಗದ ಯಾವುದೇ ಭಾಗ ಆಟದ ನಿಯಮ ೬.೧ (ಆಟದ ಪಟ್ಟಿಯ ವಿಸ್ತೀರ್ಣ) ರಲ್ಲಿ

| | |
|---|---|
| 20.4.2.14 required to do so under any of the Laws not included above. | ವಿವರಿಸಿದ ಹಾಗೆ ಆಟದ ಪಟ್ಟಿಯ ಮೇಲೆ ಆಟದ ಪಟ್ಟಿಗೆ ತಾಗಿ ಅಥವಾ ಹವೆಯಲ್ಲಿರದಿದ್ದರೆ.<br>೨೦.೪.೨.೧೪ ಮೇಲಿನ ಯಾವುದೇ ನಿಯಮಗಳಲ್ಲಿ ಒಳಪಡದ ಕಾರಣಕ್ಕಾಗಿ ಹೀಗೆ ಮಾಡ ಬೇಕಾದಾಗ. |
| **20.5 Ball ceases to be dead**<br>The ball ceases to be dead – that is, it comes into play – when the bowler starts his/her runup or, if there is no run-up, starts his/her bowling action. | **೨೦.೫ ಚೆಂಡು ಯಾವಾಗ ಆಟದಲ್ಲಿ (ಡೆಡ್ ಅವಸ್ಥೆಯಿಂದ ಹೊರಬರುವುದು** - ceases to be dead**) ಬರುತ್ತದೆಂದರೆ**<br>ಚೆಂಡು ಡೆಡ್ ಅವಸ್ಥೆಯಿಂದ ಹೊರಬರುವುದು – ಅಂದರೆ, ಆಟದಲ್ಲಿ ಬರುವುದು - ಬೌಲರ್ ಚೆಂಡನ್ನೆಸೆಯಲು ಓಟವನ್ನು ಪ್ರಾರಂಭಿಸಿದಾಗ ಇಲ್ಲವೇ ಓಡದೆಯೇ ಎಸೆತದ ಮೋಡಿಯನ್ನು ಆರಂಭಿಸಿದಾಗ. |
| **20.6 Dead ball not to be revoked.**<br>Once the ball is dead, no revoking of any decision can bring the ball back into play for that delivery. | **೨೦.೬ ಡೆಡ್ ಬಾಲ್ ರದ್ದು ಮಾಡಬಾರದು**<br>ಒ0ದು ಸಲ ಚೆ0ಡು ಡೆಡ್ ಆದಮೇಲೆ ಆ ಎಸೆತದಲ್ಲಿ ಯಾವುದೇ ನಿರ್ಧಾರವನ್ನು ಹಿ0ಪಡೆದರೂ ಚ್0ಡು ಆಟದಲ್ಲಿ ಮರುಕಳಿಸುವುದಿಲ್ಲ. |
| **20.6 Dead ball; ball counting as one of over.**<br>20.6.1 When a ball which has been delivered is called dead or is to be considered dead then, other than as in 20.6.2,<br>20.6.1.1 it will not count in the over if the striker has not had an opportunity to play it.<br>20.6.1.2 unless No ball or Wide ball has been called, it will be a valid ball if the striker has had an opportunity to play | **೨೦.೭ ಡೆಡ್ ಬಾಲ್ – ಓವರಿನ ಒಂದು ಎಸೆತವೆಂದು ಎಣಿಸುವುದು**<br>೨೦.೬.೧ ೨೦.೬.೨ನ್ನು ಹೊರತು ಪಡಿಸಿ, ಬೌಲ್ ಮಾಡಿದ ಚೆಂಡನ್ನು ಡೆಡ್ ಎಂದು ಕರೆದಾಗ ಅಥವಾ ಡೆಡ್ ಎಂದು ಪರಿಗಣಿಸಬೇಕಾಗಿ ಬಂದಾಗ,<br>೨೦.೬.೧.೧ ಚೆಂಡನ್ನು ಎದುರಿಸುವ ದಾಂಡಿಗನಿಗೆ ಆ ಎಸೆತವನ್ನು ಆಡಲು ಅವಕಾಶ ವಿರದಿದ್ದರೆ, ಅದನ್ನು ಆ ಓವರಿನ ಒಂದು ಎಸೆತವೆಂದು ಎಣಿಸಬಾರದು.<br>೨೦.೬.೧.೨ ನೋ ಬಾಲ್ ಅಥವಾ ವೈಡ್ ಕರೆಯದ ಹೊರತು, ೨೦.೪.೨.೬ರ ಸಂದರ್ಭಗಳು ಮತ್ತು ನಿಯಮ ೨೪.೪ (ಅನುಮತಿಯಿಲ್ಲದೆ ಕ್ಷೇತ್ರ |

| | |
|---|---|
| it, except in the circumstances of 20.4.2.6 and Laws 24.4 (Player returning without permission), 28.2 (Fielding the ball), 41.4 (Deliberate attempt to distract striker) and 41.5 (Deliberate distraction, deception or obstruction of batter). | ರಕ್ಷಕನು ಮೈದಾನದೊಳಗೆ ಹಿಂತಿರುಗುವುದು), ೨೮.೨ (ಚೆಂಡಿನ ಕ್ಷೇತ್ರ ರಕ್ಷಣೆ), ೪೧.೪ (ಚೆಂಡನ್ನು ಎದುರಿಸುವ ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಬೆದರಿಸುವ ಪ್ರಯತ್ನ) ಮತ್ತು ೪೧.೫ (ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಬೆದರಿಸುವ, ವಂಚಿಸುವ ಇಲ್ಲವೇ ವಿಚಲಿತಗೊಳಿಸುವ ಪ್ರಯತ್ನ)ಗಳನ್ನು ಹೊರತು ಪಡಿಸಿ, ಚೆಂಡನ್ನು ಎದುರಿಸುವ ದಾಂಡಿಗನಿಗೆ ಎಸೆತವನ್ನು ಆಡುವ ಅವಕಾಶವಿದ್ದರೆ, ಅದನ್ನು ಓವರಿನ ಒಂದು ಎಸೆತವೆಂದು ಎಣಿಸಬೇಕು. |
| 20.6.2 In 20.4.2.5, the ball will not count in the over only if both conditions of not attempting to play the ball and having an adequate reason for not being ready are met. Otherwise, the delivery will be a valid ball. | ೨೦.೬.೨ ೨೦.೪.೨.೫ರಲ್ಲಿಯಂತೆ, ಚೆಂಡನ್ನು ಆಡಲು ಪ್ರಯತ್ನಿಸದಿರುವುದು ಹಾಗೂ ಆಡಲು ಸಿದ್ಧನಿಲ್ಲದಿರುವುದಕ್ಕೆ ಸಾಕಷ್ಟು ಕಾರಣವಿರುವುದು, ಈ ಎರಡೂ ಕಾರಣಗಳಿದ್ದರೆ ಮಾತ್ರ ಚೆಂಡನ್ನು ಓವರಿನ ಒಂದು ಎಸೆತವೆಂದು ಎಣಿಸಬಾರದು. ಇಲ್ಲವಾದರೆ ಆ ಎಸೆತ ನಿಯಮಬದ್ಧ. |
| **LAW 21 NO BALL** | **ನಿಯಮ ೨೧ ನೋ ಬಾಲ್ (ನಿಯಮ ಬಾಹಿರ ಎಸೆತ)** |
| **21.1 Mode of delivery.**<br>21.1.1 The umpire shall ascertain whether the bowler intends to bowl right-handed or left-handed, over or round the wicket, and shall so inform the striker.<br>It is unfair if the bowler fails to notify the umpire of a change in his/her mode of delivery. In this case the umpire shall call and signal No ball. | **೨೧.೧ ಬೌಲಿಂಗ್ ಶೈಲಿ**<br>೨೧.೧.೧ ಅಂಪೈರ್, ಬೌಲರ್ ಬಲಗೈ ಅಥವಾ ಎಡಗೈ ಮತ್ತು ಘೂಟಗಳನ್ನು ಬಳಸಿ ಅಥವಾ ಘೂಟಗಳ ಮೇಲಿಂದ ಬೌಲ್ ಮಾಡುತ್ತಾನೆ ಎಂಬುದನ್ನು ತಿಳಿದುಕೊಂಡು ಚೆಂಡನ್ನು ಎದುರಿಸುವ ದಾಂಡಿಗನಿಗೆ ತಿಳಿಸಬೇಕು. |

| | |
|---|---|
| 21.1.2 Underarm bowling shall not be permitted except by special agreement before the match. | ಬೌಲರ್ ಚೆಂಡನ್ನೆಸೆಯುವ ತನ್ನ ಶೈಲಿಯ ಬದಲಾವಣೆ ತಿಳಿಸದಿದ್ದರೇ ಅದು ನಿಯಮಬಾಹಿರ. ಇಂತಹ ಸಂದರ್ಭಗಳಲ್ಲಿ ಅಂಪೈರ್ "ನೋ ಬಾಲ್" ಕರೆದು ಸನ್ನೆ ಮಾಡಬೇಕು.<br>೨೧.೧.೨ ಪಂದ್ಯದ ಮೊದಲು ವಿಶೇಷ ಒಪ್ಪಂದ ಮಾಡಿಕೊಂಡಿರದಿದ್ದರೆ, ತೋಳಿನ ಮಟ್ಟದ ಕೆಳಗಿನಿಂದ ಬೌಲ್ ಮಾಡುವಂತಿಲ್ಲ |
| **21.2 Fair delivery – the arm**<br>For a delivery to be fair in respect of the arm the ball must not be thrown.<br>A ball is fairly delivered in respect of the arm if, once the bowler's arm has reached the level of the shoulder in the delivery swing, the elbow joint is not straightened partially or completely from that instant until the ball has left the hand. This definition shall not debar a bowler from flexing or rotating the wrist in the delivery swing.<br>Although it is the primary responsibility of the striker's end umpire to assess the fairness of a delivery in this respect, there is nothing in this Law to debar the bowler's end umpire from calling and signalling No ball if he/she considers that the ball has been thrown. | **೨೧.೨ ನಿಯಮಬದ್ಧ ಎಸೆತ (ಬೌಲಿಂಗ್) – ತೋಳು**<br>ಒಂದು ಎಸೆತವು ನಿಯಮಬದ್ಧವಾಗಿರಬೇಕಾದರೆ ಚೆಂಡನ್ನು ಬೌಲ್ ಮಾಡಬೇಕು (ಥ್ರೋ) ಎಸೆಯಬಾರದು (ಕ್ಷೇತ್ರ ರಕ್ಷಕರಂತೆ).<br>ಬೌಲರನ ತೋಳು ಬೌಲ್ ಮಾಡುವ ಸಲುವಾಗಿ ಒಂದು ಸಾರಿ ಭುಜದ ಮಟ್ಟವನ್ನು ತಲುಪಿದ ಸಮಯದಿಂದ ಬಾಲ್ ಬಿಡುಗಡೆ ಮಾಡುವವರೆಗೆ, ಮೊಳ ಕೈ ಜೋಡಣೆಯ ಭಾಗವನ್ನು ಸ್ವಲ್ಪವಾಗಿ ಅಥವಾ ಪೂರ್ತಿಯಾಗಿ ನೆಟ್ಟಗೆ ಮಾಡದಿದ್ದರೆ ಆ ಎಸೆತವು ತೋಳಿಗೆ ಸಂಬಂಧಿಸಿದಂತೆ ನಿಯಮಬದ್ಧ. ಈ ವಿವರಣೆಯು, ಬೌಲರ್ ತನ್ನ ಮುಂಗೈ ಮಣಿಕಟ್ಟನ್ನು (ವ್ರಿಸ್ಟ್/wrist) ಬಾಗಿಸಲು ಇಲ್ಲವೇ ತಿರುಗಿಸಲು ನಿರ್ಬಂಧಿಸುವುದಿಲ್ಲ.<br>ಎಸೆತವು ನಿಯಮಬದ್ಧವಾಗಿದೆಯೋ ಇಲ್ಲವೋ ಎಂದು ನಿರ್ಧರಿಸುವ ಮೊದಲ ಜವಾಬ್ದಾರಿ ಚೆಂಡನ್ನು ಎದುರಿಸುವ ದಾಂಡಿಗನ ತುದಿಯ ಅಂಪೈರದಾದರೂ, ಬೌಲರ್ ತುದಿಯ ಅಂಪೈರರಿಗೆ, ಬೌಲರ್ ಚೆಂಡನ್ನು ನಿಯಮಬಾಹಿರವಾಗಿ ಎಸೆದಿದ್ದಾನೆ ಎಂದು ಅನಿಸಿದರೆ, ಅವನು/ಅವಳು "ನೋ ಬಾಲ್" ಎಂದು ಕರೆದು ಸನ್ನೆ ಮಾಡುವುದರಿಂದ ಈ ನಿಯಮದಲ್ಲಿನ ಯಾವ ಅಂಶವೂ ನಿರ್ಬಂಧಿಸುವುದಿಲ್ಲ. |

**21.3 Ball thrown or delivered underarm – action by umpires.**

21.3.1 After the bowler has entered his/her delivery stride, if in the opinion of either umpire the ball has been thrown or, unless permitted by agreement in 21.1.2, delivered underarm, that umpire shall call and signal No ball and, when the ball is dead, inform the other umpire of the reason for the call.

The bowler's end umpire shall then

- warn the bowler, indicating that this is a first and final warning. This warning shall apply to that bowler throughout the innings.
- inform the captain of the fielding side of the reason for this action.
- inform the batters at the wicket of what has occurred.

21.3.2 If either umpire considers that, in that innings, a further delivery by the same bowler is thrown or, unless permitted by agreement in 21.1.2, delivered underarm,

**೨೧.೩ ಚೆಂಡನ್ನು ನಿಯಮಬಾಹಿರವಾಗಿ ಎಸೆಯುವುದು ಇಲ್ಲವೇ ತೋಳಿನ ಮಟ್ಟದ ಕೆಳಗಿನಿಂದ ಹಾಕುವುದು**

೨೧.೩.೧ ಬೌಲರ್ ಬೌಲ್ ಮಾಡುವ ಅಂತಿಮ ಹೆಜ್ಜೆ ಇಟ್ಟಾಗ, ಯಾರಾದರೊಬ್ಬ ಅಂಪೈರ್ ಅಭಿಪ್ರಾಯದಲ್ಲಿ, ಚೆಂಡನ್ನು ನಿಯಮ ಬಾಹಿರವಾಗಿ ಎಸೆಯಲಾಗಿದೆ ಇಲ್ಲವೇ ನಿಯಮ ೨೧.೧.೨ರ ಅನ್ವಯ ಒಪ್ಪಂದವಿಲ್ಲದೆ ಭುಜದ ಮಟ್ಟಕ್ಕಿಂತ ಕೆಳಗಿನಿಂದ ಬಿಡಲಾಗಿದೆ ಎಂದಾದರೆ, ಅವನು/ಅವಳು "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು ಮತ್ತು ಬಾಲ್ ಡೆಡ್ ಆದಮೇಲೆ ಸಹವರ್ತಿ ಅಂಪೈರರಿಗೆ ಕರೆಯ ಕಾರಣವನ್ನು ತಿಳಿಸಬೇಕು.

ತದನಂತರ ಬೌಲರ್ ತುದಿಯ ಅಂಪೈರ್,

- ಬೌಲರ್‌ಗೆ ಇದು ಮೊದಲ ಹಾಗೂ ಅಂತಿಮ ಎಚ್ಚರಿಕೆ ಎಂದು ತಿಳಿಸಬೇಕು. ಈ ಎಚ್ಚರಿಕೆ ಆ ಬೌಲರಿಗೆ ಸರದಿಯ ಪೂರ್ತಿ ಅವಧಿಗೆ ಅನ್ವಯಿಸುತ್ತದೆ.
- ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಈ ಕ್ರಮದ ಕಾರಣವನ್ನು ತಿಳಿಸಬೇಕು.
- ಘೂಟಗಳ ಹತ್ತಿರ ಇರುವ (ಆಟದ ಪಟ್ಟಿಯ ಮೇಲಿರುವ) ದಾಂಡಿಗರಿಗೆ ಏನು ನಡೆಯಿತೆಂಬ ಬಗ್ಗೆ ತಿಳಿಸಬೇಕು.

೨೧.೩.೨ ಅದೇ ಸರದಿಯಲ್ಲಿ ಅದೇ ಬೌಲರ್ ಯಾರಾದರೊಬ್ಬ ಅಂಪೈರ್ ಅಭಿಪ್ರಾಯದಲ್ಲಿ ಪುನಃ ನಿಯಮಬಾಹಿರವಾಗಿ ಬಾಲ್ ಎಸೆದಿದ್ದಾನೆ ಅಥವಾ ನಿಯಮ ೨೧.೧.೨ರ ಅನ್ವಯ

he/she shall call and signal No ball and when the ball is dead inform the other umpire of the reason for the call.

The bowler's end umpire shall then

- direct the captain of the fielding side to suspend the bowler immediately from bowling.

  The over shall, if applicable, be completed by another bowler, who shall neither have bowled the previous over or part thereof nor be allowed to bowl any part of the next over. The bowler thus suspended shall not bowl again in that innings.

- inform the batters at the wicket and, as soon as practicable, the captain of the batting side of the reason for this action.

21.3.3 The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered

ಒಪ್ಪಂದವಿಲ್ಲದೆ ಭುಜದ ಮಟ್ಟಕ್ಕಿಂತ ಕೆಳಗಿನಿಂದ ಹಾಕಿದ್ದಾನೆ ಎಂದಾದರೆ, ಅವನು/ಅವಳು "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು ಮತ್ತು ಬಾಲ್ ಡೆಡ್ ಆದಮೇಲೆ ಸಹವರ್ತಿ ಅಂಪೈರರಿಗೆ ಕರೆಯ ಕಾರಣವನ್ನು ತಿಳಿಸಬೇಕು.

ತದನಂತರ ಬೌಲರ್ ತುದಿಯ ಅಂಪೈರ್,

- ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಬೌಲರನನ್ನು ಕೂಡಲೇ ಬೌಲಿಂಗ್‌ನಿಂದ ಅಮಾನತ್ತುಗೊಳಿಸುವಂತೆ ನಿರ್ದೇಶಿಸಬೇಕು. ಅನ್ವಯವಾದಲ್ಲಿ ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ತಿಗೊಳಿಸಬೇಕು, ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರ್ ಅಥವಾ ಅದರ ಭಾಗವನ್ನು ಮಾಡಿರಬಾರದು. ಹಾಗೆಯೇ ನಂತರದ ಓವರಿನ ಭಾಗವನ್ನು ಸಹ ಮಾಡಲು ಅವಕಾಶ ಕೊಡಬಾರದು. ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ.
- ಘೂಟಗಳ ಹತ್ತಿರ ಇರುವ (ಆಟದ ಪಟ್ಟಿಯ ಮೇಲಿರುವ) ದಾಂಡಿಗರಿಗೆ ತಿಳಿಸಬೇಕು ಮತ್ತು ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ದಾಂಡಿಗ ತಂಡದ ನಾಯಕನಿಗೆ ಈ ಕ್ರಮದ ಕಾರಣವನ್ನು ತಿಳಿಸಬೇಕು.

೨೧.೩.೩ ಪಂದ್ಯ ಮುಗಿದ ನಂತರ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಇಬ್ಬರೂ ಅಂಪೈರ್‌ಗಳು ತಪ್ಪಿತಸ್ಥ ತಂಡದ ಅಧಿಕಾರಿಗಳಿಗೆ ಮತ್ತು ಪಂದ್ಯ ಆಯೋಜಿಸಿದ ವ್ಯವಸ್ಥಾಪಕ ಮಂಡಳಿಗೆ ವರದಿ ಮಾಡಬೇಕು, ಅವರು ಸೂಕ್ತವೆನಿಸಿದ ಕ್ರಮವನ್ನು ತಂಡದ

| | |
|---|---|
| appropriate against the captain, any other individuals concerned and, if appropriate, the team. | ನಾಯಕ, ಸಂಬಂಧಿತ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದಲ್ಲಿ ತಂಡದ ಮೇಲೆ ತೆಗೆದುಕೊಳ್ಳಬೇಕು. |
| **21.4 Bowler throwing towards striker's end before delivery.**<br>If the bowler throws the ball towards the striker's end before entering the delivery stride, it is not a No ball and the procedure stated in 21.3 shall not apply. However, the umpire shall call and signal Dead ball under Law 20.4.2.9. | **೨೧.೪ ಬೌಲಿಂಗ್ ಮಾಡುವುದಕ್ಕಿಂತ ಮೊದಲು ಬೌಲರ್ ಚೆಂಡನ್ನು ಎದುರಿಸುವ ದಾಂಡಿಗನ ತುದಿಗೆ ಎಸೆಯುವುದು**<br>ಬೌಲರ್ ಬೌಲ್ ಮಾಡುವ ಅಂತಿಮ ಹೆಜ್ಜೆ ಇಡುವ ಮೊದಲು ಚೆಂಡನ್ನು ಎದುರಿಸುವ ಬ್ಯಾಟರನ ತುದಿಗೆ ಎಸೆದರೆ, "ನೋ ಬಾಲ್ ಆಗುವುದಿಲ್ಲ ಮತ್ತು ನಿಯಮ ೨೧.೩ರಲ್ಲಿ ತಿಳಿಸಿರುವ0ತೆ ಕ್ರಮ ತೆಗೆದುಕೊಳ್ಳಬಾರದು. ಆದರೆ, ೨೦.೪.೨.೯ ರಲ್ಲಿ ತಿಳಿಸಿರುವಂತೆ ಅ0ಪೈರ್ ಡೆಡ್ ಬಾಲ್ ಕರೆದು ಸನ್ನೆ ಮಾಡಬೇಕು. |
| **21.5 Fair delivery – the feet**<br>For a delivery to be fair in respect of the feet, in the delivery stride.<br>21.5.1 the bowler's back foot must land within and not touching the return crease appertaining to his/her stated mode of delivery.<br>21.5.2 the bowler's front foot must land with some part of the foot, whether grounded or raised.<br>- on the same side of the imaginary line joining the two middle stumps as the return crease described in 21.5.1, and | **೨೧.೫ ನಿಯಮಬದ್ಧ ಎಸೆತ – ಪಾದಗಳ ಸ್ಥಾನ**<br>ಒಂದು ಎಸೆತ ಪಾದಗಳ ಸ್ಥಾನಕ್ಕೆ ಸಂಬಂಧಿಸಿದಂತೆ ನಿಯಮ ಬದ್ಧವಾಗಬೇಕಾದರೆ, ಬೌಲರ್ ಬೌಲ್ ಮಾಡುವ ಅಂತಿಮ ಹೆಜ್ಜೆಯಲ್ಲಿ;<br>೨೧.೫.೧ ಬೌಲರ್ ತನ್ನ ಬೌಲಿಂಗ್ ಶೈಲಿಗೆ ತಕ್ಕಂತೆ ಹಿಂದಿನ ಹೆಜ್ಜೆಯ ಪಾದವನ್ನು ಆ ಬದಿಯ ರಿಟರ್ನ್ ರೇಖೆಯ ಒಳಗೆ ಮತ್ತು ಅದಕ್ಕೆ ತಾಗದಂತೆ ಊರಬೇಕು.<br>೨೧.೫.೨ ಬೌಲರನ ಮುಂದಿನ ಹೆಜ್ಜೆಯ ಪಾದದ ಸ್ವಲ್ಪ ಭಾಗವಾದರೂ ನೆಲದ ಮೇಲೆ ಊರಿರಲಿ ಅಥವಾ ಎತ್ತಿರಲಿ<br>➢ ೨೧.೫.೧ರಲಲ್ಲಿ ರಿಟರ್ನ್ ರೇಖೆಯ ಬಗ್ಗೆ ವಿವರಿಸಿರುವಂತೆ ಎರಡೂ ವಿಕೆಟ್ಟಿನ ಮಧ್ಯದ ಘೂಟಗಳನ್ನು ಜೋಡಿಸುವ ಕಾಲ್ಪನಿಕ ರೇಖೆಯ ಅದೇ ಭಾಗದಲ್ಲಿ ಮತ್ತು |

| | |
|---|---|
| - behind the popping crease.<br>If the bowler's end umpire is not satisfied that all of these three conditions have been met, he/she shall call and signal No ball. See Law 41.8 (Bowling of deliberate front foot No ball). | ಪಾಪಿಂಗ್ ರೇಖೆಯ ಹಿಂಭಾಗದಲ್ಲಿರಬೇಕು.<br>ಮೂರೂ ಷರತ್ತುಗಳು ಪಾಲಿಸಲ್ಪಟ್ಟ ಬಗ್ಗೆ ಬೌಲರ್ ತುದಿಯ ಅಂಪೈರರಿಗೆ ಮನವರಿಕೆಯಾಗದಿದ್ದರೆ, ಅವನು/ಅವಳು "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. ನಿಯಮ ೪೧.೮ (ಉದ್ದೇಶಪೂರಿತ ಮುಂದಿನ ಹೆಜ್ಜೆಯ ಪಾದದ ನೋ ಬಾಲ್) ಗಮನಿಸಿ. |
| **21.6 Bowler breaking wicket in delivering ball.**<br>If the ball is delivered and if the non-striker is not dismissed under Law 38.3 (Non-striker leaving his/her ground early), either umpire shall call and signal No ball if the bowler breaks the wicket at any time after the ball comes into play and before completion of the stride after the delivery stride. This shall include any clothing or other object that falls from his/her person and breaks the wicket. See Appendix A.12. Laws 20.4.2.8, 20.4.2.10 (Umpire calling and signalling Dead ball) and 21.12 will apply. | **೨೧.೬ ಬೌಲರ್ ಬೌಲಿಂಗ್ ಮಾಡುವಾಗ ವಿಕೆಟ್ ಬೀಳಿಸುವುದು**<br>ಚೆಂಡನ್ನು ಬೌಲ್ ಮಾಡಿದ್ದರೆ ಮತ್ತು ಬೌಲರ್ ತುದಿಯ ದಾಂಡಿಗ ನಿಯಮ ೩೮.೩ (ಬೌಲರ್ ತುದಿಯ ದಾಂಡಿಗ ತನ್ನ ನಿಗದಿತ ಜಾಗದಿಂದ ಮೊದಲೇ ಹೊರಬರುವುದು)ರ ಅನ್ವಯ ರನ್ ಔಟ್ ಆಗಿರದಿದ್ದರೆ, ಬೌಲಿಂಗ್ ಮಾಡುವ ಕೊನೆಯ ಹೆಜ್ಜೆ ಅಥವಾ ತದನಂತರದ ಹೆಜ್ಜೆ ಯನ್ನು ಪೂರ್ಣವಾಗಿ ಇಡುವ ಮೊದಲು ವಿಕೆಟ್ ಬೀಳಿಸಿದರೆ ಯಾರಾದರೊಬ್ಬ ಅಂಪೈರ್ "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. ಇದು ಅವನ/ಅವಳ ಬಟ್ಟೆ ಬರೆ ಅಥವಾ ದೇಹದ ಮೇಲಿರುವ ಯಾವುದೇ ವಸ್ತು ಬಿದ್ದು ವಿಕೆಟ್ ಬೀಳಿಸುವುದನ್ನೂ ಒಳಗೊಂಡಿರುತ್ತದೆ. ಅನುಬಂಧ ಎ೧೨ ಮತ್ತು ನಿಯಮ ೨೦.೪.೨.೮, ೨೦.೪.೨.೧೦ (ಅಂಪೈರ್ ಡೆಡ್ ಬಾಲ್ ಕರೆದು ಸನ್ನೆ ಮಾಡುವುದು)ಗಳು ಅನ್ವಯಿಸುತ್ತವೆ. |
| **21.7 Ball bouncing more than once, rolling along the ground or pitching off the pitch** | **೨೧.೭ ಚೆಂಡು ಒಂದಕ್ಕಿಂತ ಹೆಚ್ಚು ಸಲ ಪುಟಿಯುವುದು, ನೆಲದ ಮೇಲೆ ಉರುಳುವುದು ಮತ್ತು ಆಟದ ಪಟ್ಟಿಯ ಹೊರಗೆ ಪುಟಿಗೆ ಆಗುವುದು** |

| | |
|---|---|
| The umpire shall call and signal No ball if a ball which he/she considers to have been delivered, without having previously touched bat or person of the striker,<br>- bounces more than once or rolls along the ground before it reaches the popping crease<br>or<br>- pitches wholly or partially off the pitch as defined in Law 6.1 (Area of pitch) before it reaches the line of the striker's wicket.<br>When a non-turf pitch is being used, this will apply to any ball that wholly or partially pitches off the artificial surface. | ಚೆಂಡು ಬೌಲ್ ಮಾಡಲ್ಪಟ್ಟಿದೆ ಎಂದು ಅಂಪೈರಿಗೆ ಮನವರಿಕೆಯಾದ ನಂತರ, ಚೆಂಡನ್ನು ಎದುರಿಸುವ ದಾಂಡಿಗನ ದಾಂಡಿಗೆ ಅಥವಾ ದೇಹಕ್ಕೆ ಮುಂಚಿತವಾಗಿ ತಗಲದೆ<br>➢ ಪಾಪಿಂಗ್ ರೇಖೆ ಮುಟ್ಟುವ ಮೊದಲು ಒಂದಕ್ಕಿಂತ ಹೆಚ್ಚು ಸಲ ಪುಟಿದರೆ ಇಲ್ಲವೇ ನೆಲದುದ್ದಕ್ಕೂ ಉರುಳಿದರೆ<br>➢ ಇಲ್ಲವೇ<br>➢ ಚೆಂಡನ್ನು ಎದುರಿಸುವ ದಾಂಡಿಗನ ತುದಿಯ ವಿಕೆಟ್‌ನ ರೇಖೆಯನ್ನು ಮುಟ್ಟುವ ಮೊದಲು, ಪೂರ್ತಿಯಾಗಿ ಇಲ್ಲವೇ ಭಾಗಶಃ ಆಟದ ಪಟ್ಟಿಯ - ನಿಯಮ ೬.೧ (ಆಟದ ಪಟ್ಟಿಯ ವಿಸ್ತೀರ್ಣ) ರಲ್ಲಿ ತಿಳಿಸಿರುವಂತೆ-ಹೊರಗೆ ಪುಟಿದರೆ ಬೌಲರ್ ತುದಿಯ ಅಂಪೈರ್ "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು.<br>➢ ಹುಲ್ಲಿನ ಆಟದ ಪಟ್ಟಿಯನ್ನು ಉಪಯೋಗಿಸದಿದ್ದರೇ ಇದು ಚೆಂಡು ಪೂರ್ತಿಯಾಗಿ ಇಲ್ಲವೇ ಭಾಗಶಃ ಕೃತಕ ಮೇಲ್ಭಾಗದ ಹೊರಗೆ ಪುಟಿಗೆಯಾದರೆ ಅನ್ವಯಿಸುತ್ತದೆ. |
| **21.8 Ball causing the striker to leave the pitch, or ball coming to rest in front of striker's wicket.**<br>If a ball delivered by the bowler comes to rest in front of the line of the striker's wicket or is so far from the pitch that the striker would need to leave the pitch to attempt to play the ball (see Law 25.8 – Striker's right to play the ball), without having previously touched the bat or person of the | **೨೧.೮ ಚೆಂಡನ್ನು ಎದುರಿಸುವ ಬ್ಯಾಟರ ಆಟದ ಪಟ್ಟಿ ಬಿಡುವ೦ತೆ ಮಾಡುವುದು, ಅಥವಾ ಚೆಂಡನ್ನು ಎದುರಿಸುವ ಬ್ಯಾಟರನ ವಿಕೆಟ್ ಮುಂದೆ ಚೆಂಡು ಬಂದು ನಿಲ್ಲುವುದು**<br>ಬೌಲ್ ಮಾಡಲ್ಪಟ್ಟ ಚೆಂಡು, ಬ್ಯಾಟರನ ದಾಂಡು ಇಲ್ಲವೇ ದೇಹಕ್ಕೆ ತಾಗುವ ಮೊದಲೇ ಚೆಂಡನ್ನು ಎದುರಿಸುವ ಬ್ಯಾಟರ ತುದಿಯ ಘೂಟಗಳ ರೇಖೆಯ ಮುಂದೆ ಬ೦ದು ನಿ೦ತರೆ ಅಥವಾ ಆಟದ ಪಟ್ಟಿಯಿ೦ದ ಅತೀ ದೂರದಲ್ಲಿದ್ದು, ದಾಂಡಿಗ ಅದನ್ನು ಆಡಲು |

| | |
|---|---|
| striker, the umpire shall call and signal No ball and immediately call and signal Dead ball. | ಆಟದ ಪಟ್ಟಿ ಬಿಡಬೇಕಾದ ಪ್ರಸ0ಗ ಬ0ದರೆ, (ನಿಯಮ ೨೫.೮ ಚೆ0ಡನ್ನೆದುರಿಸುವ ದಾಂಡಿಗನ ಚೆ0ಡು ಆಡುವ ಅಧಿಕಾರ ನೋಡಿರಿ), ಅಂಪೈರ್ "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. |
| **21.9 Fielder intercepting a delivery.**<br>If, except in the circumstances of Law 27.3 (Position of wicket-keeper), a ball delivered by the bowler makes contact with any part of a fielder's person before it either makes contact with the striker's bat or person, or it passes the striker's wicket, the umpire shall call and signal No ball and immediately call and signal Dead ball. | **೨೧.೯ ಬೌಲ್ ಮಾಡಲ್ಪಟ್ಟ ಚೆಂಡನ್ನು ಕ್ಷೇತ್ರ ರಕ್ಷಕ ತಡೆದರೆ**<br>ನಿಯಮ ೨೭.೩ (ಘೂಟರಕ್ಷಕನ ಸ್ಥಾನ) ರಲ್ಲಿ ವಿವರಿಸಿರುವುದನ್ನು ಹೊರತುಪಡಿಸಿ, ಬೌಲ್ ಮಾಡಲ್ಪಟ್ಟ ಚೆಂಡು, ಚೆಂಡನ್ನು ಎದುರಿಸುವ ದಾಂಡಿಗನ ದಾಂಡು ಇಲ್ಲವೇ ದೇಹಕ್ಕೆ ತಾಗುವ ಇಲ್ಲವೇ ಚೆಂಡನ್ನು ಎದುರಿಸುವ ದಾಂಡಿಗನ ತುದಿಯ ವಿಕೆಟ್ ದಾಟುವ ಮೊದಲೇ ಯಾವುದೇ ಕ್ಷೇತ್ರ ರಕ್ಷಕನ ದೇಹದ ಯಾವುದೇ ಭಾಗಕ್ಕೆ ತಗಲಿದರೆ ಅಂಪೈರ್ "ನೋ ಬಾಲ್" ಎಂದು ಕರೆದು ಸನ್ನೆ ಮಾಡಿ ಕೂಡಲೇ "ಡೆಡ್ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. |
| **21.10 Ball bouncing overhead height of striker.**<br>The umpire shall call and signal No ball for any delivery which, after pitching, passes or would have passed over head height of the striker standing upright at the popping crease. | **೨೧.೧೦ ಚೆಂಡನ್ನೆದುರಿಸುವ ದಾಂಡಿಗನ ತಲೆಯಮೇಲಿಂದ ಚೆಂಡು ಎಗರುವುದು**<br>ಬೌಲ್ ಮಾಡಲ್ಪಟ್ಟ ಚೆಂಡು ಆಟದ ಪಟ್ಟಿಯ ಮೇಲೆ ಪುಟಿದು ಪಾಪಿಂಗ್ ರೇಖೆಯ ಹತ್ತಿರ ನೇರವಾಗಿ ನಿಂತಿರುವ ದಾಂಡಿಗನ ತಲೆಯ ಮೇಲಿನಿಂದ ಹೋದರೆ ಅಥವಾ ಹೋಗುತ್ತದೆ ಎಂದಾದರೆ ಅಂಪೈರ್ "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. |
| **21.11 Call of No ball for infringement of other Laws**<br>In addition to the instances above, No ball is to be called and signalled as required by the | **೨೧.೧೧ ಇತರ ನಿಯಮಗಳ ಉಲ್ಲಂಘನೆಗಾಗಿ "ನೋ ಬಾಲ್" ಕರೆಯುವುದು** |

| | |
|---|---|
| following Laws.<br>Law 27.3 – Position of wicketkeeper<br>Law 28.4 – Limitation of on side fielders<br>Law 28.5 – Fielders not to encroach on pitch.<br>Law 41.6 – Bowling of dangerous and unfair short, pitched deliveries.<br>Law 41.7 – Bowling of dangerous and unfair non-pitching deliveries<br>Law 41.8 – Bowling of deliberate front foot No ball. | ಮೇಲಿನ ಸಂದರ್ಭಗಳ ಜೊತೆ, ಈ ಕೆಳಗಿನ ನಿಯಮಗಳ ಅನ್ವಯ ಅಗತ್ಯವಿದ್ದಲ್ಲಿ "ನೋ ಬಾಲ್" ಕರೆದು ಸನ್ನೆ ಮಾಡಬೇಕು.<br>ನಿಯಮ ೨೭.೩ – ಘೂಟ ರಕ್ಷಕನ ಸ್ಥಾನ.<br>ನಿಯಮ ೨೮.೪ – ಲೆಗ್ ಸೈಡ್‌ನಲ್ಲಿಯ ಕ್ಷೇತ್ರ ರಕ್ಷಕರ ಮಿತಿ.<br>ನಿಯಮ ೨೮.೫ – ಆಟದ ಪಟ್ಟಿಯನ್ನು ಕ್ಷೇತ್ರ ರಕ್ಷಕ ಅತಿಕ್ರಮಿಸುವುದು.<br>ನಿಯಮ ೪೧.೬–ಅಪಾಯಕಾರಿ ಹಾಗೂ ನಿಯಮಬಾಹಿರ ಅಲ್ಪ ಪುಟಿಗೆಯು ಬೌಲಿಂಗ್.<br>ನಿಯಮ ೪೧.೭ – ಅಪಾಯಕಾರಿ ಹಾಗೂ ನಿಯಮಬಾಹಿರ ಪುಟಿಗೆ ರಹಿತ ಬೌಲಿಂಗ್.<br>ನಿಯಮ ೪೧.೮ – ಉದ್ದೇಶಪೂರಿತ ಮುಂದಿನ ಹೆಜ್ಜೆಯ ಪಾದದ ನೋ ಬಾಲ್. |
| **21.12 Revoking a call of No ball.**<br>An umpire shall revoke the call of No ball if Dead ball is called under any of Laws 20.4.2.4, 20.4.2.5, 20.4.2.6, 20.4.2.8 or 20.4.2.10 (Umpire calling and signalling Dead ball). | **೨೧.೧೨ ನೋ ಬಾಲ್ ಕರೆಯನ್ನು ಹಿಂತೆಗೆದುಕೊಳ್ಳುವುದು**<br>ನಿಯಮ ೨೦.೪.೨.೪, ೨೦.೪.೨.೫, ೨೦.೪.೨.೬, ೨೦.೪.೨.೮ ಅಥವಾ ೨೦.೪.೨.೧೦ (ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡುವುದು)ರ ಅನ್ವಯ "ಡೆಡ್ ಬಾಲ್" ಕರೆದರೆ ಅಂಪೈರ್ "ನೋ ಬಾಲ್" ಕರೆಯನ್ನು ಹಿಂತೆದುಕೊಳ್ಳಬೇಕು. |
| **21.13 No ball to over-ride Wide**<br>A call of No ball shall over-ride the call of Wide ball at any time. See Laws 22.1(Judging a Wide) and 22.2 (Call and signal of Wide ball). | **೨೧.೧೩ ನೋ ಬಾಲ್ ವೈಡ್ ಕರೆಯನ್ನು ಅಮಾನ್ಯಗೊಳಿಸುವುದು**<br>"ನೋ ಬಾಲ್" ಕರೆಯು ವೈಡ್ ಕರೆಯನ್ನು ಅಮಾನ್ಯಗೊಳಿಸುತ್ತದೆ. ನಿಯಮ ೨೨.೧ (ವೈಡ್ ನಿರ್ಧರಿಸುವುದು) ಮತ್ತು ೨೨.೨ (ವೈಡ್ ಕೆರೆದು ಸನ್ನೆ ಮಾಡುವುದು) ಗಮನಿಸಿ. |

| | |
|---|---|
| **21.14 Ball not dead.**<br>The ball does not become dead on the call of No ball. | **೨೧.೧೪ ಚೆಂಡು ಡೆಡ್ ಆಗುವುದಿಲ್ಲ**<br>"ನೋ ಬಾಲ್" ಎಂದು ಕರೆದಾಕ್ಷಣ ಚೆಂಡು ಡೆಡ್ ಆಗುವುದಿಲ್ಲ. |
| **21.15 Penalty for a No ball**<br>A penalty of one run shall be awarded instantly on the call of No ball. Unless the call is revoked, the penalty shall stand even if a batter is dismissed. It shall be in addition to any other runs scored, any boundary allowance and any other runs awarded for penalties. | **೨೧.೧೫ ನೋ ಬಾಲ್ ಕರೆಗೆ ದಂಡ**<br>ನೋ ಬಾಲ್ ಕರೆದಾಕ್ಷಣ ದಂಡದ ಒಂದು ಓಟವನ್ನು ಅನುದಾನಿಸಬೇಕು. ಕರೆಯನ್ನು ಹಿಂತೆಗೆದುಕೊಳ್ಳದಹೊರತು , ದಾಂಡಿಗನೊಬ್ಬನು ಔಟ್ ಆದರೂ ಸಹ ದಂಡದ ಓಟ ಇರುತ್ತದೆ. ಅದು ಗಳಿಸಿದ ಬೇರಾವುದೇ ಓಟಗಳು, ಯಾವುದೇ ಬೌಂಡರಿ ಗಳಿಕೆ ಮತ್ತು ಯಾವುದೇ ದಂಡದ ಓಟಗಳ ಜೊತೆ ಕೂಡಿಸಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. |
| **21.16 Runs resulting from a No ball – how scored**<br>The one run penalty shall be scored as a No ball extra and shall be debited against the bowler.<br>If other Penalty runs have been awarded to either side these shall be scored as stated in Law 41.17 (Penalty runs).<br>Any runs completed by the batters, or any boundary allowance shall be credited to the striker if the ball has been struck by the bat; otherwise, they shall also be scored as Byes or Leg byes as appropriate. | **೨೧.೧೬ ನೋ ಬಾಲ್ ದಿಂದ ಗಳಿಸಿದ ಓಟಗಳನ್ನು ಹೇಗೆ ಲೆಕ್ಕಿಸಬೇಕು**<br>ದಂಡದ ಒಂದು ಓಟವನ್ನು ನೋ ಬಾಲ್ ಅತಿರಿಕ್ತ ಎಂದು ಲೆಕ್ಕಿಸಬೇಕು ಮತ್ತು ಬೌಲರ್ ಖಾತೆಗೂ ವಜಾ ಹಾಕಬೇಕು. ಒಂದು ವೇಳೆ ಯಾವುದೇ ತಂಡಕ್ಕೆ ಇತರ ಯಾವುದೇ ದಂಡದ ಓಟಗಳನ್ನು ಅನುದಾನಿಸಿದ್ದರೇ ಇವುಗಳನ್ನು ನಿಯಮ ೪೧.೧೭ (ದಂಡದ ಓಟಗಳು)ರಲ್ಲಿ ತಿಳಿಸಿರುವಂತೆ ಲೆಕ್ಕಿಸಬೇಕು. ದಾಂಡಿಗರು ಪೂರ್ತಿಗೊಳಿಸಿದ ಯಾವುದೇ ಓಟಗಳು ಅಥವಾ ಯಾವುದೇ ಬೌಂಡರಿ ಓಟಗಳನ್ನು ದಾಂಡಿಗನು ದಾಂಡಿನಿಂದ ಹೊಡೆದಿದ್ದರೆ ಚೆಂಡನ್ನು ಎದುರಿಸಿದ ದಾಂಡಿಗನ ಖಾತೆಗೂ ಇಲ್ಲದಿದ್ದರೆ ಬೈಸ್ ಅಥವಾ ಲೆಗ್ ಬೈಸ್ ಎಂದು ಯಾವುದು ಸರಿಯೋ ಹಾಗೇ ಲೆಕ್ಕಿಸಬೇಕು. |

| | |
|---|---|
| **21.17 No ball not to count**<br>A No ball shall not count as one of the over. See Law 17.3 (Validity of balls). | **೨೧.೧೭ ನೋ ಬಾಲ್ ಎಣಿಸಬಾರದು.**<br>ನೋ ಬಾಲನ್ನು ಓವರಿನ ಒಂದು ನಿಗದಿತ ಎಸೆತವೆಂದು ಎಣಿಸಬಾರದು, ನಿಯಮ ೧೭.೩ (ಎಸೆತಗಳ ನಿಯಮ ಬದ್ಧತೆ) ಗಮನಿಸಿ. |
| **21.18 Out from a No ball**<br>When No ball has been called, neither batter shall be out under any of the Laws except 34 (Hit the ball twice), 37 (Obstructing the field) or 38 (Run out). | **೨೧.೧೮ ನೋ ಬಾಲ್‌ನಿಂದ ಔಟ್ ಆದಾಗ.**<br>ನೋ ಬಾಲ್ ಕರೆದಾಗ**,** ಯಾರೊಬ್ಬ ದಾಂಡಿಗನು ನಿಯಮ ೩೪ (ಚೆಂಡನ್ನು ಎರಡುಸಲ ಹೊಡೆಯುವುದು), ೩೭ (ಕ್ಷೇತ್ರ ರಕ್ಷಣೆಗೆ ಅಡಚಣೆ) ಅಥವಾ ೩೮ (ರನ್ ಔಟ್) ಇವುಗಳನ್ನು ಹೊರತುಪಡಿಸಿ ಬೇರಾವುದೇ ನಿಯಮಗಳನ್ವಯ ಔಟಾಗುವುದಿಲ್ಲ. |
| **LAW 22 WIDE BALL** | **ನಿಯಮ ೨೨ ವೈಡ್ ಬಾಲ್** |
| **22.1 Judging a Wide**<br>22.1.1 If the bowler bowls a ball, not being a No ball, the umpire shall adjudge it a Wide if, according to the definition in 22.1.2, the ball passes wide of where the striker is standing or has stood at any point after the ball came into play for that delivery, and which also would have passed wide of the striker standing in a normal batting position. | **೨೨.೧ ವೈಡ್ ನಿರ್ಧರಿಸುವುದು**<br>೨೨.೧.೧ ಬೌಲರ್ ಬೌಲ್ ಮಾಡಿದ ಚೆಂಡು ನೋ ಬಾಲ್ ಆಗಿರದಿದ್ದರೆ**,** ೨೨.೧.೨ರ ವಿವರಣೆಯ ಅನ್ವಯ ಅಂಪೈರ್ ಅಭಿಪ್ರಾಯದಲ್ಲಿ ಚೆಂಡನ್ನು ಎದುರಿಸುವ ದಾಂಡಿಗನು ನಿಂತಿರುವ ಸ್ಥಳದಿಂದ ಅಥವಾ ಚೆ0ಡು ಆಟದಲ್ಲಿ ಬ0ದಾಗಿನಿ0ದ ಬೇರಾವುದೇ ಜಾಗದಲ್ಲಿ ಇದ್ದಿದ್ದರೆ ಅ0ಥಹ ಜಾಗದಿಂದ ಚೆಂಡು ಅವನ/ಅವಳ ವ್ಯಾಪ್ತಿಗೆ ದೂರದಲ್ಲಿ ಹಾದು ಹೋದರೆ ಮತ್ತು ಅವನ/ಅವಳ ನಿಯಮಿತ ಬ್ಯಾಟಿಂಗ ಜಾಗದಲ್ಲಿ ನಿಂತಿದ್ದಾಗಲೂ ದಾಂಡಿಗನ/ದಾಂಡಿಗಳ ವ್ಯಾಪ್ತಿಗಿಂತ |

| | |
|---|---|
| 22.1.2 The ball will be considered as passing wide of the striker unless it is sufficiently within reach for him/her to be able to hit it with the bat by means of a normal cricket stroke. | ದೂರದಲ್ಲಿ ಹಾದು ಹೋಗಬಹುದಾಗಿದ್ದರೂ ಸಹ ವೈಡ್ ಎಂದು ನಿರ್ಧರಿಸಬೇಕು.<br>೨೨.೧.೨ ದಾಂಡಿಗನಿಗೆ ಸಹಜ ಕ್ರಿಕೆಟ್ ಹೊಡೆತವನ್ನು ಹೊಡೆಯುವ ಅವಕಾಶವಿಲ್ಲದ ಹಾಗೇ ದೂರದಲ್ಲಿ ಹಾದು ಹೋದರೆ, ಅದು ದಾಂಡಿಗನ ವ್ಯಾಪ್ತಿಯಲ್ಲಿಲ್ಲದ ಚೆಂಡು ಎಂದು ಪರಿಗಣಿಸಬೇಕು. |
| **22.2 Call and signal of Wide ball**<br>If the umpire adjudges a delivery to be a Wide, he/she shall call and signal Wide ball as soon as the ball passes the striker's wicket. It shall, however, be considered to have been a Wide from the instant that the bowler entered his/her delivery stride, even though it cannot be called Wide until it passes the striker's wicket. | **೨೨.೨ ವೈಡ್ ಬಾಲ್ ಎಂದು ಕರೆದು ಸನ್ನೆ ಮಾಡುವುದು.**<br>ಬೌಲ್ ಮಾಡಲ್ಪಟ್ಟ ಚೆಂಡನ್ನು ಅಂಪೈರ್ ವೈಡ್ ಎಂದು ತೀರ್ಮಾನಿಸಿದರೆ, ಅವನು/ಅವಳು ಆ ಚೆಂಡು, ಚೆಂಡನ್ನೆದುರಿಸುವ ದಾಂಡಿಗನ ವಿಕೆಟ್ ದಾಟಿದ ಕೂಡಲೇ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ "ವೈಡ್" ಎಂದು ಕರೆದು ಸನ್ನೆ ಮಾಡಬೇಕು. ಚೆಂಡು, ಚೆಂಡನ್ನೆದುರಿಸುವ ದಾಂಡಿಗನ ವಿಕೆಟ್ ದಾಟಿದ ಮೇಲೆ "ವೈಡ್" ಎಂದು ಕರೆದರೂ, ಅದು ಬೌಲರ್ ಬೌಲ್ ಮಾಡುವ ಕೊನೆಯ ಎರಡು ಹೆಜ್ಜೆ ಹಾಕಿದಾಗಿನಿಂದ (**Delivery stride**) ವೈಡ್ ಎಂದು ಪರಿಗಣಿಸಬೇಕು. |
| **22.3 Revoking a call of Wide ball**<br>22.3.1 The umpire shall revoke the call of Wide ball if there is then any contact between the ball and the striker's bat or person before the ball comes into contact with any fielder.<br>22.3.2 The umpire shall revoke the call of Wide ball if a delivery is called a No ball. See Law 21.13 (No ball to over-ride Wide). | **೨೨.೩ ವೈಡ್ ಕರೆಯನ್ನು ಹಿಂತೆಗೆದುಕೊಳ್ಳುವುದು**<br>೨೨.೩.೧ ಚೆಂಡು ಹಾಗೂ ಚೆಂಡನ್ನು ಎದುರಿಸುವ ದಾಂಡಿಗನ ದಾಂಡು ಅಥವಾ ಅವನ ಶರೀರದೊಡನೆ ಸಂಪರ್ಕ ಆದರೆ, ಆ ಚೆಂಡು ಕ್ಷೇತ್ರ ರಕ್ಷಕನೊಬ್ಬನ ಸಂಪರ್ಕಕ್ಕೆ ಬರುವ ಮೊದಲು ಅಂಪೈರ್ ವೈಡ್ ಕರೆಯನ್ನು ಹಿಂಪಡೆಯಬೇಕು. |

| | |
|---|---|
| | ೨೨.೩.೨ ಬೌಲ್ ಮಾಡಲ್ಪಟ್ಟ ಚೆಂಡನ್ನು "ನೋ ಬಾಲ್" ಎಂದು ಕರೆದರೆ, ವೈಡ್ ಕರೆಯನ್ನು ಹಿಂಪಡೆಯಬೇಕು. ನಿಯಮ ೨೧.೩ (ನೋ ಬಾಲ್ ವೈಡ್ ಕರೆಯನ್ನು ರದ್ದುಗೊಳಿಸುತ್ತದೆ) ಗಮನಿಸಿ. |
| **22.4 Delivery not a Wide**<br>22.4.1 The umpire shall not adjudge a delivery as being a Wide, if the striker, by moving, either<br>causes the ball to pass wide of him/her, as defined in 22.1.2 or<br>brings the ball sufficiently within reach to be able to hit it by means of a normal cricket stroke.<br>22.4.2 The umpire shall not adjudge a delivery as being a Wide if the ball touches the striker's bat or person, but only as the ball passes the striker. | **೨೨.೪ ಬೌಲ್ ಮಾಡಿದ ಎಸೆತ ವೈಡ್ ಅಲ್ಲ**<br>೨೨.೪.೧ ಅಂಪೈರ್ ವೈಡ್ ಅಲ್ಲ ಎಂದು ಯಾವಾಗ ನಿರ್ಧರಿಸಬೇಕೆಂದರೆ, ಚೆಂಡನ್ನು ಎದುರಿಸುವ ದಾಂಡಿಗನು,<br>೨೧೨.೧.೨ರಲ್ಲಿ ವಿವರಿಸಿದಂತೆ ಚೆಂಡು ತನ್ನ ವ್ಯಾಪ್ತಿಯಿಂದ ಹೊರಗೆ ಹೋಗುವಂತೆ ಮಾಡಿದರೆ, ಅಥವಾ<br>ಸಹಜ ಕ್ರಿಕೆಟ್ ಹೊಡೆತ ಹೊಡೆಯಲು ಅನುಕೂಲವಾಗುವಂತೆ, ಸಾಕಷ್ಟು ತನ್ನ ವ್ಯಾಪ್ತಿಯೊಳಗೆ ಬರುವಂತೆ ಮಾಡಿದರೆ.<br>೨೨.೪.೨ ಚೆಂಡು, ಚೆಂಡನ್ನು ಎದುರಿಸುವ ದಾಂಡಿಗನನ್ನು ಹಾದು ಹೋಗುವಾಗ, ಚೆಂಡನ್ನು ಎದುರಿಸುವ ದಾಂಡಿಗನ ದಾಂಡಿಗೆ ಅಥವಾ ಶರೀರಕ್ಕೆ ತಗಲಿದರೆ, ಅಂಪೈರ್ ವೈಡ್ ಎಂದು ನಿರ್ಧರಿಸಬಾರದು. |
| **22.5 Ball not dead**<br>The ball does not become dead on the call of Wide ball. | **೨೨.೫ ಚೆಂಡು ಡೆಡ್ ಅಲ್ಲ**<br>ವೈಡ್ ಬಾಲ್ ಎಂದು ಕರೆದಾಕ್ಷಣ ಚೆಂಡು ಡೆಡ್ ಆಗುವುದಿಲ್ಲ. |
| **22.6 Penalty for a Wide**<br>A penalty of one run shall be awarded instantly on the call of Wide ball. Unless the call is revoked, see 22.3, this penalty shall stand even if a batter is dismissed, and shall | **೨೨.೬ ವೈಡ್‌ಗೆ ದಂಡ**<br>ವೈಡ್‌ಬಾಲ್ ಕರೆದ ಕೂಡಲೇ ದಂಡದ ಒಂದು ಓಟ ಅನುದಾನವಾಗುತ್ತದೆ. ವೈಡ್‌ಬಾಲ್ ಕರೆಯನ್ನು ಹಿಂತೆಗೆದುಕೊಳ್ಳದ ಹೊರತು , ೨೨.೩ ಗಮನಿಸಿ, |

| | |
|---|---|
| be in addition to any other runs scored, any boundary allowance and any other runs awarded for penalties. | ದಾಂಡಿಗನೊಬ್ಬನು ಔಟ್ ಆದರೂ ಸಹ ದಂಡದ ಒಟ ದಕ್ಕುತ್ತದೆ ಮತ್ತು ಬೇರಾವುದೇ ಒಟಗಳನ್ನು ಗಳಿಸಿದ್ದರೆ, ಯಾವುದೇ ಬೌಂಡರಿ ಗಳಿಕೆ ಮತ್ತು ಯಾವುದೇ ದಂಡದ ಒಟಗಳ ಗಳಿಕೆ ಆಗಿದ್ದರೆ ಅವುಗಳ ಜೊತೆಗೆ ಸೇರಿಸಬೇಕು. |
| **22.7 Runs resulting from a Wide – how scored.**<br>All runs completed by the batters or a boundary allowance, together with the penalty for the Wide, shall be scored as Wide balls. Apart from any award of 5 Penalty runs, all runs resulting from a Wide shall be debited against the bowler. | **೨೨.೭ ವೈಡ್‌ನಿಂದ ಗಳಿಸಿದ ಒಟಗಳನ್ನು ಹೇಗೆ ಲೆಕ್ಕಿಸಬೇಕು**<br>ದಂಡದ ಒಂದು ಒಟದ ಜೊತೆಗೆ ದಾಂಡಿಗರು ಓಡಿ ಪೂರ್ತಿಗೊಳಿಸಿದ ಎಲ್ಲಾ ಒಟಗಳು ಅಥವಾ ಬೌಂಡರಿ ಗಳಿಕೆಯನ್ನು ಹಾಗೂ ದಂಡದ ಒಟಗಳನ್ನು ವೈಡ್ ಬಾಲ್ಸ್ ಎಂದೇ ಲೆಕ್ಕಿಸಬೇಕು. ದಂಡದ ೫ ಒಟಗಳನ್ನು ಬಿಟ್ಟು ವೈಡ್ ಬಾಲ್‌ನಿಂದ ಫಲಿಸುವ ಎಲ್ಲ ಒಟಗಳನ್ನು ಬೌಲರ್ ಖಾತೆಗೆ ವಜಾ ಹಾಕಬೇಕು. |
| **22.8 Wide not to count.**<br>A Wide shall not count as one of the over. See Law 17.3 (Validity of balls). | **೨೨.೮ ವೈಡ್‌ಬಾಲ್ ಎಣಿಸಬಾರದು**<br>ವೈಡ್‌ಬಾಲ್ ಎಂದು ಕರೆದ ಎಸೆತವನ್ನು ಓವರಿನ ಒಂದು ಎಸೆತ ಎಂದು ಎಣಿಸಬಾರದು. ನಿಯಮ ೧೭.೩(ಎಸೆತದ ನಿಯಮ ಬದ್ಧತೆ) ಗಮನಿಸಿ. |
| **22.9 Out from a Wide**<br>When Wide ball has been called, neither batter shall be out under any of the Laws except 35 (Hit wicket), 37 (Obstructing the field), 38 (Run out) or 39 (Stumped). | **೨೨.೯ ವೈಡ್‌ಬಾಲ್ ನಿಂದ ಔಟ್ ಆಗುವುದು**<br>ವೈಡ್‌ಬಾಲ್ ಎಂದು ಕರೆದಾಗ, ಇಬ್ಬರಲ್ಲೊಬ್ಬ ದಾಂಡಿಗನು ನಿಯಮ ೩೫ (ಹಿಟ್ ವಿಕೆಟ್), ೩೭(ಕ್ಷೇತ್ರ ರಕ್ಷಣೆಗೆ ಅಡೆತಡೆ), ೩೮ (ರನ್ ಔಟ್), ಇಲ್ಲವೇ ೩೯ (ಸ್ಟಂಪ್ಡ್) ಗಳನ್ನು ಹೊರತುಪಡಿಸಿ, ಇತರ ಯಾವುದೇ ನಿಯಮಗಳ ಅಡಿಯಲ್ಲಿ ಔಟಾಗುವುದಿಲ್ಲ. |

| LAW 23 BYE AND LEG BYE | ನಿಯಮ ೨೩ ಬೈ ಮತ್ತು ಲೆಗ್ ಬೈ |
|---|---|
| **23.1 Byes**<br>If the ball, delivered by the bowler, not being a Wide, passes the striker without touching his/her bat or person, any runs completed by the batters from that delivery, or a boundary allowance, shall be credited as Byes to the batting side. Additionally, if the delivery is a No ball, the one run penalty for such a delivery shall be incurred. | **೨೩.೧ ಬೈಸ್**<br>ಬೌಲರ್‌ನಿಂದ ಬೌಲ್ ಮಾಡಲ್ಪಟ್ಟ ಚೆಂಡು, ನೋ ಬಾಲ್ ಅಥವಾ ವೈಡ್ ಆಗಿರದ, ಚೆಂಡನ್ನು ಎದುರಿಸುವ ದಾಂಡಿಗನ ದಾಂಡಿಗೆ ಅಥವಾ ಶರೀರದ ಯಾವುದೇ ಭಾಗಕ್ಕೆ ತಗಲದೆ ಅವನನ್ನು/ಅವಳನ್ನು ದಾಟಿದ ಮೇಲೆ, ಆ ಎಸೆತದಲ್ಲಿ ದಾಂಡಿಗರು ಪೂರ್ಣಗೊಳಿಸಿದ ಯಾವುದೇ ಓಟಗಳು ಇಲ್ಲವೇ ಬೌಂಡರಿ ಗಳಿಕೆಯಿಂದ ಗಳಿಸಿದ ಓಟಗಳನ್ನು ಬೈಸ್ ಎಂದು ದಾಂಡಿಗ ತಂಡದ ಮೊತ್ತಕ್ಕೆ ಸೇರಿಸಬೇಕು. ಒಂದು ವೇಳೆ ಆ ಎಸೆತ ನೋ ಬಾಲ್ ಆಗಿದ್ದರೆ ಆ ಎಸೆತಕ್ಕೆ ದಂಡದ ಒಂದು ಓಟವನ್ನೂ ಸೇರಿಸಬೇಕು. |
| **23.2 Leg byes**<br>23.2.1 If a ball delivered by the bowler first strikes the person of the striker, runs shall be scored only if the umpire is satisfied that the striker has<br>either attempted to play the ball with the bat<br>or tried to avoid being hit by the ball.<br><br>23.2.2 If the umpire is satisfied that either of these conditions has been met runs shall be scored as follows.<br>23.2.2.1 If there is | **೨೩.೨ ಲೆಗ್ ಬೈಸ್**<br>**೨೩.೨.೧** ಬೌಲರ್‌ನಿಂದ ಬೌಲ್ ಮಾಡಲ್ಪಟ್ಟ ಚೆಂಡು ಮೊದಲು ದಾಂಡಿಗನ ಶರೀರಕ್ಕೆ ತಾಗಿದಾಗ, ಅಂಪೈರರಿಗೆ ದಾಂಡಿಗನು, ದಾಂಡಿನಿಂದ ಚೆಂಡನ್ನು ಆಡಲು ನಿಜವಾದ ಪ್ರಯತ್ನ ಮಾಡಿದ್ದಾನೆ ಅಥವಾ ಚೆಂಡಿನಿಂದ ಪೆಟ್ಟು ಬೀಳುವುದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾನೆ ಎಂದು ಮನವರಿಕೆಯಾದರೆ ಮಾತ್ರ ರನ್‌ಗಳ ಗಳಿಕೆಯಾಗುತ್ತದೆ.<br>೨೩.೨.೨ ಅಂಪೈರರಿಗೆ ಈ ಷರತ್ತುಗಳಲ್ಲಿ ಯಾವುದಾದರೊಂದನ್ನು ಪಾಲಿಸಲ್ಪಟ್ಟಿದೆ ಎಂದು ಮನವರಿಕೆಯಾದರೆ, ಓಟಗಳನ್ನು ಈ ಕೆಳಗಿನಂತೆ ಲೆಕ್ಕಿಸಬೇಕು. |

either no subsequent contact with the striker's bat or person,

or only inadvertent contact with the striker's bat or person any runs completed by the batters, or a boundary allowance shall be credited to the striker in the case of subsequent contact with his/her bat but otherwise to the batting side as in 23.2.3.

23.2.2.2 If the striker wilfully makes a lawful second strike, Laws 34.3 (Ball lawfully struck more than once) and 34.4 (Runs permitted from ball lawfully struck more than once) shall apply.

23.2.3 The runs in 23.2.2.1, unless credited to the striker, shall be scored as Leg byes.

Additionally, if the delivery is a No ball, the one run penalty for the No ball shall be incurred.

೨೩.೨.೨.೧ ಒಂದು ವೇಳೆ, ತದನಂತರದಲ್ಲಿ ಚೆಂಡನ್ನು ಎದುರಿಸುವ ದಾಂಡಿಗನ ದಾಂಡಿಗೆ ಅಥವಾ ದೇಹಕ್ಕೆ ತಗಲದಿದ್ದರೆ,

ಅಥವಾ ದಾಂಡಿಗನ ದಾಂಡು ಅಥವಾ ದೇಹಕ್ಕೆ ಉದ್ದೇಶರಹಿತ ಸಂಪರ್ಕವಾದರೆ

ದಾಂಡಿಗರು ಪೂರ್ತಿಗೊಳಿಸಿದ ಯಾವುದೇ ಓಟಗಳು ಅಥವಾ ಬೌಂಡರಿ ಗಳಿಕೆಯ ಓಟಗಳನ್ನು, ಚೆಂಡು ದಾಂಡಿಗನ ದಾಂಡಿಗೆ ತಗಲಿದ್ದರೆ ದಾಂಡಿಗನ ಖಾತೆಗೂ ಇಲ್ಲವಾದರೆ ದಾಂಡಿಗ ತಂಡದ ಖಾತೆಗೆ ೨೩.೨.೩ರಲ್ಲಿ ತಿಳಿಸಿರುವಂತೆ ಸೇರಿಸಬೇಕು.

೨೩.೨.೨.೨ ಚೆಂಡನ್ನೆದುರಿಸುವ ದಾಂಡಿಗನು ಉದ್ದೇಶಪೂರ್ವಕವಾಗಿ ನಿಯಮಬದ್ಧವಾದ ಎರಡನೇ ಹೊಡೆತವನ್ನು ಹೊಡೆದರೆ, ನಿಯಮ ೩೪.೩(ನಿಯಮ ಬದ್ಧವಾಗಿ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದು), ಮತ್ತು ೩೪.೪(ನಿಯಮ ಬದ್ಧವಾಗಿ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆದ ಚೆಂಡಿನಿಂದ ಓಟಗಳ ಗಳಿಕೆ) ಅನ್ವಯಿಸುತ್ತದೆ.

೨೩.೨.೩ ೨೩.೨.೨.೧ರಲ್ಲಿರುವಂತೆ ಓಟಗಳನ್ನು ಚೆಂಡನ್ನು ಎದುರಿಸುವ ದಾಂಡಿಗನ/ದಾಂಡಿಗಳ ಲೆಕ್ಕಕ್ಕೆ ಸೇರಿಸದಿದ್ದರೆ, ಲೆಗ್ ಬೈಸ್ ಎಂದು ಲೆಕ್ಕಿಸಬೇಕು.

ಇದರ ಜೊತೆಗೆ, ಆ ಎಸೆತ ನೋ ಬಾಲ್ ಎಂದಾದರೆ, ದಂಡದ ಒಂದು ಓಟವನ್ನೂ ಲೆಕ್ಕಿಸಬೇಕು.

| | |
|---|---|
| **23.3 Leg byes not to be awarded.**<br>If in the circumstance of 23.2.1 the umpire considers that neither of the conditions therein has been met, then Leg byes shall not be awarded.<br>If the ball does not become dead for any other reason, the umpire shall call and signal Dead ball as soon as the ball reaches the boundary or at the completion of the first run.<br>The umpire shall then<br>- disallow all runs to the batting side,<br>- return any not out batter to his/her original end,<br>- signal No ball to the scorers if applicable,<br>- award any 5-run Penalty that is applicable except for Penalty runs under Law 28.3 (Protective helmets belonging to the fielding side). | **೨೩.೩ ಲೆಗ್ ಬೈಸ್ ಒಟಗಳನ್ನು ಅನುಮತಿಸದಿರುವುದು**<br>೨೩.೨.೧ರ ಷರತ್ತುಗಳಲ್ಲಿ, ಯಾವುದೇ ಷರತ್ತನ್ನು ಪೂರೈಸಿಲ್ಲ ಎಂದು ಅಂಪೈರ್ ಪರಿಗಣಿಸಿದರೆ, ಲೆಗ್ ಬೈ ಒಟಗಳನ್ನು ಅನುಮತಿಸಬಾರದು.<br>ಇತರ ಯಾವುದೇ ಕಾರಣಕ್ಕಾಗಿ ಚೆಂಡು ಡೆಡ್ ಆಗದಿದ್ದರೆ, ಚೆಂಡು ಬೌಂಡರಿ ತಲುಪಿದ ಕೂಡಲೇ ಅಥವಾ ಮೊದಲ ಒಟವನ್ನು ಪೂರ್ಣಗೊಳಿಸಿದೊಡನೆಯೇ ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು.<br>ತದನಂತರ ಅಂಪೈರ್,<br>➢ ದಾಂಡಿಗ ತಂಡ ಗಳಿಸಿದ ಎಲ್ಲ ಒಟಗಳನ್ನು ರದ್ದು ಪಡಿಸಬೇಕು.<br>➢ ಔಟ್ ಆಗದೇ ಇರುವ ದಾಂಡಿಗನನ್ನು/ದಾಂಡಿಗಳನ್ನು ಅವರ ಸ್ವಸ್ಥಾನಕ್ಕೆ ಹಿಂತಿರುಗಿಸಬೇಕು.<br>➢ ಅನ್ವಯವಾದಲ್ಲಿ ಸ್ಕೋರರಿಗೆ ನೋ ಬಾಲ್ ಸನ್ನೆ ಮಾಡಬೇಕು.<br>➢ ನಿಯಮ ೨೮.೩ (ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ)ಅನ್ವಯ ಅನುದಾನಿಸುವ ದಂಡದ ೫ ಒಟಗಳನ್ನು ಹೊರತು ಪಡಿಸಿ, ಅನ್ವಯಿಸಬಹುದಾದ ಯಾವುದೇ ಇತರ ದಂಡದ ೫ ಒಟಗಳನ್ನು ಅನುದಾನಿಸಬೇಕು. |
| **LAW 24 FIELDER'S ABSENCE; SUBSTITUTES** | **ನಿಯಮ ೨೪ ಕ್ಷೇತ್ರ ರಕ್ಷಕನ ಅನುಪಸ್ಥಿತಿ; ಬದಲಿ ಆಟಗಾರ** |
| **24.1 Substitute fielders**<br>24.1.1 The umpires shall allow a substitute fielder. | **೨೪.೧ ಬದಲಿ ಕ್ಷೇತ್ರ ರಕ್ಷಕರು**<br>೨೪.೧.೧ ಅಂಪೈರ್ ಬದಲಿ ಕ್ಷೇತ್ರ ರಕ್ಷಕನಿಗೆ ಅನುಮತಿ ಯಾವಾಗ |

| | |
|---|---|
| 24.1.1.1 if they are satisfied that a fielder has been injured or become ill and that this occurred during the match, or<br><br>24.1.1.2 for any other wholly acceptable reason. In all other circumstances, a substitute is not allowed.<br><br>24.1.2 A substitute shall not bowl or act as captain but may act as wicketkeeper only with the consent of the umpires. Note, however, Law 42.7.1 (Additional points relating to Level 3 and Level 4 offences).<br>24.1.3 A nominated player may bowl or field even though a substitute has previously acted for him/her, subject to 24.2, 24.3 and Law 42.4 (Level 3 offences and action by umpires). | ಕೊಡಬೇಕೆಂದರೆ,<br>೨೪.೪.೧.೧ ಪಂದ್ಯದ ಅವಧಿಯಲ್ಲಿ ಒಬ್ಬ ಕ್ಷೇತ್ರ ರಕ್ಷಕನು ಗಾಯಗೊಂಡಿದ್ದಾನೆ ಅಥವಾ ಅಸ್ವಸ್ಥನಾಗಿದ್ದಾನೆ ಎಂದು ಅಂಪೈರ್‌ಗೆ ಖಾತ್ರಿಯಾದರೆ ಇಲ್ಲವೇ<br>೨೪.೪.೧.೨ ಯಾವುದೇ ಅಂಗೀಕರಿಸಬಹುದಾದ ಕಾರಣಕ್ಕಾಗಿ. ಉಳಿದ ಎಲ್ಲ ಸಂದರ್ಭಗಳಲ್ಲಿ ಬದಲಿ ಆಟಗಾರರನ್ನು ಅನುಮತಿಸುವ ಹಾಗಿಲ್ಲ.<br>೨೪.೧.೨ ಬದಲಿ ಆಟಗಾರನು ಬೌಲಿಂಗ್ ಮಾಡುವಂತಿಲ್ಲ ಇಲ್ಲವೇ ನಾಯಕನಾಗಿ ವರ್ತಿಸುವಂತಿಲ್ಲ, ಆದರೆ ಅಂಪೈರುಗಳ ಸಮ್ಮತಿಯೊಂದಿಗೆ ಘೂಟ ರಕ್ಷಕನಾಗಬಹುದು. ಆದರೂ ನಿಯಮ ೪೨.೭.೧(೩ನೇ ಮತ್ತು ೪ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ) ಗಮನಿಸಿ.<br>೨೪.೧.೩ ನೇಮಕಗೊಂಡ ಆಟಗಾರ, ಅವನ/ಅವಳ ಪರವಾಗಿ ಬದಲಿ ಆಟಗಾರನೊಬ್ಬ ಮೊದಲೇ ಪ್ರತಿನಿಧಿಸಿದ್ದರೂ ಸಹ ೨೪.೨, ೨೪.೩, ಮತ್ತು ನಿಯಮ ೪೨.೪(೩ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ) ಕ್ಕೆ ಒಳಪಟ್ಟು, ಬೌಲ್ ಅಥವಾ ಕ್ಷೇತ್ರ ರಕ್ಷಣೆ ಮಾಡಬಹುದು. |
| **24.2 Fielder absent or leaving the field of play**<br>24.2.1 A player going briefly outside the boundary while carrying out any duties as a fielder is not absent from the | **೨೪.೨ ಕ್ಷೇತ್ರ ರಕ್ಷಕ- ಅನುಪಸ್ಥಿತಿ ಇಲ್ಲವೇ ಮೈದಾನದಿಂದ ಹೊರ ಹೋಗುವುದು**<br>೨೪.೨.೧ ಒಬ್ಬ ಕ್ಷೇತ್ರ ರಕ್ಷಕನು, ಕ್ಷೇತ್ರ ರಕ್ಷಣೆಯ ಕರ್ತವ್ಯವನ್ನು ನಿಭಾಯಿಸಲು ತಾತ್ಕಾಲಿಕವಾಗಿ ಮೈದಾನದ ಹೊರಗೆ ಹೋದರೆ, |

| | |
|---|---|
| field of play nor, for the purposes of this Law, is he/she to be regarded as having left the field of play. | ಅದು  ಆಟದ ಮೈದಾನ ಬಿಟ್ಟು ಹೊರಹೋದಂತೆ ಅಲ್ಲ ಮತ್ತು ಈ ನಿಯಮಕ್ಕಾಗಿ ಆಟದ ಮೈದಾನ ಬಿಟ್ಟಂತಲ್ಲ. |
| 24.2.2 If a fielder fails to take the field at the start of play or at any later time, or leaves the field during play, | ೨೪.೨.೨ ಒಬ್ಬ ಕ್ಷೇತ್ರ ರಕ್ಷಕನು ಪಂದ್ಯದ ಪ್ರಾರಂಭದಲ್ಲಿ ಅಥವಾ ತದನಂತರದಲ್ಲಿ ಮೈದಾನದೊಳಗೆ ಬರದಿದ್ದಲ್ಲಿ ಅಥವಾ ಆಟದ ಅವಧಿಯಲ್ಲಿ ಮೈದಾನದಿಂದ ಹೊರಗೆ ಹೋದರೆ, |
| 24.2.2.1 an umpire shall be informed of the reason for this absence. | ೨೪.೨.೨.೧ ಈ ಗೈರು ಹಾಜರಿಯ ಕಾರಣವನ್ನು ಅಂಪೈರ್‌ಗೆ ತಿಳಿಸಬೇಕು. |
| 24.2.2.2 he/she shall not thereafter come on to the field of play during a session of play without the consent of the umpire. See 24.4. The umpire shall give such consent as soon as it is practicable. | ೨೪.೨.೨.೨ ಅದರ ನಂತರ ಅವನು/ಅವಳು ಆಟದ ಮೈದಾನದ ಒಳಗೆ ಆಟ ನಡೆದಿರುವಾಗ ಅಂಪೈರ್ ಅನುಮತಿ ಇಲ್ಲದೇ ಬರುವಂತಿಲ್ಲ. ೨೪.೪ ಗಮನಿಸಿ. ಅಂಪೈರ್ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅನುಮತಿ ಕೊಡಬೇಕು. |
| 24.2.2.3 he/she shall not be permitted to bowl, until having been back on the field of play for a period of time known as Penalty time as described in 24.2.3 to 24.2.7 and 24.3. | ೨೪.೨.೨.೩ ಅವನು/ಅವಳು ಆಟದ ಮೈದಾನದೊಳಗೆ ಹಿಂತಿರುಗಿದ ನಂತರ, ೨೪.೨.೩ ರಿಂದ ೨೪.೨೭ ಹಾಗೂ ೨೪.೩ರಲ್ಲಿ ವಿವರಿಸಿರುವಂತೆ ದಂಡದ ಅವಧಿ ಮುಗಿಯುವವರೆಗೆ ಆಟದ ಮೈದಾನದಲ್ಲಿ ಇರದ ಹೊರತು ಬೌಲಿಂಗ್ ಮಾಡುವಂತಿಲ್ಲ. |
| 24.2.3 A player’s unserved Penalty time shall be limited to a maximum of 90 minutes. | ೨೪.೨.೩ ಆಟಗಾರನೊಬ್ಬನ ದಂಡ ಅನುಭವಿಸದ ದಂಡದ ಅವಧಿ ಗರಿಷ್ಠ ೯೦ ನಿಮಿಷಗಳಿಗೆ ಸೀಮಿತಗೊಳ್ಳಬೇಕು. |
| | ೨೪.೨.೪ ಒಬ್ಬ ಆಟಗಾರ ದಂಡದ ಅವಧಿ ಮುಗಿಯುವುದರೊಳಗೇ ಮೈದಾನದಿಂದ ಹೊರಗೆಬಂದರೆ, ಉಳಿದಿರುವ ಸಮಯವನ್ನು ದಂಡದ ಸಮಯವೆಂದು ಮುಂದುವರೆಸಬೇಕು. |

| | |
|---|---|
| 24.2.4 If the player leaves the field before having served all of his/her Penalty time, the balance is carried forward as unserved Penalty time.<br>24.2.5 The player shall not bowl until all of his/her Penalty time has been served. On any occasion of absence, the amount of Playing time for which the player is off the field shall be added to any Penalty time that remains unserved, subject to 24.2.3. | ೨೪.೨.೫ ಆಟಗಾರನು ಅವನ/ಅವಳ ಎಲ್ಲ ದಂಡದ ಅವಧಿಯನ್ನು ಪೂರ್ತಿಗೊಳಿಸುವವರೆಗೆ ಬೌಲ್ ಮಾಡುವಂತಿಲ್ಲ. ಯಾವುದೇ ಅನುಪಸ್ಥಿತಿಯ ಸಂದರ್ಭದಲ್ಲಿ, ಆಟಗಾರನು ಎಷ್ಟು ಆಟದ ಸಮಯದವರೆಗೆ ಮೈದಾನದ ಹೊರಗೆ ಇದ್ದನೋ, ಅಷ್ಟು ಸಮಯವನ್ನು ೨೪.೨.೩ಕ್ಕೆ ಒಳಪಟ್ಟು ದಂಡ ಅನುಭವಿಸದ ಅವಧಿಗೆ ಕೂಡಿಸಬೇಕು. |
| 24.2.6 If there is an unscheduled break in play, the stoppage time shall count as Penalty time served, provided that, | ೨೪.೨.೬ ಆಟದ ಅವಧಿಯಲ್ಲಿ ಯಾವುದೇ ಅನಿಯಮಿತ ತಡೆ ಇದ್ದರೆ, ತಡೆಯ ಅವಧಿ, ಅನುಭವಿಸಿದ ದಂಡದ ಅವಧಿ ಎಂದು ಈ ಕೆಳಗಿನ ಷರತ್ತಿನಮೇಲೆ ಪರಿಗಣಿಸಬೇಕು. |
| 24.2.6.1 the fielder who was on the field of play at the start of the break either takes the field on the resumption of play, or his/her side is now batting. | ೨೪.೨.೬.೧ ಅನಿಯಮಿತ ತಡೆ ಪ್ರಾರಂಭವಾದಾಗ ಆಟದ ಮೈದಾನದೊಳಗಿದ್ದ ಆಟಗಾರ, ಆಟ ಪುನರಾರಂಭವಾದಾಗ ಮೈದಾನದ ಒಳಗೆ ಬರಬೇಕು ಅಥವಾ ಅವನ/ಅವಳ ತಂಡ ಬ್ಯಾಟಿಂಗ್ ಮಾಡುತ್ತಿರಬೇಕು. |
| 24.2.6.2 the fielder who was already off the field at the start of the break notifies an umpire in person as soon as he/she is able to participate, and either takes the field on the resumption of play, or his/her side is now batting. Stoppage time before an umpire has been so notified shall not count towards unserved Penalty time. | ೨೪.೨.೬.೨ ತಡೆಯ ಪ್ರಾರಂಭದ ಮೊದಲೇ ಮೈದಾನದ ಹೊರಗಿದ್ದ ಕ್ಷೇತ್ರ ರಕ್ಷಕ ತಾನು ಆಟಕ್ಕೆ ಯಾವಾಗ ಸಿದ್ಧ ಎಂದು ಅಂಪೈರ್‌ಗೆ ಸ್ವತಃ ತಿಳಿಸಿ, ಆಟ ಪುನರಾರಂಭವಾದಾಗ ಮೈದಾನದ ಒಳಗೆ ಬಂದರೆ ಅಥವಾ ಅವನ/ಅವಳ ತಂಡ ಬ್ಯಾಟಿಂಗ್ ಮಾಡುತ್ತಿದ್ದರೆ, ಅಂಪೈರ್‌ಗೆ ತಿಳಿಸುವ ಮೊದಲಿನ ತಡೆಯ ಅವಧಿ ಅನುಭವಿಸದ ದಂಡದ ಅವಧಿ ಎಂದು ಪರಿಗಣಿಸಬಾರದು. |

| | |
|---|---|
| 24.2.7 Any unserved Penalty time shall be carried forward into the next and subsequent days and innings of the match, as applicable. | ೨೪.೨.೭ ಅನುಭವಿಸಿಲ್ಲದ ಯಾವುದೇ ದಂಡದ ಅವಧಿಯನ್ನು ಮುಂದಿನ ಮತ್ತು ತರುವಾಯದ ದಿನಗಳ ಆಟಕ್ಕೆ ಮತ್ತು ಸರದಿಗೆ ಹೇಗೆ ಅನ್ವಯಿಸುತ್ತದೋ ಹಾಗೇ ಮುಂದುವರೆಸಬೇಕು. |
| 24.2.8 If a Level 3 offence under Law 42.4 (Level 3 offences and action by umpires) is committed by a fielder, the period of time spent off the field of play as a result of the suspension shall not be added to any unserved Penalty time if he/she takes the field at the end of the period of suspension. | ೨೪.೨.೮ ಆಟಗಾರನೊಬ್ಬನಿಂದ ನಿಯಮ ೪೨.೪ (೩ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ)ರನ್ವಯ ೩ನೇ ಮಟ್ಟದ ಅಪರಾಧವಾಗಿದ್ದರೆ, ಮೈದಾನದ ಹೊರಗೆ ಅಮಾನತ್ತಿಗೋಸ್ಕರ ಕಳೆದ ಅವಧಿಯನ್ನು ದಂಡ ಅನುಭವಿಸದ ಅವಧಿಗೆ ಅವನು/ಅವಳು ಅಮಾನತ್ತಿನ ಅವಧಿ ಮುಗಿದ ಮೇಲೆ ಮೈದಾನದ ಒಳಗೆ ಬಂದರೆ ಕೂಡಿಸಬಾರದು. |
| 24.2.9 If a Level 3 offence under Law 42.4 (Level 3 offences and action by umpires) is committed by a substitute, the following shall apply. | ೨೪.೨.೯ ಬದಲಿ ಆಟಗಾರನೊಬ್ಬನಿಂದ ನಿಯಮ ೪೨.೪ (೩ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ) ರ ಅನ್ವಯ ೩ನೇ ಮಟ್ಟದ ಅಪರಾಧವಾದರೆ, ಕೆಳಗಿನವುಗಳು ಅನ್ವಯವಾಗುತ್ತವೆ. |
| 24.2.9.1 The period of time spent off the field as a result of the suspension shall not be added to any Penalty time that remains unserved if the nominated player takes the field at the end of the period of suspension. However, any time spent off the field prior to the offence causing the suspension will remain as unserved Penalty time, subject to 24.2.3. | ೨೪.೨.೯.೧ ಅಮಾನತ್ತಿಗೋಸ್ಕರ ಮೈದಾನದ ಹೊರಗೆ ಕಳೆದ ಅವಧಿಯನ್ನು ನೇಮಕಗೊಂಡ ಆಟಗಾರ ಅಮಾನತ್ತಿನ ಅವಧಿ ಮುಗಿದ ನಂತರ ಮೈದಾನದ ಒಳಗೆ ಬಂದರೆ, ಯಾವುದೇ ಅನುಭವಿಸದ ದಂಡದ ಅವಧಿಗೆ ಸೇರಿಸಬಾರದು. ಆದರೆ, ಅಮಾನತ್ತುಗೊಳ್ಳುವ ಅಪರಾಧವಾಗುವ ಮೊದಲು ಮೈದಾನದ ಹೊರಗೆ ಕಳೆದ ಯಾವುದೇ ಸಮಯ ೨೪.೨೩ಕ್ಕೆ ಒಳಪಟ್ಟು, ಅನುಭವಿಸದ ಅವಧಿ ಎಂದೇ ಉಳಿಯುತ್ತದೆ. |

| | |
|---|---|
| 24.2.9.2 If the nominated player does not take the field at the end of the period of suspension, then the entire period of his/her absence will be treated as Penalty time, up to a maximum of 90 minutes. | ೨೪.೨.೯.೨ ನೇಮಕಗೊಂಡ ಆಟಗಾರ ಅಮಾನತ್ತಿನ ಅವಧಿ ಮುಗಿದ ನಂತರ ಮೈದಾನದ ಒಳಗೆ ಬರದಿದ್ದರೆ, ಅವನ/ಅವಳ ಅನುಪಸ್ಥಿತಿಯ ಪೂರ್ಣ ಅವಧಿಯನ್ನು ಗರಿಷ್ಠ ೯೦ ನಿಮಿಷಕ್ಕೆ ಮೀರದಂತೆ ದಂಡದ ಅವಧಿ ಎಂದು ಪರಿಗಣಿಸಬೇಕು. |
| **24.3 Penalty time not incurred.**<br>A nominated player's absence will not incur Penalty time if,<br>24.3.1 he/she has suffered an external blow during the match and, as a result, has justifiably left the field or is unable to take the field.<br>24.3.2 in the opinion of the umpires, the player has been absent or has left the field for other wholly acceptable reasons, which shall not include illness or internal injury. | **೨೪.೩ ದಂಡದ ಅವಧಿ ಅನ್ವಯವಾಗುವುದಿಲ್ಲ**<br>ನೇಮಕಗೊಂಡ ಆಟಗಾರನ ಅನುಪಸ್ಥಿತಿ ದಂಡದ ಅವಧಿ ಯಾವಾಗ ಆಗುವುದಿಲ್ಲ ಅಂದರೆ,<br>೨೪.೩.೧ ಪಂದ್ಯದ ಅವಧಿಯಲ್ಲಿ ಅವನು/ಅವಳು ಬಾಹ್ಯವಾಗಿ ಗಾಯಗೊಂಡು, ಅದಕ್ಕೋಸ್ಕರ ನ್ಯಾಯಯುತವಾಗಿ ಮೈದಾನ ಬಿಟ್ಟರೆ ಇಲ್ಲವೇ ಮೈದಾನದ ಒಳಗೆ ಬರಲಾಗದಿದ್ದರೆ.<br>೨೪.೩.೨ ಗಾಯ ಅಥವಾ ಅಸ್ವಸ್ಥತೆಗೊಳ್ಳದೆ, ಅಂಪೈರ್ ಅಭಿಪ್ರಾಯದಲ್ಲಿ ಸಂಪೂರ್ಣವಾಗಿ ಅಂಗೀಕರಿಸಬಹುದಾದ ಇತರ ಕಾರಣಕ್ಕಾಗಿ ಬರದಿದ್ದರೆ. |
| **24.4 Player returning without permission.**<br>If a player comes on to the field of play in contravention of 24.2.2 and comes into contact with the ball while it is in play, the ball shall immediately become dead.<br>- The umpires shall signal No ball or Wide to the scorers, if applicable<br>- The umpire shall award 5 Penalty runs to the batting side. | ೨೪.೪ **ಅನುಮತಿ ಇಲ್ಲದೇ ಆಟಗಾರನು ಹಿಂತಿರುಗುವುದು**<br>ಆಟಗಾರನೊಬ್ಬ ೨೪.೨.೨ನ್ನು ಉಲ್ಲಂಘಿಸಿ ಬಂದು, ಆಟದಲ್ಲಿರುವ ಚೆಂಡಿನ ಸಂಪರ್ಕದಲ್ಲಿ ಬಂದರೆ, ಚೆಂಡು ತತ್‌ಕ್ಷಣ ಡೆಡ್ ಆಗುತ್ತದೆ.<br>➢ ಅವಶ್ಯ ವಿದ್ದಲ್ಲಿ ಅ0ಪೈರ್ ಸ್ಕೋರರಿಗೆ ನೋ ಬಾಲ್ ಇಲ್ಲವೇ ವೈಡ ಬಾಲ್ ಸನ್ನೆ ಮಾಡಬೇಕು.<br>➢ ಅಂಪೈರ್ ದಾಂಡಿಗ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು. |

| | |
|---|---|
| - Runs completed by the batters shall be scored together with the run-in progress if they had already crossed at the instant of the offence.<br>- The ball shall not count as one of the over.<br>- The umpire shall inform the other umpire, the captain of the fielding side, the batters and, as soon as practicable, the captain of the batting side of the reason for this action.<br>- The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ದಾಂಡಿಗರು ಪೂರ್ಣಗೊಳಿಸಿದ ಓಟಗಳ ಜೊತೆಗೆ ಅಪರಾಧದ ಕ್ಷಣದಲ್ಲಿ ದಾಂಡಿಗರು ಒಬ್ಬರನ್ನೊಬ್ಬರು ದಾಟಿದ್ದರೆ ಅದನ್ನೂ ಸೇರಿಸಿ ಲೆಕ್ಕಿಸಬೇಕು.<br>➢ ಆ ಎಸೆತವನ್ನು ಓವರಿನಲ್ಲಿಯ ಒಂದು ಎಸೆತ ಎಂದು ಎಣಿಸಬಾರದು.<br>➢ ಅಂಪೈರ್ ತನ್ನ ಸಹ ಅಂಪೈರ್‌ಗೆ, ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ, ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಈ ಕ್ರಮದ ಕಾರಣದ ಬಗ್ಗೆ ತಿಳಿಸಬೇಕು.<br>➢ ಪಂದ್ಯ ಮುಗಿದ ನಂತರ, ಇಬ್ಬರೂ ಅಂಪೈರ್‌ಗಳು ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗ ತಪ್ಪೆಸಗಿದ ತಂಡದ ಪದಾಧಿಕಾರಿಗಳಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ಅವರು ತಂಡದ ನಾಯಕ, ಬೇರಾವುದೇ ವ್ಯಕ್ತಿ ಹಾಗೂ ಸೂಕ್ತವೆನಿಸಿದಲ್ಲಿ, ಇಡೀ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **LAW 25 BATTER'S INNINGS; RUNNERS** | **ನಿಯಮ ೨೫ ದಾಂಡಿಗನ ಸರದಿ: ಓಟಗಾರರು** |
| **25.1 Eligibility to act as a batter or runner**<br>Only a nominated player may bat or act as a runner and, subject to 25.3 and 25.5.2, may do so even though a substitute fielder has previously acted for him/her. | **೨೫.೧ ದಾಂಡಿಗನಾಗಿ ಅಥವಾ ಓಟಗಾರನಾಗಿ ಕಾರ್ಯ ನಿರ್ವಹಿಸುವುದು**<br>ನೇಮಕಗೊಂಡ ಆಟಗಾರನೊಬ್ಬ ಮಾತ್ರ ದಾಂಡಿಗನಾಗಿ ಅಥವಾ ಓಟಗಾರನಾಗಿ ಕಾರ್ಯ ನಿರ್ವಹಿಸಬಹುದು ಮತ್ತು ೨೫.೩ ಮತ್ತು ೨೫.೫.೨ಕ್ಕೆ ಒಳಪಟ್ಟಂತೆ ಅವನ/ಅವಳ ಪರವಾಗಿ ಬದಲಿ ಆಟಗಾರ ಕಾರ್ಯನಿರ್ವಹಿಸಿದ್ದರೂ ಸಹ ಹಾಗೇ ಮಾಡಬಹುದು. |

| | |
|---|---|
| **25.2 Commencement of a batter’s innings**<br>The innings of the first two batters, and that of any new batter on the resumption of play after a call of Time, shall commence at the call of Play. At any other time, a batter’s innings shall be considered to have commenced when that batter first steps onto the field of play. | **೨೫.೨ ದಾಂಡಿಗನ ಸರದಿಯ ಪ್ರಾರಂಭ**<br>ಮೊದಲ ಇಬ್ಬರು ದಾಂಡಿಗರ ಸರದಿ ಹಾಗೂ “ಟೈಂ” ಎಂದು ಕರೆದ ಮೇಲೆ ಆಟವು ಪುನರಾರಂಭಗೊಂಡಾಗ ಬರುವ ಹೊಸ ದಾಂಡಿಗನ ಸರದಿ “ಪ್ಲೇ” ಎಂದು ಕರೆದ ಕೂಡಲೇ ಪ್ರಾರಂಭಗೊಳ್ಳುತ್ತದೆ. ಇತರ ಯಾವುದೇ ಸಮಯದಲ್ಲಿ, ಒಬ್ಬ ದಾಂಡಿಗನ ಸರದಿಯು ಅವನು/ಅವಳು ಬೌಂಡರಿ ರೇಖೆಯ ಒಳಗೆ ಕಾಲಿಟ್ಟ ಕೂಡಲೇ ಪ್ರಾರಂಭವಾಗಿದೆ ಎಂದು ಪರಿಗಣಿಸಬೇಕು. |
| **25.3 Restriction on batter commencing an innings**<br>25.3.1 If a member of the batting side has unserved Penalty time, see Law 24.2.7 (Fielder absent or leaving the field of play), that player shall not be permitted to bat or act as a runner until that Penalty time has been served. However, even if the unserved Penalty time has not expired, that player may bat after his/her side has lost 5 wickets.<br><br>25.3.2 A member of the batting side’s Penalty time is served during Playing time, subject to the conditions in 25.3.2.1 and 25.3.2.2. | **೨೫.೩ ದಾಂಡಿಗನ  ಸರದಿಯ ಪ್ರಾರಂಭಕ್ಕೆ ನಿರ್ಬಂಧ**<br>೨೫.೩.೧ ದಾಂಡಿಗ ತಂಡದ ಒಬ್ಬ ಸದಸ್ಯನ ದಂಡದ ಅವಧಿ ಬಾಕಿ ಇದ್ದರೆ, ನಿಯಮ ೨೪.೨.೭ (ಕ್ಷೇತ್ರ ರಕ್ಷಕನ ಅನುಪಸ್ಥಿತಿ ಅಥವಾ ಮೈದಾನದಿಂದ ಹೊರ ಹೋಗುವುದು.) ಗಮನಿಸಿ. ಆ ಆಟಗಾರನಿಗೆ ದಾಂಡು ಮಾಡಲು ಇಲ್ಲವೇ ಓಟಗಾರನಾಗಿ ಬರಲು ದಂಡದ ಆ ಅವಧಿ ಪೂರೈಸುವವರೆಗೂ ಅನುಮತಿ ಕೊಡಬಾರದು. ಆದರೂ, ಅವನ/ಅವಳ ತಂಡ ೫ ಹುದ್ದರಿ ಗಳನ್ನು ಕಳೆದುಕೊಂಡರೆ, ದಂಡದ ಅವಧಿ ಮುಗಿಯದಿದ್ದರೂ ಸಹ ದಾಂಡಿಗನಾಗಿ ಬರಬಹುದು.<br><br>೨೫.೩.೨ ದಾಂಡಿಗ ತಂಡದ ಒಬ್ಬ ಸದಸ್ಯ ತನ್ನ ದಂಡದ ಅವಧಿಯನ್ನು ೨೫.೩.೨.೧ ಮತ್ತು ೨೫.೩.೨.೨ಕ್ಕೆ ಒಳಪಟ್ಟು ಆಟದ ಸಮಯದಲ್ಲಿ ಪೂರೈಸಬೇಕು. |

| | |
|---|---|
| 25.3.2.1 The period of time while serving a suspension for a Level 3 offence under Law 42.4 (Level 3 offences and action by umpires) does not count as Penalty time served. | ೨೫.೩.೨.೧ ನಿಯಮ ೪೨.೪ (೩ನೇ ಮಟ್ಟದ ಅಪರಾಧಗಳು ಮತ್ತು ಅಂಪೈರ್ ಕ್ರಮ)ರ ಅನ್ವಯ ಪೂರ್ಣಗೊಳಿಸುತ್ತಿರುವ ಅಮಾನತ್ತಿನ ಅವಧಿ ದಂಡದ ಅವಧಿಯ ಪಾಲನೆ ಎಂದು ಪರಿಗಣಿಸಬಾರದು. |
| 25.3.2.2 In the event of an unscheduled stoppage, the stoppage time after the batter notifies an umpire in person that he/she is able to participate shall count as Penalty time served. | ೨೫.೩.೨.೨ ಒಂದು ವೇಳೆ ಅನಿಯಮಿತ ತಡೆ ಇದ್ದರೆ, ದಾಂಡಿಗನು ಸ್ವತಃ ಅಂಪೈರರಿಗೆ ತಾನು ಭಾಗವಹಿಸಲು ಸಮರ್ಥನಿದ್ದೇನೆ/ಸಮರ್ಥಳಿದ್ದೇನೆ ಎಂದು ತಿಳಿಸಿದ ಸಮಯದ ನಂತರದ ತಡೆಯ ಅವಧಿ ದಂಡದ ಅವಧಿಯ ಪಾಲನೆ ಎಂದು ಪರಿಗಣಿಸಬೇಕು. |
| 25.3.3 If any unserved Penalty time remains at the end of a team's innings, it shall be carried forward to the next and subsequent innings of the match if appropriate. | ೨೫.೩.೩ ಒಂದು ಸರದಿಯು ಮುಕ್ತಾಯವಾದಾಗ, ದಂಡದ ಅವಧಿ ಪಾಲಿಸದೆ ಉಳಿದಿದ್ದರೆ, ಅದು ನಂತರದ ಮತ್ತು ತದನಂತರದ ಸರದಿಗೂ ಅಗತ್ಯವಿದ್ದಲ್ಲಿ ಮುಂದೊಯ್ಯಬೇಕು. |
| **25.4 Batter retiring** | **೨೫.೪ ದಾಂಡಿಗನು ನಿವೃತ್ತನಾಗುವುದು** |
| 25.4.1 A batter may retire at any time during his/her innings when the ball is dead. The umpires, before allowing play to proceed, shall be informed of the reason for a batter retiring. | ೨೫.೪.೧ ಚೆಂಡು ಡೆಡ್ ಆದಾಗ, ದಾಂಡಿಗನು ತನ್ನ ಸರದಿಯಲ್ಲಿ ಯಾವಾಗ ಬೇಕಾದರೂ ನಿವೃತ್ತನಾಗಬಹುದು. ಆಟ ಮುಂದುವರೆಯುವ ಮೊದಲು ಅಂಪೈರರಿಗೆ ನಿವೃತ್ತಿಯ ಕಾರಣವನ್ನು ತಿಳಿಸಬೇಕು. |
| 25.4.2 If a batter retires because of illness, injury or any other unavoidable cause, that batter is entitled to resume his/her innings. If for any reason this does not happen, that batter is to be recorded as 'Retired - not out'. | ೨೫.೪.೨ ಒಬ್ಬ ದಾಂಡಿಗನು ಅನಾರೋಗ್ಯ, ಗಾಯ ಅಥವಾ ಇನ್ನಾವುದೋ ಅನಿವಾರ್ಯ ಕಾರಣಗಳಿಂದಾಗಿ ನಿವೃತ್ತನಾದರೆ, ಆ ದಾಂಡಿಗನಿಗೆ ಅವನ/ಅವಳ ಸರದಿ ಮುಂದುವರೆಸುವ ಹಕ್ಕು ಇದೆ. ಯಾವುದೇ ಕಾರಣಕ್ಕಾಗಿ ಇದು ಸಾಧ್ಯವಾಗದಿದ್ದರೆ, ಆ ದಾಂಡಿಗನು "ನಿವೃತ್ತ ಔಟಿಲ್ಲ" ಎಂದು ದಾಖಲಿಸಬೇಕು. |

| | |
|---|---|
| 25.4.3 If a batter retires for any reason other than as in 25.4.2, the innings of that batter may be resumed only with the consent of the opposing captain. If for any reason his/her innings is not resumed, that batter is to be recorded as 'Retired - out'. | ೨೫.೪.೩ ೨೫.೪.೨ರಲ್ಲಿ ತಿಳಿಸಿರುವ ಕಾರಣಗಳನ್ನು ಬಿಟ್ಟು ಬೇರಾವುದೇ ಕಾರಣಗಳಿಗಾಗಿ ನಿವೃತ್ತನಾದರೆ, ಮತ್ತೆ ತನ್ನ ಸರದಿಯನ್ನು ಎದುರಾಳಿ ತಂಡದ ನಾಯಕನ ಅನುಮತಿಯಿಂದ ಮಾತ್ರ ಮುಂದುವರೆಸಬಹುದು. ಯಾವುದೇ ಕಾರಣಕ್ಕಾಗಿ ಅವನು/ಅವಳು ಸರದಿ ಮುಂದುವರೆಸಲು ಸಾಧ್ಯವಾಗದಿದ್ದರೆ, ಆ ದಾಂಡಿಗನು "ನಿವೃತ್ತ ಔಟ್" ಎಂದು ದಾಖಲಿಸಬೇಕು. |
| 25.4.4 If after retiring a batter resumes his/her innings, subject to the requirements of 25.4.2 and 25.4.3, it shall be only at the fall of a wicket or the retirement of another batter. | ೨೫.೪.೪ ನಿವೃತ್ತಿಯ ನಂತರ ೨೫.೪.೨ ಮತ್ತು ೨೫.೪.೩ಕ್ಕೆ ಒಳಪಟ್ಟು ದಾಂಡಿಗನು/ದಾಂಡಿಗಳು ತನ್ನ ಸರದಿಯನ್ನು ಮುಂದುವರೆಸುವುದಾದರೆ ಮತ್ತೊಬ್ಬ ದಾಂಡಿಗ ಔಟ್ ಆದಮೇಲೆ ಇಲ್ಲವೇ ನಿವೃತ್ತಿಯ ನಂತರವೇ ಮುಂದುವರೆಸಬಹುದು. |
| **25.5 Runners** | **೨೫.೫ ಓಟಗಾರರು** |
| 25.5.1 The umpires shall allow a runner for a batter if they are satisfied, | ೨೫.೫.೧ ದಾಂಡಿಗನಿಗೆ ಓಟಗಾರನನ್ನು ಅಂಪೈರ್‌ಗಳು ಕೆಳಕಂಡ ಅಂಶಗಳ ಬಗ್ಗೆ ತೃಪ್ತರಾದರೆ ಮಾತ್ರ ಕೊಡಬೇಕು. |
| 25.5.1.1 that the batter has sustained an injury that affects his/her ability to run and that this occurred during the match. | ೨೫.೫.೧.೧ ಓಡಲು ಅಸಮರ್ಥನಾಗುವ/ಅಸಮರ್ಥಳಾಗುವ ರೀತಿಯಲ್ಲಿ ಪ0ದ್ಯದ ಅವಧಿಯಲ್ಲಿ ಗಾಯಗೊಂಡರೆ, ಮತ್ತು |
| 25.5.1.2 for any other wholly acceptable reason. | ೨೫.೫.೧.೨ ಅ0ಗಿಕರಿಸಬಹುದಾದ ಬೆರಾವುದೆ ಕಾರಣಗಳಿಗೆ. |
| In all other circumstances, a runner is not allowed. | ಉಳಿದೆಲ್ಲ ಸಂದರ್ಭಗಳಲ್ಲಿ ಓಟಗಾರನನ್ನು ಅನುಮತಿಸಬಾರದು, |
| 25.5.2 A runner shall | ೨೫.೫.೨ ಒಬ್ಬ ಓಟಗಾರನು ಕಡ್ಡಾಯವಾಗಿ |
| 25.5.2.1 be a member of the batting side. | ೨೫.೫.೨.೧ ದಾಂಡಿಗ ತಂಡದ ಸದಸ್ಯನಾಗಿರಬೇಕು. |

| | |
|---|---|
| 25.5.2.2 if possible, have already batted in that innings; when this is not possible, if circumstances change such that a dismissed batter can act as runner, then the runner must be changed immediately. | ೨೫.೫.೨.೨ ಸಾಧ್ಯವಾದರೆ ಆ ಸರದಿಯಲ್ಲಿ ಬ್ಯಾಟಿಂಗ್ ಮಾಡಿದವನಾಗಿರಬೇಕು. ಇದು ಸಾಧ್ಯವಾಗದಿದ್ದರೆ, ಸಂದರ್ಭಗಳು ಬದಲಾಗಿ ಔಟ್ ಆದ ದಾಂಡಿಗನು ಓಟಗಾರನಾಗಿ ಬರಲು ಲಭ್ಯವಾದರೆ, ಓಟಗಾರನನ್ನು ಕೂಡಲೇ ಬದಲಿಸಬೇಕು. |
| 25.5.2.3 be changed only with the consent of the umpires. | ೨೫.೫.೨.೩ ಅಂಪೈರ್ ಒಪ್ಪಿಗೆಯ ನಂತರವೇ ಬದಲಿಸಬೇಕು. |
| 25.5.2.4 wear external protective equipment equivalent to that worn by the batter for whom he/she runs and shall carry a bat. | ೨೫.೫.೨.೪ ಯಾವ ದಾಂಡಿಗನಿಗಾಗಿ ಓಟಗಾರ ಬಂದಿರುತ್ತಾನೋ ಆ ದಾಂಡಿಗನು ಧರಿಸಿರುವ ಎಲ್ಲ ಬಾಹ್ಯ ರಕ್ಷಣಾ ಉಪಕರಣಗಳಿಗೆ ಸಮಾನ ಉಪಕರಣಗಳನ್ನು ಧರಿಸಿರಬೇಕು. |
| 25.5.2.5 not have any unserved Penalty time as described in Law 24.2.7 (Fielder absent or leaving the field of play). | ೨೫.೫.೨.೫ ನಿಯಮ ೨೪.೨.೭ (ಕ್ಷೇತ್ರ ರಕ್ಷಕನ ಅನುಪಸ್ಥಿತಿ ಅಥವಾ ಆಟದ ಮೈದಾನ ಬಿಟ್ಟು ಹೋಗುವುದು)ರಲ್ಲಿ ತಿಳಿಸಿರುವಂತೆ ಪಾಲಿಸದ ದಂಡದ ಅವಧಿ ಹೊಂದಿರಬಾರದು. |
| 25.5.3 A batter's runner is subject to the Laws and will be regarded as a batter except where there are special provisions for his/her role as a runner. See Law 30.2 (Which is a batter's ground). | ೨೫.೫.೩ ದಾಂಡಿಗನ ಓಟಗಾರನು ಎಲ್ಲ ನಿಯಮಗಳಿಗೆ ಒಳಪಟ್ಟಿರುತ್ತಾನೆ ಮತ್ತು ಓಟಗಾರನ/ಅವಳ ಪಾತ್ರಕ್ಕೆ ಅನ್ವಯಿಸುವ ನಿರ್ದಿಷ್ಟ ಅವಕಾಶಗಳನ್ನು ಹೊರತುಪಡಿಸಿ ದಾಂಡಿಗನೆಂದೇ ಪರಿಗಣಿಸಬೇಕು. ನಿಯಮ ೩೦.೨ (ದಾಂಡಿಗನ ನಿಗದಿತ ಜಾಗ) ಗಮನಿಸಿ. |
| **25.6 Dismissal and conduct of a batter and his/her runner**<br>25.6.1 A batter who has a runner will suffer the penalty for any infringement of the Laws by the runner as if he/she, the batter, had been responsible for the infringement. In particular he/she will be out if the runner is out under either of Laws 37 (Obstructing the field) or 38 (Run out). | **೨೫.೬ ದಾಂಡಿಗ ಮತ್ತು ಅವನ /ಅವಳ ಓಟಗಾರನನ್ನು ಔಟ್ ಮಾಡುವುದು ಹಾಗೂ ನಡತೆ**<br>೨೫.೬.೧ ದಾಂಡಿಗನು ಓಟಗಾರನನ್ನು ಹೊಂದಿದ್ದರೆ, ಆ ಓಟಗಾರನು ಯಾವುದೇ ನಿಯಮವನ್ನು ಉಲ್ಲಂಘಿಸಿದರೆ, ನಿಯಮವನ್ನು ತಾನೇ ಉಲ್ಲಂಘಿಸಿದ್ದರೆ ಒಳಪಡಬೇಕಾಗುತ್ತಿದ್ದ ದಂಡನೆಗೆ ಗುರಿಯಾಗುತ್ತಾನೆ. ವಿಶೇಷವಾಗಿ, ಆ ಓಟಗಾರನು ನಿಯಮ ೩೭ (ಕ್ಷೇತ್ರ ರಕ್ಷಣೆಗೆ ಅಡಚಣೆ) |

25.6.2 When a batter who has a runner is the striker, he/she remains subject to the Laws and will be liable to the penalties that any infringement of them demands. In the case of Run out and Stumped, however, special provisions, set out in 25.6.3, 25.6.4 and 25.6.5, apply to him/her as a striker who has a runner.

25.6.3 When a batter who has a runner is the striker, his/her ground is always at the wicket-keeper's end.

25.6.4 If the striker who has a runner is in his/her ground, and the runner is out of his/her ground at the wicket-keeper's end when the wicket is fairly put down at that end, the conditions of Law 38 (Run out) shall apply.

25.6.5 If the striker who has a runner is out of his/her ground and the wicket at the wicketkeeper's end is fairly put down, the striker is liable to be out under Laws 38 (Run out) or 39 (Stumped). If the runner is also out of his/her ground at the wicket-keeper's end, then only Law 38 (Run out) can apply.

ಅಥವಾ ೩೮ (ರನ್ ಔಟ್) ಇವುಗಳಲ್ಲಿ ಯಾವುದಾದರೂ ಒಂದರಲ್ಲಿ ಔಟ್ ಆದರೆ, ಆ ದಾಂಡಿಗನೂ ಔಟ್ ಆದಂತೆ.

೨೫.೬.೨ ಓಟಗಾರನನ್ನು ಹೊಂದಿರುವ ದಾಂಡಿಗನು, ಚೆಂಡನ್ನು ಎದುರಿಸುವವನಾಗಿದ್ದರೆ, ಅವನು/ಅವಳು ಆಟದ ಎಲ್ಲ ನಿಯಮಗಳಿಗೆ ಒಳಪಡುತ್ತಾನೆ ಮತ್ತು ನಿಯಮದ ಯಾವುದೇ ಉಲ್ಲಂಘನೆಗಾಗಿ ದಂಡನೆಗೆ ಗುರಿಯಾಗುತ್ತಾನೆ. ಆದರೆ, ರನ್ ಔಟ್ ಮತ್ತು ಸ್ಟಂಪ್ ಸಂದರ್ಭಗಳಲ್ಲಿ ೨೫.೬.೩, ೨೫.೬.೪ ಮತ್ತು ೨೫.೬.೫ ರಲ್ಲಿಯ ನಿರ್ದಿಷ್ಟ ಸಂದರ್ಭಗಳು ಅವನಿಗೆ/ಅವಳಿಗೆ ಚೆಂಡನ್ನೆದುರಿಸುವ ದಾಂಡಿಗನು ಓಟಗಾರ ಹೊಂದಿರುವಂತೆ ಅನ್ವಯಿಸುತ್ತವೆ.

೨೫.೬.೩ ಚೆಂಡನ್ನು ಎದುರಿಸುವ ದಾಂಡಿಗನು ಓಟಗಾರನನ್ನು ಪಡೆದಿದ್ದರೆ ಆತನ/ಅವಳ ನಿಗದಿತ ಜಾಗ ಯಾವಾಗಲೂ ಘೂಟರಕ್ಷಕನ ತುದಿಯದ್ದಾಗಿರುತ್ತದೆ.

೨೫.೬.೪ ಓಟಗಾರನನ್ನು ಪಡೆದಿರುವ ಚೆಂಡನ್ನೆದುರಿಸುವ ದಾಂಡಿಗನು ತನ್ನ ನಿಗದಿತ ಜಾಗದಲ್ಲಿದ್ದು, ಆತನ ಓಟಗಾರ ನಿಗದಿತ ಜಾಗದ ಹೊರಗಿದ್ದರೆ ಮತ್ತು ಘೂಟರಕ್ಷಕನ ತುದಿಯ ವಿಕೆಟ್ ನಿಯಮಾನುಸಾರ ಬೀಳಿಸಿದರೆ, ನಿಯಮ ೩೮ (ರನ್ ಔಟ್) ಅನ್ವಯಿಸುತ್ತದೆ.

೨೫.೬.೫ ಓಟಗಾರನನ್ನು ಪಡೆದಿರುವ ಚೆಂಡನ್ನೆದುರಿಸುವ ದಾಂಡಿಗನು ತನ್ನ ನಿಗದಿತ ಜಾಗದಿಂದ ಹೊರಗಿದ್ದರೆ ಮತ್ತು ಘೂಟರಕ್ಷಕನ ತುದಿಯ ವಿಕೆಟ್ ನಿಯಮಾನುಸಾರ ಬೀಳಿಸಿದರೆ, ಚೆಂಡನ್ನೆದುರಿಸುವ ದಾಂಡಿಗನು ನಿಯಮ ೩೮(ರನ್ ಔಟ್) ಅಥವಾ ೩೯(ಸ್ಟಂಪ್ಡ್) ರನ್ವಯ

| | |
|---|---|
| | ಔಟ್ ಆಗುತ್ತಾನೆ. ಓಟಗಾರನೂ ಸಹ ತನ್ನ ಜಾಗದಿಂದ ಹೊರಗಿದ್ದರೆ ನಿಯಮ ೩೮ (ರನ್ ಔಟ್) ಮಾತ್ರ ಅನ್ವಯವಾಗುತ್ತದೆ. |
| 25.6.6 If a striker who has a runner is dismissed as in 25.6.5, the umpire shall,<br>- disallow all runs to the batting side<br>- return any not out batter to his/her original end<br>- award any 5-run Penalty that is applicable. | ೨೫.೬.೬ ೨೫.೬.೫ರಲ್ಲಿರುವಂತೆ ಓಟಗಾರನನ್ನು ಪಡೆದಿರುವ ಚೆಂಡನ್ನೆದುರಿಸುವ ದಾಂಡಿಗನು ಔಟ್ ಆದರೆ, ಅಂಪೈರ್'<br>➢ ದಾಂಡಿಗ ತಂಡದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು.<br>➢ ಔಟ್ ಆಗದೇ ಇರುವ ದಾಂಡಿಗನನ್ನು ತನ್ನ ಸ್ವಸ್ಥಾನಕ್ಕೆ ಹಿಂತಿರುಗಿಸಬೇಕು.<br>➢ ಅನ್ವಯವಾಗುವ ಯಾವುದೇ ದಂಡದ ೫ ಓಟಗಳನ್ನು ಅನುದಾನಿಸಬೇಕು. |
| 25.6.7 When a batter who has a runner is not the striker, he/she | ೨೫.೬.೭ ಓಟಗಾರನನ್ನು ಪಡೆದಿರುವ ದಾಂಡಿಗನು ಚೆಂಡನ್ನೆದುರಿಸುವ ದಾಂಡಿಗನಾಗಿರದಿದ್ದಾಗ,<br>ಅವನು/ಅವಳು; |
| 25.6.7.1 remains subject to Law 37 (Obstructing the field) but is otherwise out of the match. | ೨೫.೬.೭.೧ ನಿಯಮ ೩೭(ಕ್ಷೇತ್ರ ರಕ್ಷಣೆಗೆ ಅಡಚಣೆ)ಕ್ಕೆ ಆಧೀನನಾಗಿರುತ್ತಾನೆ, ಇದರ ಹೊರತಾಗಿ ಪಂದ್ಯದ ಹೊರಗಿರುತ್ತಾನೆ, |
| 25.6.7.2 shall stand where directed by the striker's end umpire so as not to interfere with play. | ೨೫.೬.೭.೨ ಚೆಂಡನ್ನೆದುರಿಸುವ ದಾಂಡಿಗನ ತುದಿಯಲ್ಲಿರುವ ಅಂಪೈರ್ ನಿರ್ದೇಶಿಸಿದ ಜಾಗದಲ್ಲಿ ಆಟಕ್ಕೆ ಅಡಚಣೆ ಆಗದಂತೆ ನಿಲ್ಲಬೇಕು. |
| 25.6.7.3 will be liable, even though out of the match as in 25.6.7.1, to any penalty demanded by the Laws should he/she commit any act of unfair play. | ೨೫.೬.೭.೩ ೨೫.೬.೭.೧ರನ್ವಯ ಪಂದ್ಯದ ಹೊರಗಿದ್ದರೂ, ಯಾವುದೇ ನಿಯಮಬಾಹಿರ ಕೃತ್ಯವೆಸಗಿದರೆ ನಿಯಮಗಳ ಪ್ರಕಾರ ದಂಡನೆಗೆ ಒಳಪಡುತ್ತಾನೆ. |

| | |
|---|---|
| **25.7 Restriction on the striker's runner** | **೨೫.೭ ಚೆಂಡನ್ನು ಎದುರಿಸುವ ದಾಂಡಿಗನ ಓಟಗಾರನ ಮೇಲಿನ ನಿರ್ಬಂಧ.** |
| 25.7.1 Once the ball comes into play, the runner for an injured batter who is the striker shall have part of his/her person or bat grounded behind the popping crease until the ball reaches the striker or passes the popping crease, whichever is the sooner. | **೨೫.೭.೧** ಚೆಂಡು ಆಟದಲ್ಲಿ ಬಂದ ಮೇಲೆ, ಚೆಂಡು, ಚೆಂಡನ್ನೆದುರಿಸುವ ದಾಂಡಿಗನನ್ನು ತಲುಪುವವರೆಗೆ ಅಥವಾ ಪಾಪಿಂಗ್ ರೇಖೆಯನ್ನು ದಾಟುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯ ವರೆಗೆ ಗಾಯಗೊಂಡ ಚೆಂಡನ್ನೆದುರಿಸುವ ದಾಂಡಿಗನ ಓಟಗಾರ ಅವನ/ಅವಳ ಶರೀರದ ಯಾವುದೇ ಭಾಗ ಅಥವಾ ದಾಂಡನ್ನು ಪಾಪಿಂಗ್ ರೇಖೆಯ ಹಿಂದೆ ಊರಿರಬೇಕು. |
| 25.7.2 If the striker's end umpire considers the runner for an injured striker to be in breach of this restriction, then, if the ball does not become dead for any other reason, he/she shall call and signal Dead ball as soon as the ball reaches the boundary or at the completion of the first run. However, he/she shall delay the call of Dead ball to allow the opportunity for a catch to be completed.<br>The bowler's end umpire shall<br>- disallow all runs to the batting side<br>- return any not out batter to his/her original end<br>- award any 5-run Penalty that is applicable except for Penalty runs under Law 28.3 (Protective helmets belonging to the fielding side). | ೨೫.೭.೨ ಚೆಂಡನ್ನು ಎದುರಿಸುವ ಗಾಯಗೊಂಡ ದಾಂಡಿಗನ ಓಟಗಾರನು ಈ ನಿರ್ಬಂಧವನ್ನು ಉಲ್ಲಂಘಿಸಿದ್ದಾನೆ/ಉಲ್ಲಂಘಿಸಿದ್ದಾಳೆ ಎಂದು ಚೆಂಡನ್ನು ಎದುರಿಸುವ ದಾಂಡಿಗನ ತುದಿಯ ಅಂಪೈರ್ ಪರಿಗಣಿಸಿದರೆ, ಬೇರಾವುದೇ ಕಾರಣಕ್ಕಾಗಿ ಚೆಂಡು ಡೆಡ್ ಆಗದಿದ್ದರೆ ಅವನು/ಅವಳು ಚೆಂಡು ಬೌಂಡರಿ ಮುಟ್ಟಿದ ಕೂಡಲೇ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅಥವಾ ಮೊದಲ ಓಟ ಪೂರ್ತಿ ಆದಮೇಲೆ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು. ಆದರೂ ಅವನು/ಅವಳು ಡೆಡ್ ಬಾಲ್ ಕರೆಯನ್ನು ಬುತ್ತಿ (ಕ್ಯಾಚ್) ಹಿಡಿಯುವುದನ್ನು ಪೂರ್ಣಗೊಳಿಸಲು ಅವಕಾಶ ಕೊಡಲು ವಿಳಂಬವಾಗಿ ಮಾಡಬೇಕು.<br>ಬೌಲರ್ ತುದಿಯ ಅಂಪೈರ್;<br>➢ ದಾಂಡಿಗ ತಂಡದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು. |

<table>
<tr>
<td></td>
<td>

- ಔಟ್ ಆಗದೇ ಇರುವ ದಾಂಡಿಗನನ್ನು/ದಾಂಡಿಗಳನ್ನು ತನ್ನ ಸ್ವಸ್ಥಾನಕ್ಕೆ ಹಿಂತಿರುಗಿಸಬೇಕು.
- ನಿಯಮ ೨೮.೩(ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ)ರನ್ವಯದ ದಂಡದ ಓಟಗಳನ್ನು ಹೊರತುಪಡಿಸಿ, ಅನ್ವಯಿಸಬಹುದಾದ ಇತರೆ ಯಾವುದೇ ದಂಡದ ೫ ಓಟಗಳನ್ನು ಅನುದಾನಿಸಬೇಕು.

</td>
</tr>
<tr>
<td>

**25.8 Striker's right to play the ball.**

The striker has a right to play the ball, or to make a legitimate second strike, after it has been delivered, without interference from the wicket-keeper or any other fielder (see Law 27.5 – Restrictions on actions of wicket-keeper and Law 27.6 – Interference with wicket-keeper by striker).

However, the striker may only attempt to play the ball if some of his/her bat or person, whether grounded or raised, remains within the pitch, as defined in Law 6.1 (Area of pitch). Should no part of the striker's bat or person remain within the pitch, whilst the striker is playing the ball, either umpire shall immediately call and signal Dead ball.

</td>
<td>

**೨೫.೮ ಚೆಂಡನ್ನೆದುರಿಸುವ ದಾಂಡಿಗನ /ದಾಂಡಿಗಳ ಚೆಂಡನ್ನಾಡುವ ಅಧಿಕಾರ**

ಚೆಂಡು ಬೌಲ್ ಮಾಡಿದ ನಂತರ ಚೆಂಡನ್ನೆದುರಿಸುವ ದಾಂಡಿಗಗೆ ಚೆಂಡನ್ನಾಡುವ ಅಥವಾ ಚೆಂಡನ್ನು ನಿಯಮಾನುಸಾರ ಎರಡನೇ ಬಾರಿ ಘೂಟ ರಕ್ಷಕನ/ ರಕ್ಷಕಳ ಇಲ್ಲವೆ ಬೆರಾವುದೆ ಕ್ಷೇತ್ರ ರಕ್ಷಕರ ಅಡಚಣೆ ಇಲ್ಲದೆ ಹೊಡೆಯುವ ಹಕ್ಕು ಇರುತ್ತದೆ. (ನಿಯಮ ೨೭.೫ ಘೂಟ ರಕ್ಷಕನ ಹಾವಭಾವಗಳ ಮೇಲಿನ ನಿರ್ಬಂಧ ಮತ್ತು ೨೭.೬ ಚೆಂಡನ್ನು ಎದುರಿಸುವ ದಾಂಡಿಗನಿಂದ ಘೂಟ ರಕ್ಷಕನಿಗೆ ಅಡ್ಡಿಪಡಿಸುವಿಕೆ ನೋಡಿರಿ).

ಆದರೆ ಈ ಅವಕಾಶ, ಚೆಂಡನ್ನೆದಿರಿಸುವ ದಾಂಡಿಗ ಆಟದ ಪಟ್ಟಿಯ ತನ್ನ ದಾಂಡಿನ ಅಥವಾ ಅಂಗದ ಯಾವುದೇ ಭಾಗ ನಿಯಮ ೬.೧ (ಆಟದ ಪಟ್ಟಿಯ ವಿಸ್ತೀರ್ಣ) ರಲ್ಲಿ ತಿಳಿಸಿರುವಂತೆ ಆಟದ ಪಟ್ಟಿಯ ಮೇಲೆ ಊರಿದ್ದಾಗ ಅಥವಾ ಹವೆಯಲ್ಲಿದ್ದಾಗ ಮಾತ್ರ ಪಡೆದಿರುತ್ತಾನೆ. ಒಂದು ವೇಳೆ, ಚೆಂಡನ್ನೆದಿರಿಸುವ ದಾಂಡಿಗ ಚೆಂಡನ್ನು ಆಡುವಾಗ, ಆಟದ ಪಟ್ಟಿಯ ಮೇಲೆ ತನ್ನ ದಾಂಡಿನ ಅಥವಾ ಅಂಗದ ಯಾವುದೇ

</td>
</tr>
</table>

| | |
|---|---|
| | ಭಾಗ ಊರಿರದಿದ್ದರೆ ಅಥವಾ ಹವೆಯಲ್ಲಿರದಿದ್ದರೆ, ಯಾವುದೇ ಅಂಪೈರ್ ತತಕ್ಷಣ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು. |
| **LAW 26 PRACTICE ON THE FIELD** | **ನಿಯಮ ೨೬ ಆಟದ ಮೈದಾನದಲ್ಲಿ ಅಭ್ಯಾಸ** |
| **26.1 Practice on the pitch or the rest of the square**<br>26.1.1 There shall not be any practice on the pitch at any time on any day of the match.<br><br>26.1.2 There shall not be any practice on the rest of the square at any time on any day of the match, except with the approval of the umpires. | **೨೬.೧ ಆಟದ ಪಟ್ಟಿಯ ಮೇಲೆ ಮತ್ತು ಚೌಕಾಕಾರದ ಉಳಿದ ಭಾಗದ ಮೇಲೆ ಅಭ್ಯಾಸ**<br>೨೬.೧.೧ ಆಟದ ಪಟ್ಟಿಯ ಮೇಲೆ ಪಂದ್ಯದ ಯಾವುದೇ ದಿನದಂದು ಯಾವುದೇ ಸಮಯದಲ್ಲಿ ಯಾವುದೇ ತರದ ಅಭ್ಯಾಸ ಮಾಡಬಾರದು.<br>೨೬.೧.೨ ಅಂಪೈರ್ ಅನುಮತಿ ಇಲ್ಲದೇ, ಚೌಕಾಕಾರದ ಉಳಿದ ಭಾಗದ ಮೇಲೆ ಪಂದ್ಯದ ಯಾವುದೇ ದಿನದ ಯಾವುದೇ ಸಮಯದಲ್ಲಿ ಯಾವುದೇ ಅಭ್ಯಾಸ ನಡೆಯುವಂತಿಲ್ಲ. |
| **26.2 Practice on the outfield**<br>26.2.1 On any day of the match, all forms of practice are permitted on the outfield,<br>- before the start of play,<br>- after the close of play and<br>- during the lunch and tea intervals or between innings, providing the umpires are satisfied that such practice will not cause significant deterioration in the condition of the outfield. | **೨೬.೨ ಹೊರ ಮೈದಾನ (ಔಟ್ ಫೀಲ್ಡ್)ದಲ್ಲಿ ಅಭ್ಯಾಸ.**<br>೨೬.೨.೧ ಪಂದ್ಯದ ಯಾವುದೇ ದಿನದಂದು, ಹೊರ ಮೈದಾನದಲ್ಲಿ ಎಲ್ಲ ತರಹದ ಅಭ್ಯಾಸವನ್ನು<br>➢ ಆಟ ಪ್ರಾರಂಭವಾಗುವುದಕ್ಕೆ ಮೊದಲು,<br>➢ ಆಟದ ಮುಕ್ತಾಯದ ನಂತರ,<br>➢ ಭೋಜನ ಅಥವಾ ಚಹಾ ವಿರಾಮದ ಅವಧಿಯಲ್ಲಿ ಅಥವಾ ಸರದಿಗಳ ನಡುವಿನ ವಿರಾಮದ ಅವಧಿಯಲ್ಲಿ.<br>ಅಂಪೈರ್ ಅಭಿಪ್ರಾಯದಲ್ಲಿ ಈ ತರಹದ ಅಭ್ಯಾಸದಿಂದ ಹೊರ ಮೈದಾನಕ್ಕೆ ಯಾವುದೇ ರೀತಿಯ ಹಾನಿ ಆಗುವುದಿಲ್ಲ ಎಂದಾದರೆ ಅನುಮತಿಸಬಹುದು. |

| | |
|---|---|
| 26.2.2 Between the call of Play and the call of Time, practice shall be permitted on the outfield, providing that all of the following conditions are met:<br>- only the fielders as defined in Appendix A.7 participate in such practice.<br>- no ball other than the match ball is used for this practice.<br>- no bowling practice takes place in the area between the square and the boundary in a direction parallel to the match pitch.<br>- - the umpires are satisfied that it will not contravene either of Laws 41.3 (The match ball – changing its condition) or 41.9 (Time wasting by the fielding side). If there is such a contravention, the sanctions in Law 41 shall be applied. However, any warning given shall apply to further instances under both Law 26 and Law 41 (Unfair play). . | ೨೬.೨.೨ "ಪ್ಲೇ" ಮತ್ತು "ಟೈಂ" ಕರೆಯ ನಡುವೆ, ಹೊರ ಮೈದಾನದಲ್ಲಿ ಅಭ್ಯಾಸವನ್ನು ಈ ಕೆಳಗಿನ ಎಲ್ಲಾ ಷರತ್ತುಗಳನ್ನು ಪಾಲಿಸಿದರೆ ಅನುಮತಿಸಬಹುದು.<br>➢ ಅನುಬಂಧ ಎ-೭ರಲ್ಲಿ ವಿವರಿಸಿದಂತಹ ಕ್ಷೇತ್ರ ರಕ್ಷಕರು ಮಾತ್ರ ಅಭ್ಯಾಸದಲ್ಲಿ ಭಾಗಿಯಾಗಬಹುದು.<br>➢ ಅಭ್ಯಾಸಕ್ಕಾಗಿ ಪಂದ್ಯದ ಚೆಂಡನ್ನು ಹೊರತುಪಡಿಸಿ ಬೇರಾವುದೇ ಚೆಂಡನ್ನು ಉಪಯೋಗಿಸಬಾರದು.<br>➢ ಆಟದ ಪಟ್ಟಿಯ ಸಮಾನಾಂತರ ದಿಕ್ಕಿನಲ್ಲಿ ಚೌಕಾಕಾರ ಮತ್ತು ಬೌಂಡರಿ ರೇಖೆಯ ನಡುವಿನ ಜಾಗದಲ್ಲಿ ಬೌಲಿಂಗ್ ಅಭ್ಯಾಸ ಮಾಡಬಾರದು.<br>ಅಂಪೈರರಿಗೆ ಇದು ನಿಯಮ ೪೧.೩(ಪಂದ್ಯದ ಚೆಂಡಿನ ಸ್ಥಿತಿಯನ್ನು ಬದಲಾಯಿಸುವುದು) ಮತ್ತು ೪೧.೯(ಕ್ಷೇತ್ರ ರಕ್ಷಣೆ ತಂಡದಿಂದ ಕಾಲಹರಣ)ಗಳನ್ನು ಉಲ್ಲಂಘಿಸುವುದಿಲ್ಲ ಎಂದು ಮನವರಿಕೆ ಯಾಗಬೇಕು. ಒ0ದು ವೇಳೆ ಉಲ್ಲ0ಘನೆ ಯಾದರೆ ನಿಯಮ ೪೧ರಲ್ಲಿ ತಿಳಿಸಿರುವ0ತೆ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಎಚ್ಚರಿಕೆ ಕೊಟ್ಟಲ್ಲಿ ಮು0ದೆ ಅದು ನಿಯಮ ೨೬ ಮತ್ತು ೪೧ ಅಡಿಯಲ್ಲಾಗುವ ಸ0ದರ್ಭ ಗಳಿಗೂ ಅನ್ವಯಿಸುತ್ತದೆ. |
| **26.3 Trial run-up**<br>A bowler is permitted to have a trial run-up provided the umpire is satisfied that it will not contravene either of Laws | **೨೬.೩ ಅಭ್ಯಾಸದ ಓಟ (ರನ್ ಅಪ್)**<br>ನಿಯಮ ೪೧.೯(ಕ್ಷೇತ್ರ ರಕ್ಷಣೆ ತಂಡದಿಂದ ಕಾಲಹರಣ) ಮತ್ತು ೪೧.೧೨(ಕ್ಷೇತ್ರ ರಕ್ಷಕ ಆಟದ ಪಟ್ಟಿಯನ್ನು ಹಾಳುಮಾಡುವುದು)ಗಳ |

| | |
|---|---|
| 41.9 (Time wasting by the fielding side) or 41.12 (Fielder damaging the pitch). | ಉಲ್ಲಂಘನೆಯಾಗುವುದಿಲ್ಲ ಎಂದು ಅಂಪೈರಿಗೆ ಖಾತ್ರಿಯಾದರೆ ಮಾತ್ರ ಬೌಲರ್‌ಗೆ ಅಭ್ಯಾಸದ ಓಟಕ್ಕೆ ಅನುಮತಿಸಬಹುದು. |
| **26.4 Penalties for contravention**<br>All forms of practice are subject to the provisions of Laws 41.3 (The match ball – changing its condition), 41.9 (Time wasting by the fielding side) and 41.12 (Fielder damaging the pitch).<br>26.4.1 If there is a contravention of any of the provisions of 26.1 or 26.2, the umpire shall,<br>- warn the player that the practice is not permitted,<br>- inform the other umpire and, as soon as practicable, both captains of the reason for this action.<br>26.4.1.1 If the contravention is by a batter at the wicket, the umpire shall inform the other batter and each incoming batter that the warning has been issued.<br>The warning shall apply to the team of that player throughout the match.<br>26.4.2 If during the match there is any further contravention by any player of that team, the umpire shall,<br>- award 5 Penalty runs to the opposing side, | **೨೬.೪ ಉಲ್ಲಂಘನೆಗಾಗಿ ದಂಡಗಳು**<br>ಎಲ್ಲ ತರಹದ ಅಭ್ಯಾಸಗಳು ನಿಯಮ ೪೧.೩(ಪಂದ್ಯದ ಚೆಂಡಿನ ಸ್ಥಿತಿಯನ್ನು ಬದಲಾಯಿಸುವುದು), ೪೧.೯(ಕ್ಷೇತ್ರ ರಕ್ಷಣೆ ತಂಡದಿಂದ ಕಾಲಹರಣ) ಮತ್ತು ೪೧.೧೨(ಕ್ಷೇತ್ರ ರಕ್ಷಕ ಆಟದ ಪಟ್ಟಿಯನ್ನು ಹಾಳುಮಾಡುವುದು) ಗಳಿಗೆ ಒಳಪಟ್ಟಿವೆ.<br>೨೬.೪.೧ ೨೬.೧ ಇಲ್ಲವೇ ೨೬.೨ ರ ಉಲ್ಲಂಘನೆಯಾದರೆ, ಅಂಪೈರ್;<br>➢ ಆ ಆಟಗಾರನಿಗೆ ಅಭ್ಯಾಸಕ್ಕೆ ಅನುಮತಿ ನೀಡಿಲ್ಲ ಎಂದು ಎಚ್ಚರಿಸಬೇಕು.<br>➢ ಇನ್ನೊಬ್ಬ ಅಂಪೈರ್‌ಗೆ ಹಾಗೂ ಪ್ರಾಯೋಗಿಕವಾಗಿ ಸಾಧ್ಯವಾದಷ್ಟು ಬೇಗನೆ ಇಬ್ಬರೂ ನಾಯಕರಿಗೆ ಕ್ರಮದ ಬಗ್ಗೆ ತಿಳಿಸಬೇಕು.<br>೨೬.೪.೧.೧ ಉಲ್ಲಂಘನೆಯು ವಿಕೆಟ್ ಬಳಿ ಇರುವ ದಾಂಡಿಗನಿಂದಾದರೆ, ಅಂಪೈರ್ ಕೂಡಲೇ ಮತ್ತೊಬ್ಬ ದಾಂಡಿಗನಿಗೆ ಹಾಗೂ ಆಡಲು ಬರುವ ಪ್ರತಿಯೊಬ್ಬ ದಾಂಡಿಗನಿಗೆ ಎಚ್ಚರಿಕೆಯ ಬಗ್ಗೆ ತಿಳಿಸಬೇಕು. ಈ ಎಚ್ಚರಿಕೆಯು ಆ ಆಟಗಾರನ ತಂಡಕ್ಕೆ ಪಂದ್ಯದ ಅವಧಿಗೆ ಅನ್ವಯಿಸುತ್ತದೆ.<br>೨೬.೪.೨ ಪಂದ್ಯದ ಅವಧಿಯಲ್ಲಿ, ತಂಡದ ಯಾವುದೇ ಆಟಗಾರನಿಂದ ಮರಳಿ ಉಲ್ಲಂಘನೆಯಾದರೆ, ಅಂಪೈರ್; |

| | |
|---|---|
| - inform the other umpire, the scorers and, as soon as practicable, both captains, and, if the contravention is during play, the batters at the wicket.<br><br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಇನ್ನೊಬ್ಬ ಅಂಪೈರ್‌ಗೆ, ಸ್ಕೋರರ್‌ಗಳಿಗೆ ಮತ್ತು ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಇಬ್ಬರೂ ನಾಯಕರಿಗೆ ಮತ್ತು ಉಲ್ಲಂಘನೆ ಆಟ ನಡೆದಾಗ ವಿಕೆಟ್ ಬಳಿ ಇರುವ ದಾಂಡಿಗರಿಗೆ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಅಂಪೈರರಿಬ್ಬರೂ ಸೇರಿ ನಡೆದ ಘಟನೆಯ ಬಗ್ಗೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಹಾಗೂ ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ಅವರು, ತಂಡದ ನಾಯಕ, ಸಂಬಂಧಿತ ಯಾವುದೇ ವ್ಯಕ್ತಿಗಳ ಮತ್ತು ಸಮಂಜಸವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **LAW 27 THE WICKET-KEEPER** | **ನಿಯಮ ೨೭ ಘೂಟ ರಕ್ಷಕ** |
| 27.1 **Protective equipment**<br>The wicketkeeper is the only fielder permitted to wear gloves and external leg guards. If these are worn, they are to be regarded as part of his/her person for the purposes of Law 28.2 (Fielding the ball). If by the wicket-keeper's actions and positioning when the ball comes into play it is apparent to the umpires that he/she will not be able to carry out the normal duties of a wicket-keeper, he/she shall | **೨೭.೧ ಸುರಕ್ಷಾ ಉಪಕರಣಗಳು**<br>ಕ್ಷೇತ್ರ ರಕ್ಷಕರಲ್ಲಿ ಘೂಟ ರಕ್ಷಕನೊಬ್ಬನಿಗೆ ಮಾತ್ರ ಕೈ ಕವಚ ಮತ್ತು ಕಾಲಿನ ಬಾಹ್ಯ ಕವಚ (Pads) ತೊಡಲು ಅನುಮತಿ ಇದೆ. ಇವುಗಳನ್ನು ಧರಿಸಿದ್ದರೆ, ನಿಯಮ ೨೮.೨(ಚೆಂಡಿನ ಕ್ಷೇತ್ರ ರಕ್ಷಣೆ)ರ ಉದ್ದೇಶಕ್ಕಾಗಿ ಅವುಗಳು ಅವನ/ಅವಳ ಶರೀರದ ಭಾಗವೆಂದು ಪರಿಗಣಿಸಬೇಕು. ಚೆಂಡು ಆಟದಲ್ಲಿ ಬಂದಾಗ, ಅವನ/ಅವಳ ಹಾವ ಭಾವ, ನಡವಳಿಕೆ ಮತ್ತು ಸ್ಥಾನದಿಂದ ಅವನು/ಅವಳು ಘೂಟ ರಕ್ಷಕನ ಸಹಜ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ |

| | |
|---|---|
| forfeit this right and also the right to be recognised as a wicket-keeper for the purposes of Laws 33.2 (A fair catch), 39 (Stumped), 28.1 (Protective equipment), 28.4 (Limitation of on-side fielders) and 28.5 (Fielders not to encroach on pitch). | ಎಂದು ಅಂಪೈರ್‌ಗೆ ಮನದಟ್ಟಾದರೆ, ಅವನು/ಅವಳು ಸವಲತ್ತುಗಳನ್ನು ಮತ್ತು ನಿಯಮ ೩೩.೨(ನಿಯಮ ಬದ್ಧವಾದ ಬುತ್ತಿ (ಕ್ಯಾಚ್)), ೩೯ (ಸ್ಟಂಪ್ಡ್), ೨೮.೧ (ಸುರಕ್ಷಾ ಉಡುಪುಗಳು), ೨೮.೪ (ಲೆಗ್ ಸೈಡ್ ಕ್ಷೇತ್ರ ರಕ್ಷಕರ ಮಿತಿ) ಹಾಗೂ ೨೮.೫ (ಆಟದ ಪಟ್ಟಿಯ ಮೇಲೆ ಕ್ಷೇತ್ರ ರಕ್ಷಕರು ಅತಿಕ್ರಮ ಮಾಡಬಾರದು)ರ ಸಂದರ್ಭಗಳಿಗಾಗಿ ಘೂಟ ರಕ್ಷಕ ಎಂದು ಗುರುತಿಸಲ್ಪಡುವ ಹಕ್ಕನ್ನೂ ಕಳೆದು ಕೊಳ್ಳುತ್ತಾನೆ. |
| **27.2 Gloves**<br>27.2.1 If, as permitted under 27.1, the wicket-keeper wears gloves, they shall have no webbing between the fingers except joining index finger and thumb, where webbing may be inserted as a means of support.<br>27.2.2 If used, the webbing shall be a single piece of non-stretch material which, although it may have facing material attached, shall have no reinforcements or tucks.<br>27.2.3 The top edge of the webbing shall not protrude beyond the straight line joining the top of the index finger to the top of the thumb and shall be taut when a hand wearing the glove has the thumb fully extended. See Appendix E. | **೨೭.೨ ಕೈ ಕವಚಗಳು**<br>೨೭.೨.೧ ೨೭.೧ರಲ್ಲಿಯಂತೆ ಅನುಮತಿಸಿದ್ದರೆ, ಘೂಟ ರಕ್ಷಕನು ಕೈ ಕವಚವನ್ನು ಧರಿಸಿದರೆ, ಅದರ ತೋರು ಬೆರಳು ಮತ್ತು ಹೆಬ್ಬೆರಳುಗಳ ವಿನಃ ಬೇರೆ ಬೆರಳುಗಳ ನಡುವೆ ಜೋಡಿಸುವ ಪಟ್ಟಿ (ವೆಬ್ಬಿಂಗ್) ಇರಬಾರದು, ತೋರು ಬೆರಳು ಮತ್ತು ಹೆಬ್ಬೆರಳುಗಳನ್ನು ಜೋಡಿಸಲು ಪಟ್ಟಿಯನ್ನು ಸಹಾಯಕ್ಕೋಸ್ಕರ ಅಳವಡಿಸಬಹುದು.<br>೨೭.೨.೨ ಹಾಗೇ ಉಪಯೋಗಿಸಿದರೆ, ಜೋಡಿಸುವ ಪಟ್ಟಿಯು ಹಿಗ್ಗದಂತಹ ವಸ್ತುವಿನದಾಗಿರಬೇಕು, ಇದಕ್ಕೆ ಮೇಲು ಮೈ ಹೊದಿಕೆ ಇದ್ದರೂ ಅದು ಬಲವರ್ಧನೆ ಮತ್ತು ಮಡಿಕೆಯನ್ನು ಹೊಂದಿರಬಾರದು.<br>೨೭.೨.೩ ಪಟ್ಟಿಯ ಮೇಲಿನ ತುದಿಯು ತೋರು ಬೆರಳು ಮತ್ತು ಹೆಬ್ಬೆರಳು ಜೋಡಿಸುವ ಸರಳ ರೇಖೆಯ ಹೊರ ಬರಬಾರದು. ಹೆಬ್ಬೆರಳನ್ನು ಚಾಚಿದಾಗ ಈ ಪಟ್ಟಿ ನೆಟ್ಟಗೆ ಇರಬೇಕು. ಅನುಬಂಧ ಈ ಗಮನಿಸಿ. |

| | |
|---|---|
| **27.3 Position of wicket-keeper**<br>27.3.1 The wicketkeeper shall remain wholly behind the wicket at the striker’s end from the moment the ball comes into play until a ball delivered by the bowler touches the bat or person of the striker or<br>passes the wicket at the striker’s end or<br>the striker attempts a run.<br><br>27.3.2 In the event of the wicketkeeper contravening this Law, the striker’s end umpire shall call and signal No ball as soon as applicable after the delivery of the ball. | **೨೭.೩ ಘೂಟ ರಕ್ಷಕನ ಸ್ಥಾನ**<br>೨೭.೩.೧ ಘೂಟ ರಕ್ಷಕನು , ಚೆಂಡು ಆಟದಲ್ಲಿ ಬಂದ ಕ್ಷಣದಿಂದ ಬೌಲರನು ಎಸೆದ ಚೆಂಡು;<br>ಚೆಂಡನ್ನೆದುರಿಸುವ ದಾಂಡಿಗನ ದಾಂಡಿಗೆ ಅಥವಾ ದೇಹಕ್ಕೆ ತಗಲುವವರೆಗೆ ಅಥವಾ ಚೆಂಡನ್ನೆದುರಿಸುವ ದಾಂಡಿಗನ ಬದಿಯ ವಿಕೆಟನ್ನು ದಾಟುವವರೆಗೆ ಅಥವಾ ಚೆಂಡನ್ನೆದುರಿಸುವ ದಾಂಡಿಗನು ಓಟ ಗಳಿಸಲು ಪ್ರಯತ್ನಿಸುವವರೆಗೆ. ಚೆಂಡನ್ನೆದುರಿಸುವ ದಾಂಡಿಗನ ತುದಿಯ ಘೂಟಗಳ ಹಿಂದೆ ಇರಬೇಕು.<br>೨೭.೩.೨ ಒಂದುವೇಳೆ ಘೂಟ ರಕ್ಷಕನು ಈ ನಿಯಮದ ಉಲ್ಲಂಘನೆ ಮಾಡಿದರೆ, ಚೆಂಡನ್ನೆದುರಿಸುವ ದಾಂಡಿಗನ ತುದಿಯ ಅಂಪೈರ್ “ನೋ ಬಾಲ್” ಎಂದು ಬಾಲ್ ಎಸೆದನಂತರ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕೂಗಿ ಸನ್ನೆ ಮಾಡಬೇಕು. |
| **27.4 Movement by wicketkeeper**<br>27.4.1 After the ball comes into play and before it reaches the striker, it is unfair if the wicket-keeper significantly alters his/her position in relation to the striker’s wicket, except for the following:<br>27.4.1.1 movement of a few paces forward for a slower delivery, unless in so doing it brings him/her within reach of the wicket. | **೨೭.೪ ಘೂಟ ರಕ್ಷಕನ ಚಲನೆ**<br>೨೭.೪.೧ ಈ ಕೆಳಗಿನವುಗಳನ್ನು ಹೊರತುಪಡಿಸಿ. ಚೆಂಡು ಆಟದಲ್ಲಿ ಬಂದ ಕ್ಷಣದಿಂದ ಚೆಂಡನ್ನು ಎದುರಿಸುವ ದಾಂಡಿಗನನ್ನು ತಲುಪುವ ಮೊದಲು, ಘೂಟ ರಕ್ಷಕನು ಚೆಂಡನ್ನೆದುರಿಸುವ ದಾಂಡಿಗನ ಬದಿಯ ಘೂಟಗಳಿಗೆ ಸಂಬಂಧಿಸಿದಂತೆ ತನ್ನ ಸ್ಥಾನವನ್ನು ಗಮನಾರ್ಹ ರೀತಿಯಲ್ಲಿ ಬದಲಾಯಿಸಿದರೆ, ಅದು ನಿಯಮಬಾಹಿರ.<br>೨೭.೪.೧.೧ ಮಂದಗತಿಯ ಎಸೆತಕ್ಕೆ ಕೆಲವು ಹೆಜ್ಜೆಗಳಷ್ಟು ಮುಂದೆ ಬರಬಹುದು, ಆದರೆ ಈ ಚಲನೆ ಅವನನ್ನು/ಅವಳನ್ನು |

| | |
|---|---|
| | ಘೂಟಗಳು ಕೈನಿಲುಕಿನ ಸನಿಹಕ್ಕಿರುವಂತೆ ಮಾಡಬಾರದು. |
| 27.4.1.2 lateral movement in response to the direction in which the ball has been delivered. | ೨೭.೪.೧.೨ ಚೆಂಡಿನ ಚಲನೆಯ ದಿಕ್ಕಿಗೆ ಅಡ್ಡವಾಗಿ ಚಲಿಸುವುದು. |
| 27.4.1.3 movement in response to the stroke that the striker is playing or that his/her actions suggest he/she intends to play. However, the provisions of Law 27.3 shall apply. | ೨೭.೪.೧.೩ ಚೆಂಡನ್ನೆದುರಿಸುವ ದಾಂಡಿಗನ ಹೊಡೆತದ ಶೈಲಿಗೆ ಪ್ರತಿಕ್ರಿಯಿಸಿ ಅಥವಾ ಹಾವಭಾವದಿಂದ ಅವನು/ಅವಳು ಇಚ್ಛಿಸುವ ಹೊಡೆತದ ಶೈಲಿಗೆ ತಕ್ಕಂತೆ ಚಲಿಸುವುದು. ಆದರೆ, ನಿಯಮ ೨೭.೩ರಲ್ಲಿಯ ಷರತ್ತುಗಳು ಅನ್ವಯಿಸುತ್ತವೆ. |
| 27.4.2 In the event of unfair movement by the wicket-keeper, either umpire shall call and signal Dead ball and inform the other umpire of the reason for doing so. The bowler's end umpire shall then: | ೨೭.೪.೨ ಘೂಟ ರಕ್ಷಕನು ಇಂತಹ ನಿಯಮಬಾಹಿರ ಚಲನೆ ಮಾಡಿದಲ್ಲಿ ಯಾವುದೇ ಅಂಪೈರ್ "ಡೆಡ್ ಬಾಲ್" ಎಂದು ಕರೆದು ಸನ್ನೆ ಮಾಡಬೇಕು ಮತ್ತು ಇನ್ನೊಬ್ಬ ಅ0ಪೈರಗೆ ಯಾಕೆ ಕರೆದದ್ದೆ0ದು ತಿಳಿಸಬೇಕು. ಆ ಮೇಲೆ ಬೌಲರ್ ತುದಿಯ ಅ0ಪೈರ್ |
| 27.4.2.1 award the one-run penalty for Wide or No ball, if applicable | ೨೭.೪.೨.೧ ಅನ್ವಯಿಸಿದಲ್ಲಿ ನೋ ಬಾಲ್ ಇಲ್ಲವೇ ವೈಡ್ ಬಾಲ್ ನ ಒ0ದು ದ0ಡದ ಓಟ ನೀಡಬೇಕು. |
| 27.4.2.2 award 5 Penalty runs to the batting side. | ೨೭.೪.೨.೨ ದ0ಡದ ೫ ಓಟಗಳನ್ನು ದಾ0ಡಿಗ ಪ0ಗಡಕ್ಕೆ ಅನುದಾನಿಸಬೇಕು. |
| 27.4.2.3 inform the captain of the fielding side of the reason for this action. | ೨೭.೪.೨.೩ ಕ್ಷೇತ್ರ ರಕ್ಷಕ ತ0ಡದ ನಾಯಕನಿಗೆ ಕ್ರಮ ತೆಗೆದುಕೊ0ಡ ಕಾರಣದ ಬಗ್ಗೆ ತಿಳಿಸಬೇಕು. |
| 27.4.2.4 inform the batters and, as soon as practicable, the captain of the batting side of what has occurred. | ೨೭.೪.೨.೪ ನಡೆದ ಘಟನೆಯ ಬಗ್ಗೆ ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ದಾಂಡಿಗ ತಂಡದ ನಾಯಕನಿಗೆ ತಿಳಿಸಬೇಕು |
| The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಸೇರಿ ನಡೆದ ಘಟನೆಯ ಬಗ್ಗೆ ಸಾಧ್ಯವಾದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಹಾಗೂ ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ಅದಕ್ಕನುಸಾರವಾಗಿ ಅವರು, |

| | |
|---|---|
| | ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಕ್ರಮ ತೆಗೆದು ಕೊಳ್ಳಬೇಕು. |
| **27.5 Restriction on actions of wicketkeeper**<br>If, in the opinion of either umpire, the wicketkeeper interferes with the striker's right to play the ball and to guard his/her wicket, Law 20.4.2.6 (Umpire calling and signalling Dead ball) shall apply.<br>If, however, either umpire considers that the interference by the wicket-keeper was wilful, then Law 41.4 (Deliberate attempt to distract striker) shall also apply. | **೨೭.೫ ಘೂಟ ರಕ್ಷಕನ ಹಾವಭಾವಗಳ ಮೇಲಿನ ನಿರ್ಬಂಧ**<br>ಯಾವುದೇ ಅಂಪೈರ್ ಅಭಿಪ್ರಾಯದಲ್ಲಿ, ಘೂಟ ರಕ್ಷಕನು, ಚೆಂಡನ್ನು ಎದುರಿಸುವ ದಾಂಡಿಗನು ಚೆಂಡನ್ನು ಆಡುವ ಹಕ್ಕಿಗೆ ಮತ್ತು ತನ್ನ ಘೂಟಗಳ ಸಮೂಹವನ್ನು ರಕ್ಷಿಸುವುದಕ್ಕೆ ಅಡ್ಡಿಪಡಿಸಿದ್ದಾನೆಂದಾದರೆ ನಿಯಮ ೨೦.೪.೨.೬ (ಅಂಪೈರ್ "ಡೆಡ್ ಬಾಲ್" ಎಂದು ಕರೆದು ಸನ್ನೆ ಮಾಡುವುದು) ಅನ್ವಯಿಸುತ್ತದೆ.<br>ಆದರೂ, ಘೂಟ ರಕ್ಷಕ ಹೀಗೆ ಅಡ್ಡಿಪಡಿಸುವುದು ಉದ್ದೇಶಪೂರ್ವಕ ಎಂದು ಯಾರಾದರೊಬ್ಬ ಅಂಪೈರ್ ಪರಿಗಣಿಸಿದರೆ, ನಿಯಮ ೪೧.೪ (ಚೆಂಡನ್ನೆದುರಿಸುವ ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಬೆದರಿಸುವ ಪ್ರಯತ್ನ) ಸಹ ಅನ್ವಯಿಸಬೇಕು. |
| **27.6 Interference with wicket-keeper by striker**<br>If, in playing at the ball or in the legitimate defence of his/her wicket, the striker interferes with the wicket-keeper, he/she shall not be out except as provided for in Law 37.3 (Obstructing a ball from being caught). | **೨೭.೬ ಚೆಂಡನ್ನು ಎದುರಿಸುವ ದಾಂಡಿಗನಿಂದ ಘೂಟ ರಕ್ಷಕನಿಗೆ ಅಡ್ಡಿಪಡಿಸುವಿಕೆ**<br>ಚೆಂಡನ್ನು ಆಡುವಾಗ ಅಥವಾ ನಿಯಮ ಬದ್ಧವಾಗಿ ತನ್ನ ಘೂಟಗಳ ಸಮೂಹವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಚೆಂಡನ್ನು ಎದುರಿಸುವ ದಾಂಡಿಗನು ಘೂಟ ರಕ್ಷಕನಿಗೆ ಅಡ್ಡಿಪಡಿಸಿದರೆ, ನಿಯಮ ೩೭.೩(ಚೆಂಡನ್ನು ಬುತ್ತಿ ಹಿಡಿಯುವುದರಿಂದ ಅಡ್ಡಿಪಡಿಸುವುದು)ರಲ್ಲಿರುವ ಷರತ್ತುಗಳನ್ನು ಹೊರತು ಪಡಿಸಿ ಔಟ್ ಆಗುವುದಿಲ್ಲ. |

| LAW 28 THE FIELDER | ನಿಯಮ ೨೮ ಕ್ಷೇತ್ರ ರಕ್ಷಕ |
| --- | --- |
| **28.1 Protective equipment**<br>No fielder other than the wicket-keeper shall be permitted to wear gloves or external leg guards. In addition, protection for the hand or fingers may be worn only with the consent of the umpires. | **೨೮.೧ ಸುರಕ್ಷಾ ಉಪಕರಣಗಳು**<br>ಘೂಟ ರಕ್ಷಕನನ್ನು ಹೊರತುಪಡಿಸಿ, ಇತರ ಯಾವುದೇ ಕ್ಷೇತ್ರ ರಕ್ಷಕನಿಗೆ ಕೈ ಗವಚ ಹಾಗೂ ಬಾಹ್ಯ ಕಾಲಿನ ಕವಚ ತೊಡಲು ಅನುಮತಿ ಇಲ್ಲ. ಇದರ ಜೊತೆಗೆ, ಕೈಗೆ ಮತ್ತು ಬೆರಳುಗಳ ರಕ್ಷಣೆಗಾಗಿ ಪಟ್ಟಿಯನ್ನು ಅಂಪೈರ್ ಅನುಮತಿಯಿಂದ ಮಾತ್ರ ಹಾಕಿಕೊಳ್ಳಬಹುದು. |
| **28.2 Fielding the ball**<br>28.2.1 A fielder may field the ball with any part of his/her person (see Appendix A.12), except as in 28.2.1.2. However, he/she will be deemed to have fielded the ball illegally if, while the ball is in play, he/she wilfully<br>28.2.1.1 uses anything other than part of his/her person to field the ball.<br>28.2.1.2 extends his/her clothing with his/her hands and uses this to field the ball.<br>28.2.1.3 discards a piece of clothing, equipment or any other object which subsequently makes contact with the ball.<br><br>28.2.2 It is not illegal fielding if the ball in play makes contact with a piece of clothing, equipment or any other object | **೨೮.೨ ಚೆಂಡಿನ ಕ್ಷೇತ್ರ ರಕ್ಷಣೆ**<br>೨೮.೨.೧ ೨೮.೨.೧ರಲ್ಲಿ ತಿಳಿಸಿರುವುದನ್ನು ಹೊರತು ಪಡಿಸಿ, ಕ್ಷೇತ್ರ ರಕ್ಷಕನು ತನ್ನ ಶರೀರದ ಯಾವುದೇ ಭಾಗದಿಂದ ಚೆಂಡನ್ನು ತಡೆಯಬಹುದು (ಅನುಬಂಧ ಅ.೧೨ ಗಮನಿಸಿ). ಆದರೆ, ಅವನು/ಅವಳು ಉದ್ದೇಶಪೂರ್ವಕವಾಗಿ ಆಟದಲ್ಲಿರುವ ಚೆಂಡನ್ನು;<br>೨೮.೨.೧.೧ ಕ್ಷೇತ್ರ ರಕ್ಷಣೆ ಮಾಡಲು ತನ್ನ ದೇಹವನ್ನು ಬಿಟ್ಟು ಯಾವುದೇ ವಸ್ತುವನ್ನು ಬಳಸಿದರೆ,<br>೨೮.೨.೧.೨ ತನ್ನ ಉಡುಗೆ ತೊಡಿಗೆಯನ್ನು ಕೈಯಿಂದ ವಿಸ್ತರಿಸಿ (ಚಾಚಿ) ಅದನ್ನು ಕ್ಷೇತ್ರ ರಕ್ಷಣೆಗೆ ಉಪಯೋಗಿಸಿದರೆ,<br>೨೮.೨.೧.೩ ಕಳಚಿ ಬಿಸಾಡಿದ (ತಿರಸ್ಕರಿಸಿದ) ಬಟ್ಟೆಯ ತುಂಡು, ಸಲಕರಣೆ ಅಥವಾ ಮತ್ತಾವುದೇ ವಸ್ತು ಆಟದಲ್ಲಿರುವ ಚೆಂಡಿನ ಸಂಪರ್ಕಕ್ಕೆ ಬಂದರೆ,ನಿಯಮ ಬಾಹಿರ ಕ್ಷೇತ್ರ ರಕ್ಷಣೆ ಮಾಡಲಾಗಿದೆ ಎಂದು ಭಾವಿಸಬೇಕು. |

which has accidentally fallen from the fielder's person or been dropped by an umpire.

28.2.3 If a fielder illegally fields the ball, the ball shall immediately become dead and

- the penalty for a No ball or a Wide shall stand.
- any runs completed by the batters shall be credited to the batting side, together with the run-in progress if the batters had already crossed at the instant of the offence.
- the ball shall not count as one of the over.

In addition, the umpire shall

- award 5 Penalty runs to the batting side.
- inform the other umpire and the captain of the fielding side of the reason for this action.
- inform the batters and, as soon as practicable, the captain of the batting side of what has occurred.

The umpires together shall report the occurrence as soon as possible after the match to the Executive of the offending side and to any Governing Body responsible for the

match, who shall take such action as is considered appropriate against the captain,

೨೮.೨.೨ ಕ್ಷೇತ್ರ ರಕ್ಷಕರಿ0ದ ಆಕಸ್ಮಿಕವಾಗಿ ಬಿದ್ದ ಅಥವಾ ಅ0ಪೈರ್ ಬೀಳಿಸಿದ ಬಟ್ಟೆಯ ತುಂಡು, ಸಲಕರಣೆ ಅಥವಾ ಮತ್ತಾವುದೇ ವಸ್ತು ಆಟದಲ್ಲಿರುವ ಚೆಂಡಿನ ಸಂಪರ್ಕಕ್ಕೆ ಬಂದರೆ ಅದು ನಿಯಮ ಬಾಹಿರ ಕ್ಷೇತ್ರ ರಕ್ಷಣೆಯಾಗುವುದಿಲ್ಲ.

೨೮.೨.೩ ಕ್ಷೇತ್ರ ರಕ್ಷಕನೊಬ್ಬನು ನಿಯಮ ಬಾಹಿರ ಕ್ಷೇತ್ರ ರಕ್ಷಣೆ ಮಾಡಿದರೆ, ಚೆಂಡು ತತ್‌ಕ್ಷಣ ಡೆಡ್ ಆಗುತ್ತದೆ ಮತ್ತು,

- ನೋ ಬಾಲ್ ಇಲ್ಲವೇ ವೈಡ್ ಬಾಲ್‌ನ ದಂಡ ಇರುತ್ತದೆ.
- ದಾಂಡಿಗರು ಓಡಿ ಪೂರ್ಣಗೊಳಿಸಿದ ಓಟಗಳ ಜೊತೆಗೆ ತಪ್ಪೆಸಗಿದ ಕ್ಷಣದಲ್ಲಿ ದಾಂಡಿಗರು ಚಾಲ್ತಿಯಲ್ಲಿರುವ ಓಟದಲ್ಲಿ ಒಬ್ಬರನ್ನೊಬ್ಬರು ದಾಟಿದ್ದರೆ ಅದನ್ನೂ ಸೇರಿಸಿ ದಾಂಡಿಗ ತಂಡದ ಓಟಗಳಿಗೆ ಸೇರಿಸಬೇಕು.
- ಚೆಂಡನ್ನು ಓವರಿನಲ್ಲಿಯ ಒಂದು ಎಸೆತವೆಂದು ಲೆಕ್ಕಿಸಬಾರದು.

ಇವುಗಳ ಜೊತೆಗೆ ಅಂಪೈರನು

- ದಂಡದ ೫ ಓಟಗಳನ್ನು ದಾಂಡಿಗ ತಂಡಕ್ಕೆ ಅನುದಾನಿಸಬೇಕು.
- ಇನ್ನೊಬ್ಬ ಅಂಪೈರ್‌ಗೆ ಮತ್ತು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ತೆಗೆದುಕೊಂಡ ಕ್ರಮದ ಕಾರಣವನ್ನು ತಿಳಿಸಬೇಕು.
- ನಡೆದ ಘಟನೆಯ ಬಗ್ಗೆ ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ದಾಂಡಿಗ ತಂಡದ ನಾಯಕನಿಗೆ ತಿಳಿಸಬೇಕು.

ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಸೇರಿ ನಡೆದ ಘಟನೆಯ ಬಗ್ಗೆ ಸಾಧ್ಯವಾದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಹಾಗೂ ಪಂದ್ಯದ

| | |
|---|---|
| any other individuals concerned and, if appropriate, the team. | ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ಅದಕ್ಕನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. |
| **28.3 Protective helmets belonging to the fielding side,**<br>28.3.1 Protective helmets, when not in use by fielders, may not be placed on the ground, above the surface except behind the wicket-keeper and in line with both sets of stumps.<br>28.3.2 If the ball while in play strikes a helmet, placed as described in 28.3.1, the ball shall immediately become dead and, unless 28.3.3 applies:<br>- the umpire shall signal No ball or Wide to the scorers, if applicable<br>- the umpire shall award 5 Penalty runs to the batting side.<br>- any runs completed by the batters before the ball strikes the protective helmet shall be scored, together with the run-in progress if the batters had already crossed at the instant of the ball striking the protective helmet.<br>28.3.3 If the ball while in play strikes a helmet, placed as described in 28.3.1 and the circumstances of Law 23.3 | **೨೮.೩ ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಸುರಕ್ಷಾ ಶಿರಸ್ತ್ರಾಣಗಳು**<br>೨೮.೩.೧ ಕ್ಷೇತ್ರ ರಕ್ಷಕರು ಸುರಕ್ಷಾ ಶಿರಸ್ತ್ರಾಣಗಳನ್ನು ಉಪಯೋಗಿಸದಿದ್ದಾಗ, ಅದನ್ನು ಘೂಟ ರಕ್ಷಕನ ಹಿಂದೆ ನೆಲದ ಮೇಲೆ ಎರಡೂ ಘೂಟಗಳ ಸಮೂಹದ (ವಿಕೆಟ್ಟಿನ) ಸರಳ ರೇಖೆಯ ಹೊರತಾಗಿ ಬೇರೆಲ್ಲೂ ಇಡಬಾರದು.<br>೨೮.೩.೨ ಆಟದಲ್ಲಿರುವ ಚೆಂಡು ೨೮.೩.೧ರಲ್ಲಿ ತಿಳಿಸಿರುವಂತೆ ಇಟ್ಟಿರುವ ಶಿರಸ್ತ್ರಾಣಕ್ಕೆ ತಗಲಿದರೆ, ೨೮.೩.೩ ಅನ್ವಯವಾಗದಿದ್ದಲ್ಲಿ ತತಕ್ಷಣ ಚೆಂಡು ಡೆಡ್ ಆಗುತ್ತದೆ.<br>➢ ಅವಶ್ಯಕತೆ ಇದ್ದಲ್ಲಿ ಅ0ಪೈರ್ ಸ್ಕೋರರಗಳಿಗೆ ನೋ ಬಾಲ್ ಅಥವಾ ವೈಡ್ ಬಾಲ್ ಮರು ಸನ್ನೆ ಮಾಡಬೇಕು.<br>➢ ದಾಂಡಿಗ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಚೆಂಡು ಶಿರಸ್ತ್ರಾಣಕ್ಕೆ ತಗಲುವ ಮೊದಲು ದಾಂಡಿಗರು ಓಡಿ ಪೂರ್ಣಗೊಳಿಸಿದ ಓಟಗಳ ಜೊತೆಗೆ ಶಿರಸ್ತ್ರಾಣಕ್ಕೆ ತಗಲುವ ಕ್ಷಣದಲ್ಲಿ ದಾಂಡಿಗರು ಚಾಲ್ತಿಯಲ್ಲಿರುವ ಓಟದಲ್ಲಿ ಒಬ್ಬರನ್ನೊಬ್ಬರು ದಾಟಿದ್ದರೆ ಅದನ್ನೂ ಸೇರಿಸಿ ದಾಂಡಿಗ ತಂಡದ ಓಟ ಗಳಿಗೆ ಸೇರಿಸಬೇಕು.<br>೨೮.೩.೩ ೨೮.೩.೧ರಲ್ಲಿ ತಿಳಿಸಿರುವಂತೆ ಇಟ್ಟ ಶಿರಸ್ತ್ರಾಣಕ್ಕೆ ಆಟದಲ್ಲಿರುವ ಚೆಂಡು ತಗಲಿದರೆ, ನಿಯಮ ೨೩.೩ (ಲೆಗ್ ಬೈಸ್ |

| | |
|---|---|
| (Leg byes not to be awarded), 25.7 (Restriction on the striker's runner) or Law 34 (Hit the ball twice) apply, the umpire shall.<br>- disallow all runs to the batting side<br>- return any not out batter to his/her original end<br>- signal No ball or Wide ball to the scorers if applicable<br>- award any 5-run Penalty that is applicable except for Penalty runs under 28.3.2. | ಅನುದಾನಿಸಬಾರದು), ೨೫.೭ (ಚೆಂಡನ್ನೆದುರಿಸುವ ದಾಂಡಿಗನ ಓಟಗಾರನ ಮೇಲಿನ ನಿರ್ಬಂಧ) ಇಲ್ಲವೇ ನಿಯಮ ೩೪ (ಚೆಂಡನ್ನು ಎರಡು ಸಲ ಹೊಡೆಯುವುದು)ಗಳು ಅನ್ವಯವಾದಲ್ಲಿ, ಅಂಪೈರ್,<br>➢ ದಾಂಡಿಗ ತಂಡದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು.<br>➢ ಔಟ್ ಆಗದೇ ಇರುವ ದಾಂಡಿಗನನ್ನು ಅವನ/ಅವಳ ಸ್ವಸ್ಥಾನಕ್ಕೆ ಹಿಂತಿರುಗಿಸಬೇಕು.<br>➢ ಅನ್ವಯಿಸಿದಲ್ಲಿ ಸ್ಕೋರರಿಗೆ ನೋ ಬಾಲ್ ಅಥವಾ ವೈಡ್ ಬಾಲ್ ಸನ್ನೆ ಮಾಡಬೇಕು.<br>➢ ೨೮.೩.೨ನ್ನು ಹೊರತು ಪಡಿಸಿ, ಅನ್ವಯವಾಗುವ ೫ ದಂಡದ ಓಟಗಳನ್ನು ಅನುದಾನಿಸಬೇಕು. |
| **28.4 Limitation of on side fielders**<br>At the instant of the bowler's delivery there shall not be more than two fielders, other than the wicketkeeper, behind the popping crease on the on side. A fielder will be considered to be behind the popping crease unless the whole of his/her person whether grounded or in the air is in front of this line.<br>In the event of infringement of this Law by any fielder, the striker's end umpire shall call and signal No ball | **೨೮.೪ ಆನ್ (ಬಲ) ಭಾಗದ ಕ್ಷೇತ್ರ ರಕ್ಷಕರ ಮಿತಿ**<br>ಬೌಲರ್ ಚೆಂಡನ್ನು ಬೌಲ್ ಮಾಡುವ ಕ್ಷಣದಲ್ಲಿ ಪಾಪಿಂಗ್ ರೇಖೆಯ ಹಿಂದೆ ಬಲ ಭಾಗದಲ್ಲಿ (on side) ಘೂಟ ರಕ್ಷಕನನ್ನು ಹೊರತು ಪಡಿಸಿ ಇಬ್ಬರಿಗಿಂತ ಹೆಚ್ಚು ಕ್ಷೇತ್ರ ರಕ್ಷಕರು ಇರುವಂತಿಲ್ಲ. ಒಬ್ಬ ಕ್ಷೇತ್ರ ರಕ್ಷಕನ ಪೂರ್ತಿ ದೇಹ ನೆಲದಮೇಲಾಗಲಿ ಇಲ್ಲವೇ ಗಾಳಿಯಲ್ಲಾಗಲಿ ಪಾಪಿಂಗ್ ರೇಖೆಯ ಮುಂದೆ ಇರದಿದ್ದರೆ, ಅವನು/ಅವಳು ಪಾಪಿಂಗ್ ರೇಖೆಯ ಹಿಂದೆ ಇದ್ದಾನೆ ಎಂದು ಪರಿಗಣಿಸಬೇಕು.<br>ಒಂದು ವೇಳೆ ಯಾವುದೇ ಕ್ಷೇತ್ರ ರಕ್ಷಕನು ಈ ನಿಯಮವನ್ನು ಉಲ್ಲಂಘಿಸಿದರೆ, ಚೆಂಡನ್ನು ಎದುರಿಸುವ ದಾಂಡಿಗನ ತುದಿಯ ಅಂಪೈರ್ "ನೋ ಬಾಲ್" ಎಂದು ಕೂಗಿ ಸನ್ನೆ ಮಾಡಬೇಕು. |

| | |
|---|---|
| **28.5 Fielders not to encroach on pitch**<br>While the ball is in play and until the ball has made contact with the striker's bat or person,<br>or has passed the striker's bat, no fielder, other than the bowler, may have any part of his/her person grounded on or extended over the pitch.<br>In the event of infringement of this Law by any fielder other than the wicketkeeper, the bowler's end umpire shall call and signal No ball as soon as possible after delivery of the ball. Note, however, Law 27.3 (Position of wicketkeeper). | **೨೮.೫ ಆಟದ ಪಟ್ಟಿಯ ಮೇಲೆ ಕ್ಷೇತ್ರ ರಕ್ಷಕರ ಅತಿಕ್ರಮಣ (ಎನ್ ಕ್ರೋಚ್‌ಮೆಂಟ್- Eencroachment)**<br>ಆಟದಲ್ಲಿರುವ ಚೆಂಡು , ಚೆಂಡನ್ನು ಎದುರಿಸುವ ದಾಂಡಿಗನ ದಾಂಡು ಅಥವಾ ಶರೀರಕ್ಕೆ ತಗಲುವವರೆಗೆ ಅಥವಾ ದಾಂಡನ್ನು ದಾಟುವವರೆಗೆ , ಬೌಲರನನ್ನು ಹೊರತುಪಡಿಸಿ ಯಾವುದೇ ಕ್ಷೇತ್ರ ರಕ್ಷಕ ತನ್ನ ಶರೀರದ ಯಾವುದೇ ಭಾಗವನ್ನು ಆಟದ ಪಟ್ಟಿಯಮೇಲೆ ಊರುವಂತಿಲ್ಲ ಅಥವಾ ಚಾಚುವಂತಿಲ್ಲ.<br>ಘೂಟ ರಕ್ಷಕನನ್ನು ಹೊರತುಪಡಿಸಿ ಬೇರಾವುದೇ ಕ್ಷೇತ್ರ ರಕ್ಷಕ ಈ ನಿಯಮವನ್ನು ಉಲ್ಲಂಘಿಸಿದರೆ, ಬೌಲರ್ ತುದಿಯ ಅಂಪೈರ್, ಚೆಂಡಿನ ಎಸೆತದ ನಂತರ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ "ನೋ ಬಾಲ್" ಎಂದು ಕೂಗಿ ಸನ್ನೆ ಮಾಡಬೇಕು. ಆದರೂ ನಿಯಮ ೨೭.೩(ಘೂಟ ರಕ್ಷಕನ ಸ್ಥಾನ) ಗಮನಿಸಿ. |
| **28.6 Movement by any fielder other than the wicketkeeper**<br>28.6.1 Any movement by any fielder, excluding the wicketkeeper, after the ball comes into play and before the ball reaches the striker, is unfair except for the following:<br>28.6.1.1 minor adjustment to stance or position in relation to the striker's wicket. | **೨೮.೬ ಘೂಟ ರಕ್ಷಕನನ್ನು ಹೊರತುಪಡಿಸಿ ಯಾವುದೇ ಕ್ಷೇತ್ರ ರಕ್ಷಕನ ಚಲನೆ**<br>೨೮.೬.೧ ಘೂಟ ರಕ್ಷಕನನ್ನು ಹೊರತು ಪಡಿಸಿ, ಚೆಂಡು ಆಟದಲ್ಲಿ ಬಂದ ನಂತರ ಅದು ಚೆಂಡನ್ನೆದುರಿಸುವ ದಾಂಡಿಗನನ್ನು ತಲುಪುವವರೆಗೆ, ಈ ಕೆಳಗಿನವುಗಳನ್ನು ಬಿಟ್ಟು, ಯಾವುದೇ ಕ್ಷೇತ್ರ ರಕ್ಷಕನ ಯಾವುದೇ ಚಲನೆ, ನಿಯಮಬಾಹಿರ.<br>೨೮.೬.೧.೧ ಚೆಂಡನ್ನೆದುರಿಸುವ ದಾಂಡಿಗನ ವಿಕೆಟ್‌ಗೆ ಸಂಬಂಧಿಸಿದಂತೆ ತನ್ನ ನಿಲ್ಲುವ ಭಂಗಿ ಅಥವಾ ಸ್ಥಾನದಲ್ಲಿ ಅಲ್ಪ ಹೊಂದಾಣಿಕೆ. |

| | |
|---|---|
| 28.6.1.2 movement by any fielder, other than a close fielder, towards the striker or the striker's wicket that does not significantly alter the position of the fielder. | ೨೮.೬.೧.೨ ಹತ್ತಿರದ ಕ್ಷೇತ್ರ ರಕ್ಷಕರನ್ನು ಹೊರತುಪಡಿಸಿ, ಯಾವುದೇ ಕ್ಷೇತ್ರ ರಕ್ಷಕನ ಚಲನೆಯು ಚೆಂಡನ್ನೆದುರಿಸುವ ದಾಂಡಿಗನ ದಿಕ್ಕಿನಲ್ಲಿ ಅಥವಾ ಚೆಂಡನ್ನೆದುರಿಸುವ ದಾಂಡಿಗನ ವಿಕೆಟ್ ದಿಕ್ಕಿನಲ್ಲಿದ್ದರೆ, ಅದು ಕ್ಷೇತ್ರ ರಕ್ಷಕನ ಸ್ಥಾನದಲ್ಲಿ ಗಮನಾರ್ಹ ಬದಲಾವಣೆ ಆಗಿರದಿದ್ದರೆ. |
| 28.6.1.3 movement by any fielder in response to the stroke that the striker is playing or that his/her actions suggest he/she intends to play. | ೨೮.೬.೧.೩ ಚೆಂಡನ್ನು ದಾಂಡಿಗನು ಆಡುವ ಹೊಡೆತದ ಅಥವಾ ಉದ್ದೇಶಿತ ಹೊಡೆತದ ಶೈಲಿಗೆ ಅನುಗುಣವಾಗಿ ಯಾವುದೇ ಕ್ಷೇತ್ರ ರಕ್ಷಕನ ಚಲನೆ. |
| 28.6.2 In all circumstances Law 28.4 (Limitation of on side fielders) shall apply. | ೨೮.೬.೨ ಎಲ್ಲ ಸಂದರ್ಭಗಳಲ್ಲಿ ನಿಯಮ ೨೮.೪(ಆನ್ ಭಾಗದಲ್ಲಿ ಕ್ಷೇತ್ರ ರಕ್ಷಕರ ಮಿತಿ) ಅನ್ವಯಿಸುತ್ತದೆ. |
| 28.6.3 In the event of such unfair movement, either umpire shall call and signal Dead ball and inform the other umpire of the reason for doing so. The bowler's end umpire shall then: | ೨೮.೬.೩ ಅಂತಹ ನಿಯಮಬಾಹಿರ ಚಲನೆ ಮಾಡಿದಲ್ಲಿ, ಯಾವುದೇ ಅಂಪೈರ್ ಡೆಡ್ ಬಾಲ್ ಕರೆದು ಸನ್ನೆ ಮಾಡಬೇಕು ಮತ್ತು ಇನ್ನೊಬ್ಬ ಅಂಪೈರಗೆ ಯಾಕೆ ಕರೆದದ್ದೆಂದು ತಿಳಿಸಬೇಕು. ಆ ಮೇಲೆ ಬೌಲರ್ ತುದಿಯ ಅಂಪೈರ್. |
| 28.6.3.1 award the one-run penalty for Wide or No ball, if applicable | ೨೮.೬.೩.೧ ಅನ್ವಯಿಸಿದಲ್ಲಿ ನೋ ಬಾಲ್ ಇಲ್ಲವೇ ವೈಡ್ ಬಾಲ್ ನ ಒಂದು ದಂಡದ ಓಟ ನೀಡಬೇಕು. |
| 28.6.3.2 award 5 Penalty runs to the batting side. | ೨೮.೬.೩.೨ ದಂಡದ ೫ ಓಟಗಳನ್ನು ದಾಂಡಿಗ ಪಂಗಡಕ್ಕೆ ಅನುದಾನಿಸಬೇಕು. |
| 28.6.3.3 inform the captain of the fielding side of the reason for this action. | ೨೮.೬.೩.೩ ಕ್ಷೇತ್ರ ರಕ್ಷಕ ತಂಡದ ನಾಯಕನಿಗೆ ಕ್ರಮ ತೆಗೆದುಕೊಂಡ ಕಾರಣದ ಬಗ್ಗೆ ತಿಳಿಸಬೇಕು. |
| 28.6.3.4 inform the batters and, as soon as practicable, the captain of the batting side of what has occurred. | |

| | |
|---|---|
| The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team.<br>.28.6.4 Note also the provisions of Law 41.4 (Deliberate attempt to distract striker). See also Law 27.4 (Movement by wicket-keeper). | ೨೮.೬.೩.೪ ನಡೆದ ಘಟನೆಯ ಬಗ್ಗೆ ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ದಾಂಡಿಗ ತಂಡದ ನಾಯಕನಿಗೆ ತಿಳಿಸಬೇಕು<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಸೇರಿ ನಡೆದ ಘಟನೆಯ ಬಗ್ಗೆ ಸಾಧ್ಯವಾದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಹಾಗೂ ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ಅದಕ್ಕನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.<br>೨೮.೬.೪ ನಿಯಮ ೪೧.೪(ಚೆಂಡನ್ನೆದುರಿಸುವ ದಾಂಡಿಗನನ್ನು ಉದ್ದೇಶಪೂರ್ವಕವಾಗಿ ಬೆದರಿಸುವ ಪ್ರಯತ್ನ)ರ ಅವಕಾಶಗಳನ್ನು ಗಮನಿಸಿ. ನಿಯಮ ೨೭.೪(ಘೂಟ ರಕ್ಷಕನ ಚಲನೆ)ನ್ನೂ ಸಹ ನೋಡಿ. |
| **LAW 29 THE WICKET IS BROKEN** | **ನಿಯಮ ೨೯ ವಿಕೆಟ್ ಬೀಳಿಸುವುದು.** |
| **29.1 The wicket is broken.**<br>The wicket is broken when at least one bail is completely removed from the top of the stumps, or one or more stumps is removed from the ground.<br>**29.2 Breaking the wicket fairly**<br>**29.2.1** The wicket is broken fairly if a bail is completely removed from the top of the stumps, or a stump is struck out of the ground, | **೨೯.೧ ವಿಕೆಟ್ ಬಿದ್ದಿದೆ**<br>ಯಾವುದೇ ಬೇಲ್ ಘೂಟಗಳ ಮೇಲಿಂದ ಪೂರ್ತಿಯಾಗಿ ಹೊರಬ0ದಾಗ ಅಥವಾ ಒಂದು ಘೂಟವನ್ನು ಹೊಡೆದು ನೆಲದಿಂದ ಹೊರ ತೆಗೆದಾಗ ವಿಕೆಟ್ ಬಿದ್ದಿದೆ ಎ0ದು ಪರಿಗಣಿಸಬೇಕು<br>**೨೯.೨ ವಿಕೆಟ್ ನಿಯಮಾನುಸಾರ ಬೀಳಿಸುವುದು.**<br>೨೯.೨.೧ ವಿಕೆಟನ್ನು ನಿಯಮಾನುಸಾರ ಬೀಳಿಸಲು ಯಾವುದೇ ಬೇಲ್ ಅನ್ನು ಪೂರ್ತಿಯಾಗಿ ಘೂಟಗಳ ಮೇಲಿಂದ ತೆಗೆಯಬೇಕು ಅಥವಾ ಒಂದು ಘೂಟವನ್ನು ಹೊಡೆದು ನೆಲದಿಂದ ಈ ಕೆಳಗಿನ0ತೆ ಹೊರಗೆ ತೆಗೆಯಬೇಕು. |

| | |
|---|---|
| 29.2.1.1 by the ball, | ೨೯.೨.೧.೧ ಚೆಂಡಿನಿಂದ |
| 29.2.1.2 by the striker's bat if held or by any part of the bat that he/she is holding, | ೨೯.೨.೧.೨ ಚೆಂಡನ್ನೆದುರಿಸುವ ದಾಂಡಿಗನ ಕೈಯಲ್ಲಿರುವ ದಾಂಡಿನಿಂದ ಇಲ್ಲವೇ ಅವನ/ಅವಳ ಕೈಯಲ್ಲಿರುವ ದಾಂಡಿನ ಯಾವುದೇ ಭಾಗದಿಂದ. |
| 29.2.1.3 for the purpose of this law only, by the striker's bat not in hand, or by any partof the bat which has become detached, | ೨೯.೨.೧.೩ ಕೇವಲ ಈ ನಿಯಮದ ಉದ್ದೇಶಕ್ಕಾಗಿ, ಚೆಂಡನ್ನೆದುರಿಸುವ ದಾಂಡಿಗನ ಕೈಯಲ್ಲಿರದ ದಾಂಡು ಇಲ್ಲವೇ ಮುರಿದು ಬಂದ ದಾಂಡಿನ ಯಾವುದೇ ಭಾಗದಿಂದ. |
| 29.2.1.4 by the striker's person or by any part of his/her clothing or equipment becoming detached from his/her person. However, any detached equipment shall not include the striker's protective helmet, or any part thereof, as defined in Appendix A.2.3, | ೨೯.೨.೧.೪ ಚೆಂಡನ್ನೆದುರಿಸುವ ದಾಂಡಿಗನ ದೇಹದಿಂದ ಇಲ್ಲವೇ ಅವನಿಂದ/ಅವಳಿಂದ ಬೇರ್ಪಟ್ಟ ಅವನ/ಅವಳ ಬಟ್ಟೆ ಅಥವಾ ಉಪಕರಣದ ಯಾವುದೇ ಭಾಗದಿಂದ ಆದರೆ ಬೇರ್ಪಟ್ಟ ಉಪಕರಣಗಳಲ್ಲಿ ಅವನ/ ಅವಳ ಶಿರಸ್ತ್ರಾಣ ಅನುಭ0ದ ಆ.೨.೩ರಲ್ಲಿ ವಿವರಿಸಿದ0ತೆ ಅಥವಾ ಅದರ ಯಾವುದೇ ಭಾಗ ಒಳಗೊಳ್ಳುವುದಿಲ್ಲ. |
| 29.2.1.5 by a fielder with his/her hand or arm, providing that the ball is held in thehand or hands so used, or in the hand of the arm so used. | ೨೯.೨.೧.೫ ಒಬ್ಬ ಕ್ಷೇತ್ರ ರಕ್ಷಕನು/ಳು ತನ್ನ ಕೈಯಿಂದ ಇಲ್ಲವೇ ತೋಳಿನಿಂದ, ಈ ರೀತಿಯಾಗಿ ಉಪಯೋಗಿಸಿದ ಕೈಯಲ್ಲಿ ಇಲ್ಲವೇ ತೋಳಿನ ಕೈಯಲ್ಲಿ ಚೆಂಡನ್ನು ಹಿಡಿದಿದ್ದರೆ ಮಾತ್ರ. |
| 29.2.1.6 The wicket is also broken fairly if a fielder strikes or pulls a stump out of the ground as in 29.2.1.5. | ೨೯.೨.೧.೬ ಕ್ಷೇತ್ರ ರಕ್ಷಕನೊಬ್ಬನು ಒಂದು ಘೂಟವನ್ನು ಹೊಡೆದು ಇಲ್ಲವೇ ೨೯.೧.೧.೫ ರನ್ವಯ ನೆಲದಿಂದ ಕಿತ್ತಿ ಹೊರ ತೆಗೆದರೆ ವಿಕೆಟ್ ನಿಯಮಾನುಸಾರ ಬಿದ್ದಿದೆ ಎಂದರ್ಥ. |
| **29.2.2** The disturbance of a bail, whether temporary or not, | ೨೯.೨.೨ ಒಂದು ಬೇಲ್ ತಾತ್ಕಾಲಿಕವಾಗಿ ಇಲ್ಲವೇ ಪೂರ್ಣವಾಗಿ ಸ್ಥಾನಪಲ್ಲಟಗೊಂಡರೆ, ಅದು ಘೂಟಗಳ ಮೇಲಿಂದ ಪೂರ್ತಿಯಾಗಿ |

shall not constitute its complete removal from the top of the stumps, but if a bail in falling lodges between two of the stumps this shall be regarded as complete removal.

**29.3 One bail off**

If one bail is off, it shall be sufficient for the purpose of breaking the wicket to remove the remaining bail or to strike or pull any of the three stumps out of the ground, in any of the ways stated in 29.2.

**29.4 Remaking wicket**

If a wicket is broken while the ball is in play, it shall not be remade by an umpire until the ball is dead. See Law 20 (Dead ball). Any fielder may, however, while the ball is in play,

- replace a bail or bails on top of the stumps.
- put back one or more stumps into the ground where the wicket originally stood.

**29.5 Dispensing with bails**

If the umpires have agreed to dispense with bails in accordance with Law 8.5 (Dispensing with bails), it is for the

ಹೊರಬಂದಂತಾಗುವುದಿಲ್ಲ. ಆದರೆ ಒಂದು ಬೇಲ್ ಬೀಳುವಾಗ ಎರಡು ಘೂಟಗಳ ಮಧ್ಯೆ ಸಿಕ್ಕಿಕೊಂಡರೆ, ಪೂರ್ಣವಾಗಿ ಹೊರಬಂದಿದೆ ಎಂದು ಭಾವಿಸಬೇಕು

**೨೯. ೩ ಒಂದು ಬೇಲ್ ಬಿದ್ದರೆ**

ಒಂದು ಬೇಲ್ ಬಿದ್ದರೆ, ವಿಕೆಟನ್ನು ಬೀಳಿಸಲು ಉಳಿದ ಬೇಲ್ ಬೀಳಿಸಿದರೆ ಸಾಕು ಅಥವಾ ಮೂರೂ ಘೂಟ ಗಳಲ್ಲಿ ಯಾವುದಾದರೋಂದು ಘೂಟವನ್ನು ಹೊಡೆದು ಇಲ್ಲವೇ ಎಳೆದು ಮೇಲಿನ ೨೯.೧ರಲ್ಲಿ ತಿಳಿಸಿರುವಂತೆ ಯಾವುದೇ ರೀತಿಯಲ್ಲಿ ನೆಲದಿಂದ ಹೊರಬರಸಿದರೆ ಸಾಕು.

೨೯. ೪ **ವಿಕೆಟನುಃ ಮತ್ತೆ ಸರಿಪಡಿಸುವುದು**

ಚೆಂಡು ಆಟದಲ್ಲಿದ್ದಾಗ ವಿಕೆಟ್ ಬಿದ್ದರೆ ಅಥವಾ ಬೀಳಿಸಿದರೆ, ಚೆಂಡು ಡೆಡ್ ಆಗುವವರೆಗೆ ಅಂಪೈರ್ ಸರಿಪಡಿಸಬಾರದು. ನಿಯಮ ೨೦ (ಡೆಡ್ ಬಾಲ್) ಗಮನಿಸಿ. ಯಾವುದೇ ಕ್ಷೇತ್ರ ರಕ್ಷಕನು ಚೆಂಡು ಆಟದಲ್ಲಿದ್ದಾಗ

- ಬೇಲ್ ಅಥವಾ ಬೇಲ್ಸ್ ಗಳನ್ನು ಮರಳಿ ಇಡಬಹುದು.
- ಒಂದು ಅಥವಾ ಹೆಚ್ಚಿನ ಘೂಟಗಳನ್ನು ವಿಕೆಟ್ ಮೊದಲಿದ್ದ ಜಾಗದಲ್ಲಿ ನಿಲ್ಲಿಸಬಹುದು.

೨೯. ೫ **ಬೇಲ್ ಗಳನ್ನು ತೆಗೆದಿಡುವುದು**

ನಿಯಮ ೮.೫ (ಬೇಲ್ ಗಳನ್ನು ತೆಗೆದಿಡುವುದು) ರ ಪ್ರಕಾರ ಅಂಪೈರ್ ಗಳು ಬೇಲ್ ಗಳನ್ನು ತೆಗೆಯಲು ಒಪ್ಪಿದಲ್ಲಿ ಸಂಬಂಧಿತ ಅಂಪೈರ್ ವಿಕೆಟ್ ಬಿದ್ದಿದೆ ಅಥವಾ ಇಲ್ಲವೋ ಎಂದು ನಿರ್ಧರಿಸಬೇಕು.

**೨೯. ೫.೧** ಬೇಲ್ ಗಳಿಲ್ಲದೆ ಆಟವನ್ನು ಮುಂದುವರೆಸಲು ನಿರ್ಧರಿಸಿದ ನಂತರ, , ವಿಕೆಟ್ ಗೆ ಚೆಂಡು, ಚೆಂಡನ್ನೆದುರಿಸುವ ದಾಂಡಿಗನ ದಾಂಡು, ದೇಹ

| | |
|---|---|
| umpire concerned to decide whether or not the wicket has been broken.<br>**29.5.1** After a decision to play without bails, the wicket has been broken fairly if the umpire concerned is satisfied that the wicket has been struck by the ball, by the striker's bat, person or items of his/her clothing or equipment as described in 29.2.1.2, 29.2.1.3 or 29.2.1.4, or by a fielder in the manner described in 29.2.1.5.<br>**29.5.2** If the wicket has already been broken, 29.5.1 shall apply to any stump or stumps still in the ground. Any fielder may replace a stump or stumps, in accordance with 29.4, in order to have an opportunity of breaking the wicket fairly. | ಇಲ್ಲವೇ ಅವನ/ಅವಳ ಬಟ್ಟೆ ಇಲ್ಲವೇ ೨೯.೧.೧.೨, ೨೯.೧.೧.೩ ಅಥವಾ ೨೯.೧.೧.೪ ರಲ್ಲಿ ವಿವರಿಸಿರುವ ಉಪಕರಣಗಳಿಗೆ ತಗಲಿದೆ ಇಲ್ಲವೇ ೨೯.೧.೧.೫ ರಲ್ಲಿ ತಿಳಿಸಿರುವಂತೆ ಒಬ್ಬ ಕ್ಷೇತ್ರ ರಕ್ಷಕ ಬಡಿಸಿದ್ದಾನೆ ಎಂದು ಅಂಪೈರ್ ಗೆ ಮನವರಿಕೆಯಾದರೆ ವಿಕೆಟ್ ನಿಯಮಾನುಸಾರ ಬಿದ್ದಂತೆ.<br>**೨೯. ೫.೨** ಮೊದಲೇ ವಿಕೆಟ್ ಬಿದ್ದಿದ್ದರೆ ಅಥವಾ ಬೀಳಿಸಿದ್ದರೆ, ಇನ್ನೂ ನೆಲದ ಮೇಲೆ ನಿಂತಿರುವ ಯಾವುದೇ ಘೂಟ ಅಥವಾ ಘೂಟಗಳಿಗೆ ೨೯. ೫.೧ ಅನ್ವಯಿಸುತ್ತದೆ. ಯಾವುದೇ ಕ್ಷೇತ್ರ ರಕ್ಷಕ ವಿಕೆಟನ್ನು ನಿಯಮಾನುಸಾರ ಬೀಳಿಸುವ ಅವಕಾಶ ಹೊಂದುವುದಕ್ಕಾಗಿ ೨೯.೪ ರ ಪ್ರಕಾರ ಒಂದು ಅಥವಾ ಹೆಚ್ಚಿನ ಘೂಟಗಳನ್ನು ವಿಕೆಟ್ ಮೊದಲಿದ್ದ ಜಾಗದಲ್ಲಿ ನಿಲ್ಲಿಸಬಹುದು. |
| **LAW 30 BATTER OUT OF HIS/HER GROUND** | **ನಿಯಮ ೩೦ ದಾಂಡಿಗ ಅವನ/ಅವಳ ಜಾಗದಿಂದ ಹೊರಗಿರುವುದು** |
| **30.1 When out of his/her ground**<br>30.1.1 A batter shall be considered to be out of his/her ground unless some part of his/her person or bat is grounded behind the popping crease at that end.<br>30.1.2 However, a batter shall not be considered to be out of his/her ground if, in running or diving towards his/her ground and beyond and having grounded some part of his/her person or bat beyond the popping crease, there is | **೩೦.೧ ಯಾವಾಗ ತನ್ನ ನಿಗದಿತ ಜಾಗದಿಂದ ಹೊರಗಿದ್ದಾನೆ/ಹೊರಗಿದ್ದಾಳೆ**<br>೩೦.೧.೧ ದಾಂಡಿಗನು ಕೈಯಲ್ಲಿ ಹಿಡಿದಿರುವ ದಾಂಡಿನ ಯಾವುದೇ ಭಾಗ ಅಥವಾ ದೇಹದ ಯಾವುದೇ ಅಂಗ ಪಾಪಿಂಗ್ ರೇಖೆಯ ಹಿಂದೆ ಊರಿಲ್ಲದಿದ್ದರೆ, ಅವನು/ಅವಳು ತನ್ನ ನಿಗದಿತ ಜಾಗದಿಂದ ಹೊರಗಿದ್ದಾನೆ/ ಹೊರಗಿದ್ದಾಳೆ ಎಂದು ಪರಿಗಣಿಸಬೇಕು.<br>೩೦.೧.೨ ಆದರೂ, ಅವನ/ಅವಳ ತುದಿಗೆ ಮತ್ತು ಅದರಿಂದಾಚೆ ಓಡುವಾಗ ಅಥವಾ ಬೀಳುವಾಗ ತನ್ನ ದೇಹದ ಯಾವುದೇ ಅಂಗ |

| | |
|---|---|
| subsequent loss of contact between the ground and any part of his/her person or bat, or between the bat and person. | ಅಥವಾ ದಾಂಡನ್ನು ಪಾಪಿಂಗ್ ರೇಖೆಯ ಹಿಂದೆ ನೆಲದ ಮೇಲೆ ಊರಿದ ನಂತರ ಅವನ/ಅವಳ ದೇಹ ಅಥವಾ ದಾಂಡು ನೆಲದ ಸಂಪರ್ಕ ಕಳೆದುಕೊಂಡರೆ ಅಥವಾ ದಾಂಡು ಮತ್ತು ದೇಹದ ಸಂಪರ್ಕ ಕಳೆದುಕೊಂಡರೆ ದಾಂಡಿಗನು ತನ್ನ ಜಾಗದಿಂದ ಹೊರಗಿದ್ದಾನೆ ಎಂದು ಭಾವಿಸಬಾರದು. |
| **30.2 Which is a batter's ground.**<br>30.2.1 If only one batter is within a ground, it is his/her ground and will remain so even if he/she is later joined there by the other batter.<br>30.2.2 If both batters are in the same ground and one of them subsequently leaves it, the ground belongs to the batter who remains in it.<br>30.2.3 If there is no batter in either ground, then each ground belongs to whichever batter is nearer to it, or, if the batters are level, to whichever batter was nearer to it immediately prior to their drawing level.<br>30.2.4 If a ground belongs to one batter, then, unless there is a striker who has a runner, the other ground belongs to the other batter, irrespective of his/her position. | **೩೦.೨ ದಾಂಡಿಗನ ನಿಗದಿತ ಜಾಗ ಯಾವುದು**<br>೩೦.೨.೧ ಒಂದು ಜಾಗದಲ್ಲಿ ಒಬ್ಬ ದಾಂಡಿಗನಿದ್ದರೆ ಅದು ಅವನ ಜಾಗ ಮತ್ತು ನಂತರದಲ್ಲಿ ಮತ್ತೊಬ್ಬ ದಾಂಡಿಗ ಅಲ್ಲಿ ಬಂದು ಸೇರಿದರೂ ಸಹ ಅದೇ ಅವನ/ಅವಳ ನಿಗದಿತ ಜಾಗ.<br>೩೦.೨.೨ ಇಬ್ಬರೂ ದಾಂಡಿಗರು ಒಂದೇ ಜಾಗದಲ್ಲಿದ್ದು, ತದನಂತರ ಒಬ್ಬ ದಾಂಡಿಗ ಹೊರಬಂದರೆ, ಅದು ಅದರಲ್ಲೇ ಇದ್ದ ದಾಂಡಿಗನ ಜಾಗವಾಗುತ್ತದೆ.<br>೩೦.೨.೩ ಎರಡೂ ತುದಿಯಲ್ಲಿ ಯಾವುದೇ ದಾಂಡಿಗ ಇಲ್ಲದಿದ್ದರೆ, ಪ್ರತಿ ದಾಂಡಿಗನ ತುದಿಯು ಆಯಾ ದಾಂಡಿಗನ ಹತ್ತಿರವಿರುವ ತುದಿ ಆಗಿರುತ್ತದೆ ಅಥವಾ ಇಬ್ಬರೂ ದಾಂಡಿಗರು ಸರಿಸಮಾನವಾಗಿದ್ದರೆ, ಸಮಾನವಾಗಿ ಬರುವ ಮೊದಲು ಯಾವ ತುದಿ ಹತ್ತಿರವಿತ್ತೋ ಅದು ಅವನ/ಅವಳ ಜಾಗ.<br>೩೦.೨.೪ ಒಬ್ಬ ದಾಂಡಿಗನಿಗೆ ಒಂದು ಜಾಗ ಸೇರಿದ್ದಾಗ, ಓಟಗಾರನನ್ನು ಹೊಂದಿರುವ ಚೆಂಡನ್ನೆದುರಿಸುವ ದಾಂಡಿಗನಿರದ ಹೊರತು, ಮತ್ತೊಬ್ಬ ದಾಂಡಿಗ (ಸ್ಥಾನ) ಎಲ್ಲೇ ಇರಲಿ, ಮತ್ತೊಂದು ತುದಿಯ ಜಾಗವು ಅವನ/ಅವಳದಾಗಿರುತ್ತದೆ. |

| | |
|---|---|
| 30.2.5 When a batter who has a runner is striker, his/her ground is always at the wicketkeeper's end. However, 30.2.1, 30.2.2, 30.2.3 and 30.2.4 will still apply, but only to the runner and the non-striker, so that that ground will also belong to either the non-striker or the runner, as the case may be. | ೩೦.೨.೫ ಓಟಗಾರನನ್ನು ಹೊಂದಿರುವ ದಾಂಡಿಗನೇ ಚೆಂಡನ್ನು ಎದುರಿಸುವವನಾಗಿದ್ದರೆ, ಅವನ ಜಾಗ ಯಾವಾಗಲೂ ಘೂಟ ರಕ್ಷಕನಿರುವ ತುದಿಯದ್ದಾಗಿರುತ್ತದೆ. ಅದರೂ, ೩೦.೨.೧, ೩೦.೨.೨, ೩೦.೨.೩ ಮತ್ತು ೩೦.೨.೪ ಕೇವಲ ಓಟಗಾರ ಹಾಗೂ ಚೆಂಡನ್ನೆದುರಿಸದ ದಾಂಡಿಗನಿಗೆ ಅನ್ವಯವಾಗುತ್ತವೆ ಮತ್ತು ಆಯಾ ಜಾಗಗಳು ಸಹ ಅವರದವರದಾಗಿರುತ್ತದೆ. |
| **30.3 Position of non-striker**<br>The non-striker, when standing at the bowler's end, should be positioned on the opposite side of the wicket to that from which the ball is being delivered, unless a request to do otherwise is granted by the umpire. | **೩೦.೩ ಬೌಲರ್ ತುದಿಯ ದಾಂಡಿಗನ ಸ್ಥಾನ**<br>ಚೆಂಡನ್ನೆದುರಿಸದ ದಾಂಡಿಗನು, ಬೌಲರ್ ತುದಿಯಲ್ಲಿ ನಿಲ್ಲುವ ಸ್ಥಾನ, ಬೇರೆ ಸ್ಥಾನಕ್ಕೆ ಅಂಪೈರ್ ಮನವಿಯನ್ನು ಅನುಮತಿಸದ ಹೊರತು, ಯಾವಾಗಲೂ ಬೌಲರ್ ಚೆಂಡೆಸೆಯುವ ಬಾಜುವಿನ ವಿರುದ್ಧ ಬಾಜುವಿನಲ್ಲಿರಬೇಕು. |
| **LAW 31 APPEALS** | **ನಿಯಮ ೩೧ ಮನವಿಗಳು (ಅಪಿಲ್ಸ್)** |
| **31.1 Umpire not to give batter out without an appeal.**<br>Neither umpire shall give a batter out, even though he/she may be out under the Laws, unless appealed to by a fielder. This shall not debar a batter who is out under any of the Laws from leaving the wicket without an appeal having been made. Note, however, the provisions of 31.7. | ೩೧.೧ ಕ್ಷೇತ್ರ ರಕ್ಷಕನೊಬ್ಬ ಮನವಿ ಸಲ್ಲಿಸದ ಹೊರತು , ದಾಂಡಿಗನೊಬ್ಬನು ನಿಯಮಗಳ ಪ್ರಕಾರ ಔಟ್ ಆಗಿದ್ದರೂ ಸಹ, ಯಾರೊಬ್ಬ ಅಂಪೈರ್ ದಾಂಡಿಗನನ್ನು ಔಟ್ ಕೊಡಬಾರದು. ಇದು ಒಬ್ಬ ದಾಂಡಿಗ ನಿಯಮ ಪ್ರಕಾರ ಔಟ್ ಆಗಿದ್ದಾಗ ಮನವಿ ಮಾಡದಿದ್ದರೂ ಸಹ ವಿಕೆಟ್ ಬಿಟ್ಟು ಹೋಗುವುದನ್ನು ನಿಲ್ಲಿಸಲಾಗುವುದಿಲ್ಲ. ಆದಾಗ್ಯೂ, ೩೧.೭ರ ಅವಕಾಶಗಳನ್ನು ಗಮನಿಸಿ. |
| **31.2 Batter dismissed.**<br>A batter is dismissed if he/she is either given out by an | **೩೧.೨ ದಾಂಡಿಗ ಔಟಾಗುವುದು**<br>ದಾಂಡಿಗನು ಔಟಾಗುವುದು ಯಾವಾಗೆಂದರೆ ಅವನನ್ನು/ಅವಳನ್ನು |

| | |
|---|---|
| umpire, on appeal or out under any of the Laws and leaves the wicket as in 31.1. | ಅಂಪೈರ್, ಮನವಿಯ ಮೇರೆಗೆ ಔಟ್ ಕೊಟ್ಟಾಗ, ಯಾವುದೇ ನಿಯಮಗಳ ಪ್ರಕಾರ ಔಟ್ ಆಗಿ ೩೧.೧ರ ಪ್ರಕಾರ ವಿಕೆಟ್ ಬಿಟ್ಟಾಗ. |
| **31.3 Timing of appeals**<br>For an appeal to be valid, it must be made before the bowler begins his/her run-up or, if there is no run-up, his/her bowling action to deliver the next ball, and before Time has been called.<br>The call of Over does not invalidate an appeal made prior to the start of the following over, provided Time has not been called. See Laws 12.2 (Call of Time) and 17.2 (Start of an over). | **೩೧.೩ ಮನವಿ ಸಲ್ಲಿಸುವ ವೇಳೆ**<br>ಮನವಿ ಮಾನ್ಯಗೊಳ್ಳಬೇಕಾದರೆ, ಅದನ್ನು ಬೌಲರನು ನಂತರದ ಎಸೆತಕ್ಕೆ ಓಟವನ್ನು ಅಥವಾ ಓಡದೆ ಬೌಲಿಂಗ್ ಮೋಡಿಯನ್ನು ಪ್ರಾರಂಭಿಸುವುದಕ್ಕೆ ಮೊದಲು ಮತ್ತು "ಟೈಂ" ಕರೆಯುವುದಕ್ಕೆ ಮೊದಲು ಸಲ್ಲಿಸಬೇಕು.<br>"ಟೈಂ" ಎಂದು ಕರೆಯದ ಹೊರತು, ಓವರ್ ಕರೆಯು ಮುಂದಿನ ಓವರ್ ಪ್ರಾರಂಭಿಸುವ ಮೊದಲು ಮಾಡಿದ ಮನವಿಯನ್ನು ಅಮಾನ್ಯಗೊಳಿಸುವುದಿಲ್ಲ. ನಿಯಮ ೧೨.೨ ("ಟೈಂ" ಕರೆಯುವುದು) ಮತ್ತು ೧೭.೨ (ಓವರ್ ಪ್ರಾರಂಭ) ಗಮನಿಸಿ. |
| **31.4 Appeal "How's That?"**<br>An appeal "How's That?" covers all ways of being out. | **೩೧.೪ ಮನವಿ – "ಹೌ ಈಸ್ ದಟ್"**<br>"ಹೌ ಈಸ್ ದಟ್" ಎಂದು ಮನವಿಯನ್ನು ಸಲ್ಲಿಸಿದರೆ, ಅದು ಎಲ್ಲ ರೀತಿಯ ಔಟ್‌ಗಳಿಗೆ ಅನ್ವಯಿಸುತ್ತದೆ. |
| **31.5 Answering appeals.**<br>The striker's end umpire shall answer all appeals arising out of any of Laws 35 (Hit wicket), 39 (Stumped) or 38 (Run out) when this occurs at the wicket-keeper's end. The bowler's end umpire shall answer all other appeals.<br>When an appeal is made, each umpire shall answer on any matter that falls within his/her jurisdiction. | **೩೧.೫ ಮನವಿಗಳಿಗೆ ಉತ್ತರಿಸುವುದು**<br>ನಿಯಮ ೩೫ (ಹಿಟ್ ವಿಕೆಟ್), ೩೯ (ಸ್ಟಂಪ್ಡ್) ಅಥವಾ ೩೮ (ರನ್ ಔಟ್) ಘೂಟರಕ್ಷಕನ ತುದಿಯಲ್ಲಿ ಆಗುವುದರ ಪ್ರಕಾರ ಬರುವ ಎಲ್ಲ ಮನವಿಗಳಿಗೆ ಚೆಂಡನ್ನೆದುರಿಸುವ ದಾಂಡಿಗನ ತುದಿಯ ಅಂಪೈರ್ ಉತ್ತರಿಸಬೇಕು. ಇತರ ಎಲ್ಲ ಮನವಿಗಳಿಗೆ ಬೌಲರ್ ತುದಿಯ ಅಂಪೈರ್ ಉತ್ತರಿಸಬೇಕು.<br>ಮನವಿಯೊಂದನ್ನು ಸಲ್ಲಿಸಿದಾಗ, ಪ್ರತಿ ಅಂಪೈರ್ ಅವನ/ಅವಳ ವ್ಯಾಪ್ತಿಯಲ್ಲಿರುವ ಘಟನೆಗಳಿಗೆ ಮಾತ್ರ ಉತ್ತರಿಸಬೇಕು. |

| | |
|---|---|
| When a batter has been given Not out, either umpire may answer an appeal, made in accordance with 31.3, if it is on a further matter and is within his/her jurisdiction. | ಒಬ್ಬ ದಾಂಡಿಗನಿಗೆ ಔಟಿಲ್ಲ ಎಂದು ಘೋಷಿಸಿದಮೇಲೆ, ೩೧.೩ಕ್ಕನುಗುಣವಾಗಿ ಮಾಡಿದ ಮುಂದಿನ ಘಟನೆಗಳ ಮನವಿಗೆ ಯಾವುದೇ ಅಂಪೈರ್ ಅದು ಅವನ/ಅವಳ ವ್ಯಾಪ್ತಿಯಲ್ಲಿದ್ದರೆ ಉತ್ತರಿಸುವುದು. |
| **31.6 Consultation by umpires**<br>Each umpire shall answer appeals on matters within his/her own jurisdiction. If an umpire is doubtful about any point that the other umpire may have been in a better position to see, he/she shall consult the latter on this point of fact and shall then give the decision. If, after consultation, there is still doubt remaining, the decision shall be Not out. | **೩೧.೬ ಅಂಪೈರ್ ಗಳ ನಡುವೆ ಸಮಾಲೋಚನೆ**<br>ಪ್ರತಿಯೊಬ್ಬ ಅಂಪೈರ್ ತನ್ನ ವ್ಯಾಪ್ತಿಯಲ್ಲಿರುವ ಘಟನೆಗಳ ಬಗ್ಗೆ ಉತ್ತರಿಸಬೇಕು. ಒಬ್ಬ ಅಂಪೈರ್‌ಗೆ ಯಾವುದೇ ಘಟನೆಯ ಬಗ್ಗೆ ಅನುಮಾನವಿದ್ದು ಮತ್ತು ಇನ್ನೊಬ್ಬ ಅಂಪೈರ್ ಈ ಘಟನೆಯನ್ನು ವೀಕ್ಷಿಸಲು ಅನುಕೂಲಕರ ಸ್ಥಿತಿಯಲ್ಲಿದ್ದರೆ, ಆಗ ಆ ಅಂಪೈರ್ ಜೊತೆ ಸಮಾಲೋಚಿಸಿ ನಿರ್ಣಯ ಕೊಡಬೇಕು. ಸಮಾಲೋಚನೆಯ ನಂತರವೂ ಸಹ ಅನುಮಾನವಿದ್ದಲ್ಲಿ, ನಿರ್ಣಯವು ಔಟಿಲ್ಲ ಎಂದಿರಬೇಕು. |
| **31.7 Batter leaving the wicket under a misapprehension.**<br>An umpire shall intervene if satisfied that a batter, not having been given out, has left the wicket under a misapprehension of being out. The umpire intervening shall call and signal.<br>Dead ball to prevent any further action by the fielding side and shall recall the batter.<br>A batter may be recalled at any time up to the instant when the ball comes into play for the next delivery, unless it is | **೩೧.೭ ದಾಂಡಿಗನು ತಪ್ಪು ತಿಳುವಳಿಕೆಯಿಂದ ವಿಕೆಟ್ ಬಿಡುವುದು**<br>ಔಟ್ ಕೊಡದೆ, ಒಬ್ಬ ದಾಂಡಿಗನು ತಾನು ಔಟ್ ಆಗಿದ್ದೇನೆ ಎಂದು ತಪ್ಪು ತಿಳುವಳಿಕೆಯಿಂದ ವಿಕೆಟ್ ಬಿಟ್ಟು ನಡೆದಿದ್ದಾನೆ ಎಂದು ಅಂಪೈರ್‌ಗೆ ಮನವರಿಕೆಯಾದರೆ, ಮಧ್ಯೆ ಪ್ರವೇಶಿಸಬೇಕು. ಹೀಗೆ ಮಧ್ಯೆ ಪ್ರವೇಶಿಸಿದ ಅಂಪೈರ್ ಕ್ಷೇತ್ರ ರಕ್ಷಣೆ ತಂಡವು ಮುಂದಿನ ಕ್ರಮ ತೆಗೆದುಕೊಳ್ಳದಂತೆ ತಡೆಯಲು “ಡೆಡ್ ಬಾಲ್” ಎಂದು ಕರೆದು ಸನ್ನೆ ಮಾಡಬೇಕು ಮತ್ತು ದಾಂಡಿಗನನ್ನು ಹಿಂದಕ್ಕೆ ಕರೆಯಬೇಕು.<br>ಸರದಿಯ ಕೊನೆಯ ಹುದ್ದರಿ ಆಗಿರದ ಹೊರತು, ಮುಂದಿನ ಎಸೆತಕ್ಕೆ ಚೆಂಡು ಆಟದಲ್ಲಿ ಬರುವವರೆಗೆ ದಾಂಡಿಗನನ್ನು ಹಿಂದಕ್ಕೆ |

| | |
|---|---|
| the final wicket of the innings, in which case it should be up to the instant when the umpires leave the field. | ಕರೆಯಬಹುದು. ಅದು ಕೊನೆಯ ಹುದ್ದರಿ ಆಗಿದ್ದರೆ, ಅಂಪೈರ್ ಆಟದ ಮೈದಾನದ ಹೊರಗೆ ಹೋಗುವ ಕ್ಷಣದವರೆಗೆ ಹಿಂದಕ್ಕೆ ಕರೆಯಬಹುದು. |
| **31.8 Withdrawal of an appeal**<br>The captain of the fielding side may withdraw an appeal only after obtaining the consent of the umpire within whose jurisdiction the appeal falls. If such consent is given, the umpire concerned shall, if applicable, revoke the decision and recall the batter.<br>The withdrawal of an appeal must be before the instant when the ball comes into play for the next delivery or, if the innings has been completed, the instant when the umpires leave the field. | **೩೧.೮ ಮನವಿ ಹಿಂತೆಗೆದುಕೊಳ್ಳುವುದು**<br>ಮನವಿಯು ಯಾವ ಅಂಪೈರ್ ವ್ಯಾಪ್ತಿಗೆ ಬರುತ್ತದೋ, ಆ ಅಂಪೈರ್ ಸಹಮತದೊಂದಿಗೆ ಕ್ಷೇತ್ರ ರಕ್ಷಣೆ ತಂಡದ ನಾಯಕನು ಒಂದು ಮನವಿಯನ್ನು ಹಿಂಪಡೆಯಬಹುದು. ಅಂಪೈರ್ ಈ ರೀತಿಯ ಅನುಮತಿ ನೀಡಿದರೆ, ಅನ್ವಯವಾದಲ್ಲಿ ತನ್ನ ನಿರ್ಧಾರವನ್ನು ಬದಲಿಸಿ ದಾಂಡಿಗನನ್ನು ಹಿಂದಕ್ಕೆ ಕರೆಯಬೇಕು.<br>ಹಿಂಪಡೆಯುವಿಕೆಯ ಮನವಿಯನ್ನು ಮುಂದಿನ ಎಸೆತಕ್ಕೆ ಚೆಂಡು ಆಟದಲ್ಲಿ ಬರುವ ಕ್ಷಣದ ಮೊದಲು ಅಥವಾ ಸರದಿಯು ಪೂರ್ಣವಾಗಿದ್ದರೆ, ಅಂಪೈರ್ ಆಟದ ಮೈದಾನದ ಹೊರಗೆ ಹೋಗುವ ಕ್ಷಣದವರೆಗೆ ಮಾಡಬೇಕು |
| **LAW 32 BOWLED** | **ನಿಯಮ ೩೨ ಬೌಲ್ಡ್** |
| **32.1 Out Bowled**<br>**32.1.1** The striker is out Bowled if his/her wicket is broken by a ball delivered by thebowler, not being a No ball, even if it first touches the striker's bat or person.<br>**32.1.2** However, the striker shall not be out Bowled if before striking the wicket the ball has been in contact with any other player or an umpire. The striker will, however, be subject to Laws 37 (Obstructing the field), 38 (Run out) | **೩೨.೧ ಔಟ್ ಬೌಲ್ಡ್**<br>೩೨.೧.೧ ಬೌಲರ್ ಬೌಲ್ ಮಾಡಲ್ಪಟ್ಟ ಚೆಂಡು ನೋ ಬಾಲ್ ಆಗಿರದೆ, ಅದು ಮೊದಲು ಚೆಂಡನ್ನು ಎದುರಿಸುವ ದಾಂಡಿಗನ ದಾಂಡು ಅಥವಾ ಶರೀರಕ್ಕೆ ತಗಲಿದ್ದರೂ ಸಹ ಅವನ/ಅವಳ ವಿಕೆಟ್ ಬೀಳಿಸಿದರೆ ಚೆಂಡನ್ನೆದುರಿಸುವ ದಾಂಡಿಗನು ಬೌಲ್ಡ್ ಔಟ್ ಆದಂತೆ.<br>೩೨.೧.೨ ಚೆಂಡು ವಿಕೆಟ್‌ಗೆ ತಾಗುವ ಮೊದಲು ಇತರ ಯಾವುದೇ ಆಟಗಾರ ಇಲ್ಲವೇ ಅಂಪೈರ್‌ಗೆ ತಗಲಿದ್ದರೆ ಬೌಲ್ಡ್ ಔಟ್ ಆಗುವುದಿಲ್ಲ. |

| | |
|---|---|
| and 39 (Stumped). | ಆದರೂ, ಚೆಂಡನ್ನೆದುರಿಸುವ ದಾಂಡಿಗನು ನಿಯಮ ೩೭ (ಕ್ಷೇತ್ರ ರಕ್ಷಣೆಗೆ ಅಡೆತಡೆ), ೩೮ (ರನ್ ಔಟ್) ಮತ್ತು ೩೭ (ಸ್ಟಂಪ್ಡ್) ಗಳಿಗೆ ಒಳಪಟ್ಟಿರುತ್ತಾನೆ. |
| **32.2 Bowled to take precedence.**<br>The striker is out Bowled if his/her wicket is broken as in 32.1, even though a decision against him/her for any other method of dismissal would be justified. | **೩೨.೨ ಬೌಲ್ಡ್ ಗೆ ಮೊದಲ ಆದ್ಯತೆ**<br>ಇತರ ಯಾವುದೇ ನಿಯಮಗಳ ಪ್ರಕಾರ ಚೆಂಡನ್ನೆದುರಿಸುವ ದಾಂಡಿಗನು ಔಟ್ ಆಗಬಹುದಾದರೂ ಸಹ, ೩೨.೧ರಂತೆ ವಿಕೆಟ್ ಬೀಳಿಸಿದರೆ, ಅವನು/ಅವಳು ಬೌಲ್ಡ್ ಔಟ್ ಎಂದೇ ಪರಿಗಣಿಸಬೇಕು. |
| **LAW 33 CAUGHT** | **ನಿಯಮ ೩೩ – ಕಾಟ್ (ಬುತ್ತಿ ಹಿಡಿಯುವುದು)** |
| **33.1 Out Caught**<br>The striker is out Caught if a ball delivered by the bowler, not being a No ball, touches his/her bat without having previously been in contact with any fielder, and is subsequently held by a fielder as a fair catch, as described in 33.2 and 33.3, before it touches the ground. | **೩೩.೧ ಔಟ್ ಕಾಟ್**<br>ಬೌಲರ್ ಬೌಲ್ ಮಾಡಿದ ಚೆಂಡು ನೋ ಬಾಲ್ ಆಗಿರದೆ, ಇತರ ಯಾವುದೇ ಕ್ಷೇತ್ರ ರಕ್ಷಕನ ಸಂಪರ್ಕಕ್ಕೆ ಒಳಗಾಗದೆ, ಚೆಂಡನ್ನೆದುರಿಸುವ ದಾಂಡಿಗನ ದಾಂಡಿಗೆ ತಾಗಿ ನೆಲಕ್ಕೆ ತಗಲುವ ಮೊದಲು ಕ್ಷೇತ್ರ ರಕ್ಷಕನೊಬ್ಬನು ೩೩.೨ರಲ್ಲಿ ವಿವರಿಸಿರುವಂತೆ ನಿಯಮಬದ್ದವಾಗಿ ಹಿಡಿದರೆ ದಾಂಡಿಗನು ಕ್ಯಾಚ್ ಔಟ್ (ಬುತ್ತಿ ಹಿಡಿದು) ಆಗುತ್ತಾನೆ. |
| **33.2 A fair catch**<br>33.2.1 A catch will be fair only if, in every case<br>either the ball, at any time<br>or any fielder in contact with the ball,<br>is not grounded beyond the boundary before the catch is completed. Note Laws 19.4 (Ball grounded beyond the | **೩೩.೨ ನಿಯಮ ಬದ್ದ ಕ್ಯಾಚ್ (ಬುತ್ತಿ)**<br>೩೩.೨.೧ ಕ್ಯಾಚ್ ನಿಯಮ ಬದ್ದವಾಗಬೇಕಾದರೆ, ಪ್ರತಿಯೊಂದು ಸಂದರ್ಭದಲ್ಲಿ,<br>ಯಾವುದೇ ಸಮಯದಲ್ಲಿ ಚೆಂಡು<br>ಅಥವಾ ಚೆಂಡಿನ ಸಂಪರ್ಕದಲ್ಲಿರುವ ಯಾವುದೇ ಕ್ಷೇತ್ರ ರಕ್ಷಕ |

| | |
|---|---|
| boundary) and 19.5 (Fielder grounded beyond the boundary). | ಕ್ಯಾಚನ್ನು ಪೂರ್ಣಗೊಳಿಸುವ ಮೊದಲು ಬೌಂಡರಿಯ ಹೊರಗಡೆ ನೆಲದ ಸಂಪರ್ಕಕ್ಕೆ ಬರಬಾರದು. ನಿಯಮ ೧೯.೪ (ಬೌಂಡರಿಯ ಹೊರಗಡೆ ಚೆಂಡು ನೆಲದ ಸಂಪರ್ಕಕ್ಕೆ ಬರುವುದು) ಹಾಗೂ ೧೯.೫ (ಕ್ಷೇತ್ರ ರಕ್ಷಕನು ಬೌಂಡರಿಯ ಹೊರಗಡೆ ನೆಲದ ಸಂಪರ್ಕಕ್ಕೆ ಬರುವುದು.) ಗಮನಿಸಿ. |
| 33.2.2 Furthermore, a catch will be fair if any of the following conditions applies: | ೩೩.೨.೨ ಮೇಲಿನದರೊಂದಿಗೆ, ಕೆಳಗಿನವುಗಳಲ್ಲಿ ಯಾವುದಾದರೊಂದು ಷರತ್ತು ಅನ್ವಯವಾದಲ್ಲಿ ಕ್ಯಾಚ್ ನಿಯಮಬದ್ಧವಾಗುತ್ತದೆ. |
| 33.2.2.1 the ball is held in the hand or hands of a fielder, even if the hand holding the ball is touching the ground, or is hugged to the body, or lodges in the external protective equipment worn by a fielder, or lodges accidentally in a fielder’s clothing. | ೩೨.೨.೨.೧ ಚೆಂಡನ್ನು ಹಿಡಿದ ಕೈ ನೆಲಕ್ಕೆ ತಾಗಿದ್ದರೂ ಸಹ, ಕ್ಷೇತ್ರ ರಕ್ಷಕ ಒಂದು ಕೈಯಲ್ಲಿ ಅಥವಾ ಎರಡೂ ಕೈಗಳಲ್ಲಿ ಚೆಂಡನ್ನು ಹಿಡಿದಾಗ, ಇಲ್ಲವೇ ಅವನ ದೇಹಕ್ಕೆ ಅಪ್ಪಿಕೊಂಡಾಗ, ಇಲ್ಲವೇ ಒಬ್ಬ ಕ್ಷೇತ್ರ ರಕ್ಷಕ ಹಾಕಿಕೊಂಡಿರುವ ಬಾಹ್ಯ ಸುರಕ್ಷಾ ಉಪಕರಣಗಳಲ್ಲಿ ಸಿಕ್ಕಿಕೊಂಡಾಗ ಇಲ್ಲವೇ ಅಕಸ್ಮಾತ್ತಾಗಿ ಅವನ ಬಟ್ಟೆಗಳಲ್ಲಿ ಸಿಲುಕಿದಾಗ. |
| 33.2.2.2 a fielder catches the ball after it has been lawfully struck more than once by the striker, but only if it has not been grounded since it was first struck. See Law 34 (Hit the ball twice). | ೩೨.೨.೨.೨ ಚೆಂಡನ್ನೆದುರಿಸುವ ದಾಂಡಿಗನೇ ಚೆಂಡನ್ನು ನಿಯಮಾನುಸಾರ ಒಂದಕ್ಕಿಂತ ಹೆಚ್ಚು ಸಲ ಹೊಡೆದ ಚೆಂಡನ್ನು ಒಬ್ಬ ಕ್ಷೇತ್ರ ರಕ್ಷಕ ಕ್ಯಾಚ್ ಹಿಡಿದರೆ, ಆದರೆ ಮೊದಲ ಹೊಡೆತದ ನಂತರ ಚೆಂಡು ನೆಲಕ್ಕೆ ತಾಗಿರಬಾರದು. ನಿಯಮ ೩೪ (ಚೆಂಡನ್ನು ಎರಡು ಸಲ ಹೊಡೆಯುವುದು) ಗಮನಿಸಿ. |
| 33.2.2.3 a fielder catches the ball after it has touched the wicket, an umpire, another fielder, a runner or the other batter. | ೩೨.೨.೨.೩ ಚೆಂಡು ವಿಕೆಟ್, ಒಬ್ಬ ಅಂಪೈರ್, ಮತ್ತೊಬ್ಬ ಕ್ಷೇತ್ರ ರಕ್ಷಕ, ಓಟಗಾರ ಇಲ್ಲವೇ ಮತ್ತೊಬ್ಬ ದಾಂಡಿಗನಿಗೆ ತಗಲಿದ ನಂತರ ಒಬ್ಬ ಕ್ಷೇತ್ರ ರಕ್ಷಕ ಕ್ಯಾಚ್ ಹಿಡಿದರೆ. |

| | |
|---|---|
| 33.2.2.4 a fielder catches the ball after it has crossed the boundary in the air, provided that the conditions in 33.2.1 are met.<br>33.2.2.5 the ball is caught off an obstruction within the boundary that is not designated a boundary by the umpires. | ೩೨.೨.೨.೪ ಒಬ್ಬ ಕ್ಷೇತ್ರ ರಕ್ಷಕ, ೩೩.೨.೧ರಲ್ಲಿನ ಷರತ್ತುಗಳ ಪಾಲನೆಗೆ ಒಳಪಟ್ಟು, ಚೆಂಡು ಗಾಳಿಯಲ್ಲಿ ಬೌಂಡರಿ ದಾಟಿದ್ದರೂ ಸಹ ಕ್ಯಾಚ್ (ಬುತ್ತಿ) ಹಿಡಿದರೆ.<br>೩೨.೨.೨.೫ ಅಂಪೈರ್‌ಗಳು ಬೌಂಡರಿ ಒಳಗಿನ ಅಡೆತಡೆಗಳನ್ನು ಬೌಂಡರಿ ಎಂದು ಗೊತ್ತುಪಡಿಸಿರದ ಹೊರತು, ಅದಕ್ಕೆ ತಗಲಿದ ಚೆಂಡನ್ನು ಕ್ಯಾಚ್ ಹಿಡಿದರೆ. |
| **33.3 Making a catch**<br>The act of making a catch shall start from the time when the ball first comes into contact with a fielder's person and shall end when a fielder obtains complete control over both the ball and his/her own movement. | **೩೩.೩ ಕ್ಯಾಚ್ ಪೂರ್ಣಗೊಳ್ಳುವುದು**<br>ಕ್ಯಾಚ್ ಹಿಡಿಯುವ ಕ್ರಿಯೆಯು, ಕ್ಷೇತ್ರ ರಕ್ಷಕ ಮೊದಲನೆಯ ಸಾರಿ ಚೆಂಡನ್ನು ಸ್ಪರ್ಶಿಸಿದಾಗಿನಿಂದ ಶುರುವಾಗಿ, ಕ್ಷೇತ್ರ ರಕ್ಷಕನು ಚೆಂಡು ಮತ್ತು ತನ್ನ ಚಲನೆ ಇವೆರಡರ ಮೇಲೆ ಸಂಪೂರ್ಣ ಹತೋಟಿ ಹೊಂದಿದಾಗ ಪೂರ್ಣಗೊಳ್ಳುತ್ತದೆ. |
| **33.4 No runs to be scored**<br>If the striker is dismissed Caught, runs from that delivery completed by the batters before the completion of the catch shall not be scored but any runs for penalties awarded to either side shall stand. The non-striker shall return to his/her original end. See Law 18.11 (Batter returning to original end). | **೩೩.೪ ಯಾವುದೇ ಓಟ ಗಳಿಕೆಯಾಗುವುದಿಲ್ಲ**<br>ಚೆಂಡನ್ನು ಎದುರಿಸುವ ದಾಂಡಿಗನು ಕ್ಯಾಚ್ ಔಟ್ ಆದರೆ, ಕ್ಯಾಚ್ ಪೂರ್ಣಗೊಳಿಸುವ ಮೊದಲು ಆ ಎಸೆತದಿಂದ ದಾಂಡಿಗರು ಪೂರ್ಣಗೊಳಿಸಿದ ಓಟಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. ಆದರೆ ಯಾವುದೇ ತಂಡಕ್ಕಾಗಲಿ ದಂಡದ ಓಟಗಳನ್ನು ಅನುದಾನಿಸಿದರೆ ಅವು ಗಣನೆಗೆ ಬರುತ್ತವೆ. ಬೌಲರ್ ತುದಿಯ ದಾ0ಡಿಗ ತನ್ನ ಮೊದಲಿನ ಸ್ಥಾನಕ್ಕೆ ಹಿ0ತಿರಿಗಿ ಬರಬೇಕು. (ನಿಯಮ ೧೮.೧೧ ದಾಂಡಿಗರು ತಾವು ಬಿಟ್ಟ ತುದಿಗೆ ಮರಳಿ ಬರುವುದು ನೋಡಿರಿ) |

| | |
|---|---|
| **33.5 Caught to take precedence.**<br>If the criteria of 33.1 are met and the striker is not out Bowled, then he/she is out Caught, even though a decision against either batter for another method of dismissal would be justified. | **೩೩.೫ ಕ್ಯಾಚ್‌ಗೆ ಆದ್ಯತೆ**<br>೩೩.೧ರಲ್ಲಿಯ ಮಾನದಂಡಗಳು ಪೂರೈಸಲ್ಪಟ್ಟಲ್ಲಿ ಮತ್ತು ಚೆಂಡನ್ನೆದುರಿಸುವ ದಾಂಡಿಗನು ಬೌಲ್ಡ್ ಔಟ್ ಆಗಿರದಿದ್ದರೆ, ಇಬ್ಬರಲ್ಲಿ ಯಾರಾದರೊಬ್ಬ ದಾಂಡಿಗನು ಇತರ ಯಾವುದೇ ರೀತಿಯಲ್ಲಿ ಔಟ್ ಆಗುತ್ತಿದ್ದರೂ, ಅವನು/ಅವಳು ಕ್ಯಾಚ್ ಔಟ್ ಎಂದೇ ಪರಿಗಣಿಸಬೇಕು. |
| **LAW 34 HIT THE BALL TWICEನಿಯಮ** | **೩೪ – ಚೆಂಡನ್ನು ಎರಡು ಸಲ ಹೊಡೆಯುವುದು (ಹಿಟ್ ದಿ ಬಾಲ್ ಟ್ವೈಸ್)** |
| **34.1 Out Hit the ball twice.**<br>34.1.1 The striker is out Hit the ball twice if, while the ball is in play, it strikes any part of his/her person or is struck by his/her bat and, before the ball has been touched by a fielder, the striker wilfully strikes it again with his/her bat or person, other than a hand not holding the bat, except for the sole purpose of guarding his/her wicket. See 34.3 and Law 37 (Obstructing the field).<br>34.1.2 For the purpose of this Law 'struck' or 'strike' shall include contact with the person of the striker. | **೩೪.೧ ಚೆಂಡನ್ನು ಎರಡು ಸಲ ಹೊಡೆದ ಎಂದು ಔಟ್**<br>**೩೪.೧.೧** ಆಟದಲ್ಲಿರುವ ಚೆಂಡು, ಚೆಂಡನ್ನು ಎದುರಿಸುವ ದಾಂಡಿಗನ ದೇಹದ ಯಾವುದೇ ಭಾಗಕ್ಕೆ ತಗಲಿದರೆ ಅಥವಾ ಅವನ/ಅವಳ ದಾಂಡಿನಿಂದ ಹೊಡೆಯಲ್ಪಟ್ಟು, ಆ ಚೆಂಡನ್ನು ಕ್ಷೇತ್ರ ರಕ್ಷಕನು ಮುಟ್ಟುವುದಕ್ಕೆ ಮೊದಲು, ಕೇವಲ ತನ್ನ ವಿಕೆಟ್ ರಕ್ಷಿಸಿಕೊಳ್ಳುವುದನ್ನು ಹೊರತುಪಡಿಸಿ, ದಾಂಡನ್ನು ಹಿಡಿದಿರುವ ಕೈಯನ್ನು ಹೊರತುಪಡಿಸಿ, ಮತ್ತೆ ಉದ್ದೇಶಪೂರ್ವಕವಾಗಿ ತನ್ನ ದಾಂಡು ಇಲ್ಲವೇ ಶರೀರದ ಯಾವುದೇ ಭಾಗದಿಂದ ಪುನಃ ಹೊಡೆದರೆ, ಆ ದಾಂಡಿಗನು ಚೆಂಡನ್ನು ಎರಡು ಸಲ ಹೊಡೆದ ಎಂದು ಔಟ್ ಆಗುತ್ತಾನೆ. ೩೪.೩ ಮತ್ತು ನಿಯಮ ೩೭(ಕ್ಷೇತ್ರ ರಕ್ಷಣೆಗೆ ಅಡೆತಡೆ) ಗಮನಿಸಿ.<br>೩೪.೧.೨ ಈ ನಿಯಮದ ಉದ್ದೇಶಕ್ಕಾಗಿ, "ಹೊಡೆದ" ಇಲ್ಲವೇ "ಹೊಡಿ" ಪದಗಳು ಚೆಂಡನ್ನೆದುರಿಸುವ ದಾಂಡಿಗನ ಶರೀರದ ಸಂಪರ್ಕವನ್ನೂ ಒಳಗೊಂಡಿದೆ. |

| | |
|---|---|
| **34.2 Not out Hit the ball twice.**<br>The striker will not be out under this Law if he/she<br><br>34.2.1 strikes the ball a second or subsequent time in order to return the ball to any fielder.<br>Note, however, the provisions of Law 37.4 (Returning the ball to a fielder).<br>34.2.2 wilfully strikes the ball after it has touched a fielder.<br>Note, however the provisions of Law 37.1 (Out Obstructing the field). | **೩೪.೨ ಚೆಂಡನ್ನು ಎರಡು ಸಲ ಹೊಡೆದ ಎಂದು ಔಟಿಲ್ಲ**<br>ಚೆಂಡನ್ನು ಎದುರಿಸುವ ದಾಂಡಿಗನು ಈ ನಿಯಮದ ಅಡಿ ಯಾವಾಗ ಔಟಾಗುವುದಿಲ್ಲ ಎಂದರೆ,<br>೩೪.೨.೧ ಚೆಂಡನ್ನು ಎರಡನೇ ಅಥವಾ ಹೆಚ್ಚು ಸಲ ಒಬ್ಬ ಕ್ಷೇತ್ರ ರಕ್ಷಕನಿಗೆ ಹಿಂತಿರುಗಿಸಲು ಹೊಡೆದರೆ. ಆದರೂ ನಿಯಮ ೩೭.೪(ಕ್ಷೇತ್ರರಕ್ಷಕನಿಗೆ ಚೆಂಡನ್ನು ಹಿಂತಿರುಗಿಸುವುದು.)ರ ಅವಕಾಶಗಳನ್ನು ಗಮನಿಸಿ.<br>೩೪.೨.೨ ಚೆಂಡು ಒಬ್ಬ ಕ್ಷೇತ್ರ ರಕ್ಷಕನಿಗೆ ತಗಲಿದ ನಂತರ ಉದ್ದೇಶಪೂರ್ವಕವಾಗಿ ಹೊಡೆದರೆ. ಆದರೂ ನಿಯಮ ೩೭.೧ (ಕ್ಷೇತ್ರ ರಕ್ಷಣೆಯ ಅಡೆತಡೆಗೆ ಔಟ್) ರ ಅವಕಾಶಗಳನ್ನು ಗಮನಿಸಿ. |
| **34.3 Ball lawfully struck more than once.**<br>The striker may, solely in order to guard his/her wicket and before the ball has been touched by a fielder, lawfully strike the ball a second or subsequent time with the bat, or with any part of his/her person other than a hand not holding the bat.<br>The striker may guard his/her wicket even if the delivery is a No ball.<br>However, the striker may not prevent the ball from being caught by striking the ball more than once in defence of | **೩೪.೩ ನಿಯಮಬದ್ಧವಾಗಿ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದು**<br>ಚೆಂಡನ್ನು ಎದುರಿಸುವ ದಾಂಡಿಗನು ಕೇವಲ ತನ್ನ ವಿಕೆಟ್ ರಕ್ಷಿಸಿಕೊಳ್ಳಲು ಮತ್ತು ಚೆಂಡನ್ನು ಯಾವುದೇ ಕ್ಷೇತ್ರ ರಕ್ಷಕನು ಮುಟ್ಟುವ ಮೊದಲು ದಾಂಡನ್ನು ಹಿಡಿದಿರುವ ಕೈಯನ್ನು ಹೊರತುಪಡಿಸಿ ಮತ್ತೆ ನಿಯಮಬದ್ಧವಾಗಿ ತನ್ನ ದಾಂಡು ಇಲ್ಲವೇ ಶರೀರದ ಯಾವುದೇ ಭಾಗದಿಂದ ಎರಡು ಇಲ್ಲವೇ ಹೆಚ್ಚು ಸಲ ಹೊಡೆಯಬಹುದು.<br>ಆ ಎಸೆತ ನೋ ಬಾಲ್ ಆಗಿದ್ದರೂ ಸಹ ಚೆಂಡನ್ನು ಎದುರಿಸುವ ದಾಂಡಿಗನು ತನ್ನ ವಿಕೆಟ್ ರಕ್ಷಿಸಿಕೊಳ್ಳಬಹುದು. |

| | |
|---|---|
| his/her wicket. See Law 37.3 (Obstructing a ball from being caught). | ಹೀಗಿದ್ದರೂ, ತನ್ನ ವಿಕೆಟ್ ರಕ್ಷಿಸಿಕೊಳ್ಳುವುದಕ್ಕಾಗಿ ಒಂದಕ್ಕಿಂತ ಹೆಚ್ಚು ಸಲ ಹೊಡೆಯುವಾಗ ಚೆಂಡನ್ನು ಕ್ಯಾಚ್ ಹಿಡಿಯುವುದರಿಂದ ತಪ್ಪಿಸಬಾರದು. ನಿಯಮ ೩೭.೩(ಚೆಂಡನ್ನು ಕ್ಯಾಚ್ ಹಿಡಿಯುವುದಕ್ಕೆ ಅಡೆತಡೆ) ಗಮನಿಸಿ. |
| **34.4 Runs permitted from ball lawfully struck more than once**<br>When the ball is lawfully struck more than once, as permitted in 34.3, if the ball does not become dead for any reason, the umpire shall call and signal Dead ball as soon as the ball reaches the boundary or at the completion of the first run. However, he/she shall delay the call of Dead ball to allow the opportunity for a catch to be completed.<br>The umpire shall<br>- disallow all runs to the batting side<br>- return any not out batter to his/her original end<br>- signal No ball to the scorers if applicable.<br>- award any 5-run Penalty that is applicable except for Penalty runs under Law 28.3 (Protective helmets belonging to the fielding side). | **೩೪.೪ನಿಯಮಬದ್ಧವಾಗಿ ಒಂದಕ್ಕಿಂತ ಹೆಚ್ಚು ಸಲ ಹೊಡೆದ ಚೆಂಡಿನಿಂದ ಓಟಗಳ ಗಳಿಕೆ**<br>೩೪.೩ರಲ್ಲಿ ಅನುಮತಿಸಿರುವ ಪ್ರಕಾರ, ನಿಯಮಬದ್ಧವಾಗಿ ಒಂದಕ್ಕಿಂತ ಹೆಚ್ಚು ಸಲ ಹೊಡೆದಾಗ, ಚೆಂಡು ಯಾವುದೇ ಕಾರಣಕ್ಕಾಗಿ ಡೆಡ್ ಆಗದಿದ್ದರೆ, ಚೆಂಡು ಬೌಂಡರಿ ತಲುಪಿದ ಅಥವಾ ಒಂದು ರನ್ ಪೂರ್ಣ ಗೊಂಡ ಕೂಡಲೇ ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು. ಆದರೂ, ಅವರು/ಅವಳು ಕ್ಯಾಚ್ ಪೂರ್ತಿಗೊಳಿಸಲು ಅವಕಾಶ ಕೊಡಲು ಕರೆಯನ್ನು ವಿಳಂಬ ಮಾಡಬೇಕು.<br>ಅಂಪೈರ್ನು,<br>➢ ದಾಂಡಿಗ ತಂಡದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು.<br>➢ ಔಟಾಗದೆ ಇರುವ ದಾಂಡಿಗನನ್ನು ಅವನ/ಅವಳ ಮೂಲ ಜಾಗಕ್ಕೆ ಹಿಂತಿರುಗಿಸಬೇಕು.<br>➢ ಅನ್ವಯವಾದಲ್ಲಿ ಸ್ಕೋರರಿಗೆ ನೋ ಬಾಲ್ ಸನ್ನೆ ಮಾಡಬೇಕು.<br>➢ ಅನ್ವಯವಾಗುವ ದಂಡದ ೫ ಓಟಗಳನ್ನು ನಿಯಮ ೨೮.೩(ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಶಿರಸ್ತ್ರಾಣ)ರ ದಂಡದ ಓಟಗಳನ್ನು ಹೊರತುಪಡಿಸಿ ಅನುದಾನಿಸಬೇಕು. |

| | |
|---|---|
| **34.5 Bowler does not get credit**<br>The bowler does not get credit for the wicket. | **೩೪.೫ ಬೌಲರನಿಗೆ ಶ್ರೇಯ ಸಲ್ಲದು.**<br>ಬೌಲರನಿಗೆ ಹುದ್ದರಿ ಪತನದ ಶ್ರೇಯಸ್ಸು ಸಿಗುವುದಿಲ್ಲ. |
| **LAW 35 HIT WICKET** | **ನಿಯಮ ೩೫ – ಹಿಟ್ ವಿಕೆಟ್** |
| **35.1 Out Hit wicket.**<br>**35.1.1** The striker is out Hit wicket if, after the bowler has entered the delivery stride and while the ball is in play, his/her wicket is broken by either the striker's bat or person as described in Laws 29.2.1.2 to 29.2.1.4 (Breaking the wicket fairly) in any of the following circumstances:<br>35.1.1.1 in the course of any action taken by him/her in preparing to receive or in receiving a delivery,<br>35.1.1.2 in setting off for the first run immediately after playing or playing at the ball,<br>35.1.1.3 if no attempt is made to play the ball, in setting off for the first run, providing that in the opinion of the umpire this is immediately after the striker has hadthe opportunity of playing the ball,<br>35.1.1.4 in lawfully making a second or further stroke for the purpose of guarding his/her wicket within the provisions of | **೩೫.೧ ಔಟ್ ಹಿಟ್ ವಿಕೆಟ್**<br>೩೫.೧.೧ ಚೆಂಡನ್ನೆದುರಿಸುವ ದಾಂಡಿಗನು ಹಿಟ್ ವಿಕೆಟ್ ಎಂದು ಯಾವಾಗ ಔಟ್ ಆಗುತ್ತಾನೆ ಎಂದರೆ, ಬೌಲರ್ ಚೆಂಡನ್ನೆಸೆಯಲು ಕೊನೆಯ ಎರಡು ಹೆಜ್ಜೆ ಇಡುವಾಗ ಮತ್ತು ಚೆಂಡು ಆಟದಲ್ಲಿರುವಾಗ, ಅವನ/ಅವಳ ವಿಕೆಟನ್ನು ದಾಂಡಿನಿಂದ ಇಲ್ಲವೇ ಶರೀರದಿಂದ ನಿಯಮ ೨೯.೧.೧.೨ ರಿಂದ ೨೯.೧.೧.೪(ವಿಕೆಟ್ ಬೀಳಿಸುವುದು)ರಲ್ಲಿರುವಂತೆ ಈ ಕೆಳಗಿನ ಸನ್ನಿವೇಶಗಳಲ್ಲಿ ಬೀಳಿಸಿದರೆ.<br>೩೫.೧.೧.೧ ಬೌಲ್ ಮಾಡಲ್ಪಟ್ಟ ಚೆಂಡನ್ನೆದುರಿಸಲು ಸಿದ್ಧನಾಗುವಾಗ ಅಥವಾ ಎದುರಿಸುವಾಗ ಯಾವುದೇ ಭಂಗಿಯನ್ನು ತೆಗೆದುಕೊಳ್ಳುವಾಗ.<br>೩೫.೧.೧.೨ ಚೆಂಡನ್ನು ಆಡಿದಾಕ್ಷಣ ಇಲ್ಲವೇ ಆಡಲು ಪ್ರಯತ್ನಿಸಿದ ಕೂಡಲೇ ಮೊದಲನೆಯ ಓಟಕ್ಕಾಗಿ ಓಡಲು ಪ್ರಾರಂಭಿಸುವಾಗ.<br>೩೫.೧.೧.೩ ಚೆಂಡನ್ನು ಆಡಲು ಯಾವುದೇ ಪ್ರಯತ್ನ ಮಾಡದೆ ಮೊದಲನೆಯ ಓಟವನ್ನು ಪ್ರಾರಂಭಿಸುವಾಗ, ಆದರೆ ಅಂಪೈರ್ ಅಭಿಪ್ರಾಯದಲ್ಲಿ ಇದು ಚೆಂಡನ್ನೆದುರಿಸುವ ದಾಂಡಿಗನಿಗೆ ಚೆಂಡನ್ನು ಆಡಲು ಅವಕಾಶವಿದ್ದ ಕೂಡಲೇ ಆದರೆ.<br>೩೫.೧.೧.೪ ನಿಯಮ ೩೪.೪ (ನಿಯಮಬದ್ಧವಾಗಿ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದು.)ರ ಅವಕಾಶಗಳ ಪ್ರಕಾರ ನಿಯಮ ಬದ್ಧವಾಗಿ |

| | |
|---|---|
| Law 34.3 (Ball lawfully struck more than once).<br>If the striker breaks his/her wicket in any of the ways described in Laws 29.2.1.2 to 29.2.1.4 (Breaking the wicket fairly) before the bowler has entered the delivery stride, either umpire shall call and signal Dead ball. | ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಅವನ/ ಅವಳ ವಿಕೆಟನ್ನು ರಕ್ಷಿಸಲು ಹೊಡೆಯುವಾಗ.<br>ಬೌಲರ್ ಚೆಂಡನ್ನೆಸೆಯಲು ಕೊನೆಯ ಎರಡು ಹೆಜ್ಜೆ ಇಡುವ ಮೊದಲೇ ಚೆಂಡನ್ನೆದುರಿಸುವ ದಾಂಡಿಗನು ತನ್ನ ವಿಕೆಟನ್ನು ನಿಯಮ ೨೯.೧.೧.೨ ರಿಂದ ೨೯.೧.೧.೪ರಲ್ಲಿ ವಿವರಿಸಿದ ಪ್ರಕಾರ ಬೀಳಿಸಿದರೆ, ಯಾವುದೇ ಅಂಪೈರ್ "ಡೆಡ್ ಬಾಲ್" ಕರೆದು ಸನ್ನೆ ಮಾಡಬೇಕು. |
| **35.2 Not out Hit wicket.**<br>The striker is not out under this Law should his/her wicket be broken in any of the ways referred to in 35.1 if any of the following applies:<br>- it occurs after the striker has completed any action in receiving the delivery, other than in 35.1.1.2 to 35.1.1.4.<br>- it occurs when the striker is in the act of running, other than setting off immediately for the first run.<br>- it occurs when the striker is trying to avoid being run out or stumped.<br>- it occurs when the striker is trying to avoid a throw in at any time.<br>- the bowler after entering the delivery stride does not deliver the ball. In this case either umpire shall immediately call and signal | **೩೫.೨ ಹಿಟ್ ವಿಕೆಟ್ ಎಂದು ಔಟಿಲ್ಲ**<br>ದಾಂಡಿಗನು ೩೫.೧ರಲ್ಲಿ ತಿಳಿಸಿರುವಂತೆ ಯಾವುದೇ ರೀತಿಯಲ್ಲಿ ವಿಕೆಟ್ ಬಿದ್ದಾಗ, ಈ ಕೆಳಗಿನ ಸಂದರ್ಭಗಳಲ್ಲಿ ಔಟ್ ಆಗುವುದಿಲ್ಲ.<br>➢ ೩೫.೧.೧.೨ ರಿಂದ ೩೫.೧.೧.೪ನ್ನು ಹೊರತುಪಡಿಸಿ, ಚೆಂಡನ್ನೆದುರಿಸುವ ದಾಂಡಿಗನು ಚೆಂಡನ್ನೆದುರಿಸುವಾಗ ತೆಗೆದುಕೊಳ್ಳುವ ಯಾವುದೇ ಭಂಗಿಯನ್ನು ಪೂರ್ಣಗೊಳಿಸಿದ ಮೇಲೆ ಇದಾದರೆ.<br>➢ ಮೊದಲನೆಯ ಓಟದ ಪ್ರಾರಂಭವನ್ನು ಹೊರತುಪಡಿಸಿ ಓಟಗಳಿಗಾಗಿ ಓಡುತ್ತಿರುವಾಗ.<br>➢ ರನ್ ಔಟ್ ಅಥವಾ ಸ್ಟಂಪ್ಡ್ ಔಟ್ ಆಗುವುದನ್ನು ತಪ್ಪಿಸುವಾಗ ಇದಾದರೆ.<br>➢ ಯಾವುದೇ ಸಮಯದಲ್ಲಿ ಒಂದು ಎಸೆತದಿಂದ ತಪ್ಪಿಸಿಕೊಳ್ಳುವಾಗ ಇದಾದರೆ.<br>➢ ಬೌಲರ್ ತನ್ನ ಎಸೆತದ ಕೊನೆಯ ಎರಡು ಹೆಜ್ಜೆ ಇಟ್ಟನಂತರ ಚೆಂಡನ್ನು ಎಸೆಯದಿದ್ದರೆ. ಈ ಸಂದರ್ಭದಲ್ಲಿ ಯಾವುದೇ ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು. ನಿಯಮ ೨೦.೪ (ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡುವುದು) ಗಮನಿಸಿ. |

| | |
|---|---|
| Dead ball. See Law 20.4 (Umpire calling and signalling Dead ball).<br>- the delivery is a No ball. | ➢ ಆ ಎಸೆತವು ನೋ ಬಾಲ್ ಆಗಿದ್ದರೆ. |
| **35.3 Runs scored**<br>No runs shall be scored when the striker is dismissed Hit wicket other than the one-run penalty for a Wide and any award of 5 Penalty Runs. | **೩೫.೩ ರನ್ ಗಳಿಕೆ**<br>ದಾಂಡಿಗನು ಹಿಟ್ ವಿಕೆಟ್ ಔಟ್ ಎಂದು ಔಟ್ ಆದಾಗ ವೈಡ್ ಎಸೆತದ ಒಂದು ಓಟ ಮತ್ತು ದಂಡದ ೫ ಓಟಗಳನ್ನು ಹೊರತುಪಡಿಸಿ ಯಾವುದೇ ಓಟಗಳ ಗಳಿಕೆ ಯಾಗುವುದಿಲ್ಲ. |
| **LAW 36 LEG BEFORE WICKET** | **ನಿಯಮ ೩೬ – ಘೂಟಗಳ ಮುಂದೆ ಕಾಲು (ಎಲ್ ಬಿ ಡಬ್ಲ್ಯು.)** |
| **36.1 Out LBW**<br>The striker is out LBW if all the circumstances set out in 36.1.1 to 36.1.5 apply.<br>36.1.1 The bowler delivers a ball, not being a No ball.<br>36.1.2 the ball, if it is not intercepted full-pitch, pitches in line between wicket and wicket or on the off side of the striker's wicket.<br>36.1.3 the ball not having previously touched his/her bat, the striker intercepts the ball, either full-pitch or after pitching, with any part of his/her person<br>36.1.4 the point of impact, even if above the level of the bails, either is between wicket and wicket | **೩೬.೧ ಔಟ್ ಎಲ್ ಬಿ ಡಬ್ಲ್ಯು**<br>೩೬.೧.೧ ರಿಂದ ೩೬.೧.೫ ರಲ್ಲಿಯ ಎಲ್ಲ ಸಂದರ್ಭಗಳು ಅನ್ವಯವಾದಲ್ಲಿ ಚೆಂಡನ್ನು ಎದುರಿಸುವ ದಾಂಡಿಗನು ಎಲ್ ಬಿ ಡಬ್ಲ್ಯು ಎಂದು ಔಟ್ ಆಗುತ್ತಾನೆ.<br>೩೬.೧.೧ ಬೌಲರ್ ಚೆಂಡನ್ನು ಬೌಲ ಮಾಡಿರಬೇಕು , ಆದರೆ ಅದು ನೋ ಬಾಲ್ ಆಗಿರಬಾರದು.<br>೩೬.೧.೨ ಚೆಂಡನ್ನು ಪುಟಿಗೆಯಾಗದೆ ತಡೆದ ಹೊರತು ಅದು ವಿಕೆಟ್‌ನಿಂದ ವಿಕೆಟ್‌ವರೆಗಿನ ನೇರ ರೇಖೆಯಲ್ಲಿ ಅಥವಾ ಆಫ್ (ಎಡ) ಭಾಗದಲ್ಲಿ ಪುಟಿಗೆಯಾಗಬೇಕು.<br>೩೬.೧.೩ ಚೆಂಡು ಮೊದಲೇ ದಾಂಡಿಗೆ ತಗಲದೆ, ಪುಟಿಗೆಯಾಗದೆ ಅಥವಾ ಪುಟಿಗೆಯಾದಮೇಲೆ ಚೆಂಡನ್ನೆದುರಿಸುವ ದಾಂಡಿಗನು ಚೆಂಡನ್ನು ತನ್ನ ದೇಹದ ಯಾವುದೇ ಭಾಗದಿಂದ ತಡೆದರೆ.<br>೩೬.೧.೪ ಬಡಿದ ಸ್ಥಳ ಬೇಲ್ಸ್ ಮಟ್ಟಕ್ಕಿಂತ ಮೇಲಿದ್ದರೂ |

| | |
|---|---|
| or if the striker has made no genuine attempt to play the ball with the bat, is between wicket and wicket or outside the line of the off stump.<br>36.1.5 but for the interception, the ball would have hit the wicket. | ವಿಕೆಟ್ ಮತ್ತು ವಿಕೆಟ್ ಮಧ್ಯೆ ಇರಬೇಕು ಇಲ್ಲವೇ ಚೆಂಡನ್ನೆದುರಿಸುವ ದಾಂಡಿಗನು ಚೆಂಡನ್ನು ಆಡಲು ನಿಜವಾದ ಪ್ರಯತ್ನ ಮಾಡದಿದ್ದರೆ, ವಿಕೆಟ್ ಮತ್ತು ವಿಕೆಟ್ ನಡುವೆ ಅಥವಾ ಆಫ್ ಘೂಟದ ರೇಖೆಯ ಹೊರಗಿರಬೇಕು<br>೩೬.೧.೫ ಚೆಂಡನ್ನು ತಡೆಯದಿದ್ದರೆ ಚೆಂಡು ವಿಕೆಟ್‌ಗೆ ಬಡಿಯುತ್ತಿರಬೇಕು. |
| **36.2 Interception of the ball**<br>36.2.1 In assessing points in 36.1.3, 36.1.4 and 36.1.5, only the first interception is to be considered.<br>36.2.2 In assessing point 36.1.3, if the ball makes contact with the striker's person and bat simultaneously, this shall be considered as the ball having first touched the bat.<br>36.2.3 In assessing point 36.1.5, it is to be assumed that the path of the ball before interception would have continued after interception, irrespective of whether the ball might have pitched subsequently or not. | **೩೬.೨ ಚೆಂಡಿನ ತಡೆ**<br>೩೬.೨.೧ ೩೬.೧.೩, ೩೬.೧.೪ ಮತ್ತು ೩೬.೧.೫ ರ ಅಂಶಗಳನ್ನು ನಿರ್ಧರಿಸಲು ಮೊದಲ ತಡೆಯುವಿಕೆಯನ್ನು ಮಾತ್ರ ಪರಿಗಣಿಸಬೇಕು.<br>೩೬.೨.೧ ೩೬.೧.೩ ರ ಅಂಶಗಳನ್ನು ನಿರ್ಧರಿಸಲು, ಚೆಂಡು ಚೆಂಡನ್ನೆದುರಿಸುವ ದಾಂಡಿಗನ ದೇಹಕ್ಕೆ ಮತ್ತು ದಾಂಡಿಗೆ ಏಕ ಕಾಲಕ್ಕೆ ತಗಲಿದರೆ, ಚೆಂಡು ದಾಂಡಿಗೆ ತಗಲಿದೆ ಎಂದು ಪರಿಗಣಿಸಬೇಕು.<br>೩೬.೨.೩ ೩೬.೧.೫ ರ ಅಂಶಗಳನ್ನು ನಿರ್ಧರಿಸಲು, ತಡೆಯುವ ಮೊದಲಿದ್ದ ಚೆಂಡಿನ ಪಥವು ತಡೆಯನಂತರವೂ, ಚೆಂಡು ಪುಟಿಯಲಿ ಬಿಡಲಿ, ಅದೇ ಪಥದಲ್ಲಿ ಚಲಿಸುವುದೆಂದು ಭಾವಿಸಬೇಕು. |
| **36.3 Off side of wicket**<br>The off side of the striker's wicket shall be determined by the striker's batting position at the moment the ball comes into play for that delivery. See Appendix A.13. | **೩೬.೩ ವಿಕೆಟ್ಟಿನ ಆಫ್ ಭಾಗ**<br>ಚೆಂಡನ್ನೆದುರಿಸುವ ದಾಂಡಿಗನ ಆಫ್ ಭಾಗ, ಚೆಂಡು ಆಟದಲ್ಲಿ ಬಂದಾಗ ಚೆಂಡನ್ನೆದುರಿಸುವ ದಾಂಡಿಗನು ಆ ಎಸೆತಕ್ಕೆ ನಿಲ್ಲುವ ಭಂಗಿಯನ್ನು ಆಧರಿಸಿ ನಿರ್ಧರಿಸಬೇಕು. ಅನುಬಂಧ "ಅ.೧೩" ಗಮನಿಸಿ. |

| LAW 37 OBSTRUCTING THE FIELD | ನಿಯಮ ೩೭ – ಕ್ಷೇತ್ರ ರಕ್ಷಣೆಗೆ ಅಡಚಣೆ (ಅಬ್‌ಸ್ಟ್ರಕ್ಟಿಂಗ್ ದಿ ಫೀಲ್ಡ್) |
|---|---|
| **37.1 Out Obstructing the field.**<br>37.1.1 Either batter is out Obstructing the field if, except in the circumstances of 37.2, and while the ball is in play, he/she wilfully attempts to obstruct or distract the fielding side by word or action. See also Law 34 (Hit the ball twice).<br>37.1.2 The striker is out Obstructing the field if, except in the circumstances of 37.2, in the act of receiving a ball delivered by the bowler, he/she wilfully strikes the ball with a hand not holding the bat. This will apply whether it is the first strike or a second or subsequent strike. The act of receiving the ball shall extend both to playing at the ball and to striking the ball more than once in defence of his/her wicket.<br>37.1.3 This Law will apply whether or not No ball is called. | **೩೭.೧ ಔಟ್ ಕ್ಷೇತ್ರ ರಕ್ಷಣೆಗೆ ಅಡಚಣೆ**<br>೩೭.೧.೧ ಯಾರೊಬ್ಬ ದಾಂಡಿಗನು , ೩೭.೨ರಲ್ಲಿನ ಸಂದರ್ಭಗಳನ್ನು ಹೊರತುಪಡಿಸಿ ಮತ್ತು ಚೆಂಡು ಆಟದಲ್ಲಿದ್ದಾಗ, ಕ್ಷೇತ್ರ ರಕ್ಷಣೆ ತಂಡವನ್ನು ಉದ್ದೇಶಪೂರ್ವಕವಾಗಿ ಶಬ್ದ ಇಲ್ಲವೇ ಹಾವಭಾವದಿಂದ ಅಡಚಣೆ ಇಲ್ಲವೇ ಗಮನಭಂಗಗೊಳಿಸಲು ಪ್ರಯತ್ನಿಸಿದರೆ ಕ್ಷೇತ್ರ ರಕ್ಷಣೆಗೆ ಅಡಚಣೆ ಎಂದು ಔಟ್ ಆಗುತ್ತಾನೆ.<br>೩೭.೧.೨ ಚೆಂಡನ್ನೆದುರಿಸುವ ದಾಂಡಿಗನು ೩೭.೨ರಲ್ಲಿನ ಸಂದರ್ಭಗಳನ್ನು ಹೊರತುಪಡಿಸಿ, ಬೌಲರ್ ನಿಂದ ಎಸೆಯಲ್ಪಟ್ಟ ಚೆಂಡನ್ನು ಎದುರಿಸುವಾಗ ಉದ್ದೇಶಪೂರ್ವಕವಾಗಿ ದಾಂಡನ್ನು ಹಿಡಿಯದ ಕೈಯಿಂದ ಹೊಡೆದರೆ ಕ್ಷೇತ್ರ ರಕ್ಷಣೆಗೆ ಅಡಚಣೆ ಎಂದು ಔಟ್ ಆಗುತ್ತಾನೆ. ಇದು ಮೊದಲ ಅಥವಾ ಎರಡನೇ ಅಥವಾ ತದನಂತರದ ಹೊಡೆತಕ್ಕೂ ಅನ್ವಯಿಸುತ್ತದೆ. ಚೆಂಡನ್ನು ಎದುರಿಸುವ ಪ್ರಕ್ರಿಯೆಯು ಚೆಂಡನ್ನು ಆಡುತ್ತಿರುವುದು ಮತ್ತು ತನ್ನ ವಿಕೆಟ್ ರಕ್ಷಿಸಲು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದಕ್ಕೂ ವಿಸ್ತರಿಸಬೇಕು.<br>೩೭.೧.೩ ನೋ ಬಾಲ್ ಕರೆದಿರಲಿ ಬಿಡಲಿ ಈ ನಿಯಮ ಅನ್ವಯಿಸುತ್ತದೆ. |
| **37.2 Not out Obstructing the field.**<br>A batter shall not be out Obstructing the field if obstruction or distraction is accidental, or obstruction is in order to avoid injury, or in the case of the striker, he/she makes a second or subsequent | **೩೭.೨ ಕ್ಷೇತ್ರ ರಕ್ಷಣೆಗೆ ಅಡಚಣೆಗೆ ಔಟಿಲ್ಲ**<br>ದಾಂಡಿಗನು ಈ ಕೆಳಗಿನ ಸಂದರ್ಭಗಳಲ್ಲಿ ಕ್ಷೇತ್ರ ರಕ್ಷಣೆ ಅಡಚಣೆಗೆ ಔಟಾಗುವುದಿಲ್ಲ.<br>ಅಡಚಣೆ ಅಥವಾ ಗಮನಭಂಗಗೊಳಿಸುವುದು ಆಕಸ್ಮಿಕವಾಗಿದ್ದರೆ. |

| | |
|---|---|
| strike to guard his/her wicket lawfully as in Law 34.3 (Ball lawfully struck more than once). However, see 37.3. | ಅಥವಾಅಡಚಣೆಯು ಗಾಯಗೊಳ್ಳುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿದ್ದರೆ.<br>ಅಥವಾಚೆಂಡನ್ನೆದುರಿಸುವ ದಾಂಡಿಗನಾಗಿದ್ದರೆ, ಅವನು/ಅವಳು ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ನಿಯಮಾನುಸಾರ ತನ್ನ ವಿಕೆಟ್ ರಕ್ಷಿಸಿಕೊಳ್ಳಲು ನಿಯಮ ೩೪.೩(ನಿಯಮಾನುಸಾರ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದು) ರ ಅನ್ವಯ ಹೊಡೆದಾಗ. ಆದರೂ ೩೭.೩ ಗಮನಿಸಿ. |
| **37.3 Obstructing a ball from being caught.**<br>37.3.1 If the delivery is not a No ball, the striker is out Obstructing the field if wilful obstruction or distraction by either batter prevents the striker being out Caught.<br>37.3.2 37.3.1 shall apply even if an obstruction is caused by the striker in lawfully guarding his/her wicket under the provision of Law 34.3 (Ball lawfully struck more than once).<br>37.3.3 If an obstruction or distraction takes place from a No ball then the batter who caused the obstruction or distraction will be out Obstructing the field. | **೩೭.೩ ಚೆಂಡನ್ನು ಕ್ಯಾಚ್ ಹಿಡಿಯುವುದರಿಂದ ಅಡ್ಡಿಪಡಿಸುವುದು**<br>೩೭.೩.೧ ಆ ಚೆಂಡು "ನೋ ಬಾಲ್" ಆಗಿರದಿದ್ದರೆ, ಯಾರೊಬ್ಬ ದಾಂಡಿಗನು ಉದ್ದೇಶಪೂರ್ವಕವಾಗಿ ಕ್ಷೇತ್ರ ರಕ್ಷಣೆಗೆ ಅಡ್ಡಿಪಡಿಸಿದರೆ ಅಥವಾ ಗಮನಭಂಗಗೊಳಿಸಿ ಕ್ಯಾಚ್ ಹಿಡಿಯುವುದನ್ನು ತಪ್ಪಿಸಿದರೆ ಚೆಂಡನ್ನೆದುರಿಸುವ ದಾಂಡಿಗನು "ಕ್ಷೇತ್ರ ರಕ್ಷಣೆಗೆ ಅಡಚಣೆ" ಎಂದು ಔಟ್ ಆಗುತ್ತಾನೆ.<br>೩೭.೩.೨ ನಿಯಮ ೩೪.೩(ನಿಯಮಾನುಸಾರ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದು) ರ ಅನ್ವಯ ತನ್ನ ವಿಕೆಟ್ ರಕ್ಷಿಸುವಾಗ ಅಡಚಣೆ ಉಂಟಾದರೂ ನಿಯಮ ೩೭.೩.೧ ಅನ್ವಯಿಸುತ್ತದೆ.<br>೩೭.೩.೩ ಅಡಚಣೆ ಅಥವಾ ಗಮನ ಭಂಗಗೊಳಿಸುವಿಕೆ "ನೋ ಬಾಲ್" ಕರೆದಾಗ ಆದರೆ ಯಾವ ದಂಡಿಗನು ಅಡಚಣೆ ಅಥವಾ ಗಮನ ಭಂಗಗೊಳಿಸುತ್ತಾನೋ ಅವನು "ಕ್ಷೇತ್ರ ರಕ್ಷಣೆಗೆ ಅಡಚಣೆ" ಎಂದಿ ಔಟ್ ಆಗುತ್ತಾನೆ ಆದರೆ ನೋ ಬಾಲ್ ಆದಾಗ ಚೆಂಡನ್ನು ಎದುರಿಸುವ ದಾಂಡಿಗನು/ ದಾಂಡಿಗಳು ಸಹಜವಾಗಿ ತನ್ನ ವಿಕೆಟ್ |

| | |
|---|---|
| However, the striker is not out if the obstruction of a catch occurs while defending his/her wicket from a No ball with a lawful second strike. | ರಕ್ಷಿಸಲು ನಿಯಮಾನುಸಾರ ಎರಡನೆ ಸಲ ಚೆಂಡನ್ನು ಹೊಡೆಯುವಾಗ ಕ್ಯಾಚ್ ಗೆ ಅಡಚಣೆ ಉಂಟು ಮಾಡಿದರೆ ಔಟ್ ಆಗುವುದಿಲ್ಲ. |
| **37.4 Returning the ball to a fielder.**<br>Either batter is out Obstructing the field if, at any time while the ball is in play and, without the consent of a fielder, he/she uses the bat or any part of his/her person to return the ball to any fielder. | **೩೭.೪ ಚೆಂಡನ್ನು ಕ್ಷೇತ್ರ ರಕ್ಷಕನಿಗೆ ಹಿಂತಿರುಗಿಸುವುದು**<br>ಯಾವುದೇ ಸಮಯದಲ್ಲಿ ಚೆಂಡು ಆಟದಲ್ಲಿದ್ದಾಗ, ಕ್ಷೇತ್ರ ರಕ್ಷಕನ ಅನುಮತಿ ಇಲ್ಲದೇ ಚೆಂಡನ್ನು ಯಾವುದೇ ಕ್ಷೇತ್ರ ರಕ್ಷಕನಿಗೆ ಹಿಂತಿರುಗಿಸಲು ಯಾವುದೇ ದಾಂಡಿಗನು/ದಾಂಡಿಗಳು ತನ್ನ ದಾಂಡು ಇಲ್ಲವೇ ಶರೀರದ ಯಾವುದೇ ಭಾಗವನ್ನು ಉಪಯೋಗಿಸಿದರೆ ಅವನು/ಅವಳು ಕ್ಷೇತ್ರ ರಕ್ಷಣೆಗೆ ಅಡಚಣೆ ಎಂದು ಔಟ್ ಆಗುತ್ತಾನೆ. |
| **37.5 Runs scored**<br>When either batter is dismissed Obstructing the field,<br>37.5.1 unless the obstruction or distraction prevents the striker being out Caught, any runs completed by the batters before the offence shall be scored, together with any, one-run Penalty for No ball or Wide, or any other award of 5 Penalty Runs to either side. See Laws 18.6 (Runs awarded for penalties) and 18.8 (Runs scored when a batter is dismissed).<br>37.5.2 if the obstruction or distraction prevents the striker being out Caught, any runs completed by the batters shall not be scored but any award of 5 Penalty Runs to either side shall stand. Law 18.11 (Batter returning to original end) will apply. | **೩೭.೫ ಓಟಗಳ ಗಳಿಕೆ**<br>ಯಾರಾದರೊಬ್ಬ ದಾಂಡಿಗನು ಕ್ಷೇತ್ರ ರಕ್ಷಣೆಯ ಅಡಚಣೆಗೆ ಔಟ್ ಆದಾಗ.<br>೩೭.೫.೧ ಅಡಚಣೆಯು ಅಥವಾ ಚಿತ್ತ ಭ್ರಮಣೆ ಕ್ಯಾಚ್ ಹಿಡಿಯುವುದಕ್ಕಾಗಿರದಿದ್ದರೆ, ಅಡಚಣೆಯ ಕ್ಷಣದವರೆಗೆ ದಾಂಡಿಗರು ಪೂರ್ತಿಗೊಳಿಸಿದ ಓಟಗಳನ್ನು, ನೋ ಬಾಲ್ ಅಥವಾ ವೈಡ್ ನ ದ0ಡದ ಒ0ದು ಓಟ ಅಥವಾ ಯಾವುದೇ ತಂಡಕ್ಕೆ ಅನುದಾನಿಸಿದ ದಂಡದ ಓಟಗಳ ಜೊತೆಗೆ ಸೇರಿಸಿ ಲೆಕ್ಕಿಸಬೇಕು. ನಿಯಮ ೧೮.೬(ದಂಡದ ಓಟಗಳನ್ನು ಅನುದಾನಿಸುವುದು) ಮತ್ತು ೧೮.೮(ಹುದ್ದರಿಯ ಪಥನವಾದಾಗ ಓಟಗಳ ಗಳಿಕೆ) ಗಮನಿಸಿ.<br>೩೭.೫.೨ ಅಡಚಣೆಯು ಅಥವಾ ಚಿತ್ತ ಭ್ರಮಣೆ ಕ್ಯಾಚ್ ಹಿಡಿಯುವುದನ್ನು ತಪ್ಪಿಸಿದರೆ, ದಾಂಡಿಗರು ಪೂರ್ತಿಗೊಳಿಸಿದ ಓಟಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. ಆದರೆ ಯಾವುದೇ ತಂಡಕ್ಕೆ ಅನುದಾನಿಸುವ |

| | |
|---|---|
| | ದಂಡದ ೫ ಓಟಗಳನ್ನು ಗಣನೆಗೆ ತೆಗೆದುಕೊಳ್ಳಬೇಕು, ನಿಯಮ ೧೮.೧೧(ದಾಂಡಿಗ ಮರಳಿ ತನ್ನ ಸ್ವಸ್ಥಾನಕ್ಕೆ ಬರುವುದು) ಅನ್ವಯಿಸುತ್ತದೆ. |
| **37.6 Bowler does not get credit.**<br>The bowler does not get credit for the wicket. | **೩೭.೬ ಬೌಲರ್‌ಗೆ ಶ್ರೇಯ ಕೊಡಬಾರದು.**<br>ಬೌಲರ್‌ಗೆ ಹುದ್ದರಿ ಪತನದ ಶ್ರೇಯ ಕೊಡಬಾರದು. |
| **LAW 38 RUN OUT** | **ನಿಯಮ ೩೮ ರನ್ ಔಟ್** |
| **38.1 Out Run out**<br>Either batter is out Run out, except as in 38.2, if, at any time while the ball is in play, he/she is out of his/her ground and his/her wicket is fairly broken by the action of a fielder even though No ball has been called, except in the circumstances of 38.2.2.2, and whether or not a run is being attempted. | **೩೮.೧ ಔಟ್ ರನ್ ಔಟ್**<br>ಯಾವುದೇ ದಾಂಡಿಗನು ಯಾವಾಗ ರನ್ ಔಟ್ ಆಗುತ್ತಾನೆಂದರೆ, ಚೆಂಡು ಆಟದಲ್ಲಿದಾಗ ೩೮.೨ರಲ್ಲಿರುವುದನ್ನು ಹೊರತುಪಡಿಸಿ, ಯಾವುದೇ ಸಮಯದಲ್ಲಿ ಅವನ/ಅವಳ ನಿಗದಿತ ಜಾಗದಿಂದ ಹೊರಗಿದ್ದರೆ<br>ಮತ್ತು ಅವನ/ಅವಳ ವಿಕೆಟನ್ನು ನಿಯಮಾನುಸಾರ ಒಬ್ಬ ಕ್ಷೇತ್ರ ರಕ್ಷಕ ತೆಗೆದುಕೊಂಡ ಕ್ರಮದಿಂದ ಬಿದ್ದರೆ ನೋ ಬಾಲ್ ಕರೆದಿದ್ದರೂ ಸಹ ೩೮.೨.೨ರಲ್ಲಿಯ ಸಂದರ್ಭಗಳನ್ನು ಹೊರತುಪಡಿಸಿ ಓಟ ಗಳಿಸಲು ಪ್ರಯತ್ನಿಸುತ್ತಿರಲಿ ಅಥವಾ ಇಲ್ಲದಿರಲಿ. |
| **38.2 Batter not out Run out**<br>38.2.1 A batter is not out Run out in the circumstances of 38.2.1.1 or 38.2.1.2.<br>38.2.1.1 He/She has been within his/her ground and has subsequently left it to avoid injury, when the wicket is broken. Note also the provisions of Law. 30.1.2 (When out of his/her ground). | **೩೮.೨ ದಾಂಡಿಗ ರನ್ ಔಟ್ ಅಲ್ಲ.**<br>೩೮.೨.೧ ೩೮.೨.೧.೧ ಅಥವಾ ೩೮.೨.೧.೨ರ ಸಂದರ್ಭಗಳಲ್ಲಿ ದಾಂಡಿಗನು ರನ್ ಔಟ್ ಆಗುವುದಿಲ್ಲ.<br>೩೮.೨.೧.೧ ಅವನು/ಅವಳು ತನ್ನ ನಿಗದಿತ ಜಾಗದಲ್ಲಿದ್ದು ನಂತರ ಗಾಯಗೊಳ್ಳುವುದನ್ನು ತಪ್ಪಿಸಲು ಅದನ್ನು ಬಿಟ್ಟಾಗ ವಿಕೆಟ್ ಬೀಳಿಸಿದರೆ. ಆದಾಗ್ಯೂ ನಿಯಮ ೩೦..೧.೨(ಯಾವಾಗ |

38.2.1.2 The ball, delivered by the bowler, has not made contact with a fielder before the wicket is fairly broken.

38.2.2 The striker is not out Run out in any of the circumstances in 38.2.2.1 and 38.2.2.2.

38.2.2.1 He/She is out Stumped. See Laws 25.6.5 (Dismissal and conduct of a batter and his/her runner) and 39.1.2 (Out Stumped).

38.2.2.2 No ball has been called.

and he/she is out of his/her ground not attempting a run

and the wicket is broken fairly by the wicket-keeper without the intervention of another fielder.

However, if the striker has a runner and the runner is out of his/her ground, then only 38.1 applies.

ಅವನ/ಅವಳ ನಿಗದಿತ ಜಾಗದಿಂದ ಹೊರಗಿದ್ದಾನೆ/ಳೆ) ಯ ಸಂದರ್ಭಗಳನ್ನು ಗಮನಿಸಿ.

೩೮.೨.೧.೨ ಬೌಲರ್ ಎಸೆದ ಚೆಂಡು ವಿಕೆಟ್ ನಿಯಮಾನುಸಾರ ಬೀಳಿಸುವ ಮೊದಲು ಯಾವುದೇ ಕ್ಷೇತ್ರ ರಕ್ಷಕನ ಸಂಪರ್ಕಕ್ಕೆ ಬಂದಿರದಿದ್ದರೆ.

೩೮.೨.೨ ೩೮.೨.೧.೧ ಅಥವಾ ೩೮.೧.೨ರ ಸಂದರ್ಭಗಳಲ್ಲಿ ಚೆಂಡನ್ನೆದುರಿಸುವ ದಾಂಡಿಗನು ರನ್ ಔಟ್ ಆಗುವುದಿಲ್ಲ.

೩೮.೨.೨.೧ ಅವನು/ಅವಳು ಸ್ಟಂಪ್ಡ್ ಔಟ್ ಆದರೆ. ನಿಯಮ ೨೫.೬.೫ (ದಾಂಡಿಗನು ಮತ್ತು ಓಟಗಾರನು ಔಟ್ ಆಗುವುದು ಮತ್ತು ಅವನ/ಅವಳ ನಡತೆ) ಮತ್ತು ೩೯.೧.೨ (ಔಟ್ ಸ್ಟಂಪ್ಡ್) ಗಮನಿಸಿ.

೩೮.೨.೨.೨ ನೋ ಬಾಲ್ ಕರೆದಿದ್ದರೇ.

ಮತ್ತು ಅವನು/ಅವಳು ತನ್ನ ನಿಗದಿತ ಜಾಗದಿಂದ ಓಡಲು ಪ್ರಯತ್ನಿಸದೆ ಹೊರಗಿದ್ದರೆ, ಮತ್ತು

ವಿಕೆಟನ್ನು ಘೂಟ ರಕ್ಷಕನು ಬೇರಾವುದೇ ಕ್ಷೇತ್ರ ರಕ್ಷಕನ ಸಹಾಯವಿಲ್ಲದೆ ನಿಯಮಾನುಸಾರ ವಿಕೆಟ್ ಬೀಳಿಸಿದರೆ.

ಆದಾಗ್ಯೂ ಚೆಂಡನ್ನು ಎದುರಿಸುವ ದಾಂಡಿಗನು ಓಟಗಾರನನ್ನು ಹೊಂದಿದ್ದು ಹಾಗೂ ಓಟಗಾರನು ತನ್ನ ಜಾಗದಿಂದ ಹೊರಗಿದ್ದಾಗ ಮಾತ್ರ ನಿಯಮ ೩೮.೧ನ್ನು ಅನ್ವಯಿಸುತ್ತದೆ.

**38.3 Non-striker leaving his/her ground early,**

38.3.1 *At any time from the moment the ball comes into play until the instant when the bowler would normally have been expected to release the ball, the non-striker is liable to be Run out if he/she is out of his/her ground. In these circumstances the non-striker will be out Run out if he/she is out of his/her ground when his/her wicket is broken by the bowler throwing the ball at the stumps or by the bowler's hand holding the ball, whether or not the ball is subsequently delivered.*

38.3.1.1 *The instant when the bowler would normally have been expected to release the ball is defined as the moment the bowler's arm reaches the highest point of his/her normal bowling action in the delivery swing.*

38.3.1.2 *Even if the non-striker had left his/her ground before the instant at which the bowler would normally have been expected to release the ball, once the bowler has reached that point it is no longer possible for the bowler to run out the non-striker under this Law.*

**೩೮.೩ ಚೆಂಡನ್ನು ಎದುರಿಸದ ದಾಂಡಿಗ (ನಾನ್ ಸ್ಟ್ರೈಕರ್) ಅವನ/ಅವಳ ನಿಗದಿತ ಜಾಗದಿಂದ ಬೇಗನೆ ಹೊರಬರುವುದು**

೩೮.೩.೧ ಚೆಂಡನ್ನು ಎದುರಿಸದ ದಾಂಡಿಗ (ನಾನ್ ಸ್ಟ್ರೈಕರ್) ಅವನ/ಅವಳ ನಿಗದಿತ ಜಾಗದಿಂದ, ಚೆಂಡು ಆಟದಲ್ಲಿ ಬಂದ ಕ್ಷಣದಿಂದ ಬೌಲರನು ಸಾಮಾನ್ಯವಾಗಿ ಬೌಲ್ ಮಾಡಲು ಚೆಂಡನ್ನು ಕೈಯಿಂದ ಬಿಡುಗಡೆ ಮಾಡಬಹುದಾದ ಕ್ಷಣದವರೆಗೆ ಹೊರ ಬಂದರೆ, ಬೌಲರನಿಗೆ ರನ್ ಔಟ್ ಮಾಡುವ ಅವಕಾಶವಿದೆ. ಇಂತಃ ಸಂದರ್ಭಗಳಲ್ಲಿ, ಚೆಂಡನ್ನು ಎದುರಿಸದ ದಾಂಡಗನು/ದಾಂಡಿಗಳು (ನಾನ್ ಸ್ಟ್ರೈಕರ್)' ತನ್ನ ನಿಗದಿತ ಜಾಗದಿಂದ ಹೊರಗಿದ್ದಾಗ, ಅವನ/ಅವಳ ವಿಕೆಟ್ ನ್ನು ಬೌಲರ್, ಚೆಂಡನ್ನು ವಿಕೆಟ್ ಕಡೆಗೆ ಎಸೆದು ಅಥವಾ ಚೆಂಡನ್ನು ಹಿಡಿದಿರುವ ಕೈಯಿಂದ ಬೀಳಿಸಿದರೆ, ಬಳಿಕ ಚೆಂಡನ್ನು ಬೌಲ್ ಮಾಡಿರಲಿ ಬಿಡಲಿ, ರನ್ ಔಟ್ ಆಗುತ್ತಾನೆ / ಆಗುತ್ತಾಳೆ.

೩೮.೩.೧.೧ ಬೌಲರನು ಸಾಮಾನ್ಯವಾಗಿ ಬೌಲ್ ಮಾಡಲು ಚೆಂಡನ್ನು ಕೈಯಿಂದ ಬಿಡುಗಡೆ ಮಾಡಬಹುದಾದ ಕ್ಷಣದವರೆಗೆ ಅಂದರೆ ಬೌಲರನ ಕೈ ಅವನ/ ಅವಳ ಬೌಲಿಂಗ ಶೈಲಿಯಲ್ಲಿ ಸಾಮಾನ್ಯವಾಗಿ ಅವನ / ಅವಳ ಕೈ ಚೆಂಡನ್ನು ಬಿಡುಗಡೆ ಮಾಡುವ ತುತ್ತ ತುದಿ ತಲಪುವ ಕ್ಷಣದ ವರೆಗೆ.

೩೮.೩.೧.೨ ಚೆಂಡನ್ನು ಎದುರಿಸದ ದಾಂಡಿಗನು (ನಾನ್ ಸ್ಟ್ರೈಕರ್)' ತನ್ನ ನಿಗದಿತ ಜಾಗದಿಂದ ಬೌಲರನು ಸಾಮಾನ್ಯವಾಗಿ ಬೌಲ್ ಮಾಡಲು ಚೆಂಡನ್ನು ಕೈಯಿಂದ ಬಿಡುಗಡೆ ಮಾಡಬಹುದಾದ

38.3.2 If the ball is not delivered,

- if there is an appeal, the umpire shall make his/her decision on the Run out.
- if there is no appeal, or if the decision is not out, he/she shall call and signal Dead ball as soon as possible.
- the ball shall not count as one in the over.

38.3.3 If the ball is delivered and there is an appeal,

-the umpire shall make his/her decision on the Run out.

-if the non-striker is not dismissed, the ball remains in play and Law 21.6 (Bowler breaking wicket in delivering ball) shall apply.

if the non-striker is dismissed, the ball shall not count as one in the over

ಕ್ಷಣದಮೊದಲೇ ಹೊರ ಬಂದಿದ್ದರೂ ಸಹ, ಬೌಲರನಿಗೆ ಸಾಮಾನ್ಯವಾಗಿ ಬೌಲ್ ಮಾಡಲು ಚೆಂಡನ್ನು ಕೈಯಿಂದ ಬಿಡುಗಡೆ ಮಾಡಬಹುದಾದ ಕ್ಷಣ ಮುಟ್ಟಿದ ನಂತರ ರನ್ ಔಟ್ ಮಾಡಲು ಅವಕಾಶ ವಿರುವದಿಲ್ಲ.

**೩೮.೩**.೨ ಚೆಂಡನ್ನು ಬೌಲ್ ಮಾಡಿರದಿದ್ದರೆ,

- ಮನವಿ ಬ0ದರೆ, ರನ್ ಔಟ್ ಅಥವಾ ಇಲ್ಲವೋ ಎಂದು ಅಂಪೈರ್ ನಿರ್ಧರಿಸಬೇಕು.
- ಮನವಿ ಇಲ್ಲದಿದ್ದರೆ, ಅಥವಾ ಔಟ್ ಇಲ್ಲ ಎಂದಾದರೆ ಅವನು/ಅವಳು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ "ಡೆಡ್ ಬಾಲ್" ಕರೆದು ಸನ್ನೆ ಮಾಡಬೇಕು.
- ಚೆಂಡನ್ನು ಓವರಿನಲ್ಲಿಯ ಒಂದು ಎಸೆತವೆಂದು ಪರಿಗಣಿಸಬಾರದು.

**೩೮.೩**.೩ ಚೆಂಡನ್ನು ಬೌಲ್ ಮಾಡಿದ್ದರೆ ಮತ್ತು ಮನವಿ ಬಂದರೆ,

- ರನ್ ಔಟ್ ಅಥವಾ ಇಲ್ಲವೋ ಎಂದು ಅಂಪೈರ್ ನಿರ್ಧರಿಸಬೇಕು.
- ಚೆಂಡನ್ನೆದುರಿಸದ ದಾಂಡಿಗ ಔಟ್ ಆಗಿರದಿದ್ದರೆ, ಚೆಂಡು ಆಟದಲ್ಲಿರುತ್ತದೆ ಮತ್ತು ನಿಯಮ ೨೧.೬ ( ಬೌಲರ್ ಬೌಲಿಂಗ್ ಮಾಡುವಾಗ ವಿಕೆಟ್ ಬೀಳಿಸುವುದು) ಅನ್ವಯಿಸುತ್ತದೆ.
- ಚೆಂಡನ್ನೆದುರಿಸದ ದಾಂಡಿಗ ಔಟ್ ಆದರೆ, ಚೆಂಡನ್ನು ಓವರಿನಲ್ಲಿಯ ಒಂದು ಎಸೆತವೆಂದು ಪರಿಗಣಿಸಬಾರದು.

| | |
|---|---|
| **38.4 Which batter is out**<br>The batter out in the circumstances of 38.1 is the one whose ground is at the end where the wicket is put down. See Laws 25.6 (Dismissal and conduct of a batter and his/her runner) and 30.2 (Which is a batter's ground). | **೩೮.೪ ಯಾವ ದಾಂಡಿಗ ಔಟ್**<br>೩೮.೧ರ ಸಂದರ್ಭದಲ್ಲಿ ಯಾವ ದಾಂಡಿಗನ ನಿಗದಿತ ಜಾಗದ ಕಡೆಯ ವಿಕೆಟ್ ಬೀಳಿಸುತ್ತಾರೋ ಅವನು/ಅವಳು ಔಟ್. ನಿಯಮ ೨೫.೬.೫(ದಾಂಡಿಗನು ಮತ್ತು ಓಟಗಾರನು ಔಟ್ ಆಗುವುದು ಮತ್ತು ಅವನ/ಅವಳ ನಡತೆ) ಮತ್ತು ೩೦.೨(ದಾಂಡಿಗನ ನಿಗದಿತ ಜಾಗ ಯಾವುದು) ಗಮನಿಸಿ. |
| **38.5 Runs scored**<br>If either batter is dismissed Run out, the run-in progress when the wicket is put down shall not be scored, but any runs completed by the batters shall stand, together with any runs for penalties awarded to either side. See Laws 18.6 (Runs awarded for penalties) and 18.8 (Runs scored when a batter is dismissed).<br>If, however, a striker who has a runner is himself/herself dismissed Run out and runs are completed by the runner and the other batter before the wicket is put down,<br>- all runs to the batting side from that delivery shall be disallowed.<br>- the one run penalty for No ball shall stand and 5 run penalties shall be allowed. | **೩೮.೫ ರನ್ ಗಳಿಸುವುದು**<br>ಯಾವುದೇ ದಾಂಡಿಗ ರನ್ ಔಟ್ ಆದರೆ, ವಿಕೆಟ್ ಬೀಳಿಸುವಾಗ ಪ್ರಗತಿಯಲ್ಲಿರುವ ಓಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು, ಆದರೆ ದಾಂಡಿಗರು ಪೂರ್ಣಗೊಳಿಸಿದ ಯಾವುದೇ ಓಟಗಳು ಹಾಗೂ ಯಾವುದೇ ತಂಡಕ್ಕೆ ಅನುದಾನಿಸಿದ ದಂಡದ ಓಟಗಳು ಲೆಕ್ಕಕ್ಕೆ ಬರುತ್ತವೆ. ನಿಯಮ ೧೮.೬(ಅನುದಾನಿಸಿದ ದಂಡದ ಓಟಗಳು) ಮತ್ತು ೧೮.೮(ದಾಂಡಿಗನು ಔಟ್ ಆದಾಗ ಓಟಗಳ ಗಳಿಕೆ) ಗಮನಿಸಿ.<br>ಓಟಗಾರನನ್ನು ಹೊಂದಿದ ಚೆಂಡನ್ನೆದುರಿಸುವ ದಾಂಡಿಗನೇ ರನ್ ಔಟ್ ಆದಾಗ ವಿಕೆಟ್ ಬೀಳಿಸುವುದಕ್ಕೆ ಮೊದಲು ಓಟಗಾರ ಹಾಗೂ ಮತ್ತೊಬ್ಬ ದಾಂಡಿಗನು ಓಟಗಳನ್ನು ಪೂರ್ಣಗೊಳಿಸಿದ್ದರೆ,<br>➢ ಆ ಎಸೆತದಿಂದ ದಾಂಡಿಗ ತಂಡ ಗಳಿಸಿದ ಎಲ್ಲ ಓಟಗಳನ್ನು ರದ್ದು ಮಾಡಬೇಕು.<br>➢ ನೋ ಬಾಲ್‌ನ ದಂಡದ ಒಂದು ಓಟ ಮತ್ತು ದಂಡದ ೫ ಓಟಗಳನ್ನು ಅನುಮತಿಸಬೇಕು. |

| | |
|---|---|
| - the umpire shall return the non-striker to his/her original end.<br>See Law 25.6 (Dismissal and conduct of a batter and his/her runner). | ➢ ಅಂಪೈರ್ ಚೆಂಡನ್ನೆದುರಿಸದ ದಾಂಡಿಗನನ್ನು ತನ್ನ ಮೂಲ ಜಾಗಕ್ಕೆ ಹಿಂತಿರುಗಿ ಕಳಿಸಬೇಕು.<br>ನಿಯಮ ೨೫.೬.೫(ದಾಂಡಿಗನು ಮತ್ತು ಓಟಗಾರನು ಔಟ್ ಆಗುವುದು ಮತ್ತು ಅವನ/ಅವಳ ನಡತೆ) ಗಮನಿಸಿ. |
| **38.6 Bowler does not get credit**<br>The bowler does not get credit for the wicket. | **೩೮.೬ ಬೌಲರ್‌ಗೆ ಶ್ರೇಯ ಸಲ್ಲದು**<br>ಬೌಲರ್ ಹುದ್ದರಿ ಪಥನದ ಶ್ರೇಯಸ್ಸನ್ನು ಪಡೆಯುವುದಿಲ್ಲ. |
| **LAW 39 STUMPED** | **ನಿಯಮ ೩೯ – ಸ್ಟಂಪ್ಡ್** |
| **39.1 Out Stumped**<br>39.1.1 The striker is out Stumped, except as in 39.3, if.<br>a ball which is delivered is not called No ball.<br>and he/she is out of his/her ground, other than as in 39.3.1.<br>and he/she has not attempted a run when his/her wicket is wicket is broken fairly by the wicketkeeper without the intervention of another fielder. Note, however Laws 25.6.2 and 25.6.5 (Dismissal and conduct of a batter and his/her runner) and 27.3 (Position of wicketkeeper). | **೩೯.೧ ಔಟ್ ಸ್ಟಂಪ್ಡ್**<br>೩೯.೧.೧ ಚೆಂಡನ್ನೆದುರಿಸುವ ದಾಂಡಿಗನು ೩೯.೩ರಲ್ಲಿರುವುದನ್ನು ಹೊರತುಪಡಿಸಿ, ಯಾವಾಗ ಸ್ಟಂಪ್ಡ್ ಔಟಾಗುತ್ತಾನೆಂದರೆ.<br>ಬೌಲ್ ಮಾಡಲ್ಪಟ್ಟ ಚೆಂಡನ್ನು ನೋ ಬಾಲ್ ಎಂದು ಕರೆಯದಿದ್ದರೆ, ಮತ್ತು<br>೩೯.೧ನ್ನು ಹೊರತುಪಡಿಸಿ, ಅವನು/ಅವಳು ತನ್ನ ನಿಗದಿತ ಜಾಗದ ಹೊರಗಿದ್ದರೆ ಮತ್ತು<br>ಅವನು/ಅವಳು ಓಟ ಗಳಿಸಲು ಪ್ರಯತ್ನಿಸಿರದಿದ್ದರೆ.<br>ಮತ್ತೊಬ್ಬ ಕ್ಷೇತ್ರ ರಕ್ಷಕನ ಸಹಾಯವಿಲ್ಲದೆ ಘೂಟ ರಕ್ಷಕ ಅವನ/ಅವಳ ವಿಕೆಟನ್ನು ನಿಯಮಬದ್ಧವಾಗಿ ಬೀಳಿಸಿದರೆ. ಆದಾಗ್ಯೂ, ನಿಯಮ ೨೫.೬.೨ಮತ್ತು ೨೫.೬.೫(ದಾಂಡಿಗ ಮತ್ತು ಅವನ/ಅವಳ ಓಟಗಾರ ಔಟ್ ಆಗುವುದು ಮತ್ತು ನಡತೆ) ಮತ್ತು ೨೭.೩(ಘೂಟರಕ್ಷಕನ ಸ್ಥಾನ) ಗಮನಿಸಿ. |

| | |
|---|---|
| 39.1.2 The striker is out Stumped if all the conditions of 39.1.1 are satisfied, even though a decision of Run out would be justified. | ೩೯.೧.೨ ೩೯.೧.೧ರ ಎಲ್ಲಾ ಷರತ್ತುಗಳು ಪೂರೈಸಲ್ಪಟ್ಟಲ್ಲಿ , ರನ್ ಔಟ್ ನಿರ್ಣಯಕ್ಕೆ ಅವಕಾಶವಿದ್ದರೂ ಚೆಂಡನ್ನು ಎದುರಿಸುವ ದಾಂಡಿಗನು ಸ್ಟಂಪ್ಡ್ ಔಟ್ ಆಗುತ್ತಾನೆ. |
| **39.2 Ball rebounding from wicket-keeper's person**<br>If the wicket is put down by the ball, it shall be regarded as having been put down by the wicketkeeper if the ball rebounds on to the stumps from any part of the wicketkeeper's person<br>or equipment or has been kicked or thrown on to the stumps by the wicketkeeper. | **೩೯.೨ ಚೆಂಡು ಘೂಟ ರಕ್ಷಕನ ಶರೀರದಿಂದ ಪುಟಿಯುವುದು**<br>ಚೆಂಡು ವಿಕೆಟ್ ಬೀಳಿಸಿದರೆ, ಅದು ಘೂಟ ರಕ್ಷಕನು ಬೀಳಿಸಿದ್ದಾನೆ ಎಂದು ಯಾವಾಗ ಭಾವಿಸಬೇಕೆಂದರೆ, ಚೆಂಡು;<br>ಘೂಟ ರಕ್ಷಕನ ಶರೀರದ ಯಾವುದೇ ಭಾಗ ಅಥವಾ ಉಪಕರಣಗಳಿಂದ ಪುಟಿದರೆ<br>ಅಥವಾ ಘೂಟ ರಕ್ಷಕ ಚೆಂಡನ್ನು ಘೂಟಗಳ ಮೇಲೆ ಒದ್ದರೆ ಅಥವಾ ಎಸೆದರೆ. |
| **39.3 Not out Stumped**<br>39.3.1 The striker will not be out Stumped if, after having received the delivery, he/she has left his/her ground in order to avoid injury.<br>39.3.2 If the striker is not out Stumped, he/she may, except in the circumstances of Law 38.2.2.2 (Batter not out Run out), be out Run out if the conditions of Law 38.1 (Out Run out) apply. | **೩೯.೩ ಸ್ಟಂಪ್ಡ್ ಔಟ್ ಅಲ್ಲ**<br>೩೯.೩.೧ ಚೆಂಡನ್ನೆದುರಿಸುವ ದಾಂಡಿಗನು ಚೆಂಡನ್ನು ಎದುರಿಸಿದ ನಂತರ ಗಾಯಗೊಳ್ಳುವುದನ್ನು ತಪ್ಪಿಸಲು, ಅವನ/ಅವಳ ನಿಗದಿತ ಜಾಗದಿಂದ ಹೊರಬಂದಿದ್ದರೆ ಸ್ಟಂಪ್ಡ್ ಔಟ್ ಆಗುವುದಿಲ್ಲ.<br>೩೯.೩.೨ ಚೆಂಡನ್ನೆದುರಿಸುವ ದಾಂಡಿಗನು ಸ್ಟಂಪ್ಡ್ ಔಟ್ ಆಗದಿದ್ದಲ್ಲಿ, ೩೮.೨.೨.೨(ದಾಂಡಿಗ ರನ್ ಔಟ್ ಅಲ್ಲ)ರ ಸಂದರ್ಭಗಳನ್ನು ಹೊರತುಪಡಿಸಿ ನಿಯಮ ೩೮.೧(ಔಟ್ ರನ್ ಔಟ್) ರ ಷರತ್ತುಗಳು ಅನ್ವಯವಾದಲ್ಲಿ ರನ್ ಔಟ್ ಆಗುತ್ತಾನೆ. |
| **39.4 Runs Scored**<br>When a striker is dismissed Stumped from a Wide ball, the one-run penalty shall stand. Note Laws 12.9 | **೩೯.೪ ರನ್ ಗಳಿಕೆ**<br>ದಾಂಡಿಗನು ವೈಡ್ ಎಸೆತದದಿಂದ ಸ್ಟಂಪ್ಡ್ ಔಟ್ ಆದಾಗ ದಂಡದ ಒಂದು ಓಟ ಗಳಿಕೆಯಾಗುತ್ತದೆ. ನಿಯಮ ೧೨.೯ (ಪಂದ್ಯ ಮುಕ್ತಾಯ), |

| | |
|---|---|
| (Conclusion of match), 16.6 (Winning hit or extras) and 22.2 (Call and signal of Wide ball) mean that if the penalty for a Wide concludes the match, then a stumping is not possible, but the one-run penalty for the Wide remains. | ೧೬.೬ (ಗೆಲುವಿನ ಹೊಡೆತ ಅಥವಾ ವ್ಯತಿರೀಕ್ತ ಒಟಗಳು) ಮತ್ತು ೨೨.೨ (ವೈಡ್ ಬಾಲ್ ಎಂದು ಕರೆದು ಸನ್ನೆ ಮಾಡುವುದು) ಗಮನಿಸಿ ಅಂದರೆ ದಂಡದ ಒಂದು ಓಟದಿಂದ ಪಂದ್ಯ ಮುಕ್ತಾಯವಾದರೆ, ಸ್ಟಂಪಿಂಗ ಸಾಧ್ಯವಿಲ್ಲ ಆದರೆ ವೈಡ್ ಗೆ ಕೊಡುವ ಒಂದು ದಂಡದ ಓಟ ಗಳಿಕೆಯಾಗುತ್ತದೆ. |
| **LAW 40 TIMED OUT** | **ನಿಯಮ ೪೦ – ಟೈಮ್ಡ್ ಔಟ್** |
| **40.1 Out Timed out**<br><br>**40.1.1** After the fall of a wicket or the retirement of a batter, the incoming batter must, unless Time has been called, be ready to receive the ball, or for the other batter to be ready to receive the next ball within 3 minutes of the dismissal or retirement. If this requirement is not met, the incoming batter will be out, Timed out.<br><br>**40.1.2** In the event of an extended delay in which no batter comes to the wicket, the umpires shall adopt the procedure of Law 16.3 (Umpires awarding a match). For the purposes of that Law the start of the action shall be taken as the expiry of the 3 minutes referred to above. | **೪೦.೧ ಔಟ್ ಟೈಮ್ಡ್ ಔಟ್**<br><br>೪೦.೧.೧ ಒಂದು ಹುದ್ದರಿಯ ಪತನವಾದ ನಂತರ ಅಥವಾ ದಾಂಡಿಗನೊಬ್ಬನು ನಿವೃತ್ತನಾದ ನಂತರ “ಟೈಂ” ಎಂದು ಕರೆಯದ ಹೊರತು, ಅಂಕಣದೊಳಗೆ ಬರುತ್ತಿರುವ ದಾಂಡಿಗನು ಮುಂದಿನ ಎಸೆತವನ್ನು ಎದುರಿಸಲು ಹುದ್ದರಿ ಬಿದ್ದ ಇಲ್ಲವೇ ನಿವೃತ್ತಿಯ ೩ ನಿಮಿಷಗಳೊಳಗೆ ಚೆ0ಡನ್ನು ಎದುರಿಸಲು ಸಿದ್ದನಾಗಿರಬೇಕು ಅಥವಾ ಇನ್ನೊಬ್ಬ ದಾಂಡಿಗ ಚೆಂಡನ್ನೆದುರಿಸಲು ಸಿದ್ಧನಿರುವಂತೆ ತನ್ನ ಸ್ಥಾನದಲ್ಲಿರಬೇಕು. ಈ ಅಗತ್ಯತೆಯನ್ನು ಪೂರೈಸದಿದ್ದಲ್ಲಿ, ಒಳ ಬರುತ್ತಿರುವ ದಾಂಡಿಗನು ಟೈಮ್ಡ್ ಔಟ್ ಆಗುತ್ತಾನೆ.<br><br>೪೦.೧.೨ ಯಾವುದೇ ದಾಂಡಿಗ ವಿಕೆಟ್ ಬಳಿ ಬರಲು ವಿಸ್ತರಿತ ವಿಳಂಬವಾದರೆ ಅಂಪೈರ್‌ಗಳು ನಿಯಮ ೧೬.೩(ಅಂಪೈರ್‌ಗಳು ಪಂದ್ಯವನ್ನು ಅನುದಾನಿಸುವುದು) ರ ಕ್ರಮವನ್ನು ತೆಗೆದುಕೊಳ್ಳಬೇಕು. ಈ ನಿಯಮದ ಸಲುವಾಗಿ ಮೇಲೆ ಹೇಳಿದ ೩ ನಿಮಿಷಗಳ ಮುಕ್ತಾಯದ ನಂತರ ತೆಗೆದುಕೊಳ್ಳಬೇಕಾದ ಕ್ರಮವನ್ನು ಪ್ರಾರಂಭಿಸಬೇಕು. |

| | |
|---|---|
| **40.2 Bowler does not get credit.**<br>The bowler does not get credit for the wicket. | **೪೦.೨ ಬೌಲರ್‌ಗೆ ಶ್ರೇಯ ಸಲ್ಲದು.**<br>ಬೌಲರ್‌ನಿಗೆ ಹುದ್ದರಿ ಪತನದ ಶ್ರೇಯಸ್ಸು ಸಿಗುವುದಿಲ್ಲ. |
| **LAW 41 UNFAIR PLAY** | **ನಿಯಮ ೪೧ – ನಿಯಮಬಾಹಿರ ಆಟ** |
| 41.1 **Fair and unfair play – responsibility of captains**<br>The captains are responsible for ensuring that play is conducted within The Spirit of Cricket, as described in The Preamble – The Spirit of Cricket, as well as within the Laws. | **೪೧.೧ ನಿಯಮ ಬದ್ಧ ಮತ್ತು ನಿಯಮಬಾಹಿರ ಆಟ – ನಾಯಕರ ಜವಾಬ್ದಾರಿ**<br>ಆಟವು ಪೀಠಿಕೆಯಲ್ಲಿ ವಿವರಿಸಿರುವಂತೆ – ಕ್ರಿಕೆಟ್ ಆಟದ ಸ್ಪೂರ್ತಿ ಹಾಗೂ ನಿಯಮಗಳ ಅಡಿಯಲ್ಲಿ- ಕ್ರೀಡಾ ಮನೋಭಾವದಿಂದ ನಡೆಯುವುದನ್ನು ನೋಡಿಕೊಳ್ಳುವ ಜವಾಬ್ದಾರಿ ನಾಯಕರುಗಳದ್ದು. |
| **41.2 Unfair actions**<br>41.2.1 The umpires shall be the sole judges of fair and unfair play. If an umpire considers that any action by a player, not covered in the Laws, is unfair, he/she shall call and signal Dead ball, if appropriate as soon as it becomes clear that the call will not disadvantage the non-offending side and report the matter to the other umpire.<br>41.2.1.1 If this is a first offence by that side, the bowler's end umpire shall then, | **೪೧.೨ ನಿಯಮ ಬಾಹಿರ - ಕ್ರಮಗಳು**<br>೪೧.೨.೧ ನಿಯಮ ಬದ್ಧ ಮತ್ತು ನಿಯಮಬಾಹಿರ ಆಟದ ಬಗ್ಗೆ ಅಂಪೈರ್‌ಗಳು ಏಕ ಮಾತ್ರ ತೀರ್ಪುಗಾರರಾಗಿರುತ್ತಾರೆ. ಯಾವುದೇ ಅಂಪೈರನು ಆಟಗಾರನೊಬ್ಬನ, ನಿಯಮಗಳಲ್ಲಿ ವಿವರಿಸದಂತಹ ಯಾವುದೇ ಚಟುವಟಿಕೆ ನಿಯಮಬಾಹಿರ ಎಂದು ಪರಿಗಣಿಸಿದರೆ, ಅವನು/ಅವಳು “ಡೆಡ್ ಬಾಲ್” ಎಂದು ಕರೆದು ಸನ್ನೆ ಮಾಡಬೇಕು. ಯುಕ್ತವೆನಿಸಿದಲ್ಲಿ, ಕರೆಯನ್ನು ತಪ್ಪೆಸಗಿರದ ತಂಡಕ್ಕೆ ಯಾವುದೇ ರೀತಿಯ ಅನಾನುಕೂಲತೆ ಮಾಡುವುದಿಲ್ಲ ಎಂದು ಸ್ಪಷ್ಟವಾದೊಡನೆಯೇ ಕರೆಯಬೇಕು ಮತ್ತು ಮತ್ತೊಬ್ಬ ಅಂಪೈರ್‌ಗೆ ಘಟನೆಯ ಬಗ್ಗೆ ವರದಿ ಮಾಡಬೇಕು.<br>೪೧.೨.೧.೧ ಆ ತಂಡದ ಮೊದಲ ತಪ್ಪಾಗಿದ್ದರೆ, ಬೌಲರ್ ತುದಿಯ ಅಂಪೈರ್ |

- summon the offending player’s captain and issue a first and final warning which shall apply to all members of the team for the remainder of the match.
- warn the offending player’s captain that any further such offence by any member of his/her team shall result in the award of 5 Penalty runs to the opposing team.

41.2.1.2 If this is a second or subsequent offence by that side, the bowler’s end umpire shall then

- summon the offending player’s captain and inform him/her that there has been a further such offence.
- award 5 Penalty runs to the opposing side

41.2.1.3 The umpires together shall report the incident as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team.

➢ ತಪ್ಪೆಸಗಿದ ಆಟಗಾರನ ನಾಯಕನನ್ನು ಕರೆದು, ಮೊದಲ ಮತ್ತು ಅಂತಿಮ ಎಚ್ಚರಿಕೆಯನ್ನು ನೀಡಬೇಕು. ಈ ಎಚ್ಚರಿಕೆಯು ಪಂದ್ಯದ ಉಳಿದ ಅವಧಿಗೆ ಆ ತಂಡದ ಎಲ್ಲ ಆಟಗಾರರಿಗೆ ಅನ್ವಯಿಸುತ್ತದೆ.

➢ ತಪ್ಪೆಸಗಿದ ಆಟಗಾರನ ನಾಯಕನಿಗೆ, ಅವನ/ಅವಳ ತಂಡದ ಯಾವುದೇ ಆಟಗಾರ ಇನ್ನು ಮುಂದೆ ಇಂತಹ ತಪ್ಪು ಮಾಡಿದರೆ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸುವುದಾಗಿ ಎಚ್ಚರಿಸಬೇಕು.

೪೧.೨.೨ ಇದು ಎರಡನೆಯ ಅಥವಾ ತದನಂತರದ ತಪ್ಪಾಗಿದ್ದಲ್ಲಿ,

➢ ತಪ್ಪೆಸಗಿದ ಆಟಗಾರನ ನಾಯಕನನ್ನು ಕರೆದು, ಅವನಿಗೆ/ಅವಳಿಗೆ ಮತ್ತೊಂದು ತಪ್ಪಾಗಿದೆ ಎಂದು ತಿಳಿಸಬೇಕು.

➢ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.

೪೧.೨.೩ ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು

| | |
|---|---|
| **41.3 The match ball – changing its condition** | **೪೧.೩ ಪಂದ್ಯದ ಚೆಂಡು - ಸ್ವರೂಪವನ್ನು ಬದಲಾಯಿಸುವುದು.** |
| 41.3.1 The umpires shall make frequent and irregular inspections of the ball. In addition, they shall immediately inspect the ball if they suspect anyone of attempting to change the condition of the ball, except as permitted in 41.3.2. | ೪೧.೩.೧ ಅಂಪೈರ್‌ಗಳು ಪದೇ ಪದೇ ಮತ್ತು ಅನಿಯಮಿತವಾಗಿ ಚೆಂಡನ್ನು ಪರೀಕ್ಷಿಸುತ್ತಿರಬೇಕು. ಇದರ ಜೊತೆಗೆ ೪೧.೩.೨ರಲ್ಲಿ ಅನುಮತಿಸಿರುವುದನ್ನು ಹೊರತುಪಡಿಸಿ, ಯಾರಾದರೊಬ್ಬರು ಚೆಂಡಿನ ಸ್ವರೂಪವನ್ನು ಬದಲಾಯಿಸುವ ಪ್ರಯತ್ನ ಮಾಡುತ್ತಿದ್ದಾರೆಂಬ ಅನುಮಾನ ಬಂದ ಕೂಡಲೇ ಚೆಂಡನ್ನು ಪರೀಕ್ಷಿಸಬೇಕು. |
| 41.3.2 It is an offence for any player to take any action which changes the condition of the ball. | ೪೧.೩.೨ ಯಾವುದೇ ಆಟಗಾರನು ತೆಗೆದುಕೊಳ್ಳುವ ಯಾವುದೇ ಕ್ರಮದಿಂದ ಚೆಂಡಿನ ಸ್ವರೂಪ ಬದಲಾದರೆ, ಅದು ಅಪರಾಧ. |
| Except in carrying out his/her normal duties, a batter is not allowed to wilfully damage the ball. See also Law 5.5 (Damage to the ball). | ಒಬ್ಬ ದಾಂಡಿಗನು ತನ್ನ ಸಹಜ ಕರ್ತವ್ಯಗಳನ್ನು ಮಾಡುವುದನ್ನು ಹೊರತುಪಡಿಸಿ ಉದ್ದೇಶಪೂರ್ವಕವಾಗಿ ಚೆಂಡಿನ ಸ್ವರೂಪವನ್ನು ಬದಲಾಯಿಸುವಂತಿಲ್ಲ. ನಿಯಮ ೫.೫ (ಚೆಂಡಿಗೆ ಧಕ್ಕೆ) ಗಮನಿಸಿ. |
| A fielder may, however | ಆದರೂ, ಕ್ಷೇತ್ರ ರಕ್ಷಕನೊಬ್ಬ |
| 41.3.2.1 polish the ball on his/her clothing provided that no artificial substance is used that the only natural substance used is sweat, and that such polishing wastes no time. | ೪೧.೩.೨.೧ ಬೆವರನ್ನು ಬಿಟ್ಟು ಬೇರಾವುದೇ ಕೃತ್ರಿಮ ಪದಾರ್ಥವನ್ನು ಬಳಸದೆ ಚೆಂಡನ್ನು ಅವನು/ಅವಳು ತೊಟ್ಟ ಬಟ್ಟೆಯ ಮೇಲೆ ಹೊಳಪಿಸಬಹುದು. ಆದರೆ ಇಂತಹ ಹೊಳಪಿಸುವ ಕೃತ್ಯದಿಂದ ಕಾಲಹರಣವಾಗಬಾರದು. |
| 41.3.2.2 remove mud from the ball under the supervision of an umpire. | ೪೧.೩.೨.೨ ಅಂಪೈರ್‌ಗಳ ಮೇಲ್ವಿಚಾರಣೆಯಲ್ಲಿ ಚೆಂಡಿಗೆ ಮೆತ್ತಿಕೊಂಡಿರುವ ಮಣ್ಣನ್ನು ತೆಗೆಯಬಹುದು. |
| 41.3.2.3 dry a wet ball on a piece of cloth that has been approved by the umpires. | ೪೧.೩.೨.೩ ಅಂಪೈರ್‌ಗಳು ಅನುಮೋದಿಸಿರುವ ಬಟ್ಟೆಯ ತುಂಡಿನಿಂದ ಒದ್ದೆಯಾದ ಚೆಂಡನ್ನು ಒಣಗಿಸಬಹುದು. |

41.3.3 The umpires shall consider the condition of the ball to have been unfairly changed if any action by any player does not comply with the conditions in 41.3.2.

41.3.4 If the umpires consider that the condition of the ball has been unfairly changed by a member or members of either side, they shall ask the captain of the opposing side if he/she would like the ball to be replaced. If necessary, in the case of the batting side, the batters at the wicket may deputise for their captain.

41.3.4.1 If a replacement ball is requested, the umpires shall select and bring into use immediately, a ball which shall have wear comparable to that of the previous ball immediately prior to the contravention.

41.3.4.2 Regardless of whether a replacement ball has been chosen to be used, the bowler's end umpire shall,

- award 5 Penalty runs to the opposing side.
- if appropriate, inform the batters at the wicket and the captain of the fielding side that the ball has been changed and the reason for their action.

೪೧.೩.೩ ಯಾವುದೇ ಆಟಗಾರನ ಕೃತ್ಯ ೪೧.೩.೨ರಲ್ಲಿಯ ಷರತ್ತುಗಳಿಗನುಸಾರವಾಗಿ ಇರದಿದ್ದರೆ, ಚೆಂಡಿನ ಸ್ವರೂಪವನ್ನು ನಿಯಮಬಾಹಿರವಾಗಿ ಬದಲಾಯಿಸಲಾಗಿದೆ ಎಂದು ಪರಿಗಣಿಸಬೇಕು.

೪೧.೩.೪ ಯಾವುದೇ ತಂಡದ ಸದಸ್ಯ ಅಥವಾ ಸದಸ್ಯರು ನಿಯಮಬಾಹಿರವಾಗಿ ಚೆಂಡಿನ ಸ್ವರೂಪ ಬದಲಾಯಿಸಿದ್ದಾರೆ ಎಂದು ಅಂಪೈರ್ ಪರಿಗಣಿಸಿದರೆ, ಅವರು ವಿರುದ್ಧ ತಂಡದ ನಾಯಕನಿಗೆ ಚೆಂಡನ್ನು ಬದಲಾಯಿಸಬೇಕೇ ಎಂದು ಕೇಳಬೇಕು. ಅಗತ್ಯವಾದಲ್ಲಿ, ದಾಂಡಿಗ ತಂಡಕ್ಕೆ ಕೇಳಬೇಕಾದರೆ, ವಿಕೆಟ್ ಬಳಿ ಇರುವ ದಾಂಡಿಗರು ಅವರ ನಾಯಕನನ್ನು ಪ್ರತಿನಿಧಿಸಬಹುದು.

೪೧.೩.೪.೧ ಚೆಂಡಿನ ಬದಲಾವಣೆಗೆ ಕೋರಿಕೆ ಇದ್ದಲ್ಲಿ, ನಿಯಮವನ್ನು ಉಲ್ಲಂಘಿಸುವ ಮೊದಲು ಚೆಂಡು ಯಾವ ಸ್ವರೂಪದಲ್ಲಿತ್ತೋ ಆ ಸ್ವರೂಪಕ್ಕೆ ಹೋಲಿಕೆಯಾಗುವಂತಹ ಮತ್ತೊಂದು ಚೆಂಡನ್ನು ಆರಿಸಿ ಕೂಡಲೇ ಬಳಕೆಗೆ ತರಬೇಕು.

೪೧.೩.೪.೨ ಬದಲಾಯಿತ ಚೆಂಡನ್ನು ಉಪಯೋಗಕ್ಕೆ ತಂದಿರಲಿ ಬಿಡಲಿ, ಬೌಲರ್ ತುದಿಯ ಅಂಪೈರ್;

- ವಿರುದ್ಧ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.
- ಸೂಕ್ತವೆನಿಸಿದಲ್ಲಿ, ಚೆಂಡನ್ನು ಬದಲಾಯಿಸಿದ ಬಗ್ಗೆ ಮತ್ತು ಅದಕ್ಕೆ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ತಿಳಿಸಬೇಕು.

- inform the captain of the batting side as soon as practicable of what has occurred.

The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team.

41.3.5 If the umpires agree that in the match there has been any further instance by that team of unfairly changing the condition of the ball, they shall 41.3.5.1 repeat the procedure in 41.3.4.1 and 41.3.4.2.

If the further offence is committed by the fielding side, additionally the bowler’s end umpire shall,

41.3.5.2 - direct the captain of the fielding side to suspend immediately from bowling the bowler who delivered the preceding ball; he/she shall not be allowed to bowl again in the match.

- inform the batters at the wicket and, as soon as practicable, the captain of the batting side of the reason for the action.

➢ ನಡೆದ ಘಟನೆಯ ಬಗ್ಗೆ ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.

ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

೪೧.೩.೫ ಅದೇ ಪಂದ್ಯದಲ್ಲಿ ಪುನಃ ಅದೇ ತಂಡ ನಿಯಮಬಾಹಿರವಾಗಿ ಚೆಂಡಿನ ಸ್ವರೂಪವನ್ನು ಬದಲಾಯಿಸಿದ್ದಾರೆ ಎಂದು ಅಂಪೈರಿಬ್ಬರೂ ನಿರ್ಧರಿಸಿದರೆ, ಅವರು ೪೧.೩.೫.೧ ೪೧.೩.೪.೧ ರಿಂದ ೪೧.೩.೪.೨ ರಲ್ಲಿಯ ಕ್ರಮಗಳನ್ನು ಪುನರಾವರ್ತಿಸಬೇಕು.

ಕ್ಷೇತ್ರ ರಕ್ಷಣೆಯ ತಂಡ ಪುನಃ ಇಂತಹ ಕೃತ್ಯವನ್ನು ಎಸಗಿದರೆ, ಮೇಲಿನದರ ಜೊತೆಗೆ ಬೌಲರ್ ತುದಿಯ ಅಂಪೈರ್;

೪೧.೩.೫.೨ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಹಿಂದಿನ ಬಾಲ್ ಎಸೆದ ಬೌಲರನನ್ನು ತತ್‌ಕ್ಷಣದಿಂದ ಅಮಾನತ್ತುಗೊಳಿಸಲು ನಿರ್ದೇಶಿಸಬೇಕು. ಅವನಿಗೆ/ಅವಳಿಗೆ ಆ ಪಂದ್ಯದಲ್ಲಿ ಮತ್ತೆ ಬೌಲ್ ಮಾಡಲು ಅವಕಾಶವಿಲ್ಲ.

➢ ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.

| | |
|---|---|
| - if necessary, the over shall be completed by another bowler, who shall neither have bowled any part of the previous over, nor be allowed to bowl any part of the next over. | ➢ ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು. |
| **41.4 Deliberate attempt to distract striker**<br>41.4.1 It is unfair for any fielder deliberately to attempt to distract the striker while he/she is preparing to receive or receiving a delivery.<br><br>41.4.2 If either umpire considers that any action by a fielder is such an attempt, he/she shallimmediately call and signal Dead ball and inform the other umpire of the reason forthe call. The bowler's end umpire shall<br>- award 5 Penalty runs to the batting side.<br>- inform the captain of the fielding side, the batters and, as soon as practicable, thecaptain of the batting side of the reason for the action. | **೪೧.೪ ಉದ್ದೇಶಪೂರ್ವಕವಾಗಿ ಚೆಂಡನ್ನೆದುರಿಸುವ ದಾಂಡಿಗನ ಚಿತ್ತ ವಿಚಲಿತಗೊಳಿಸುವುದು**<br>೪೧.೪.೧ ಚೆಂಡನ್ನೆದುರಿಸುವ ದಾಂಡಿಗನು ಚೆಂಡನ್ನು ಎದುರಿಸಲು ಸಿದ್ಧನಾಗುವಾಗ ಅಥವಾ ಎದುರಿಸುತ್ತಿರುವಾಗ ಯಾವುದೇ ಕ್ಷೇತ್ರ ರಕ್ಷಕನು ಉದ್ದೇಶಪೂರ್ವಕವಾಗಿ ಚಿತ್ತ ವಿಚಲಿತ ಗೊಳಿಸಲು ಪ್ರಯತ್ನಿಸುವುದು ನಿಯಮಬಾಹಿರ.<br>೪೧.೪.೨ ಯಾವುದೇ ಕ್ಷೇತ್ರ ರಕ್ಷಕನ ವರ್ತನೆಯು ಇಂತಹದ್ದಕ್ಕೆ ಪ್ರಯತ್ನವಾಗಿತ್ತು ಎಂದು ಯಾರೊಬ್ಬ ಅಂಪೈರ್ ಅಭಿಪ್ರಾಯಪಟ್ಟರೆ, ಕೂಡಲೇ "ಡೆಡ್ ಬಾಲ್" ಕರೆದು ಸನ್ನೆ ಮಾಡಬೇಕು ಮತ್ತು ಇನ್ನೊಬ್ಬ ಅಂಪೈರ್‌ಗೆ ಕರೆಯ ಕಾರಣವನ್ನು ತಿಳಿಸಬೇಕು. ಬೌಲರ್ ತುದಿಯ ಅಂಪೈರ್;<br>➢ ವಿರುದ್ಧ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಕ್ರಮಕ್ಕೆ ಕಾರಣವನ್ನು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ, ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು. |

| | |
|---|---|
| Neither batter shall be dismissed from that delivery and the ball shall not count as one of the over. However, if either umpire had reason to call and signal No ball, he/she shall do so regardless of the attempt to distract, and this call shall stand.<br><br>Together with the other umpire report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ಆ ಎಸೆತದಿಂದ ಯಾವುದೇ ದಾಂಡಿಗ ಔಟ್ ಆಗುವುದಿಲ್ಲ ಮತ್ತು ಆ ಎಸೆತ ಓವರಿನ ಒಂದು ಎಸೆತವೆಂದು ಪರಿಗಣಿಸಬಾರದು. ಆದರೆ ಯಾವದೇ ಅ0ಪೈರ್ ನೋ ಬಾಲ್ ಇಲ್ಲವೇ ವೈಡ್ ಕರೆದು ಸನ್ನೆ ಮಾಡಲು ಕಾರಣವಿದ್ದರೆ ಅಡಚಣೆ ಮಾಡಲು ಪ್ರಯತ್ನ ಮಾಡುತ್ತಿದ್ದರೂ ಕರೆಯಬೇಕು.<br>.ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| 41.5 **Deliberate distraction, deception, or obstruction of batter**<br>41.5.1 In addition to 41.4, it is unfair for any fielder wilfully to attempt, by word or action, to distract, deceive or obstruct either batter after the striker has received the ball.<br><br>41.5.2 It is for either one of the umpires to decide whether any distraction, deception or obstruction is wilful or not. | **೪೧.೫ ಉದ್ದೇಶಪೂರ್ವಕವಾಗಿ ದಾಂಡಿಗನ ಚಿತ್ತ ವಿಚಲಿತಗೊಳಿಸುವುದು, ವಂಚಿಸುವುದು ಮತ್ತು ಅಡೆತಡೆ ಒಡ್ಡುವುದು**<br>೪೧.೫.೧ ೪೧.೪ರ ಜೊತೆಗೆ, ದಾಂಡಿಗನು ಚೆಂಡನ್ನು ಎದುರಿಸಿದ ನಂತರ ಯಾರೊಬ್ಬ ದಾಂಡಿಗನನ್ನು ಯಾವುದೇ ಕ್ಷೇತ್ರ ರಕ್ಷಕ ಉದ್ದೇಶಪೂರ್ವಕವಾಗಿ ಚಿತ್ತ ವಿಚಲಿತಗೊಳಿಸುವುದು, ವಂಚಿಸುವುದು ಮತ್ತು ಅಡೆತಡೆ ಒಡ್ಡುವುದು ನಿಯಮಬಾಹಿರ.<br>೪೧.೫.೨ ಯಾರಾದರೊಬ್ಬ ಅಂಪೈರ್ ಚಿತ್ತ ವಿಚಲಿತಗೊಳಿಸುವುದು, ವಂಚಿಸುವುದು ಮತ್ತು ಅಡೆತಡೆ ಒಡ್ಡುವುದು |

| | | |
|---|---|---|
| | | ಉದ್ದೇಶಪೂರ್ವಕವೊ ಅಲ್ಲವೋ ಎಂದು ನಿರ್ಧರಿಸಬೇಕು. |
| 41.5.3 If either umpire considers that a fielder has caused or attempted to cause such a distraction, deception, or obstruction, he/she shall immediately call and signal Dead ball and inform the other umpire of the reason for the call. | ೪೧.೫.೩ | ಯಾವುದೇ ಅಂಪೈರ್ ಒಬ್ಬ ಕ್ಷೇತ್ರ ರಕ್ಷಕನು ಉದ್ದೇಶಪೂರ್ವಕವಾಗಿ ಶಬ್ದ ಅಥವಾ ವರ್ತನೆಯಿಂದ ಚಿತ್ತ ವಿಚಲಿತಗೊಳಿಸುತ್ತಿದ್ದಾನೆ, ವಂಚಿಸುತ್ತಿದ್ದಾನೆ ಮತ್ತು ಅಡೆತಡೆ ಒಡ್ಡುತ್ತಿದ್ದಾನೆ ಅಥವಾ ಪ್ರಯತ್ನಿಸುತ್ತಿದ್ದಾನೆ ಎಂದು ಪರಿಗಣಿಸಿದರೆ, ಅವನು/ಅವಳು ಕೂಡಲೇ “ಡೆಡ್ ಬಾಲ್” ಕರೆದು ಸನ್ನೆ ಮಾಡಿ, ಕರೆಯ ಕಾರಣವನ್ನು ಸಹವರ್ತಿ ಅಂಪೈರ್‌ಗೆ ತಿಳಿಸಬೇಕು. |
| 41.5.4 Neither batter shall be dismissed from that delivery. | ೪೧.೫.೪ | ಆ ಎಸೆತದಿಂದ ಯಾವುದೇ ದಾಂಡಿಗ ಔಟ್ ಆಗುವುದಿಲ್ಲ. |
| 41.5.5 If an obstruction involves physical contact, the umpires together shall decide whether or not an offence under Law 42 (Players’ conduct) has been committed. | ೪೧.೫.೫ | ಅಡ್ಡಿ ಪಡಿಸುವಿಕೆಯು ದೈಹಿಕ ಸಂಪರ್ಕಕ್ಕೆ ಕಾರಣವಾದರೆ, ಇಬ್ಬರೂ ಅಂಪೈರ್ ಸೇರಿ ಅದು ನಿಯಮ ೪೨ (ಆಟಗಾರರ ನಡತೆ) ರ ಅನ್ವಯ ಅಪರಾಧವೋ ಇಲ್ಲವೋ ಎಂದು ನಿರ್ಧರಿಸಬೇಕು. |
| 41.5.5.1 If an offence under Law 42 (Players’ conduct) has been committed, they shall apply the relevant procedures in Law 42 and shall also apply each of 41.5.7 to 41.5.9. | ೪೧.೫.೫.೧ | ನಿಯಮ ೪೨ (ಆಟಗಾರರ ನಡತೆ)ರನ್ವಯ ಅಪರಾಧ ಮಾಡಿದ್ದರೆ, ನಿಯಮ ೪೨ (ಆಟಗಾರರ ನಡತೆ)ರಲ್ಲಿಯ ಸಂಬಂಧಿತ ಕ್ರಮಗಳನ್ನು ಮತ್ತು ಅವುಗಳೊಂದಿಗೆ ೪೧.೫.೭ರಿಂದ ೪೧.೫.೯ರಲ್ಲಿಯ ಕ್ರಮಕಗಳನ್ನೂ ಅನ್ವಯಿಸಬೇಕು. |
| 41.5.5.2 If they consider that there has been no offence under Law 42 (Players’ conduct), they shall apply each of 41.5.6 to 41.5.10. | ೪೧.೫.೫.೨ | ನಿಯಮ ೪೨(ಆಟಗಾರರ ನಡತೆ)ರನ್ವಯ ಅಪರಾಧ ಮಾಡಿಲ್ಲವೆಂದು ಪರಿಗಣಿಸಿದರೆ ೪೧.೫.೬ ರಿಂದ ೪೧.೫.೧೦ರ ವರೆಗಿನ ಪ್ರತಿಯೊಂದನ್ನು ಅನ್ವಯಿಸಬೇಕು. |

| | |
|---|---|
| 41.5.6 The bowler's end umpire shall<br>➢ Signal No ball or Wide to the scorers, if applicable<br>➢ award 5 Penalty runs to the batting side.<br>➢ inform the captain of the fielding side of the reason for this action and as soon as practicable inform the captain of the batting side. | ೪೧.೫.೬ ಬೌಲರ್ ತುದಿಯ ಅಂಪೈರ್<br>➢ ಅನ್ವಯವಾದಲ್ಲಿ ಸ್ಕೋರರಿಗೆ ನೋ ಬಾಲ್ ಇಲ್ಲವೆ ವೈಡ್ ಬಾಲ್ ಸನ್ನೆ ಮಾಡಬೇಕು.<br>➢ ವಿರುದ್ಧ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಕ್ರಮಕ್ಕೆ ಕಾರಣವನ್ನು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು. |
| 41.5.7 The ball shall not count as one of the over. | ೪೧.೫.೭ ಚೆಂಡನ್ನು ಆ ಓವರಿನಲ್ಲಿಯ ಒಂದು ಎಸೆತವೆಂದು ಎಣಿಸಬಾರದು. |
| 41.5.8 Any runs completed by the batters before the offence shall be scored, together with any runs for penalties awarded to either side. Additionally, the run-in progress shall be scored whether or not the batters had already crossed at the instant of the offence. | ೪೧.೫.೮ ಅಪರಾಧವಾಗುವ ಮೊದಲು ದಾಂಡಿಗರು ಪೂರ್ಣಗೊಳಿಸಿದ ಯಾವುದೇ ಓಟಗಳ ಜೊತೆಗೆ ಯಾವುದೇ ತಂಡಕ್ಕೆ ಅನುದಾನಿಸಿದ ದಂಡದ ಓಟಗಳು ಮತ್ತು ಚಾಲ್ತಿಯಲ್ಲಿರುವ ಓಟವನ್ನು, ಅಪರಾಧವೆಸಗಿದ ಕ್ಷಣದಲ್ಲಿ ದಾಂಡಿಗರು ಒಬ್ಬರನ್ನೊಬ್ಬರು ದಾಟಿರಲಿ ಬಿಟ್ಟಿರಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. |
| 41.5.9 The batters at the wicket shall decide which of them is to face the next delivery. | ೪೧.೫.೯ ಮುಂದಿನ ಎಸೆತವನ್ನು ಯಾವ ದಾಂಡಿಗ ಎದುರಿಸಬೇಕೆಂದು ವಿಕೆಟ್ ಬಳಿ ಇರುವ ದಾಂಡಿಗರೇ ನಿರ್ಧರಿಸಬೇಕು. |
| 41.5.10 The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered | ೪೧.೫.೧೦ ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, |

| | |
|---|---|
| appropriate against the captain, any other individuals concerned and, if appropriate, the team. | ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.6 Bowling of dangerous and unfair short pitched deliveries**<br>41.6.1 The bowling of short pitched deliveries is dangerous if the bowler's end umpire considers that, taking into consideration the skill of the striker, by their speed, length, height and direction they are likely to inflict physical injury on him/her. The fact that the striker is wearing protective equipment shall be disregarded.<br><br>41.6.2 The bowler's end umpire may consider that the bowling of short pitched deliveries, although not dangerous under 41.6.1, is unfair if they repeatedly pass above head height of the striker standing upright at the crease. See also Law 21.10 (Ball bouncing overhead height of striker).<br><br>41.6.3 As soon as the umpire decides that the bowling of short pitched deliveries has become dangerous under 41.6.1, or | **೪೧.೬ ಅಪಾಯಕಾರಿ ಹಾಗೂ ನಿಯಮಬಾಹಿರ ಅಲ್ಪ ಪುಟಿಗೆಯ ಎಸೆತಗಳು**<br>೪೧.೬.೧ ಬೌಲರ್ ತುದಿಯ ಅಂಪೈರ್ ದಾಂಡಿಗನ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಂಡು, ಅಲ್ಪ ಪುಟಿಗೆಯ ಎಸೆತಗಳನ್ನು ಅವುಗಳ ವೇಗ, ಪುಟಿಗೆಯ ಅಂತರ, ಎತ್ತರ ಮತ್ತು ದಿಶೆಯನ್ನು ಪರಿಗಣಿಸಿ ಅವುಗಳು ದಾಂಡಿಗನಿಗೆ ದೈಹಿಕವಾಗಿ ಗಾಯಗೊಳಿಸಲು ಉದ್ದೇಶಪೂರ್ವಕವಾಗಿ ಎಸೆಯಲ್ಪಟ್ಟಿವೆ ಎಂದು ನಿರ್ಧರಿಸಿದರೆ ಅದು ಅಪಾಯಕಾರಿ ಎಸೆತ. ಚೆಂಡನ್ನೆದುರಿಸುವ ದಾಂಡಿಗನು ಸುರಕ್ಷಾ ಶಿರಸ್ತ್ರಾಣವನ್ನು ಧರಿಸಿರುವ ಅಂಶವನ್ನು ಪರಿಗಣಿಸಬಾರದು.<br>೪೧.೬.೨ ಅಲ್ಪ ಪುಟಿಗೆಯ ಎಸೆತಗಳು ೪೧.೬.೧ರನ್ವಯ ಅಪಾಯಕಾರಿ ಅಲ್ಲದಿದ್ದರೂ ಸಹ ಅಂಪೈರ್ ಅವುಗಳು ಕ್ರೀಸ್ ಬಳಿ ನೇರವಾಗಿ ನಿಂತಿರುವ ಚೆಂಡನ್ನೆದುರಿಸುವ ದಾಂಡಿಗನ ತಲೆಯ ಮಟ್ಟಕ್ಕಿಂತ ಮೇಲಿನಿಂದ ಪುನಃ ಪುನಃ ಹೋಗುತ್ತಿದ್ದರೆ ಅವು ನಿಯಮ ಬಾಹಿರ ಎಂದು ನಿರ್ಧರಿಸಬಹುದು. ನಿಯಮ ೨೧.೧೦ (ಚೆಂಡು ಕ್ರೀಸ್ ಬಳಿ ನಿಂತಿರುವ ಚೆಂಡನ್ನೆದುರಿಸುವ ದಾಂಡಿಗನ ತಲೆಯಮೇಲಿನಿಂದ ಪುಟಿಯುವುದು) ಗಮನಿಸಿ. |

| | |
|---|---|
| unfair under 41.6.2, he/she shall call and signal No ball. When the ball is dead, the umpire shall caution the bowler, indicating that this is a first and final warning, and inform the other umpire, the captain of the fielding side and the batters of what has occurred. | ೪೧.೬.೩ ಅಲ್ಪ ಪುಟಿಗೆಯ ಎಸೆತ ೪೧.೬.೧ರನ್ವಯ ಅಪಾಯಕಾರಿ ಅಥವಾ ೪೧.೬.೨ರನ್ವಯ ನಿಯಮ ಬಾಹಿರ ಎಂದು ಅಂಪೈರ್ ನಿರ್ಧರಿಸಿದ ಕೂಡಲೇ ಅವನು/ಅವಳು "ನೋ ಬಾಲ್" ಕರೆದು ಸನ್ನೆ ಮಾಡಬೇಕು. ಚೆಂಡು ಡೆಡ್ ಆದಮೇಲೆ ಅಂಪೈರ್ ಬೌಲರ್‌ಗೆ ಮೊದಲ ಹಾಗೂ ಅಂತಿಮ ಎಚ್ಚರಿಕೆಯನ್ನು ನೀಡಬೇಕು ಮತ್ತು ಮತ್ತೊಬ್ಬ ಅಂಪೈರ್‌ಗೆ, ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ವಿಕೆಟ್ ಬಳಿ ಇರುವ ದಾಂಡಿಗರಿಗೆ ನಡೆದ ಸಂಗತಿಯನ್ನು ತಿಳಿಸಬೇಕು. |
| This caution shall apply to that bowler throughout the innings. | ಈ ಎಚ್ಚರಿಕೆಯು ಆ ಬೌಲರ್‌ಗೆ ಆ ಸರದಿಯುದ್ದಕ್ಕೂ ಅನ್ವಯಿಸುತ್ತದೆ. |
| 41.6.4 Should there be any further such delivery by the same bowler in that innings, the umpire shall<br>- call and signal No ball<br>- when the ball is dead, direct the captain of the fielding side to suspend the bowler immediately from bowling<br>- inform the other umpire for the reason for this action. | ೪೧.೬.೪ ಆ ಸರದಿಯಲ್ಲಿ ಅದೇ ಬೌಲರ್ ಪುನಃ ಅಂತಹದೇ ಎಸೆತ ಮಾಡಿದರೆ, ಅಂಪೈರ್<br>➢ "ನೋ ಬಾಲ್" ಕರೆದು ಸನ್ನೆ ಮಾಡಬೇಕು.<br>➢ ಚೆಂಡು ಡೆಡ್ ಆದಮೇಲೆ , ಆ ಬೌಲರ್‌ನನ್ನು ಕೂಡಲೇ ಅಮಾನತ್ತುಗೊಳಿಸಲು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಿರ್ದೇಶಿಸಬೇಕು.<br>➢ ಮತ್ತೊಬ್ಬ ಅಂಪೈರ್‌ಗೆ ಕ್ರಮದ ಕಾರಣವನ್ನು ತಿಳಿಸಬೇಕು. |
| The bowler thus suspended shall not be allowed to bowl again in that innings. | ಈ ರೀತಿಯಾಗಿ ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ. |
| If applicable, the over shall be completed by another bowler, who shall neither have bowled any part of the previous over, nor be allowed to bowl any part of the next over. | ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ |

| | |
|---|---|
| - The umpire shall report the occurrence to the batters and, as soon as practicable, to the captain of the batting side.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team.<br><br>41.6.5 The warning sequence in 41.6.3 and 41.6.4 is independent of the warning and action sequence in 41.7. | ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು.<br>➢ ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.<br>೪೧.೬.೫ ೪೧.೬.೩ ಮತ್ತು ೪೧.೬.೪ ರಲ್ಲಿಯ ಎಚ್ಚರಿಕೆಯ ಕ್ರಮಗಳು ೪೧.೭ ರಲ್ಲಿಯ ಎಚ್ಚರಿಕೆ ಮತ್ತು ಕ್ರಮಗಳಿಂದ ಸ್ವತಂತ್ರವಾಗಿರುತ್ತವೆ. |
| 41.7 **Bowling of dangerous and unfair non-pitching deliveries**<br>41.7.1 Any delivery, which passes or would have passed, without pitching, above waist height of the striker standing upright at the popping crease, is unfair. Whenever such a delivery is bowled, the umpire shall call and signal No ball. | **೪೧.೭ ಅಪಾಯಕಾರಿ ಮತ್ತು ನಿಯಮಬಾಹಿರ ಪುಟಿಗೆ ಇಲ್ಲದ ಎಸೆತ**<br>೪೧.೭.೧ ಬೌಲ್ ಮಾಡಲ್ಪಟ್ಟ ಯಾವುದೇ ಎಸೆತ ಪುಟಿಗೆ ಇಲ್ಲದೇ ಪಾಪಿಂಗ್ ಕ್ರೀಸ್ ಬಳಿ ನೇರವಾಗಿ ನಿಂತಿರುವ ಚೆಂಡನ್ನು ಎದುರಿಸುವ ದಾಂಡಿಗನ ಸೊಂಟಕ್ಕಿಂತ ಮೇಲ್ಮಟ್ಟದಲ್ಲಿ ದಾಟಿ ಹೋದರೆ ಅಥವಾ ಹಾದು ಹೋಗಬಹುದಾಗಿದ್ದರೆ, ಅದು ನಿಯಮಬಾಹಿರ. ಒಬ್ಬ ಬೌಲರ್ ಇಂತಹ ಎಸೆತವನ್ನು |

| | |
|---|---|
| | ಮಾಡಿದರೆ, ಅಂಪೈರ್ ಕೂಡಲೇ "ನೋ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. |
| 41.7.2 The bowling of a delivery as defined in 41.7.1 is also dangerous if the bowler's end umpire considers that there is a risk of injury to the striker. In making that judgement the umpire shall:<br>- disregard any protective equipment worn by the striker<br>- be mindful of:<br>- the speed, height and direction of the delivery<br>- the skill of the striker<br>- the repeated nature of such deliveries. | ೪೧.೭.೨ ಮೇಲಿನ ೪೧.೭.೧ ರಲ್ಲಿ ವಿವರಿಸಿದಂತಃ ಎಸೆತದಿಂದ ಚೆಂಡನ್ನು ಎದುರಿಸುವ ದಾಂಡಿಗನಿಗೆ ಗಾಯ ವಾಗುತ್ತದೆ ಎಂದಾದರೆ ಆ ಎಸೆತವನ್ನು ಅಪಾಯಕಾರಿ ಎಂದು ಬೌಲರ್ ತುದಿಯ ಅಂಪೈರ್ ಪರಿಗಣಿಸಬೇಕು. ಹೀಗೆ ಪರಿಗಣಿಸುವ ಮೊದಲು<br>➢ ಚೆಂಡನ್ನೆದುರಿಸುವ ದಾಂಡಿಗನು ಧರಿಸಿರುವ ರಕ್ಷಣಾ ಕವಚಗಳನ್ನು ಪರಿಗಣಿಸಬಾರದು.<br>➢ ಆದರೆ, ಈ ಕೆಳಗಿನವುಗಳನ್ನು ಗಮನಿಸಬೇಕು:<br>➢ ಎಸೆತದ ವೇಗ, ಎತ್ತರ ಮತ್ತು ದಿಶೆ<br>➢ ಚೆಂಡನ್ನೆದುರಿಸುವ ದಾಂಡಿಗನ ಕೌಶಲ್ಯ<br>➢ ಇಂತಃ ಪದೇ ಪದೇ ಎಸೆತದ ಉದ್ದೇಶ. |
| 41.7.3 If the umpire considers a non-pitching delivery, or a series of non-pitching deliveries, to be dangerous under 41.7.2, when the ball is dead, the umpire shall repeat the No ball signal to the scorers and then caution the bowler, indicating that this is a first and final warning. The umpire shall also inform the other umpire, the captain of the fielding side and the batters of what has occurred. This caution shall apply to that bowler throughout the innings. | ೪೧.೭.೩ ಅಂಪೈರ್ ಪುಟಿಗೆ ಇಲ್ಲದ ಎಸೆತವನ್ನು ಅಥವಾ ಪುಟಿಗೆ ಇಲ್ಲದ ಸರಣಿ ಎಸೆತಗಳನ್ನು ನಿಯಮ ೪೧.೭.೨ ರನ್ವಯ ಅಪಾಯಕಾರಿ ಎಂದು ಪರಿಗಣಿಸಿದರೆ, ಬಾಲ್ ಡೆಡ್ ಆದಮೇಲೆ ಅಂಪೈರ್ ಸ್ಕೋರರ್ ಗೆ "ನೋ ಬಾಲ್" ಸನ್ನೆಯನ್ನು ಪುನಃ ಮಾಡಬೇಕು ಮತ್ತು ಬೌಲರನಿಗೆ ಮೊದಲ ಹಾಗೂ ಅಂತಿಮ ಎಚ್ಚರಿಕೆ ಎಂದು ತಿಳಿಸಬೇಕು. ಇನ್ನೊಬ್ಬ ಅಂಪೈರ್‌ಗೆ, ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಹಾಗೂ ದಾಂಡಿಗರಿಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು. ಈ ಎಚ್ಚರಿಕೆಯು ಬೌಲರ್‌ಗೆ ಸರದಿಯುದ್ದಕ್ಕೂ ಅನ್ವಯಿಸುತ್ತದೆ. |

| | |
|---|---|
| 41.7.4 Should there be any further dangerous such delivery by the same bowler in that innings, the umpire shall,<br>- call and signal No ball<br><br>- when the ball is dead, direct the captain of the fielding side to suspend the bowler immediately from bowling<br>- inform the other umpire for the reason for this action.<br>The bowler thus suspended shall not be allowed to bowl again in that innings.<br>If applicable, the over shall be completed by another bowler, who shall neither have bowled any part of the previous over, nor be allowed to bowl any part of the next over.<br>Additionally, the umpire shall<br>- report the occurrence to the batters and, as soon as practicable, to the captain of the batting side.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered | ೪೧.೭.೪ ಆ ಸರದಿಯಲ್ಲಿ ಅದೇ ಬೌಲರ್ ಪುನಃ ಅಂತಹದೇ ಎಸೆತ ಮಾಡಿದರೆ, ಅಂಪೈರ್<br>➢ ನೋ ಬಾಲ್ ಕರೆದು ಸನ್ನೆ ಮಾಡಬೇಕು.<br>➢ ಚೆಂಡು ಡೆಡ್ ಆದಮೇಲೆ , ಆ ಬೌಲರನನ್ನು ಕೂಡಲೇ ಅಮಾನತ್ತು ಗೊಳಿಸಲು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಿರ್ದೇಶಿಸಬೇಕು.<br>➢ ಮತ್ತೊಬ್ಬ ಅಂಪೈರ್‌ಗೆ ಕ್ರಮದ ಕಾರಣವನ್ನು ತಿಳಿಸಬೇಕು.<br>ಈ ರೀತಿಯಾಗಿ ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ.<br>ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು.<br>ಇವುಗಳ ಜೊತೆಗೆ ಅಂಪೈರ್<br>➢ ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, |

appropriate against the captain, any other individuals concerned and, if appropriate, the team.

41.7.5 The warning and action sequences in 41.7.3 and 41.7.4 are independent of those in 41.6.

41.7.6 If the umpire considers that a bowler deliberately bowled a non-pitching delivery, deemed to be unfair as defined in 41.7.1, then the caution and warning in 41.7.3 shall be dispensed with. The umpire shall

- immediately call and signal No ball.
- when the ball is dead, direct the captain of the fielding side to suspend the bowler

immediately from bowling and inform the other umpire for the reason for this action.

The bowler thus suspended shall not be allowed to bowl again in that innings.

If applicable, the over shall be completed by another bowler, who shall neither have bowled any part of the previous over, nor be allowed to bowl any part of the next over.

- report the occurrence to the batters and, as soon as practicable, to the captain of the batting side.

ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

೪೧.೭.೫ ೪೧.೭.೩ ಮತ್ತು ೪೧.೭.೪ ರಲ್ಲಿಯ ಎಚ್ಚರಿಕೆಯ ಕ್ರಮಗಳು ೪೧.೬ ರಲ್ಲಿಯ ಎಚ್ಚರಿಕೆ ಮತ್ತು ಕ್ರಮಗಳಿಂದ ಸ್ವತಂತ್ರವಾಗಿರುತ್ತವೆ.

೪೧.೭.೬ ಬೌಲರನು ಉದ್ದೇಶಪೂರ್ವಕವಾಗಿ ಪುಟಿಗೆ ಇಲ್ಲದ ಎಸೆತವನ್ನು ಮಾಡಿದ್ದಾನೆ ಹಾಗೂ ಇದು ೪೧.೭.೧ರಲ್ಲಿ ತಿಳಿಸಿರುವಂತೆ ಅಪಾಯಕಾರಿ ಮತ್ತು ನಿಯಮಬಾಹಿರ ಎಸೆತ ಎಂದು ಅಂಪೈರ್ ಪರಿಗಣಿಸಿದರೆ, ೪೧.೭.೩ರಲ್ಲಿ ತಿಳಿಸಿರುವ ಎಚ್ಚರಿಕೆಯ ವಿಧಾನವನ್ನು ಅನುಸರಿಸದೆ ಅಂಪೈರ್

- ನೋ ಬಾಲ್ ಕರೆದು ಸನ್ನೆ ಮಾಡಬೇಕು.
- ಚೆಂಡು ಡೆಡ್ ಆದಮೇಲೆ , ಆ ಬೌಲರನನ್ನು ಕೂಡಲೇ ಅಮಾನತ್ತುಗೊಳಿಸಲು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಿರ್ದೇಶಿಸಬೇಕು ಮತ್ತು ಮತ್ತೊಬ್ಬ ಅಂಪೈರ್‌ಗೆ ಕ್ರಮದ ಕಾರಣವನ್ನು ತಿಳಿಸಬೇಕು.

ಈ ರೀತಿಯಾಗಿ ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ.

ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು.

ಇವುಗಳ ಜೊತೆಗೆ ಅಂಪೈರ್

| | |
|---|---|
| The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.8 Bowling of deliberate front-foot No ball**<br>If the umpire considers that the bowler has delivered a deliberate front-foot No ball, he/she shall<br>- immediately call and signal No ball.<br>- when the ball is dead, direct the captain of the fielding side to suspend the bowler<br>immediately from bowling<br>- inform the other umpire for the reason for this action.<br>The bowler thus suspended shall not be allowed to bowl again in that innings. | **೪೧.೮ ಉದ್ದೇಶಪೂರಿತ ಮುಂದಿನ ಪಾದದ ನೋ ಬಾಲ್**<br>ಬೌಲರ್ ಉದ್ದೇಶಪೂರ್ವಕವಾಗಿ ಮುಂದಿನ ಪಾದದ ನೋ ಬಾಲ್ ಮಾಡಿದ್ದಾನೆ/ಮಾಡಿದ್ದಾಳೆ ಎಂದು ಅಂಪೈರ್ ಪರಿಗಣಿಸಿದರೆ, ಅವನು/ಅವಳು<br>➢ ನೋ ಬಾಲ್ ಕರೆದು ಸನ್ನೆ ಮಾಡಬೇಕು.<br>➢ ಚೆಂಡು ಡೆಡ್ ಆದಮೇಲೆ , ಆ ಬೌಲರನನ್ನು ಕೂಡಲೇ ಅಮಾನತ್ತುಗೊಳಿಸಲು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಿರ್ದೇಶಿಸಬೇಕು ಮತ್ತು ಮತ್ತೊಬ್ಬ ಅಂಪೈರ್‌ಗೆ ಕ್ರಮದ ಕಾರಣವನ್ನು ತಿಳಿಸಬೇಕು.<br>ಈ ರೀತಿಯಾಗಿ ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ. |

| | |
|---|---|
| If applicable, the over shall be completed by another bowler, who shall neither have bowled any part of the previous over, nor be allowed to bowl any part of the next over.<br>- report the occurrence to the batters and, as soon as practicable, to the captain of the batting side.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು.<br>➢ ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.9 Time wasting by the fielding side**<br>41.9.1 It is unfair for any fielder to waste time.<br>41.9.2 If either umpire considers that the progress of an over is unnecessarily slow, or time is being wasted in any other way, by the captain of the fielding side or by any other fielder, at the first instance the umpire concerned shall,<br>- if the ball is in play, call and signal Dead ball. | **೪೧.೯ ಕ್ಷೇತ್ರ ರಕ್ಷಣೆ ತಂಡದಿಂದ ಕಾಲಹರಣ**<br>೪೧.೯.೧ ಯಾವುದೇ ಕ್ಷೇತ್ರ ರಕ್ಷಕ ಕಾಲ ಹರಣ ಮಾಡುವುದು ನಿಯಮಬಾಹಿರ.<br>೪೧.೯.೨ ಪ್ರಗತಿಯಲ್ಲಿರುವ ಓವರ್ ಅನಾವಶ್ಯಕವಾಗಿ ಮಂದಗತಿಯಲ್ಲಿ ಸಾಗುತ್ತಿದೆ ಅಥವಾ ಯಾವುದೇ ಇತರ ವಿಧಾನದ ಮೂಲಕ ಕ್ಷೇತ್ರ ರಕ್ಷಣೆ ತಂಡದ ನಾಯಕ ಅಥವಾ ಯಾವುದೇ ಕ್ಷೇತ್ರ ರಕ್ಷಕ ಕಾಲಹರಣ ಮಾಡುತ್ತಿದ್ದಾರೆ ಎಂದು ಯಾವುದೇ ಅಂಪೈರ್ |

| | |
|---|---|
| - inform the other umpire of what has occurred.<br>The bowler's end umpire shall then<br>- warn the captain of the fielding side, indicating that this is a first and final warning.<br>- inform the batters of what has occurred. | ಪರಿಗಣಿಸಿದರೆ, ಮೊದಲನೆಯ ಸಂದರ್ಭದಲ್ಲಿ, ಸಂಬಂಧಿತ ಅಂಪೈರ್<br>➢ ಚೆಂಡು ಆಟದಲ್ಲಿದ್ದರೆ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು.<br>➢ ನಡೆದ ಘಟನೆಯ ಬಗ್ಗೆ ಇನ್ನೊಬ್ಬ ಅಂಪೈರ್‌ಗೆ ತಿಳಿಸಬೇಕು.<br>ಆಮೇಲೆ ಬೌಲರ್ ತುದಿಯ ಅಂಪೈರ್<br>➢ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮೊದಲ ಹಾಗೂ ಅಂತಿಮ ಎಚ್ಚರಿಕೆ ನೀಡಬೇಕು.<br>➢ ದಾಂಡಿಗರಿಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು. |
| 41.9.3 If either umpire considers that there is any further waste of time in that innings by any fielder, the umpire concerned shall,<br>- if the ball is in play, call and signal Dead ball.<br>- inform the other umpire of what has occurred.<br>The bowler's end umpire shall then<br>either, if the waste of time is not during an over, award 5 Penalty runs to the batting side and inform the captain of the fielding side of the reason for this action.<br>or, if the waste of time is during the course of an over, direct the captain of the fielding side to suspend the bowler immediately from bowling. | ೪೧.೯.೩ ಅದೇ ಸರದಿಯಲ್ಲಿ ಪುನಃ ಯಾವುದೇ ದಾಂಡಿಗ ಕಾಲಹರಣ ಮಾಡುತ್ತಿದ್ದಾನೆ /ಮಾಡುತ್ತಿದ್ದಾಳೆ ಎಂದು ಯಾವುದೇ ಅಂಪೈರ್ ಪರಿಗಣಿಸಿದರೆ, ಸಂಬಂಧಿತ ಅಂಪೈರ್<br>➢ ಚೆಂಡು ಆಟದಲ್ಲಿದ್ದರೆ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು.<br>➢ ನಡೆದ ಘಟನೆಯ ಬಗ್ಗೆ ಇನ್ನೊಬ್ಬ ಅಂಪೈರ್‌ಗೆ ತಿಳಿಸಬೇಕು.<br>ಆಮೇಲೆ ಬೌಲರ್ ತುದಿಯ ಅಂಪೈರ್;<br>ಕಾಲಹರಣವು ಓವರ್ ಪ್ರಗತಿಯಲ್ಲಿರುವಾಗ ಆಗಿರದಿದ್ದರೆ, ದಾಂಡಿಗ ತಂಡಕ್ಕೆ ೫ ದಂಡದ ಓಟಗಳನ್ನು ಅನುದಾನಿಸಬೇಕು ಮತ್ತು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು. |

The bowler thus suspended shall not be allowed to bowl again in that innings.

If applicable, the over shall be completed by another bowler, who shall neither have bowled any part of the previous over, nor be allowed to bowl any part of the next over.

Additionally, the umpire shall inform the batters and as soon as is practicable, the captain of the batting side of what has occurred.

The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team.

ಅಥವಾ ಕಾಲಹರಣವು ಓವರ್ ಪ್ರಗತಿಯಲ್ಲಿರುವಾಗ ಆದರೆ ಆ ಬೌಲರ್‌ನನ್ನು ಕೂಡಲೇ ಬೌಲಿಂಗ್‌ನಿಂದ ಅಮಾನತ್ತುಗೊಳಿಸಲು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಿರ್ದೇಶಿಸಬೇಕು

ಈ ರೀತಿಯಾಗಿ ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ.

ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು.

- ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.

ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

| | |
|---|---|
| **41.10 Batter wasting time** | **೪೧.೧೦ ದಾಂಡಿಗ ಕಾಲಹರಣ ಮಾಡುವುದು** |
| 41.10.1 It is unfair for a batter to waste time. In normal circumstances, the striker should always be ready to take strike when the bowler is ready to start his/her run-up. | ೪೧.೧೦.೧ ಯಾವುದೇ ದಾಂಡಿಗನು ಕಾಲಹರಣ ಮಾಡುವುದು ನಿಯಮಬಾಹಿರ. ಸಹಜ ಸಂದರ್ಭಗಳಲ್ಲಿ ಬೌಲರ್ ತನ್ನ ಓಟವನ್ನು ಪ್ರಾರಂಭಿಸಲು ಸಿದ್ಧನಿದ್ದಾಗ ಚೆಂಡನ್ನೆದುರಿಸಲು ಸಿದ್ಧನಾಗಿರಬೇಕು. |
| 41.10.2 Should either batter waste time by failing to meet this requirement, or in any other way, the following procedure shall be adopted. At the first instance, either before the bowler starts his/her run-up or when the ball becomes dead, as appropriate, the umpire shall<br>- warn both batters and indicate that this is a first and final warning. This warning shall apply throughout the innings. The umpire shall so inform each incoming batter.<br>- inform the other umpire of what has occurred.<br>- inform the captain of the fielding side and, as soon as practicable, the captain of the batting side of what has occurred. | ೪೧.೧೦.೨ ಯಾವುದೇ ದಾಂಡಿಗನು ಈ ಅಗತ್ಯತೆಯನ್ನು ಪಾಲಿಸದೆ ಅಥವಾ ಬೇರಾವುದೇ ವಿಧಾನದಿಂದ ಕಾಲಹರಣ ಮಾಡಿದರೆ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕು. ಮೊದಲ ಸಲ, ಬೌಲರ್ ತನ್ನ ಓಟವನ್ನು ಪ್ರಾರಂಭಿಸುವ ಮೊದಲು ಅಥವಾ ಚೆಂಡು ಡೆಡ್ ಆದ ಕೂಡಲೇ, ಯಾವುದು ಸೂಕ್ತವೋ ಹಾಗೇ, ಅಂಪೈರ್<br>➢ ಇಬ್ಬರೂ ದಾಂಡಿಗರಿಗೆ ಇದು ಮೊದಲ ಹಾಗೂ ಅಂತಿಮ ಎಚ್ಚರಿಕೆ ಎಂದು ತಿಳಿಸಬೇಕು. ಈ ಎಚ್ಚರಿಕೆಯು ಇಡೀ ಸರದಿಯುದ್ದಕ್ಕೂ ಅನ್ವಯಿಸುತ್ತದೆ. ಇದರ ಬಗ್ಗೆ ಆಡಲು ಬರುವ ಪ್ರತಿಯೊಬ್ಬ ದಾಂಡಿಗನಿಗೆ ತಿಳಿಸಬೇಕು.<br>➢ ಇನ್ನೊಬ್ಬ ಅಂಪೈರ್‌ಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು.<br>➢ ಘಟನೆಯ ಬಗ್ಗೆ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು. |
| 41.10.3 If there is any further time wasting by any batter in that innings, the umpire shall, at the appropriate time while the ball is dead<br>- award 5 Penalty runs to the fielding side. | ೪೧.೧೦.೩ ಅದೇ ಸರದಿಯಲ್ಲಿ ಪುನಃ ಯಾವುದೇ ದಾಂಡಿಗ ಮತ್ತಷ್ಟು ಕಾಲಹರಣ ಮಾಡಿದರೆ, ಸೂಕ್ತ ಸಮಯದಲ್ಲಿ ಅಂಪೈರ್ ಚೆಂಡು ಡೆಡ್ ಆದಮೇಲೆ |

| | |
|---|---|
| - inform the other umpire of the reason for this action.<br>- inform the other batter, the captain of the fielding side and, as soon as practicable, the captain of the batting side of what has occurred.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ಕ್ಷೇತ್ರ ರಕ್ಷಣೆ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಈ ಕ್ರಮದ ಬಗ್ಗೆ ಇನ್ನೊಬ್ಬ ಅಂಪೈರ್‌ಗೆ ತಿಳಿಸಬೇಕು.<br>➢ ನಡೆದ ಘಟನೆಯ ಬಗ್ಗೆ ಇನ್ನೊಬ್ಬ ದಾಂಡಿಗನಿಗೆ**,** ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು**,** ತಂಡದ ನಾಯಕ**,** ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.11 The protected area**<br>The protected area is defined as that area of the pitch contained within a rectangle bounded at each end by imaginary lines parallel to the popping creases and 5 ft/1.52 m in front of each, and on the sides by imaginary lines, one each side of the imaginary line joining the centres of the two middle stumps, each parallel to it and 1 ft/30.48 cm from it. | **೪೧.೧೧ ಕಾಪಾಡುವ ಜಾಗ (ಪ್ರೊಟೆಕ್ಟೆಡ್ ಏರಿಯಾ)**<br>ಕಾಪಾಡಬೇಕಾದ ಅಂಕಣದ ಭಾಗವು**,** ಎರಡೂ ತುದಿಯ ಪಾಪಿಂಗ್ ರೇಖೆಯಿಂದ ೫ ಅಡಿ / ೧.೫೨ ಮೀ. ಮುಂದೆ ಅದಕ್ಕೆ ಸಮಾನಾಂತರದಲ್ಲಿ ಕಾಲ್ಪನಿಕವಾಗಿ ಎಳೆದ ಗೆರೆಯ ಹಾಗೂ ಬಾಜುಗಳಲ್ಲಿ ಮಧ್ಯದ ಘೂಟಗಳನ್ನು ಜೋಡಿಸುವ ಕಾಲ್ಪನಿಕ ಗೆರೆಯ ಎರಡೂ ಬದಿಗೆ ೧ ಅಡಿ/೩೦.೪೮ ಸೇ. ಮೀ. ದೂರದಲ್ಲಿ ಎಳೆದ ಕಾಲ್ಪನಿಕ ಗೆರೆಯ ಮಧ್ಯದ ಆಯತಾಕಾರದ ಜಾಗ. |

**41.12 Fielder damaging the pitch**

41.12.1 It is unfair to cause deliberate or avoidable damage to the pitch. A fielder will be deemed to be causing avoidable damage if either umpire considers that his/her presence on the pitch is without reasonable cause.

41.12.2 If a fielder causes avoidable damage to the pitch, other than as in 41.13.1, at the first instance the umpire seeing the contravention shall, when the ball is dead, inform the other umpire. The bowler's end umpire shall then

- caution the captain of the fielding side and indicate that this is a first and final warning. This warning shall apply throughout the innings.
- inform the batters of what has occurred.

41.12.3 If, in that innings, there is any further instance of avoidable damage to the pitch, by any fielder, the umpire seeing the contravention shall, when the ball is dead, inform the other umpire. The bowler's end umpire shall then

**೪೧.೧೨ ಕ್ಷೇತ್ರ ರಕ್ಷಕನು ಅಂಕಣವನ್ನು ಹಾಳುಮಾಡುವುದು.**

೪೧.೧೨.೧ ಉದ್ದೇಶಪೂರ್ವಕವಾಗಿ ಅಥವಾ ತಪ್ಪಿಸಬಹುದಾಗಿದ್ದರೂ ಅಂಕಣವನ್ನು ಹಾಳುಮಾಡಿದರೆ ಅದು ನಿಯಮಬಾಹಿರ. ಯಾರಾದರೊಬ್ಬ ಅಂಪೈರ್ ಕ್ಷೇತ್ರ ರಕ್ಷಕನೊಬ್ಬನು ಕಾರಣವಿಲ್ಲದೆ ಅಂಕಣದಮೇಲೆ ಬಂದಿದ್ದಾನೆಂದು ಪರಿಗಣಿಸಿದರೆ, ಅವನು ತಪ್ಪಿಸಬಹುದಾಗಿದ್ದರೂ ಹಾಳುಮಾಡುತ್ತಿದ್ದಾನೆಂದು ಪರಿಗಣಿಸಬೇಕು.

೪೧.೧೨.೨ ೪೧.೧೩.೧ರಲ್ಲಿರುವುದನ್ನು ಹೊರತುಪಡಿಸಿ, ಇತರ ಯಾವುದೇ ರೀತಿಯಲ್ಲಿ ಕ್ಷೇತ್ರ ರಕ್ಷಕನೊಬ್ಬನು ಅಂಕಣವು ಹಾಳಾಗುವುದನ್ನು ತಪ್ಪಿಸಬಹುದಾಗಿದ್ದರೂ, ಹಾಳಾಗುವುದಕ್ಕೆ ಕಾರಣವಾದರೆ, ಮೊದಲ ಸಂದರ್ಭದಲ್ಲಿ, ಉಲ್ಲಂಘನೆಯನ್ನು ನೋಡಿದ ಅಂಪೈರ್ , ಚೆಂಡು ಡೆಡ್ ಆದನಂತರ ಇನ್ನೊಬ್ಬ ಅಂಪೈರ್‌ಗೆ ತಿಳಿಸಬೇಕು. ಆವಾಗ ಬೌಲರ್ ತುದಿಯ ಅಂಪೈರ್

- ➢ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಎಚ್ಚರಿಕೆ ನೀಡಿ, ಇದು ಮೊದಲ ಮತ್ತು ಅಂತಿಮ ಎಚ್ಚರಿಕೆ ಎಂದು ತಿಳಿಸಬೇಕು.
- ➢ ನಡೆದ ಘಟನೆಯ ಬಗ್ಗೆ ದಾಂಡಿಗರಿಗೆ ತಿಳಿಸಬೇಕು.

೪೧.೧೨.೩ ಆ ಸರದಿಯಲ್ಲಿ ಪುನಃ ಯಾವುದೇ ಕ್ಷೇತ್ರ ರಕ್ಷಕನೊಬ್ಬನು ಅಂಕಣವು ಹಾಳಾಗುವುದನ್ನು ತಪ್ಪಿಸಬಹುದಾಗಿದ್ದರೂ, ಹಾಳಾಗುವುದಕ್ಕೆ ಕಾರಣನಾದರೆ, ಈ ಉಲ್ಲಂಘನೆಯನ್ನು ನೋಡಿದ ಅಂಪೈರ್, ಚೆಂಡು ಡೆಡ್ ಆದಮೇಲೆ ಇನ್ನೊಬ್ಬ ಅಂಪೈರ್‌ಗೆ ತಿಳಿಸಬೇಕು. ಆವಾಗ, ಬೌಲರ್ ತುದಿಯ ಅಂಪೈರ್

| | |
|---|---|
| - signal No ball or Wide to the scorers, if applicable.<br><br>- award 5 Penalty runs to the batting side.<br><br>- award any other 5 run Penalty that is applicable.<br><br>- inform the fielding captain of the reason for this action.<br><br>- inform the batters and, as soon as practicable, the captain of the batting side of what has occurred.<br><br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ಅನ್ವಯವಾದಲ್ಲಿ ನೋ ಬಾಲ್ ಇಲ್ಲವೇ ವೈಡ್ ಬಾಲ್ ಸನ್ನೆ ಸ್ಕೋರರಿಗೆ ಮಾಡಬೇಕು.<br>➢ ದಾಂಡಿಗ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಬೇರಾವುದೇ ದಂಡದ ೫ ಓಟಗಳನ್ನು ಅನ್ವಯವಾದರೆ ಅನುದಾನಿಸಬೇಕು.<br>➢ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಕೈಕೊಂಡ ಕ್ರಮದ ಕಾರಣ ತಿಳಿಸಬೇಕು.<br>➢ ನಡೆದ ಘಟನೆಯ ಬಗ್ಗೆ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.13 Bowler running on protected area**<br>41.13.1 It is unfair for a bowler to enter the protected area in his/her follow-through without reasonable cause, whether or not the ball is delivered. | **೪೧.೧೩ ಬೌಲರ್ ಕಾಪಾಡುವ ಜಾಗದಲ್ಲಿ ಓಡುವುದು**<br>೪೧.೧೩.೧ ಬೌಲರ್ ಚೆಂಡನ್ನು ಬೌಲ್ ಮಾಡಿರಲಿ ಅಥವಾ ಇಲ್ಲದಿರಲಿ, ಅಗತ್ಯ ಕಾರಣವಿಲ್ಲದೆ, ಅವನ / ಅವಳ ಫಾಲೊ ಥ್ರೂ ನಲ್ಲಿ ಕಾಪಾಡುವ ಜಾಗದ ಮೇಲೆ ಬರುವುದು ನಿಯಮ ಬಾಹಿರ. |

| | |
|---|---|
| 41.13.2 If a bowler contravenes this Law, at the first instance and when the ball is dead, the umpire shall,<br>- caution the bowler and inform the other umpire of what has occurred. This caution shall apply to that bowler throughout the innings.<br>- inform the captain of the fielding side and the batters of what has occurred. | ೪೧.೧೩.೨ ಬೌಲರ್ ಈ ನಿಯಮವನ್ನು ಮೊದಲ ಸಲ ಉಲ್ಲಂಘಿಸಿದಾಗ, ಚೆಂಡು ಡೆಡ್ ಆದ ನಂತರ, ಅಂಪೈರ್;<br>➢ ಬೌಲರನಿಗೆ ಎಚ್ಚರಿಕೆ ನೀಡಬೇಕು ಮತ್ತು ನಡೆದ ಘಟನೆಯ ಬಗ್ಗೆ ಮತ್ತೊಬ್ಬ ಅಂಪೈರ್‌ಗೆ ತಿಳಿಸಬೇಕು. ಈ ಎಚ್ಚರಿಕೆ ಇಡೀ ಸರದಿಗೆ ಅನ್ವಯವಾಗುತ್ತದೆ.<br>➢ ನಡೆದ ಘಟನೆಯ ಬಗ್ಗೆ ದಾಂಡಿಗರಿಗೆ ಮತ್ತು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ತಿಳಿಸಬೇಕು. |
| 41.13.3 If, in that innings, the same bowler again contravenes this Law, the umpire shall repeat the above procedure indicating that this is a final warning. This warning shall also apply throughout the innings. | ೪೧.೧೩.೩ ಆ ಸರದಿಯಲ್ಲಿ ಅದೇ ಬೌಲರ್ ಪುನಃ ಈ ನಿಯಮವನ್ನು ಉಲ್ಲಂಘಿಸಿದರೆ, ಮೇಲೆ ತಿಳಿಸಿದ ಕ್ರಮಗಳನ್ನು ಪುನರಾವರ್ತಿಸಿ ಇದು ಅಂತಿಮ ಎಚ್ಚರಿಕೆ ಎಂದು ತಿಳಿಸಬೇಕು. ಈ ಎಚ್ಚರಿಕೆ ಇಡಿ ಸರದಿಗೆ ಅನ್ವಯವಾಗುತ್ತದೆ. |
| 41.13.4 If, in that innings, the same bowler contravenes this Law a third time, when the ball is dead, the umpire shall,<br>- direct the captain of the fielding side to suspend the bowler immediately from bowling. If applicable, the over shall be completed by another bowler, who shall neither have bowled any part of the previous over, nor be allowed to bowl any part of the next over. The bowler thus suspended shall not be allowed to bowl again in that innings.<br>- inform the other umpire of the reason for this action. | ೪೧.೧೩.೪ ಅದೇ ಸರದಿಯಲ್ಲಿ ಅದೇ ಬೌಲರ್ ಮೂರನೆಯ ಸಲ ಉಲ್ಲಂಘಿಸಿದರೆ, ಚೆಂಡು ಡೆಡ್ ಆದ ನಂತರ, ಅಂಪೈರ್;<br>➢ ಆ ಬೌಲರನನ್ನು ಕೂಡಲೇ ಅಮಾನತ್ತುಗೊಳಿಸಲು ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ನಿರ್ದೇಶಿಸಬೇಕು ಮತ್ತು ಅಗತ್ಯವಿದ್ದಲ್ಲಿ, ಇನ್ನೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಈ ಇನ್ನೊಬ್ಬ ಬೌಲರ್ ಹಿಂದಿನ ಓವರಿನ ಯಾವುದೇ ಭಾಗ ಮಾಡಿರಬಾರದು ಅಥವಾ ಮುಂದಿನ ಓವರ್ ಮಾಡಲು ಅನುಮತಿ ಕೊಡಬಾರದು. ಈ ರೀತಿಯಾಗಿ ಅಮಾನತ್ತುಗೊಂಡ ಬೌಲರ್ ಆ ಸರದಿಯಲ್ಲಿ ಮತ್ತೆ ಬೌಲ್ ಮಾಡುವಂತಿಲ್ಲ.<br>➢ ಮತ್ತೊಬ್ಬ ಅಂಪೈರ್‌ಗೆ ಕ್ರಮದ ಕಾರಣವನ್ನು ತಿಳಿಸಬೇಕು. |

| | |
|---|---|
| - inform the batters and, as soon as practicable, the captain of the batting side of what has occurred.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ತೆಗೆದುಕೊಂಡ ಕ್ರಮದ ಕಾರಣವನ್ನು ವಿಕೆಟ್ ಬಳಿ ಇರುವ ದಾಂಡಿಗರಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.14 Batter damaging the pitch,**<br>41.14.1 It is unfair to cause deliberate or avoidable damage to the pitch. If the striker enters the protected area in playing or playing at the ball, he/she must move from it immediately thereafter. A batter will be deemed to be causing avoidable damage if either umpire considers that his/her presence on the pitch is without reasonable cause.<br><br>41.14.2 If either batter causes deliberate or avoidable damage to the pitch, other than as in 41.15, at the first instance | ೪೧.೧೪ **ದಾಂಡಿಗನು ಆಟದ ಪಟ್ಟಿಯನ್ನು ಹಾಳುಮಾಡುವುದು**<br>೪೧.೧೪.೧ ಉದ್ದೇಶಪೂರ್ವಕವಾಗಿ ಅಥವಾ ತಪ್ಪಿಸಬಹುದಾಗಿದ್ದರೂ ಅಂಕಣವನ್ನು ಹಾಳುಮಾಡಿದರೆ ಅದು ನಿಯಮಬಾಹಿರ. ಚೆಂಡನ್ನೆದುರಿಸುವ ದಾಂಡಿಗನು ಚೆಂಡನ್ನು ಆಡುವಾಗ ಇಲ್ಲವೇ ಆಡಲು ಅಂಕಣದ ಕಾಪಾಡಬೇಕಾದ ಜಾಗವನ್ನು ಪ್ರವೇಶಿಸಿದರೆ, ತದನಂತರ ಕೂಡಲೇ ಆ ಜಾಗದಿಂದ ಸರಿಯಬೇಕು, ಯಾರಾದರೊಬ್ಬ ಅಂಪೈರ್ ದಾಂಡಿಗನು ಕಾರಣವಿಲ್ಲದೆ ಅಂಕಣದಮೇಲೆ ಬಂದಿದ್ದಾನೆಂದು ಪರಿಗಣಿಸಿದರೆ, ಅವನು/ಅವಳು ತಪ್ಪಿಸಬಹುದಾಗಿದ್ದರೂ ಹಾಳುಮಾಡುತ್ತಿದ್ದಾನೆಂದು ಪರಿಗಣಿಸಬೇಕು.<br>೪೧.೧೪.೨ ೪೧.೧೫ನ್ನು ಹೊರತುಪಡಿಸಿ, ಯಾರಾದರೊಬ್ಬ ದಾಂಡಿಗನು ಉದ್ದೇಶ ಪೂರ್ವಕವಾಗಿ ಅಥವಾ ತಪ್ಪಿಸಬಹುದಾಗಿದ್ದರೂ ಅಂಕಣವನ್ನು ಮೊದಲ |

the umpire seeing the contravention shall, when the ball is dead, inform the other umpire of the occurrence. The bowler's end umpire shall then

- warn both batters that the practice is unfair and indicate that this is a first and final warning. This warning shall apply throughout the innings. The umpire shall so inform each incoming batter.
- inform the captain of the fielding side and, as soon as practicable, the captain of the batting side of what has occurred.

41.14.3 If there is any further instance of deliberate or avoidable damage to the pitch by any batter in that innings, the umpire seeing the contravention shall, when the ball is dead, inform the other umpire of the occurrence.

The bowler's end umpire shall

- disallow all runs to the batting side
- return any not out batter to his/her original end
- signal No ball or Wide to the scorers if applicable.
- award 5 Penalty runs to the fielding side.

ಸಲ ಹಾಳುಮಾಡಿದರೆ, ಈ ಕೃತ್ಯವನ್ನು ನೋಡಿದ ಅಂಪೈರ್ ಚೆಂಡು ಡೆಡ್ ಆದ ಮೇಲೆ ಮತ್ತೊಬ್ಬ ಅಂಪೈರ್‌ಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು. ತದನಂತರ ಬೌಲರ್ ತುದಿಯ ಅಂಪೈರ್,

- ಇಬ್ಬರೂ ದಾಂಡಿಗರಿಗೆ ಇದು ನಿಯಮ ಬಾಹಿರ ಎಂದು ತಿಳಿಸಿ ಇದು ಮೊದಲ್ ಮತ್ತು ಕೊನೆಯ ಎಚ್ಚರಿಕೆ ಎಂದು ತಿಳಿಸಬೇಕು. ಈ ಎಚ್ಚರಿಕೆ ಆ ಸರದಿಗೆ ಅನ್ವಯವಾಗುತ್ತದೆ. ಅಂಪಯರ್ ಮುಂದೆ ಬರುವ ಎಲ್ಲ ದಾಂಡಿಗರಿಗೂ ಈ ಎಚ್ಚರಿಕೆಯ ಬಗ್ಗೆ ತಿಳಿಸಬೇಕು.
- ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕೈಕೊಂಡ ಕ್ರಮದ ಕಾರಣ ತಿಳಿಸಬೇಕು.

೪೧.೧೪.೩ ಆ ಸರದಿಯಲ್ಲಿ ಮತ್ತೊಮ್ಮೆ ಯಾವುದೇ ದಾಂಡಿಗನು ಉದ್ದೇಶ ಪೂರ್ವಕವಾಗಿ ತಪ್ಪಿಸಬಹುದಾಗಿದ್ದರೂ ಸಹ ಅಂಕಣವನ್ನು ಹಾಳುಮಾಡಿದರೆ, ಈ ಕೃತ್ಯವನ್ನು ನೋಡಿದ ಅಂಪೈರ್ ಚೆಂಡು ಡೆಡ್ ಆದ ಮೇಲೆ ಮತ್ತೊಬ್ಬ ಅಂಪೈರ್‌ಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು. ತದನಂತರ ಬೌಲರ್ ತುದಿಯ ಅಂಪೈರ್,

- ದಾಂಡಿಗ ತಂಡದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು.
- ಔಟ್ ಆಗದೆ ಇರುವ ದಾಂಡಿಗನನ್ನು ಅವನ/ಅವಳ ಮೂಲ ಜಾಗಕ್ಕೆ ಹಿಂತಿರುಗಿಸಬೇಕು.
- ಅನ್ವಯವಾದಲ್ಲಿ ನೋ ಬಾಲ್ ಇಲ್ಲವೇ ವೈಡ್ ಬಾಲ್ ಸನ್ನೆ ಸ್ಕೋರರಿಗೆ ಮಾಡಬೇಕು.
- ಕ್ಷೇತ್ರ ರಕ್ಷಣೆ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.

| | |
|---|---|
| ➢ award any other 5-run Penalty that is applicable except for Penalty runs under Law 28.3 (Protective helmets belonging to the fielding side).<br>➢ Inform the captain of the fielding side and, as soon as practicable, the captain of the batting side of the reason for this action.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ನಿಯಮ ೨೮.೩ (ಕ್ಷೇತ್ರ ರಕ್ಷಣೆ ತಂಡದ ಸುರಕ್ಷಾ ಶಿರಸ್ತ್ರಾಣ)ರ ಹೊರತಾಗಿ ಬೇರಾವುದೇ ದಂಡದ ೫ ಓಟಗಳನ್ನು ಅನ್ವಯವಾದರೆ ಅನುದಾನಿಸಬೇಕು.<br>➢ ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕೈಕೊಂಡ ಕ್ರಮದ ಕಾರಣ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.15 Striker in protected area**<br>41.15.1 The striker shall not adopt a batting position in the protected area or so close to it that frequent encroachment is inevitable.<br><br>The striker may mark a guard on the pitch provided that no mark is unreasonably close to the protected area. | **೪೧.೧೫ ಕಾಪಾಡಬೇಕಾದ ಜಾಗದ ಮೇಲೆ ಚೆಂಡನ್ನೆದುರಿಸುವ ದಾಂಡಿಗ**<br>೪೧..೧೫.೧ ಚೆಂಡನ್ನೆದುರಿಸುವ ದಾಂಡಿಗನು ಕಾಪಾಡಬೇಕಾದ ಜಾಗದ ಮೇಲೆ ಇಲ್ಲವೇ ಅದಕ್ಕೆ ಅತೀ ಸಮೀಪದಲ್ಲಿ, ಪದೇ ಪದೇ ಆ ಜಾಗದಲ್ಲಿ ಬರುವಂತಾಗುವಂತಹ ಜಾಗದಲ್ಲಿ, ಚೆಂಡನ್ನೆದುರಿಸುವ ಸ್ಥಾನದಲ್ಲಿ ನಿಲ್ಲಬಾರದು.<br>ಚೆಂಡನ್ನೆದುರಿಸುವ ದಾಂಡಿಗನು ಅಂಕಣದ ಮೇಲೆ ತಾನು ಎಲ್ಲಿ ನಿಲ್ಲಬೇಕೆಂದು (ಗಾರ್ಡ್) ಗುರುತಿಸಿಕೊಳ್ಳಲು ಗೆರೆಯನ್ನು |

41.15.2 If there is breach of any of the conditions in 41.15.1 by the striker, the umpire seeing the contravention shall, if the bowler has not entered his/her delivery stride, immediately call and signal Dead ball, otherwise, he/she shall wait until the ball is dead and then inform the other umpire of the occurrence.

The bowler's end umpire shall then

- warn the striker that the practice is unfair and indicate that this is a first and final warning. This warning shall apply throughout the innings. The umpire shall so inform the non-striker and each incoming batter.
- inform the captain of the fielding side and, as soon as practicable, the captain of the batting side of what has occurred.

41.15.3 If there is any further breach of any of the conditions in 41.15.1 by any batter in that innings, the umpire seeing

ಹಾಕಬಹುದು. ಆದರೆ ಇದು ಕಾಪಾಡಬೇಕಾದ ಜಾಗಕ್ಕೆ ಅತೀ ಸಮೀಪದಲ್ಲಿ ಇರಬಾರದು.

೪೧.೧೫.೨ ಚೆಂಡನ್ನೆದುರಿಸುವ ದಾಂಡಿಗನು ೧೪.೧೫.೧ರಲ್ಲಿಯ ಯಾವುದೇ ಷರತ್ತನ್ನು ಉಲ್ಲಂಘಿಸಿದಾಗ ಅದನ್ನು ನೋಡಿದ ಯಾವುದೇ ಅಂಪೈರ್, ಬೌಲರ್ ತನ್ನ ಬೌಲ್ ಮಾಡುವ ಶೈಲಿಯಲ್ಲಿಯ ಕೊನೆಯ ಎರಡು ಹೆಜ್ಜೆಗಳನ್ನು ಇಟ್ಟಿರದಿದ್ದರೆ, ಕೂಡಲೇ "ಡೆಡ್ ಬಾಲ್" ಎಂದು ಕರೆದು ಸನ್ನೆ ಮಾಡಬೇಕು. ಇಲ್ಲವಾದಲ್ಲಿ ಬಾಲ್ ಡೆಡ್ ಆಗುವವರೆಗೆ ಕಾದು, ಮತ್ತೊಬ್ಬ ಅಂಪೈರ್‌ಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು.

ತದನಂತರ ಬೌಲರ್ ತುದಿಯ ಅಂಪೈರ್

- ಚೆಂಡನ್ನೆದುರಿಸುವ ದಾಂಡಿಗನಿಗೆ ಈ ನಡವಳಿಕೆ ನಿಯಮಬಾಹಿರ ಎಂದು ಎಚ್ಚರಿಸಿ ಇದು ಮೊದಲ ಮತ್ತು ಅಂತಿಮ ಎಚ್ಚರಿಕೆ ಎಂದು ತಿಳಿಸಬೇಕು. ಈ ಎಚ್ಚರಿಕೆ ಪೂರ್ತಿ ಸರದಿಗೆ ಅನ್ವಯವಾಗುತ್ತದೆ. ಅಂಪೈರ್ ಈ ಎಚ್ಚರಿಕೆಯ ಬಗ್ಗೆ ಮತ್ತೊಬ್ಬ ದಾಂಡಿಗನಿಗೆ ಮತ್ತು ಆಡಲು ಬರುವ ಪ್ರತಿಯೊಬ್ಬ ದಾಂಡಿಗನಿಗೆ ತಿಳಿಸಬೇಕು.
- ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಡೆದ ಘಟನೆಯ ಬಗ್ಗೆ ತಿಳಿಸಬೇಕು.

೪೧.೧೫.೩ ೧೪.೧೫.೧ ರಲ್ಲಿಯ ಷರತ್ತನ್ನು ಆ ಸರದಿಯಲ್ಲಿ ಮತ್ತೆ ಯಾವುದೇ ದಾಂಡಿಗನು ಉಲ್ಲಂಘಿಸಿದರೆ, ಆ ಉಲ್ಲಂಘನೆಯನ್ನು ನೋಡಿದ

the contravention shall, if the bowler has not entered his/her delivery stride, immediately call and signal Dead ball, otherwise, he/she shall wait until the ball is dead and then inform the other umpire of the occurrence.

The bowler’s end umpire shall then

- disallow all runs to the batting side
- return any not out batter to his/her original end
- signal No ball or Wide to the scorers if applicable.
- award 5 Penalty runs to the fielding side.
- award any other 5-run Penalty that is applicable except for Penalty runs under Law 28.3 (Protective helmets belonging to the fielding side).
- inform the captain of the fielding side and, as soon as practicable, the captain of the batting side of the reason for this action.

ಅಂಪೈರ್, ಬೌಲರ್ ತನ್ನ ಬೌಲ್ ಮಾಡುವ ಶೈಲಿಯಲ್ಲಿಯ ಕೊನೆಯ ಎರಡು ಹೆಜ್ಜೆಗಳನ್ನು ಇಟ್ಟಿರದಿದ್ದರೆ, ಕೂಡಲೇ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು. ಇಲ್ಲವಾದಲ್ಲಿ ಬಾಲ್ ಡೆಡ್ ಆಗುವವರೆಗೆ ಕಾದು, ನಡೆದ ಘಟನೆಯನ್ನು ಮತ್ತೊಬ್ಬ ಅಂಪೈರ್‌ಗೆ ನಡೆದ ಘಟನೆಯ ಬಗ್ಗೆ ತಿಳಿಸಬೇಕು.

ತದನಂತರ ಬೌಲರ್ ತುದಿಯ ಅಂಪೈರ್

- ದಾಂಡಿಗ ತಂಡದ ಎಲ್ಲ ಓಟಗಳನ್ನು ರದ್ದು ಪಡಿಸಬೇಕು.
- ಔಟ್ ಆಗದೇ ಇರುವ ದಾಂಡಿಗನನ್ನು ಅವನ/ಅವಳ ಮೂಲ ಜಾಗಕ್ಕೆ ಹಿಂತಿರುಗಿಸಬೇಕು.
- ಅನ್ವಯವಾದಲ್ಲಿ ನೋ ಬಾಲ್ ಇಲ್ಲವೇ ವೈಡ್ ಬಾಲ್ ಸನ್ನೆ ಸ್ಕೋರರಿಗೆ ಮಾಡಬೇಕು.
- ಕ್ಷೇತ್ರ ರಕ್ಷಣೆ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.
- ನಿಯಮ ೨೮.೩(ಕ್ಷೇತ್ರ ರಕ್ಷಣೆ ತಂಡದ ಸುರಕ್ಷಾ ಶಿರಸ್ತ್ರಾಣ)ರ ಹೊರತಾಗಿ ಬೇರಾವುದೇ ದಂಡದ ೫ ಓಟಗಳನ್ನು ಅನ್ವಯವಾದರೆ ಅನುದಾನಿಸಬೇಕು.
- ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕೈಕೊಂಡ ಕ್ರಮದ ಕಾರಣ ತಿಳಿಸಬೇಕು.

ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು

| | |
|---|---|
| The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team | ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.16 Batters stealing a run.**<br>It is unfair for the batters to attempt to steal a run during the bowler's run-up. Unless the bowler attempts to run out the non-striker – see Law 38.3 (Non-striker leaving his/her ground early) – the umpire shall,<br>- call and signal Dead ball as soon as the batters cross in such an attempt.<br>- inform the other umpire of the reason for this action. The bowler's end umpire shall then<br>- return the batters to their original ends and disallow the attempted run.<br>- award 5 Penalty runs to the fielding side.<br>- award any other 5 run Penalty that is applicable.<br>- inform the batters, the captain of the fielding side and, as soon as practicable, the captain of the | **೪೧.೧೬ ದಾಂಡಿಗರು ಓಟವನ್ನು ಕದಿಯುವುದು**<br>ದಾಂಡಿಗರು ಬೌಲರ್ ಚೆಂಡೆಸೆಯಲು ಓಡಿ ಬರುತ್ತಿರುವಾಗ ಓಟ ಕದಿಯಲು ಪ್ರಯತ್ನ ಮಾಡುವುದು ನಿಯಮ ಬಾಹಿರ. ಬೌಲರ್, ಬೌಲರ್ ತುದಿಯ ದಾಂಡಿಗನನ್ನು ರನ್ ಔಟ್ ಮಾಡಲು ಪ್ರಯತ್ನಿಸದ ಹೊರತು – ೩೮.೩ (ಚೆ0ಡನ್ನು ಎದುರಿಸದ ದಾ0ಡಿಗ ತನ್ನ ನಿಗದಿತ ಜಾಗದಿ0ದ ಹೊರಬರುವುದು) ಗಮನಿಸಿ – ಅಂಪೈರ್<br>➢ ದಾಂಡಿಗರು ಇಂತಹ ಪ್ರಯತ್ನದಲ್ಲಿ ಒಬ್ಬರನ್ನೊಬ್ಬರು ದಾಟಿದ ಕೂಡಲೇ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು.<br>➢ ಮತ್ತೊಬ್ಬ ಅಂಪೈರ್‌ಗೆ ತೆಗೆದುಕೊಂಡ ಕ್ರಮಕ್ಕೆ ಕಾರಣವನ್ನು ತಿಳಿಸಬೇಕು.<br>ತದನಂತರ ಬೌಲರ್ ತುದಿಯ ಅಂಪೈರ್<br>➢ ದಾಂಡಿಗರನ್ನು ತಮ್ಮ ತಮ್ಮ ಮೂಲ ಸ್ಥಾನಕ್ಕೆ ಹಿಂತಿರುಗಿಸಬೇಕು ಮತ್ತು ಓಡುತ್ತಿರುವ ಓಟವನ್ನು ಅಮಾನ್ಯಗೊಳಿಸಬೇಕು.. |

| | |
|---|---|
| batting side, of the reason for this action.<br>The umpires together shall report the occurrence as soon as possible after the match to the Executive of the offending side and to any Governing Body responsible for the match, who shall take such action as is considered appropriate against the captain, any other individuals concerned and, if appropriate, the team. | ➢ ಕ್ಷೇತ್ರ ರಕ್ಷಣೆ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಬೇರಾವುದೇ ದಂಡದ ೫ ಓಟಗಳನ್ನು ಅನ್ವಯವಾದರೆ ಅನುದಾನಿಸಬೇಕು.<br>➢ ದಾಂಡಿಗರಿಗೆ, ಕ್ಷೇತ್ರ ರಕ್ಷಣೆ ತಂಡದ ನಾಯಕನಿಗೆ ಮತ್ತು ದಾಂಡಿಗ ತಂಡದ ನಾಯಕನಿಗೆ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತೆಗೆದುಕೊಂಡ ಕ್ರಮದ ಕಾರಣ ತಿಳಿಸಬೇಕು.<br>ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೆ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **41.17 Penalty runs**<br>41.17.1 When Penalty runs are awarded to either side, when the ball is dead the umpire shall signal the Penalty runs to the scorers. See Law 2.13 (Signals).<br>41.17.2 Penalty runs shall be awarded in each case where the Laws require the award, even if a result has already been | **೪೧.೧೭ ದಂಡದ ಓಟಗಳು**<br>೪೧.೧೭.೧ ಯಾವುದೇ ತಂಡಕ್ಕೆ ದಂಡದ ಓಟಗಳನ್ನು ಅನುದಾನಿಸಿದಾಗ, ಚೆಂಡು ಡೆಡ್ ಆದ ಮೇಲೆ ಅಂಪೈರ್ ಸ್ಕೋರರಿಗೆ ದಂಡದ ಓಟಗಳ ಅನುದಾನದ ಸನ್ನೆ ಮಾಡಬೇಕು. ನಿಯಮ ೨.೧೩(ಸನ್ನೆಗಳು) ಗಮನಿಸಿ.<br>೪೧.೧೭.೨ ಈ ಮೊದಲೇ ಫಲಿತಾಂಶ ಬಂದಿದ್ದರೂ ಸಹ, ನಿಯಮಗಳ ಪ್ರಕಾರ ದಂಡದ ಓಟಗಳನ್ನು ಅನುದಾನಿಸಬೇಕಾದ ಪ್ರತಿ |

| | |
|---|---|
| achieved. See Law 16.6 (Winning hit or extras).<br>Note, however, that the restrictions on awarding Penalty runs, in Laws 23.3 (Leg byes not to be awarded), 25.7 (Restriction on the striker's runner), 28.3 (Protective helmets belonging to the fielding side) and 34.4 (Runs permitted from ball lawfully struck more than once) will apply. | ಸಂದರ್ಭದಲ್ಲಿ ದಂಡದ ಒಟಗಳನ್ನು ಅನುದಾನಿಸಬೇಕು. ನಿಯಮ ೧೬.೬(ಗೆಲುವಿನ ಅಥವಾ ಅತಿರಿಕ್ತ ಒಟ ) ಗಮನಿಸಿ.<br>ಆದರೂ, ನಿಯಮ ೨೩.೩(ಲೆಗ್ ಬೈಸ್ ಒಟಗಳನ್ನು ಅನುಮತಿಸಬಾರದು), ೨೫.೭ (ಚೆಂಡನ್ನೆದುರಿಸುವ ದಾಂಡಿಗನ ಒಟಗಾರನ ಮೇಲಿನ ನಿರ್ಬಂಧಗಳು), ೨೮.೩ (ಕ್ಷೇತ್ರ ರಕ್ಷಣೆ ತಂಡದ ಸುರಕ್ಷಾ ಶಿರಸ್ತ್ರಾಣ) ಮತ್ತು ೩೪.೪ (ನಿಯಮಾನುಸಾರ ಒಂದಕ್ಕಿಂತ ಹೆಚ್ಚು ಸಲ ಹೊಡೆದ ಚೆಂಡಿನಿಂದ ಒಟಗಳ ಗಳಿಕೆ) ರಲ್ಲಿಯ ದಂಡದ ಒಟಗಳನ್ನು ಅನುದಾನಿಸುವುದರ ಮೇಲಿನ ನಿರ್ಬಂಧಗಳು ಅನ್ವಯಿಸುತ್ತವೆ. |
| 41.17.3 When 5 Penalty runs are awarded to the batting side,<br>- they shall be scored as Penalty extras and shall be in addition to any other penalties.<br>- they are awarded when the ball is dead and shall not be regarded as runs scored from either the immediately preceding delivery or the immediately following delivery and shall be in addition to any runs from those deliveries.<br>- the batters shall not change ends solely by reason of the 5 run penalty. | ೪೧.೧೭.೩ ದಾಂಡಿಗ ತಂಡಕ್ಕೆ ೫ ದಂಡದ ಒಟಗಳನ್ನು ಅನುದಾನಿಸಿದಾಗ,<br>➢ ಇವನ್ನು ದಂಡದ ರೂಪದ ಅತಿರಿಕ್ತ ಒಟಗಳು ಎಂದು ನೊಂದಾಯಿಸಬೇಕು. ಇವುಗಳು ಬೇರಾವುದೇ ದಂಡದ ಒಟಗಳ ಜೊತೆಗೆ ಸೇರಿಸಿ ಲೆಕ್ಕಿಸಬೇಕು.<br>➢ ಈ ಒಟಗಳನ್ನು ಚೆಂಡು ಡೆಡ್ ಆದ ಮೇಲೆ ಅನುದಾನಿಸಬೇಕು ಮತ್ತು ಈ ಒಟಗಳನ್ನು ಆ ಕ್ಷಣದ ಹಿಂದಿನ ಅಥವಾ ಮುಂದಿನ ಎಸೆತದಿಂದ ಗಳಿಸಿದ ಒಟಗಳೆಂದು ಪರಿಗಣಿಸಬಾರದು ಮತ್ತು ಅವುಗಳು ಆ ಎಸೆತಗಳಿಂದ ಗಳಿಸಿದ ಬೇರಾವುದೇ ಒಟಗಳ ಜೊತೆಗೆ ಗಳಿಸಿದ ಒಟಗಳೆಂದು ಪರಿಗಣಿಸಬೇಕು.<br>➢ ದಾಂಡಿಗರು ಕೇವಲ ದಂಡದ ೫ ಒಟಗಳ ಕಾರಣಕ್ಕಾಗಿ ತಮ್ಮ ತುದಿಯನ್ನು ಬದಲಿಸಬಾರದು. |

| | |
|---|---|
| 41.17.4 When 5 Penalty runs are awarded to the fielding side, they shall be added as Penalty extras to that side's total of runs in its most recently completed innings. If the fielding side has not completed an innings, the 5 Penalty runs shall be added to the score in its next innings. | ೪೧.೧೮.೪ ಕ್ಷೇತ್ರ ರಕ್ಷಣೆ ತಂಡಕ್ಕೆ ೫ ದಂಡದ ಓಟಗಳನ್ನು ಅನುದಾನಿಸಿದಾಗ, ಅವುಗಳನ್ನು ಅತಿರಿಕ್ತ ದಂಡದ ಓಟಗಳೆಂದು ತಂಡವು ಇತ್ತೀಚೆಗಷ್ಟೇ ಪೂರ್ಣಗೊಳಿಸಿದ ಸರದಿಯ ಮೊತ್ತಕ್ಕೆ ಸೇರಿಸಬೇಕು. ಒಂದು ವೇಳೆ ಸರದಿ ಪೂರ್ಣಗೊಂಡಿರದಿದ್ದರೆ ಅದರ ಮುಂದಿನ ಸರದಿಗೆ ಸೇರಿಸಬೇಕು. |
| **LAW 42 PLAYERS' CONDUCT** | **ನಿಯಮ ೪೨ ಆಟಗಾರರ ನಡವಳಿಕೆ** |
| 42.1 Unacceptable conduct | **೪೨.೧ ಅಂಗೀಕಾರಾರ್ಹವಲ್ಲದ ನಡವಳಿಕೆ** |
| 42.1.1 The umpires shall act upon any unacceptable conduct. Four Levels of offence and the corresponding actions by the umpires are identified as Level 1, Level 2, Level 3 and Level 4 offences in 42.2 to 42.5. | ೪೨.೧.೧ ಅಂಗೀಕಾರಾರ್ಹವಲ್ಲದ ಯಾವುದೇ ನಡವಳಿಕೆಯ ವಿರುದ್ಧ ಅಂಪೈರುಗಳು ಕ್ರಮವನ್ನು ತೆಗೆದುಕೊಳ್ಳಬೇಕು. ಮಟ್ಟ ೧, ಮಟ್ಟ ೨, ಮಟ್ಟ ೩, ಮಟ್ಟ ೪ ಹೀಗೆ ನಾಲ್ಕು ಮಟ್ಟಗಳ ಅಪರಾಧ ಹಾಗೂ ತತ್ಸಂಬಂಧ ಅಂಪೈರುಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ೪೨.೨ ರಿಂದ ೪೨.೫ ರಲ್ಲಿ ಗೊತ್ತುಪಡಿಸಲಾಗಿದೆ. |
| 42.1.2 If either umpire considers that the conduct of a player, at any time during the match, is unacceptable, the umpire concerned shall call and signal Dead ball. This call may be delayed until the umpire is satisfied that it will not disadvantage the non-offending side. | ೪೨.೧.೨ ಪಂದ್ಯದ ಯಾವುದೇ ಸಮಯದಲ್ಲಿ, ಒಬ್ಬ ಆಟಗಾರನ ನಡವಳಿಕೆ ಅಂಗಿಕಾರಾರ್ಹವಲ್ಲ ಎಂದು ಯಾವುದೇ ಅಂಪೈರ್ ಭಾವಿಸಿದರೆ, ಸಂಬಂಧಿತ ಅಂಪೈರ್ ಡೆಡ್ ಬಾಲ್ ಎಂದು ಕರೆದು ಸನ್ನೆ ಮಾಡಬೇಕು. ಈ ಕರೆಯು ತಪ್ಪಿತಸ್ಥವಲ್ಲದ ತಂಡಕ್ಕೆ ಪ್ರತಿಕೂಲವಾಗುವುದಿಲ್ಲವೆಂದು ಅಂಪೈರರಿಗೆ ಅನಿಸುವವರೆಗೆ ಕರೆಯನ್ನು ವಿಳಂಬಿಸಬಹುದು. |
| 42.1.3 The umpire concerned shall report the matter to the other umpire and together they shall decide whether misconduct has occurred. If so, they shall determine into | ೪೨.೧.೩ ಸಂಬಂಧಿತ ಅಂಪೈರ್ ಘಟನೆಯ ಬಗ್ಗೆ ಮತ್ತೊಬ್ಬ ಅಂಪೈರ್‌ಗೆ ತಿಳಿಸಬೇಕು ಮತ್ತು ಇಬ್ಬರೂ ಕೂಡಿ ಅಸಭ್ಯ ನಡವಳಿಕೆ ನಡೆದಿದೆಯೋ ಎಂದು ನಿರ್ಧರಿಸಬೇಕು. ನಡೆದಿದ್ದರೆ, ಆ ನಡವಳಿಕೆ ೪೨.೨ ರಿಂದ ೪೨.೫ |

which of the Levels the conduct falls, as set out in 42.2 to 42.5 below, and then apply the related sanctions.

42.1.4 Any call of No ball or Wide before the offence shall stand.

42.1.5 For each Level 1 to 4, if the offence is by a batter, the umpires shall summon the offending player's captain to the field. Solely for the purpose of this Law, the batters at the wicket may not deputise for their captain.

.42.1.6 For each Level 1 to 4,

- Playing time shall be counted as lost from the call of Time to the call of Play, excluding intervals (Law 11) and suspensions of play (Law 2.8).
- the time for close of play on that day shall be extended by this length of time.
- if applicable, no overs shall be deducted during the last hour of the match solely on account of this time.

ರಲ್ಲಿ ಗೊತ್ತುಪಡಿಸಿದಂತೆ ಯಾವ ಮಟ್ಟದ ಅಪರಾಧಕ್ಕೆ ಒಳಪಡುತ್ತದೆ ಎಂದು ನಿರ್ಧರಿಸಬೇಕು ಮತ್ತು ಅದಕ್ಕನುಸಾರವಾಗಿ ನಿರ್ಬಂಧನೆಗಳನ್ನು ವಿಧಿಸಬೇಕು.

೪೨.೧.೪ ನಿಯಮ ಬಾಹಿರ ಕೃತ್ಯ ನಡೆಯುವ ಮೊದಲು ನೋ ಬಾಲ್ ಇಲ್ಲವೇ ವೈಡ್ ಬಾಲ್ ಎಂದು ಕರೆದಿದ್ದರೇ ಅದನ್ನು ಪರಿಗಣಿಸಬೇಕು.

೪೨.೧.೫ ೧ ರಿಂದ ೪ ರ ವರೆಗಿನ ಪ್ರತಿ ಮಟ್ಟದ ಅಪರಾಧ ದಾಂಡಿಗನಿಂದ ಆಗಿದ್ದರೆ, ಅಂಪೈರ್‌ಗಳು ದಾಂಡಿಗ ತಂಡದ ನಾಯಕನನ್ನು ಮೈದಾನದ ಒಳಗೆ ಕರೆಸಿಕೊಳ್ಳಬೇಕು. ಈ ನಿಯಮದ ಏಕ ಮಾತ್ರ ಉದ್ದೇಶಕ್ಕಾಗಿ ವಿಕೆಟ್ ಬಳಿ ಇರುವ ದಾಂಡಿಗರು ನಾಯಕನನ್ನು ಪ್ರತಿನಿಧಿಸುವುದಿಲ್ಲ.

೪೨.೧.೬ ೧ ರಿಂದ ೪ರ ಪ್ರತಿ ಹಂತದಲ್ಲಿ

- ನಷ್ಟವಾದ ಆಟದ ಅವಧಿಯನ್ನು "ಟೈಂ" ಕರೆ ಇಂದ "ಪ್ಲೇ" ಕರೆಯುವವರೆಗೆ, ವಿರಾಮಗಳ (ನಿಯಮ ೧೧) ಮತ್ತು ಆಟ ತಾತ್ಕಾಲಿಕವಾಗಿ ನಿಂತ (ನಿಯಮ ೨.೮) ಸಮಯವನ್ನು ಹೊರತುಪಡಿಸಿ, ಲೆಕ್ಕಹಾಕಬೇಕು.
- ಆ ದಿನದ ಆಟದ ಮುಕ್ತಾಯದ ಸಮಯವನ್ನು ಹೀಗೆ ನಷ್ಟವಾದ ಅವಧಿಯಷ್ಟು ಹೆಚ್ಚಿಸಬೇಕು.
- ಅನ್ವಯಿತವಾದಲ್ಲಿ, ಕೇವಲ ಈ ಅವಧಿಗೊಸ್ಕರ, ಪಂದ್ಯದ ಕೊನೆಯ ಘಂಟೆಯ ಆಟದಲ್ಲಿ ಯಾವುದೇ ಓವರ್‌ಗಳನ್ನು ಕಡಿಮೆ ಮಾಡಬಾರದು.

**42.2 Level 1 offences and action by umpires**

42.2.1 Any of the following actions by a player shall constitute a Level 1 offence:

- wilfully mistreating any part of the cricket ground, equipment or implements used in the match
- showing dissent at an umpire's decision by word or action
- using language that, in the circumstances, is obscene, offensive or insulting
- making an obscene gesture
- appealing excessively
- advancing towards an umpire in an aggressive manner when appealing
- any other misconduct, the nature of which is, in the opinion of the umpires, equivalent to a Level 1 offence.

42.2.2 If such an offence is committed, 42.2.2.1 to 42.2.2.6 shall be implemented as appropriate, according to whether or not it is the first offence at any Level.

42.2.2.1 The umpire shall call Time, if necessary.

**೪೨.೨ ಮಟ್ಟ ೧ರ ಅಪರಾಧ ಮತ್ತು ಅಂಪೈರ್‌ಗಳ ಕ್ರಮ**

೪೨.೧.೨ ಆಟಗಾರನಿಂದ ಈ ಕೆಳಗಿನ ಯಾವುದಾದರೊಂದು ನಡವಳಿಕೆ ೧ನೇ ಮಟ್ಟದ ಅಪರಾಧವಾಗುತ್ತದೆ.

- ➢ ಉದ್ದೇಶಪೂರ್ವಕವಾಗಿ ಮೈದಾನದ ಯಾವುದೇ ಭಾಗವನ್ನು, ಪಂದ್ಯದಲ್ಲಿ ಉಪಯೋಗಿಸುವ ಉಪಕರಣ ಇಲ್ಲವೇ ಉಪಕರಣಗಳನ್ನು ಅಯೋಗ್ಯವಾಗಿ ಬಳಸುವುದು.
- ➢ ಅಂಪೈರ್ ನಿರ್ಣಯಕ್ಕೆ ಮಾತುಗಳಿಂದ ಅಥವಾ ನಡವಳಿಕೆಯಿಂದ ಅಸಮ್ಮತಿ ತೋರುವುದು.
- ➢ ಆ ಸಂದರ್ಭದಲ್ಲಿ ಬಳಸಿದ ಭಾಷೆಯು ಅಶ್ಲೀಲ, ಅಸಭ್ಯ ಅಥವಾ ಅವಮಾನ ಕಾರಕವಾಗಿದ್ದರೆ.
- ➢ ಅಸಭ್ಯವಾಗಿ ಸನ್ನೆ ಮಾಡುವುದು.
- ➢ ಮಿತಿ ಮೀರಿ ಮನವಿ ಸಲ್ಲಿಸುವುದು.
- ➢ ಮನವಿ ಸಲ್ಲಿಸುವಾಗ ಅಂಪೈರ್ ಕಡೆಗೆ ಆಕ್ರಮಣಕಾರಿಯಾಗಿ ಮುನ್ನಡೆಯುವುದು.
- ➢ ಬೇರಾವುದೇ ಅನುಚಿತ ನಡವಳಿಕೆ ಮಟ್ಟ ೧ರ ಸಮಾನವಾಗಿದೆ ಎಂದು ಅಂಪೈರ್‌ಗಳು ಭಾವಿಸಿದರೆ.

೪೨.೨.೨ ಇಂತಹ ಅಪರಾಧ ಮಾಡಿದಾಗ, ೪೨.೨.೨.೧ ರಿಂದ ೪೨.೨.೨.೬ ರಲ್ಲಿಯ ಸೂಕ್ತವಾದ ಕ್ರಮಗಳನ್ನು ಅಪರಾಧವು ಯಾವುದೇ ಮಟ್ಟದ ಮೊದಲನೆಯ ಸಲದ್ದೋ ಅಲ್ಲವೋ ಎಂಬುವುದರ ಮೇಲೆ ನಿರ್ಧರಿಸಿ ಅನ್ವಯಿಸಬೇಕು.

೪೨.೨.೨.೧ ಅಗತ್ಯವಾದಲ್ಲಿ ಅಂಪೈರ್ "ಟೈಂ" ಎಂದು ಕರೆಯಬೇಕು.

| | |
|---|---|
| 42.2.2.2 Together the umpires shall summon and inform the offending player's captain that an offence at this Level has occurred. | ೪೨.೨.೨.೨ ಅಂಪೈರುಗಳಿಬ್ಬರೂ ಒಟ್ಟಾಗಿ ಅಪರಾಧ ಮಾಡಿದ ಆಟಗಾರನ ನಾಯಕನನ್ನು ಕರೆಯಿಸಿ ಇಂತಹ ಮಟ್ಟದ ಅಪರಾಧವಾಗಿದೆ ಎಂದು ತಿಳಿಸಬೇಕು. |
| 42.2.2.3 If the Level 1 offence is the first offence, at any Level, by that team, the umpire shall | ೪೨.೨.೨.೩ ಯಾವುದೇ ಮಟ್ಟದಲ್ಲಿ, ಮಟ್ಟ ೧ ರ ಅಪರಾಧ ಮೊದಲನೆಯ ಸಲ ಆ ತಂಡದಿಂದ ಆದರೆ ಅಂಪೈರ್ |
| 42.2.2.3.1 issue a first and final warning which shall apply to all members of the team for the remainder of the match. | ೪೨.೨.೨.೩.೧ ಮೊದಲ ಮತ್ತು ಅಂತಿಮ ಎಚ್ಚರಿಕೆ ನೀಡಬೇಕು, ಇದು ಪಂದ್ಯದ ಉಳಿದ ಅವಧಿಗೆ ತಂಡದ ಎಲ್ಲ ಆಟಗಾರರಿಗೆ ಅನ್ವಯವಾಗುತ್ತದೆ. |
| 42.2.2.3.2 warn the offending player's captain that any further Level 1 offence by any member of his/her team shall result in the award of 5 Penalty runs to the opposing team. | ೪೨.೨.೨.೩.೨ ಯಾವುದೇ ಆಟಗಾರನಿಂದ ಪುನಃ ಮಟ್ಟ೧ರ ಅಪರಾಧವಾದಲ್ಲಿ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಲಾಗುವುದೆಂದು ತಪ್ಪಿತಸ್ಥ ಆಟಗಾರನ ನಾಯಕನಿಗೆ ಎಚ್ಚರಿಸಬೇಕು. |
| 42.2.2.4 If the Level 1 offence follows an offence, at any Level, by that team, the umpire shall award 5 Penalty runs to the opposing team. | ೪೨.೨.೨.೪ ಆ ತಂಡದಿಂದ ಯಾವುದೇ ಮಟ್ಟದಲ್ಲಿ, ಮಟ್ಟ ೧ರ ಅಪರಾಧ ಪುನಃ ಆದಲ್ಲಿ ಅಂಪೈರ್ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು. |
| 42.2.2.5 As soon as practicable the umpire shall call Play. | ೪೨.೨.೨.೫ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ "ಪ್ಲೇ" ಎಂದು ಕರೆಯಬೇಕು. |
| 42.2.2.6 The umpires together shall report the occurrence as soon as possible after the match to the Executive of the offending player's team and to any Governing Body responsible for the match, who shall take such further action as is considered | ೪೨.೨.೨.೬ ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ,  ಸಂಬಂಧಿತ ಇತರ |

| | |
|---|---|
| appropriate against the captain, any other individuals concerned and, if appropriate, the team. | ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **42.3 Level 2 offences and action by umpires**<br>42.3.1 Any of the following actions by a player shall constitute a Level 2 offence:<br>- showing serious dissent at an umpire's decision by word or action<br>- making inappropriate and deliberate physical contact with another player<br>- throwing the ball at a player, umpire or another person in an inappropriate and dangerous manner<br>- using language or gesture to another player, umpire, team official or spectator that, in the circumstances, is obscene or of a seriously insulting nature - or any other misconduct, the nature of which is, in the opinion of the umpires, equivalent to a Level 2 offence.<br>42.3.2 If such an offence is committed, 42.3.2.1 to 42.3.2.6 shall be implemented.<br>42.3.2.1 The umpire shall call Time, if necessary. | **೪೨.೩ ೨ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ**<br>**೪೨.೩.೧** ಆಟಗಾರನ ಈ ಕೆಳಗಿನ ಯಾವುದಾದರೊಂದು ನಡವಳಿಕೆ ೨ನೇ ಮಟ್ಟದ ಅಪರಾಧವಾಗುತ್ತದೆ.<br>➢ ಅಂಪೈರ್ ನಿರ್ಣಯಕ್ಕೆ ಮಾತುಗಳಿಂದ ಅಥವಾ ನಡವಳಿಕೆಯಿಂದ ತೀವ್ರವಾಗಿ ಅಸಮ್ಮತಿ ತೋರುವುದು.<br>➢ ಮತ್ತೊಬ್ಬ ಆಟಗಾರನ ಜೊತೆ ಅನುಚಿತ ಮತ್ತು ಉದ್ದೇಶಪೂರ್ವಕವಾಗಿ ಶಾರೀರಿಕ ಸಂಪರ್ಕ ಮಾಡುವುದು.<br>➢ ಚೆಂಡನ್ನು ಮತ್ತೊಬ್ಬ ಆಟಗಾರ, ಅಂಪೈರ್ ಅಥವಾ ಮತ್ತೊಬ್ಬ ವ್ಯಕ್ತಿಯ ಕಡೆಗೆ ಅನುಚಿತ ಹಾಗೂ ಅಪಾಯಕಾರಿಯಾಗಿ ಎಸೆಯುವುದು.<br>➢ ಮತ್ತೊಬ್ಬ ಆಟಗಾರ, ಅಂಪೈರ್, ತಂಡದ ಅಧಿಕಾರಿ ಅಥವಾ ಪ್ರೇಕ್ಷಕನಿಗೆ ಆ ಸಂದರ್ಭದಲ್ಲಿ ಬಳಸಿದ ಭಾಷೆಯು ಅತೀ ಅಶ್ಲೀಲ, ಅಸಭ್ಯ ಅಥವಾ ಅವಮಾನಕಾರಕವಾಗಿದ್ದರೆ.<br>➢ ಬೇರಾವುದೇ ಅನುಚಿತ ನಡವಳಿಕೆ ೨ನೇ ಮಟ್ಟಕ್ಕೆ ಸಮಾನವಾಗಿದೆ ಎಂದು ಅಂಪೈರ್‌ಗಳು ಭಾವಿಸಿದರೆ.<br>೪೨.೩.೨ ಇಂತಹ ಅಪರಾಧ ಮಾಡಿದಾಗ, ೪೨.೨.೨೧ ರಿಂದ ೪೨.೨.೨.೬ ರಲ್ಲಿಯ ಸೂಕ್ತವಾದ ಕ್ರಮಗಳನ್ನು ಜಾರಿಗೊಳಿಸಬೇಕು.<br>೪೨.೩.೨.೧ ಅಗತ್ಯವಾದಲ್ಲಿ ಅಂಪೈರ್ "ಟೈಂ" ಎಂದು ಕರೆಯಬೇಕು. |

| | |
|---|---|
| 42.3.2.2 Together the umpires shall summon and inform the offending player’s captain that an offence at this Level has occurred.<br>42.3.2.3 The umpire shall award 5 Penalty runs to the opposing team.<br>42.3.2.4 The umpire shall warn the offending player’s captain that any future Level 1 offence by any member of his/her team shall result in the award of 5 Penalty runs to the opposing team.<br>42.3.2.5 As soon as practicable the Umpire shall call Play.<br>42.3.2.6 The umpires together shall report the occurrence as soon as possible after the match to the Executive of the offending player’s team and to any Governing Body responsible for the match, who shall take such further action as is considered appropriate against the captain, any other individuals concerned and, if appropriate, the team. | ೪೨.೩.೨.೨ ಅಂಪೈರುಗಳಿಬ್ಬರೂ ಒಟ್ಟಾಗಿ ಅಪರಾಧ ಮಾಡಿದ ಆಟಗಾರನ ನಾಯಕನನ್ನು ಕರೆಯಿಸಿ ಇಂತಹ ಮಟ್ಟದ ಅಪರಾಧವಾಗಿದೆ ಎಂದು ತಿಳಿಸಬೇಕು.<br>೪೨.೩.೨.೩ ಎದುರಾಳಿ ತಂಡಕ್ಕೆ ದಂಡದ ೫ ಒಟಗಳನ್ನು ಅನುದಾನಿಸಬೇಕು.<br>೪೨.೩.೨.೪ ಯಾವುದೇ ಆಟಗಾರನಿಂದ ಪುನಃ ಮಟ್ಟ ೨ ರ ಅಪರಾಧವಾದಲ್ಲಿ ಎದುರಾಳಿ ತಂಡಕ್ಕೆ ದಂಡದ ೫ ಒಟಗಳನ್ನು ಅನುದಾನಿಸಲಾಗುವುದೆಂದು ತಪ್ಪಿತಸ್ಥ ಆಟಗಾರನ ನಾಯಕನಿಗೆ ಎಚ್ಚರಿಸಬೇಕು<br>೪೨.೩.೨.೫ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ “ಪ್ಲೇ” ಎಂದು ಕರೆಯಬೇಕು.<br>೪೨.೩.೨.೬ ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **42.4 Level 3 offences and action by umpires**<br>42.4.1 Either of the following actions by a player shall constitute a Level 3 offence:<br>- intimidating an umpire by language or gesture | **೪೨.೪ ೩ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ**<br>೪೨.೪.೧ ಆಟಗಾರನ ಈ ಕೆಳಗಿನ ಯಾವುದಾದರೊಂದು ನಡವಳಿಕೆ ೩ನೇ ಮಟ್ಟದ ಅಪರಾಧವಾಗುತ್ತದೆ.<br>➢ ಅಂಪೈರನ್ನು ಮಾತುಗಳಿಂದ ಅಥವಾ ನಡವಳಿಕೆಯಿಂದ ಹೆದರಿಸುವುದು. |

| | |
|---|---|
| - threatening to assault a player or any other person except an umpire. See 42.5.1. | ➢ ಅಂಪೈರನ್ನು ಹೊರತುಪಡಿಸಿ ಒಬ್ಬ ಆಟಗಾರನನ್ನು ಅಥವಾ ಬೇರಾವುದೇ ವ್ಯಕ್ತಿಯನ್ನು ಹಲ್ಲೆ ಮಾಡುವುದಾಗಿ ಹೆದರಿಸುವುದು.೪೫.೨.೧ ಗಮನಿಸಿ. |
| 42.4.2 If such an offence is committed, 42.4.2.1 to 42.4.2.8 shall be implemented. | ೪೨.4.೨ ಇಂತಹ ಅಪರಾಧ ಮಾಡಿದಾಗ, ೪೨.೨.೨೧ ರಿಂದ ೪೨.೨.೨.೬ ರಲ್ಲಿಯ ಸೂಕ್ತವಾದ ಕ್ರಮಗಳನ್ನು ಜಾರಿಗೊಳಿಸಬೇಕು. |
| 42.4.2.1 The umpire shall call Time, if necessary. | ೪೨.೪.೨.೧ ಅಗತ್ಯವಾದಲ್ಲಿ ಅಂಪೈರ್ "ಟೈಂ" ಎಂದು ಕರೆಯಬೇಕು. |
| 42.4.2.2 Together the umpires shall summon and inform the offending player's captain that an offence at this Level has occurred. | ೪೨.೪.೨.೨ ಅಂಪೈರುಗಳಿಬ್ಬರೂ ಒಟ್ಟಾಗಿ ಅಪರಾಧ ಮಾಡಿದ ಆಟಗಾರನ ನಾಯಕನನ್ನು ಕರೆಯಿಸಿ ಇಂತಹ ಮಟ್ಟದ ಅಪರಾಧವಾಗಿದೆ ಎಂದು ತಿಳಿಸಬೇಕು. |
| 42.4.2.3 The umpires shall direct the captain to remove the offending player immediately from the field of play for a period in accordance with the following: | ೪೨.೪.೨.೩ ಅಂಪೈರ್‌ಗಳು ತಪ್ಪಿತಸ್ಥ ಆಟಗಾರನನ್ನು ತತ್‌ಕ್ಷಣ ಆಟದ ಮೈದಾನದಿಂದ ಈ ಕೆಳಗಿನ ನಿರ್ಬಂಧಗಳಲ್ಲಿ ಸೂಚಿಸಿರುವ ಅವಧಿಗೆ ಹೊರಗೆ ಕಳಿಸುವಂತೆ ನಾಯಕನಿಗೆ ನಿರ್ದೇಶಿಸಬೇಕು. |
| 42.4.2.3.1 In a match where the innings are not limited to a number of overs, the player shall be suspended from the field of play for 10 overs. Any balls remaining in the over in progress at the time of suspension shall not count towards the overs for which the player is suspended. | ೨.೪.೨.೩.೧ ಓವರ್‌ಗಳಿಗೆ ಸೀಮಿತಗೊಂಡಿಲ್ಲದ ಸರದಿಯ ಪಂದ್ಯದಲ್ಲಿ, ಆ ಆಟಗಾರನನ್ನು ೧೦ ಓವರಗಳವರೆಗೆ ಆಟದ ಮೈದಾನದಿಂದ ಅಮಾನತ್ತುಗೊಳಿಸಬೇಕು. ಅಮಾನತ್ತುಗೊಳಿಸುವ ಸಮಯದಲ್ಲಿ ಪ್ರಗತಿಯಲ್ಲಿರುವ ಓವರಿನಲ್ಲಿ ಇನ್ನೂ ಎಸೆತಗಳು ಉಳಿದಿದ್ದರೆ ಅವನ್ನು ಅಮಾನತ್ತು ಗೊಳಿಸಬೇಕಾದ ಓವರಗಳಲ್ಲಿ ಎಣಿಸಬಾರದು.. |
| 42.4.2.3.2 In a match where the innings are limited to a number of overs, the player shall be suspended for one fifth of the number of overs allocated to the current innings at its | ೪೨.೪.೨.೩.೨ ಓವರ್‌ಗಳಿಗೆ ಸೀಮಿತವಾಗಿರುವ ಸರದಿಯ ಪಂದ್ಯದಲ್ಲಿ, ಚಾಲ್ತಿಯಲ್ಲಿರುವ ಸರದಿಯ ಪ್ರಾರಂಭಕ್ಕೆ ನಿಗದಿಪಡಿಸಿದ ಓವರುಗಳ ಸಂಖ್ಯೆಯ ಐದನೆಯ ಒಂದಂಶ ಓವರುಗಳಿಗೆ |

| | |
|---|---|
| commencement. If, in calculating the length of the suspension, a part-over results, it shall be considered as a whole over. Any balls remaining in the over in progress at the time of suspension shall not count towards the overs for which the player is suspended. | ಅಮಾನತ್ತುಗೊಳಿಸಬೇಕು. ಲೆಕ್ಕ ಮಾಡಬೇಕಾದರೆ ಓವರಿನ ಭಾಗ ಬಂದರೆ ಅದನ್ನು ಪೂರ್ತಿ ಓವರ್ ಎಂದು ಪರಿಗಣಿಸಬೇಕು. ಅಮಾನತ್ತುಗೊಳಿಸುವ ಸಮಯದಲ್ಲಿ ಪ್ರಗತಿಯಲ್ಲಿರುವ ಓವರಿನಲ್ಲಿ ಇನ್ನೂ ಎಸೆತಗಳು ಉಳಿದಿದ್ದರೆ ಅವನ್ನು ಅಮಾನತ್ತು ಗೊಳಿಸಬೇಕಾದ ಓವರಗಳಲ್ಲಿ ಎಣಿಸಬಾರದು. |
| 42.4.2.3.3 If the offending player is a fielder, no substitute shall be allowed for him/her. The offending player may return to the field of play after serving the period of suspension and may bowl immediately. | ೪೨.೪.೨.೩.೩ ತಪ್ಪಿತಸ್ಥ ಆಟಗಾರ ಕ್ಷೇತ್ರ ರಕ್ಷಕನಾಗಿದ್ದರೆ, ಅವನಿಗೆ/ಅವಳಿಗೆ ಬದಲಿ ಆಟಗಾರನನ್ನು ಅನುಮತಿಸಬಾರದು. ಆ ತಪ್ಪಿತಸ್ಥ ಆಟಗಾರ ಅಮಾನತ್ತಿನ ಅವಧಿ ಮುಗಿಸಿ ಮೈದಾನದೊಳಗೆ ಬರಬಹುದು ಮತ್ತು ಕೂಡಲೇ ಬೌಲಿಂಗ್ ಮಾಡಬಹುದು. |
| 42.4.2.3.4 If a bowler is suspended mid-over, then that over must be completed by a different bowler, who shall not have bowled the previous over nor shall he/she bowl the next over. | ೪೨.೪.೨.೩.೪ ಓವರಿನ ಮಧ್ಯದಲ್ಲಿ ಬೌಲರ್ ಅಮಾನತ್ತುಗೊಂಡರೆ, ಮತ್ತೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು ಆದರೆ ಆ ಬೌಲರ್ ಹಿಂದಿನ ಓವರ್ ಬೌಲ್ ಮಾಡಿರಬಾರದು ಮತ್ತು ಮುಂದಿನ ಓವರ್ ಬೌಲ್ ಮಾಡಬಾರದು. |
| 42.4.2.3.5 If the offending player is a not out batter, he/she shall be replaced by another member of his/her team. The offending player may return to bat after having served the suspension only at the fall of a wicket. If no batter is available to bat during a batter's suspension, the innings is completed. If the offending player does not continue his/her innings for whatever reason, he/she is to be recorded as Retired – not out. | ೪೨.೪.೨.೩.೫ ತಪ್ಪಿತಸ್ಥ ಆಟಗಾರ ಔಟಾಗದೆ ಇರುವ ದಾಂಡಿಗನಾಗಿದ್ದರೆ, ಅವನನ್ನು/ಅವಳನ್ನು ಆ ತಂಡದ ಮತ್ತೊಬ್ಬ ಸದಸ್ಯನಿಂದ/ಸದಸ್ಯಳಿಂದ ಬದಲಾಯಿಸಬೇಕು. ತಪ್ಪಿತಸ್ಥ ಆಟಗಾರನು ಅಮಾನತ್ತಿನ ಅವಧಿ ಮುಗಿದನಂತರ ಹುದ್ದರಿಯ ಪತನವಾದಾಗ ಮಾತ್ರ ದಾಂಡಿಗನಾಗಿ ಹಿಂತಿರುಗಿ ಬರಬಹುದು. ದಾಂಡಿಗನ ಅಮಾನತ್ತಿನ ಅವಧಿಯಲ್ಲಿ ಇನ್ನೊಬ್ಬ ದಾಂಡಿಗ ಲಭ್ಯವಿಲ್ಲದಿದ್ದರೆ, ಆ ಸರದಿ ಪೂರ್ಣಗೊಂಡಂತೆ. ತಪ್ಪಿತಸ್ಥ ಆಟಗಾರನು ಯಾವುದೇ ಕಾರಣಕ್ಕಾಗಿ ಅವನ/ಅವಳ |

| | |
|---|---|
| | ಸರದಿಯನ್ನು ಮುಂದುವರೆಸದಿದ್ದಲ್ಲಿ ಅವನ/ಅವಳ ಸರದಿಯನ್ನು "ನಿವೃತ್ತ- ಔಟಿಲ್ಲ" ಎಂದು ನೊಂದಾಯಿಸಬೇಕು. |
| 42.4.2.3.6 If the offending player is a dismissed member of the batting side, the period of suspension will not commence until the start of the next innings. Furthermore, in these circumstances, the offending player may not act as a runner during the innings when he/she was suspended. | ೪೨.೪.೨.೩.೬ ತಪ್ಪಿತಸ್ಥ ಆಟಗಾರ, ದಾಂಡಿಗ ತಂಡದ ಔಟಾಗಿದ್ದ ಸದಸ್ಯನಾಗಿದ್ದರೆ, ಅಮಾನತ್ತಿನ ಅವಧಿ ಮುಂದಿನ ಸರದಿ ಪ್ರಾರಂಭವಾಗುವವರೆಗೆ ಪ್ರಾರಂಭವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ತಪ್ಪಿತಸ್ಥ ಆಟಗಾರ ಅವನು/ಅವಳು ಅಮಾನತ್ತುಗೊಂಡಂತಹ ಸರದಿಯಲ್ಲಿ ಓಟಗಾರನಾಗಿ ಕಾರ್ಯ ನಿರ್ವಹಿಸುವಂತಿಲ್ಲ. |
| 42.4.2.3.7 Warn the offending player's captain that any future Level 1 offence shall result in the award of 5 Penalty runs to the opposing team. | ೪೨.೪.೨.೩.೭ ಯಾವುದೇ ಆಟಗಾರನಿಂದ ಪುನಃ ಮಟ್ಟ ೧ರ ಅಪರಾಧವಾದಲ್ಲಿ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಲಾಗುವುದೆಂದು ತಪ್ಪಿತಸ್ಥ ಆಟಗಾರನ ನಾಯಕನಿಗೆ ಎಚ್ಚರಿಸಬೇಕು |
| 42.4.2.3.8 Any overs remaining to be served from a suspension shall be carried forward to the next and subsequent innings of the match. A part over at the end of the innings shall not count towards the overs for which the player is suspended. | ೪೨.೪.೨.೩.೮ ಅಮಾನತ್ತಿನ ಓವರುಗಳಲ್ಲಿ ಯಾವುದೇ ಓವರುಗಳು ಬಾಕಿ ಉಳಿದರೆ ಅವನ್ನು ಪಂದ್ಯದ ಮುಂದಿನ ಮತ್ತು ತದನಂತರದ ಸರದಿಗಳಿಗೆ ಮುಂದೊಯ್ಯಬೇಕು. ಸರದಿಯ ಅಂತ್ಯದ ಓವರಿನ ಭಾಗ ಅಮಾನತ್ತುಗೊಂಡ ಓವರುಗಳ ಲೆಕ್ಕಕ್ಕೆ ಬರುವುದಿಲ್ಲ. |
| 42.4.2.4 As soon as practicable, the umpire shall<br>- award 5 Penalty runs to the opposing team<br>- signal the Level 3 penalty to the scorers<br>- call Play. | ೪೨.೪.೨.೪ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅಂಪೈರ್<br>➢ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಸ್ಕೋರರ್‌ಗಳಿಗೆ ೩ನೇ ಮಟ್ಟದ ಅಪರಾಧದ ಸನ್ನೆ ಮಾಡಬೇಕು.<br>➢ "ಪ್ಲೇ" ಎಂದು ಕರೆಯಬೇಕು. |

| | |
|---|---|
| 42.4.2.5 The umpires together shall report the occurrence as soon as possible after the match to the Executive of the offending player's team and to any Governing Body responsible for the match, who shall take such further action as is considered appropriate against the captain, any other individuals concerned and, if appropriate, the team. | ೪೨.೪.೨.೫ ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು |
| **42.5 Level 4 offences and action by umpires**<br>42.5.1 Any of the following actions by a player shall constitute a Level 4 offence:<br>- threatening to assault an umpire<br>- making inappropriate and deliberate physical contact with an umpire<br>- physically assaulting a player or any other person<br>- committing any other act of violence.<br><br>42.5.2 If such an offence is committed, 42.5.2.1 to 42.5.2.5 shall be implemented.<br>42.5.2.1 The umpire shall call Time, if necessary. | **೪೨.೫ ಮಟ್ಟ ೪ರ ಅಪರಾಧಗಳು ಮತ್ತು ಅಂಪೈರ್‌ಗಳ ಕ್ರಮ**<br>**೪೨.೫.೧** ಆಟಗಾರನ ಈ ಕೆಳಗಿನ ಯಾವುದಾದರೊಂದು ನಡವಳಿಕೆ ೪ನೇ ಮಟ್ಟದ ಅಪರಾಧವಾಗುತ್ತದೆ.<br>➢ ಹಲ್ಲೆ ಮಾಡುವುದಾಗಿ ಅಂಪೈರ್‌ನನ್ನು ಹೆದರಿಸುವುದು.<br>➢ ಅಂಪೈರ್ ಜೊತೆ ಅನುಚಿತ ಮತ್ತು ಉದ್ದೇಶಪೂರ್ವಕವಾಗಿ ದೈಹಿಕ ಸಂಪರ್ಕ ಮಾಡುವುದು.<br>➢ ಒಬ್ಬ ಆಟಗಾರ ಅಥವಾ ಬೇರಾವುದೇ ವ್ಯಕ್ತಿಯ ಮೇಲೆ ದೈಹಿಕವಾಗಿ ಹಲ್ಲೆ ಮಾಡುವುದು.<br>➢ ಬೇರಾವುದೇ ಹಿಂಸಾಚಾರದ ನಡವಳಿಕೆ.<br>೪೨.೫.೨ ಇಂತಹ ಅಪರಾಧ ಮಾಡಿದಾಗ, ೪೨.೨.೨೧ ರಿಂದ ೪೨.೨.೨.೬ ರಲ್ಲಿಯ ಸೂಕ್ತವಾದ ಕ್ರಮಗಳನ್ನು ಜಾರಿಗೊಳಿಸಬೇಕು.<br>೪೨.೫.೨.೧ ಅಗತ್ಯವಾದಲ್ಲಿ ಅಂಪೈರ್ "ಟೈಂ" ಎಂದು ಕರೆಯಬೇಕು. |

| | |
|---|---|
| 42.5.2.2 Together the umpires shall summon and inform the offending player's captain that an offence at this Level has occurred. | ೪೨.೫.೨.೨ ಅಂಪೈರುಗಳಿಬ್ಬರೂ ಒಟ್ಟಾಗಿ ಅಪರಾಧ ಮಾಡಿದ ಆಟಗಾರನ ನಾಯಕನನ್ನು ಕರೆಯಿಸಿ ಇಂತಹ ಮಟ್ಟದ ಅಪರಾಧವಾಗಿದೆ ಎಂದು ತಿಳಿಸಬೇಕು. |
| 42.5.2.3 The umpires shall direct the captain to remove the offending player immediately from the field of play for the remainder of the match and shall apply the following: | ೪೨.೫.೨.೩ ಅಂಪೈರ್‌ಗಳು ತಪ್ಪಿತಸ್ಥ ಆಟಗಾರನನ್ನು ತತ್‌ಕ್ಷಣ ಆಟದ ಮೈದಾನದಿಂದ ಪಂದ್ಯದ ಉಳಿದ ಅವಧಿಗೆ ಹೊರಗೆ ಕಳಿಸುವಂತೆ ನಾಯಕನಿಗೆ ನಿರ್ದೇಶಿಸಬೇಕು ಮತ್ತು ಕೆಳಕಂಡವುಗಳನ್ನು ಅನ್ವಯಿಸಬೇಕು. |
| 42.5.2.3.1 If the offending player is a fielder, no substitute shall be allowed for him/her. He/She is to be recorded as Retired – out at the commencement of any subsequent innings in which his/her team is the batting side. | ೪೨.೫.೨.೩.೧ ತಪ್ಪಿತಸ್ಥ ಆಟಗಾರ ಕ್ಷೇತ್ರ ರಕ್ಷಕನಾಗಿದ್ದರೆ, ಅವನಿಗೆ/ಅವಳಿಗೆ ಬದಲಿ ಆಟಗಾರನನ್ನು ಕೊಡಬಾರದು. ಅವನ/ಅವಳ ತಂಡ ಮುಂದೆ ದಾಂಡಿಗ ತಂಡವಾದಾಗ ಸರದಿಯ ಪ್ರಾರಂಭದಲ್ಲಿ ಅವನ/ಅವಳ ಸರದಿಯನ್ನು "ನಿವೃತ್ತ-ಔಟ್" ಎಂದು ನೊಂದಾಯಿಸಬೇಕು |
| 42.5.2.3.2 If a bowler is suspended mid-over, then that over must be completed by a different bowler, who shall not have bowled the previous over nor shall be permitted to bowl the next over. | ೪೨.೫.೨.೩.೨ ಓವರಿನ ಮಧ್ಯದಲ್ಲಿ ಬೌಲರ್ ಅಮಾನತ್ತುಗೊಂಡರೆ, ಮತ್ತೊಬ್ಬ ಬೌಲರ್ ಆ ಓವರನ್ನು ಪೂರ್ಣಗೊಳಿಸಬೇಕು. ಆದರೆ ಆ ಬೌಲರ್ ಹಿಂದಿನ ಓವರ್ ಬೌಲ್ ಮಾಡಿರಬಾರದು ಮತ್ತು ಮುಂದಿನ ಓವರ್ ಬೌಲ್ ಮಾಡಬಾರದು. |
| 42.5.2.3.3 If the offending player is a batter, he/she is to be recorded as Retired – out in the current innings, unless he/she has been dismissed under any of Laws 32 to 39, and at the commencement of any subsequent innings in which his/her | ೪೨.೫.೨.೩.೩ ತಪ್ಪಿತಸ್ಥ ಆಟಗಾರನು ದಾಂಡಿಗನಾಗಿದ್ದರೆ, ನಿಯಮ ೩೨ರಿಂದ ೩೯ರ ಪ್ರಕಾರ ಅವನನ್ನು/ಅವಳನ್ನು ಔಟ್ ಮಾಡಿರದಿದ್ದರೆ, ಅವನ/ಅವಳ ಸರದಿಯನ್ನು ಚಾಲ್ತಿಯಲ್ಲಿರುವ ಸರದಿಯಲ್ಲಿ ಮತ್ತು ಮುಂದೆ ಅವನ/ಅವಳ ತಂಡ ಪುನಃ ದಾಂಡಿಗ ತಂಡವಾದಾಗ ಸರದಿಯ ಪ್ರಾರಂಭದಲ್ಲಿ "ನಿವೃತ್ತ-ಔಟ್" ಎಂದು |

| | |
|---|---|
| team is the batting side. If no further batter is available to bat, the innings is completed.<br><br>42.5.2.3.4 Warn the offending player’s captain that any future Level 1 offence shall result in the award of 5 Penalty runs to the opposing team.<br>42.5.2.4 As soon as practicable, the umpire shall<br>- award 5 Penalty runs to the opposing team<br>- signal the Level 4 penalty to the scorers<br>- call Play.<br>42.5.2.5 The umpires together shall report the occurrence as soon as possible after the match to the Executive of the offending player’s team and to any Governing Body responsible for the match, who shall take such further action as is considered appropriate against the captain, any other individuals concerned and, if appropriate, the team. | ನೊಂದಾಯಿಸಬೇಕು. ಬೇರೊಬ್ಬ ದಾಂಡಿಗ ಬ್ಯಾಟ್ ಮಾಡಲು ಲಭ್ಯವಿಲ್ಲದಿದ್ದರೆ ಸರದಿ ಪೂರ್ಣವಾದಂತೆ.<br>೪೨.೫.೨.೩.೪ ತಪ್ಪಿತಸ್ಥ ಆಟಗಾರನ ನಾಯಕನಿಗೆ ಎಚ್ಚರಿಕೆ ಕೊಟ್ಟು ಮುಂದ್ಯಾವುದೆ ಆಗುವ ೧ನೇ ಪಾತಳಿಯ ಅಪರಾಧಕ್ಕೆ ೫ ದಂಡದ ಓಟಗಳನ್ನು ಎದುರಾಳಿ ತಂಡಕ್ಕೆ ನೀಡುವುದಾಗಿ ತಿಳಿಸಬೇಕು.<br>೪೨.೫.೨.೪ ಪ್ರಾಯೋಗಿಕವಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅಂಪೈರ್<br>➢ ಎದುರಾಳಿ ತಂಡಕ್ಕೆ ದಂಡದ ೫ ಓಟಗಳನ್ನು ಅನುದಾನಿಸಬೇಕು.<br>➢ ಸ್ಕೋರರ್‌ಗಳಿಗೆ ೪ನೇ ಪಾತಳಿಯ ಅಪರಾಧದ ಸನ್ನೆ ಮಾಡಬೇಕು.<br>➢ “ಪ್ಲೇ” ಎಂದು ಕರೆಯಬೇಕು.<br>೪೨.೫.೨.೫ ಪಂದ್ಯ ಮುಗಿದ ನಂತರ ಇಬ್ಬರೂ ಅಂಪೈರ್ ಒಟ್ಟಿಗೆ ನಡೆದ ಘಟನೆಯ ಬಗ್ಗೆ ಆದಷ್ಟು ಬೇಗನೇ ತಪ್ಪಿತಸ್ಥ ತಂಡದ ಮುಖ್ಯಸ್ಥರಿಗೆ ಮತ್ತು ಪಂದ್ಯದ ವ್ಯವಸ್ಥಾಪಕ ಮಂಡಳಿಗೆ ವರದಿ ಸಲ್ಲಿಸಬೇಕು. ತದನುಸಾರವಾಗಿ ಅವರು, ತಂಡದ ನಾಯಕ, ಸಂಬಂಧಿತ ಇತರ ಯಾವುದೇ ವ್ಯಕ್ತಿಗಳು ಮತ್ತು ಸೂಕ್ತವೆನಿಸಿದರೆ ತಂಡದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. |
| **42.6 Captain refusing to remove a player from the field**<br><br>42.6.1 If a captain refuses to carry out an instruction under 42.4.2.3 or 42.5.2.3, the umpires shall invoke Law 16.3 (Umpires awarding a match). | **೪೨.೬ ಆಟಗಾರನನ್ನು ಆಟದ ಮೈದಾನದ ಹೊರಗೆ ಕಳಿಸಲು ನಾಯಕನು ನಿರಾಕರಿಸುವುದು**<br>**೪೨**.೬.೧ ೪೨.೪.೨.೩ ಅಥವಾ ೪೨.೫.೨.೩ರ ಅಡಿಯಲ್ಲಿಯ ಸೂಚನೆಯನ್ನು ಪಾಲಿಸಲು ನಾಯಕನು ನಿರಾಕರಿಸಿದರೆ, ಅಂಪೈರ್‌ಗಳು ನಿಯಮ |

| | |
|---|---|
| 42.6.2 If both captains refuse to carry out instructions under 42.4.2.3 or 42.5.2.3 in respect of the same incident, the umpires shall instruct the players to leave the field. The match is not concluded as in Law 12.9 (Conclusion of match) and there shall be no result under Law 16 (The result). | ೧೬.೩ (ಅಂಪೈರ್ ಪಂದ್ಯವನ್ನು ಅನುದಾನಿಸುವುದು)ನ್ನು ಅನ್ವಯಿಸಬೇಕು.<br>**೪೨**.೬.೨ ಒಂದೇ ಘಟನೆಗೆ ಸಂಬಂಧಿಸಿದಂತೆ ಇಬ್ಬರೂ ನಾಯಕರು ೪೨.೪.೨.೩ ಅಥವಾ ೪೨.೫.೨.೩ರ ಅಡಿಯಲ್ಲಿ ಸೂಚನೆಯನ್ನು ಪಾಲಿಸಲು ನಾಯಕನು ನಿರಾಕರಿಸಿದರೆ, ಅಂಪೈರ್‌ಗಳು ಆಟಗಾರರಿಗೆ ಮೈದಾನ ಬಿಡಲು ಸೂಚಿಸಬೇಕು. ಪಂದ್ಯವು ನಿಯಮ ೧೨.೯(ಪಂದ್ಯ ಮುಗಿದಂತೆ) ರನ್ವಯ ಮುಗಿದಂತಲ್ಲ ಮತ್ತು ನಿಯಮ ೧೬(ಫಲಿತಾಂಶ) ರ ಅಡಿಯಲ್ಲಿ ಯಾವುದೇ ಫಲಿತಾಂಶ ಬರುವುದಿಲ್ಲ. |
| **42.7 Additional points relating to Level 3 and Level 4 offences.**<br><br>42.7.1 If a player, while acting as wicketkeeper, commits a Level 3 or Level 4 offence, Law 24.1.2 (Substitute fielders) shall not apply, meaning that only a nominated player may act as wicket-keeper, even if another fielder becomes injured or ill and is replaced by a substitute.<br>42.7.2 A nominated player who has a substitute or has a runner will suffer a penalty for any Level 3 or Level 4 offence committed by that substitute or by that runner. | **೪೨.೭ ೩ನೇ ಪಾತಳಿ ಮತ್ತು ೪ನೇ ಪಾತಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಅಂಶಗಳು**<br>೪೨.೭.೧ ಘೂಟ ರಕ್ಷಕನಾಗಿ ಕಾರ್ಯನಿರ್ವಹಿಸುತ್ತಿರುವ ಆಟಗಾರನು ೩ನೇ ಅಥವಾ ೪ನೇ ಪಾತಳಿಯ ಅಪರಾಧ ಎಸಗಿದರೆ, ನಿಯಮ ೨೪.೧.೨ (ಬದಲಿ ಕ್ಷೇತ್ರ ರಕ್ಷಕ) ಅನ್ವಯವಾಗುವುದಿಲ್ಲ, ಅರ್ಥಾತ್, ಮತ್ತೊಬ್ಬ ಕ್ಷೇತ್ರ ರಕ್ಷಕ ಗಾಯಗೊಂಡು ಅಥವಾ ಅಸ್ವಸ್ಥನಾಗಿ ಬದಲಿ ಆಟಗಾರನಿಂದ ಬದಲಿಸಲ್ಪಟ್ಟರೂ, ನೇಮಕಗೊಂಡ ಆಟಗಾರ ಮಾತ್ರ ಘೂಟ ರಕ್ಷಕನಾಗಿ ಕಾರ್ಯನಿರ್ವಹಿಸಬಹುದು.<br>೪೨.೭.೨ ಬದಲಿ ಆಟಗಾರ ಅಥವಾ ಓಟಗಾರ ೩ನೇ ಅಥವಾ ೪ನೇ ಪಾತಳಿಯ ಅಪರಾಧ ಮಾಡಿದರೆ, ಅಂತಹ ಬದಲಿ ಆಟಗಾರ ಅಥವಾ ಓಟಗಾರನನ್ನು ಹೊಂದಿರುವ ನೇಮಕಗೊಂಡ ಆಟಗಾರನೂ ಸಹ ದಂಡಕ್ಕೆ ಒಳಗಾಗುತ್ತಾನೆ/ಒಳಗಾಗುತ್ತಾಳೆ. |

| | |
|---|---|
| 42.7.2.1 When the offence is committed by a substitute, the nominated player and substitute will each suffer the penalty defined in 42.4.2.3 or in 42.5.2.3 as appropriate. Only the substitute will be reported as in 42.4.2.5 or 42.5.2.5.<br><br>42.7.2.2 When the offence is committed by a runner, the batter who has the runner and the runner will each suffer the penalty defined in 42.4.2.3 or in 42.5.2.3as appropriate. The penalty for a Level 4 offence (see 42.5.2.3) will apply to the runner for the remainder of the match, but in only the current innings to the batter for whom the runner acted. Only the runner and captain will be reported as in 42.4.2.5 or 42.5.2.5. | ೪೨.೭.೨.೧ ಬದಲಿ ಆಟಗಾರ ಅಪರಾಧ ಮಾಡಿದಾಗ, ನೇಮಕಗೊಂಡ ಆಟಗಾರ ಮತ್ತು ಅವನ/ಅವಳ ಬದಲಿ ಆಟಗಾರ ಇಬ್ಬರೂ ನಿಯಮ ೪೨.೪.೨.೩ ಅಥವಾ ೪೨.೫.೨.೩ರನ್ವಯ ಯಾವುದು ಸಮಂಜಸವೊ ಅದರ ಅನ್ವಯ ಶಿಕ್ಷೆ ಅನುಭವಿಸಬೇಕು.. ಕೇವಲ ಬದಲಿ ಆಟಗಾರನ ಬಗ್ಗೆ ಮಾತ್ರ ೪೨.೪.೨.೫ ಅಥವಾ ೪೫.೫.೨.೫ ರನ್ವಯ ವರದಿ ಸಲ್ಲಿಸಬೇಕು.<br>೪೨.೭.೨.೨ ಬದಲಿ ಓಟಗಾರ ಅಪರಾಧ ಮಾಡಿದಾಗ, ನೇಮಕಗೊಂಡ ಆಟಗಾರ ಮತ್ತು ಅವನ/ಅವಳ ಬದಲಿ ಓಟಗಾರ ಇಬ್ಬರೂ ನಿಯಮ ೪೨.೪.೨.೩ ಅಥವಾ ೪೨.೫.೨.೩ರನ್ವಯ ಯಾವುದು ಸಮಂಜಸವೊ ಅದರ ಅನ್ವಯ ಶಿಕ್ಷೆ ಅನುಭವಿಸಬೇಕು. ೪ನೇ ಹಂತದ ಶಿಕ್ಷೆ (೪೨.೫.೨.೩) ಬದಲಿ ಓಟಗಾರನಿಗೆ ಇಡಿ ಪಂದ್ಯಕ್ಕೆ ಮತ್ತು ಬದಲಿ ಓಟಗಾರ ಯಾವ ನೇಮಕಗೊಂಡ ಆಟಗಾರನಿಗಾಗಿ ಬಂದಿದ್ದನೋ ಅವನಿಗೆ ಚಾಲ್ತಿಯಲ್ಲಿರುವ ಸರದಿಗೆ ಮಾತ್ರ ಅನ್ವಯಿಸುತ್ತದೆ. ಬದಲಿ ಓಟಗಾರ ಮತ್ತು ನಾಯಕನ ಮೇಲೆ ನಿಯಮ ೪೨.೪.೨.೫ ಅಥವಾ ೪೨.೫.೨.೫ ರ ಪ್ರಕಾರ ವರದಿ ಮಾಡಬೇಕು. |
| **APPENDIX A** | **ಅನುಬಂಧ ಎ** |
| **DEFINITIONS AND EXPLANATIONS OF WORDS OR PHRASES NOT DEFINED IN THE TEXT**<br>**A1 The match**<br>A1.1 **The game** is used in these Laws as a general term meaning the Game of Cricket. | **ಉಪಯೋಗಿಸಿದ ಪದಗಳ ವ್ಯಾಖ್ಯಾನ ಮತ್ತು ವಿವರಣೆ**<br>ಎ೧ **ಪಂದ್ಯ**<br>ಎ ೧.೧ **ಆಟ** ಇದನ್ನು ಈ ನಿಯಮಗಳಲ್ಲಿ ಕ್ರಿಕೆಟ್ ಆಟಕ್ಕೆ ಸರ್ವೆ ಸಾಮಾನ್ಯವಾಗಿ ಉಪಯೋಗಿಸಲಾಗದ ಪದ. |

| | |
|---|---|
| A1.2 **A match** is a single encounter (or contest) between two sides (or teams), played under the Laws of Cricket. | ಎ ೧.೨ **ಪಂದ್ಯ** ಕ್ರಿಕೆಟ್ ನಿಯಮಗಳ ಅಡಿಯಲ್ಲಿ ಎರಡು ತಂಡಗಳ ನಡುವೆ ನಡೆಯುವ ಒಂದು ಪೈಪೋಟಿ. |
| A1.3 **The toss** is the toss for choice of innings. | ಎ ೧.೩ **ನಾಣ್ಯ ಚಿಮ್ಮುವಿಕೆ** ಸರದಿಯ ಆಯ್ಕೆಗೆ ನಾಣ್ಯ ಚಿಮ್ಮುವುದು. |
| A1.4 **Before the toss** is at any time before the toss on the day the match is expected to start. or, in the case of a one-day match, on the day the match is due to take place. | ಎ ೧.೪ **ನಾಣ್ಯ ಚಿಮ್ಮುವ ಮೊದಲು** ಪಂದ್ಯ ಪ್ರಾರಂಭವಾಗುವ ದಿವಸ ಅಥವಾ ಒಂದು ದಿನದ ಪಂದ್ಯವಾದಲ್ಲಿ ಪಂದ್ಯದ ದಿವಸ ನಾಣ್ಯ ಚಿಮ್ಮುವಿಕೆಯ ಮೊದಲಿನ ಯಾವುದೇ ಸಮಯ. |
| A1.5 **Before the match** is at any time before the toss, not restricted to the day on which the toss is to take place. | ಎ ೧.೫ **ಪಂದ್ಯಕ್ಕೆ ಮೊದಲು** ಅಂದರೆ ನಾಣ್ಯ ಚಿಮ್ಮುವ ಮೊದಲು, ನಾಣ್ಯ ಚಿಮ್ಮುವುದು ಯಾವ ದಿನ ಆಗಬೇಕೆಂಬುದಕ್ಕೆ ನಿರ್ಬಂಧವಿಲ್ಲ. |
| A1.6 **During the match** is at any time after the toss until the conclusion of the match, whether play is in progress or not. | ಎ ೧.೬ **ಪಂದ್ಯ ನಡೆಯುತ್ತಿರುವಾಗ** ಪಂದ್ಯ ನಡೆಯುತ್ತಿರಲಿ ಬಿಡಲಿ. ನಾಣ್ಯ ಚಿಮ್ಮುವ ಸಮಯದಿಂದ ಪಂದ್ಯ ಮುಗಿಯುವವರೆಗಿನ ಯಾವುದೇ ಸಮಯ, |
| A1.7 **Playing time** is any time between the call of Play and the call of Time. See Laws 12.1 (Call of Play) and 12.2 (Call of Time). | ಎ ೧.೭ **ಆಟದ ಸಮಯ** "ಪ್ಲೇ" ಮತ್ತು "ಟೈಂ" ಕರೆಯ ಮಧ್ಯದ ಸಮಯ. ನಿಯಮ ೧೨.೧("ಪ್ಲೇ" ಕರೆಯುವುದು) ಮತ್ತು ೧೨.೨("ಟೈಂ" ಕರೆಯುವುದು) ಗಮನಿಸಿ. |
| A1.8 **Conduct of the match** includes any action relevant to the match at any time on any day of the match. | ಎ ೧.೮ **ಪಂದ್ಯದ ನಿರ್ವಹಣೆ** ಪಂದ್ಯ ನಡೆಯುವ ಯಾವುದೇ ದಿನದ ಯಾವುದೇ ಸಮಯದಲ್ಲಿ ಪಂದ್ಯಕ್ಕೆ ಸಂಬಂಧಿಸಿದ ಘಟನೆ. |
| A2 **Implements and equipment** | **ಎ ೨ ಉಪಕರಣಗಳು ಮತ್ತು ಸಾಮಗ್ರಿಗಳು** |
| A2.1 **Implements** used in the match are the bat, the ball, the stumps and bails. | ಎ ೨.೧ **ಪಂದ್ಯದಲ್ಲಿ ಉಪಯೋಗಿಸುವ ಉಪಕರಣಗಳು** ದಾಂಡು, ಚೆಂಡು, ಘೂಟಗಳು ಮತ್ತು ಬೇಲ್ಸ್. |
| A2.2 **External protective equipment** is any visible item of apparel worn for protection against external blows. | |

**For a batter**, items permitted are a protective helmet, external leg guards (batting pads), batting gloves and, if visible, forearm guards.

**For a fielder**, only a protective helmet is permitted, except in the case of a wicketkeeper, for whom wicket-keeping pads and gloves are also permitted.

A2.3 **protective helmet** is headwear made of hard material and designed to protect the head, neck and/or the face. For the purposes of interpreting these Laws of Cricket, such a description will include faceguards, grilles, and neck guards.

**A2.4 Equipment** – a **batter's equipment** is his/her bat as defined above, together with any external protective equipment he/she is wearing.

A **fielder's equipment** is any external protective equipment that he/she is wearing.

**A2.5 The bat** – the following are to be considered as part of the bat:

– the whole of the bat itself.

– the whole of a glove (or gloves) worn on the hand (or hands) holding the bat.

ಎ ೨.೨ **ಬಾಹ್ಯ ಸುರಕ್ಷಾ ಸಾಮಗ್ರಿ** ಬಾಹ್ಯ ಹೊಡೆತಗಳಿಂದ ರಕ್ಷಿಸಿಕೊಳ್ಳಲು ಹಾಕಿಕೊಂಡ ಕಣ್ಣಿಗೆ ಕಾಣುವ ಯಾವುದೇ ಉಡುಪು.

**ದಾಂಡಿಗನಿಗೆ** ಅನುಮತಿಸಿರುವ ಸಾಮಗ್ರಿಗಳು - ಸುರಕ್ಷಾ ಶಿರಸ್ತ್ರಾಣ, ಬಾಹ್ಯ ಕಾಲಿನ ಕವಚ (ಬ್ಯಾಟಿಂಗ್ ಪ್ಯಾಡ್ಸ್) , ಬ್ಯಾಟಿಂಗ್ ಕೈಗವಚ ಮತ್ತು ಕಾಣಿಸುತ್ತಿದ್ದರೆ ಮುಂಗೈ ಕವಚ.

**ಕ್ಷೇತ್ರ ರಕ್ಷಕನಿಗೆ** ಕೇವಲ ಸುರಕ್ಷಾ ಶಿರಸ್ತ್ರಾಣವನ್ನು ಅನುಮತಿಸಲಾಗಿದ್ದು, ಘೂಟ ರಕ್ಷಕನಿಗೆ ಘೂಟ ರಕ್ಷಣೆ ಕಾಲು ಕವಚ ಮತ್ತು ಕೈಗವಚ ಅನುಮತಿಸಿದೆ.

ಎ ೨.೩ **ಸುರಕ್ಷಾ ಶಿರಸ್ತ್ರಾಣ** ತಲೆ, ಕುತ್ತಿಗೆ ಮತ್ತು /ಅಥವಾ ಮುಖ ಅಥವಾ ಎರಡನ್ನೂ ರಕ್ಷಿಸಿಕೊಳ್ಳಲು ಗಟ್ಟಿಯಾದ ಪದಾರ್ಥದಿಂದ ತಯಾರಿಸಿದ ತಲೆಗೆ ಧರಿಸುವ ಶಿರಸ್ತ್ರಾಣ. ಕ್ರಿಕೆಟ್ ನಿಯಮಗಳನ್ನು ಅರ್ಥೈಸುವ ಸಲುವಾಗಿ ಈ ವಿವರಣೆ ಮುಖ ಜಾಳಿಗೆ ಮತ್ತು ಕುತ್ತಿಗೆ ರಕ್ಷಕವನ್ನೂ ಒಳಗೊಳ್ಳುತ್ತದೆ.

ಎ ೨.೪ **ಉಪಕರಣ** - ದಾಂಡಿಗನ ಉಪಕರಣ ಎಂದರೆ ಮೇಲೆ ವಿವರಿಸಿದಂತೆ ಅವನ/ಅವಳ ದಾಂಡು ಹಾಗೂ ಅವನು/ಅವಳು ಧರಿಸಿದ ಬೇರಾವುದೇ ರಕ್ಷಣಾ ಉಪಕರಣ

ಕ್ಷೇತ್ರ ರಕ್ಷಕನ ಉಪಕರಣ ಅವನು/ಅವಳು ಧರಿಸಿದ ಬಾಹ್ಯ ರಕ್ಷಣಾ ಉಪಕರಣ.

ಎ ೨.೫ **ದಾಂಡು** – ಈ ಕೆಳಗಿನವುಗಳು ದಾಂಡಿನ ಭಾಗವೆಂದು ಪರಿಗಣಿಸಬೇಕು:

– the hand (or hands) holding the bat if the batter is not wearing a glove on that hand or on those hands.

A2.6 **Held in batter's hand.** Contact between a batter's hand, or glove worn on his/her hand, and any part of the bat shall constitute the bat being held in that hand.

**A3 The playing area**

A3.1 **The field of play** is the area contained within the boundary.

A3.2 **The square** is a specially prepared area of the field of play within which the match pitch is situated.

A3.3 **The outfield** is that part of the field of play between the square and the boundary.

A4 **Positioning**

A4.1 **Behind the popping crease** at one end of the pitch is that area of the field of play, including any other marking, objects and persons therein, that is on that side of the popping crease that does not include the creases at the opposite end of the pitch.

Behind, in relation to any other marking, object or person, follows the same principle. See the diagram in A 13.

- ಇಡೀ ದಾಂಡು.
- ದಾಂಡನ್ನು ಹಿಡಿದಿರುವ ಕೈ(ಗಳಿ)ಗೆ ಹಾಕಿಕೊಂಡಿರುವ ಪೂರ್ತಿ ಕೈ ಗವಚ (ಇಲ್ಲವೇ ಕೈ ಗವಚಗಳು)
- ದಾಂಡನ್ನು ಹಿಡಿದಿರುವ ಕೈ(ಕೈಗಳು), ದಾಂಡಿಗನು ಆ ಕೈಗೆ (ಕೈ ಗಳಿಗೆ) ಕೈಗವಚ(ಗಳನ್ನು) ಹಾಕಿಕೊಂಡಿರದಿದ್ದರೆ.

ಎ ೨.೬ **ದಾಂಡಿಗನು ಕೈಯಲ್ಲಿ ಹಿಡಿದಿರುವುದು**.- ದಾಂಡಿಗನ ಕೈ ಅಥವಾ ಅವನ/ಅವಳ ಕೈಗೆ ಧರಿಸಿದ ಕೈಗವಚಕ್ಕೆ ದಾಂಡಿನ ಯಾವುದೇ ಭಾಗ ಸಂಪರ್ಕಗೊಂಡಿದ್ದರೆ ಅದು ದಾಂಡು ಕೈಯಲ್ಲಿ ಹಿಡಿದಿದ್ದಾನೆ ಎಂದು ಅರ್ಥೈಸಬೇಕು.

**ಎ ೩ ಆಡುವ ಜಾಗ (ಪ್ರದೇಶ)**

ಎ ೩.೧ **ಆಟದ ಮೈದಾನ** ಬೌಂಡರಿ ರೇಖೆಯ ಒಳಗಿನ ಜಾಗ.

ಎ ೩.೨ **ಚೌಕಾಕಾರ** ಆಟದ ಮೈದಾನದಲ್ಲಿ ವಿಶೇಷವಾಗಿ ತಯಾರಿಸಿದ ಜಾಗ(ಪ್ರದೇಶ), ಅದರಲ್ಲಿ ಆಟದ ಪಟ್ಟಿ ಇರುತ್ತದೆ.

ಎ ೩.೩ **ಹೊರ ಮೈದಾನ** ಚೌಕಾಕಾರ ಮತ್ತು ಬೌಂಡರಿ ರೇಖೆಯ ನಡುವಿನ ಜಾಗ.

**ಎ ೪ ಸ್ಥಾನ**

ಎ ೪.೧ **ಪಾಪಿಂಗ್ ರೇಖೆಯ ಹಿಂದೆ** ಆಟದ ಮೈದಾನದ ಒಂದು ತುದಿಯಲ್ಲಿರುವ ಆ ಜಾಗ, ಇದು ಯಾವುದೇ ಚಿನ್ಹೆಗಳು, ವಸ್ತುಗಳು ಮತ್ತು ಅಲ್ಲಿರುವ ವ್ಯಕ್ತಿಗಳನ್ನೂ ಒಳಗೊಂಡಂತೆ, ಅದು ಪಾಪಿಂಗ್ ರೇಖೆಯ ಯಾವ ಬದಿಗೆಂದರೆ ಎದುರು ಬದಿಯ ಕ್ರೀಸ್‌ಗಳನ್ನು ಒಳಗೊಳ್ಳದಿರುವ ಜಾಗ. ಬೇರಾವುದೇ ಚಿನ್ಹೆ, ವಸ್ತು ಅಥವಾ ವ್ಯಕ್ತಿಗೆ

A4.2 **In front of the popping crease** at one end of the pitch is that area of the field of play, including any other marking, objects and persons therein, that is on that side of the popping crease that includes the creases at the opposite end of the pitch. In front of, in relation to any other marking, object or person, follows the same principle. See the diagram in A 13.

A4.3 **The striker's end** is the place where the striker stands to receive a delivery from the bowler only insofar as it identifies, independently of where the striker may subsequently move, one end of the pitch.

A4.4 **The bowler's end** is the end from which the bowler delivers the ball. It is the other end of the pitch from the striker's end and identifies that end of the pitch that is not the striker's end as described in A4.3.

A4.5 **The wicket-keeper's end** is the same as the striker's end as described in A4.3.

ಸಂಬಂಧಿಸಿದಂತೆ ಸಮಾನ ತತ್ವವನ್ನು ಅನುಸರಿಸಬೇಕು. ಚಿತ್ರ ಎ-೧೩ ಗಮನಿಸಿ.

ಎ ೪.೨ **ಪಾಪಿಂಗ್ ರೇಖೆಯ ಹಿಂದೆ** ಆಟದ ಮೈದಾನದ ಒಂದು ತುದಿಯಲ್ಲಿರುವ ಆ ಜಾಗ, ಇದು ಯಾವುದೇ ಚಿನ್ಹೆಗಳು, ವಸ್ತುಗಳು ಮತ್ತು ಅಲ್ಲಿರುವ ವ್ಯಕ್ತಿಗಳನ್ನೂ ಒಳಗೊಂಡಂತೆ, ಅದು ಪಾಪಿಂಗ್ ರೇಖೆಯ ಯಾವ ಬದಿಗೆಂದರೆ ಎದುರು ಬದಿಯ ಕ್ರೀಸ್ ಗಳನ್ನು ಒಳಗೊಂಡ ಜಾಗ. ಬೇರಾವುದೇ ಚಿನ್ಹೆ, ವಸ್ತು ಅಥವಾ ವ್ಯಕ್ತಿಗೆ ಸಂಧಿಸಿದಂತೆ ಸಮಾನ ತತ್ವವನ್ನು ಅನುಸರಿಸಬೇಕು. ಚಿತ್ರ ಎ-೧೩ ಗಮನಿಸಿ.

ಎ ೪.೩ **ಚೆಂಡನ್ನೆದುರಿಸುವ ದಾಂಡಿಗನ ತುದಿ** ಕೇವಲ ಬೌಲರ್ ಬೌಲ್ ಮಾಡಿದ ಚೆಂಡನ್ನು ಎದುರಿಸಲು ದಾಂಡಿಗನು ನಿಲ್ಲುವ ಸ್ಥಳ. ಇದು ಕೇವಲ ಗುರುತು ಮಾಡಲು ಮಾತ್ರ, ತದನಂತರ ಚೆಂಡನ್ನೆದುರಿಸುವ ದಾಂಡಿಗನು ಸ್ಥಳ ಬದಲಾಯಿಸಿದರೂ ಇದು ಸ್ವತಂತ್ರ ಹಾಗೂ ಬದಲಾಗುವುದಿಲ್ಲ.

ಎ ೪.೪ **ಬೌಲರ್ ತುದಿ** ಬೌಲರ್ ಬೌಲ್ ಮಾಡುವ ತುದಿ. ಇದು ಆಟದ ಪಟ್ಟಿಯಲ್ಲಿಯ ಚೆಂಡನ್ನೆದುರಿಸುವ ದಾಂಡಿಗನ ತುದಿಯ ವಿರುದ್ಧ ತುದಿ ಮತ್ತು ಎ ೪.೩ ನಲ್ಲಿ ವಿವರಿಸಿದಂತೆ ಚೆಂಡನ್ನೆದುರಿಸುವ ದಾಂಡಿಗನ ತುದಿ ಅಲ್ಲ.

ಎ ೪.೫ **ಘೂಟ ರಕ್ಷಕನ ತುದಿ** ಎ೪.೩ರಲ್ಲಿ ವಿವರಿಸಿದಂತೆ ಚೆಂಡನ್ನು ಎದುರಿಸುವ ದಾಂಡಿಗನ ತುದಿ.

A4.**6 In front of the line of the striker's wicket** is in the area of the field of play in front of the imaginary line joining the fronts of the stumps at the striker's end; this line to be considered extended in both directions to the boundary. See A4.2.

A4.7 **Behind the wicket** is in the area of the field of play behind the imaginary line joining the backs of the stumps at the appropriate end; this line to be considered extended in both directions to the boundary. See A4.1.

A4.8 **Behind the wicket-keeper** is behind the wicket at the striker's end, as defined above, but in line with both sets of stumps and further from the stumps than the wicket-keeper.

A4.9 **Offside/on side** – see diagram in A13

**A4.10 Inside edge** is the edge on the same side as the nearer wicket.

A5 **Umpires**

A5.**1 Umpire** – where the description **the umpire** is used on its own, it always means 'the bowler's end umpire' though this full description is sometimes used for emphasis or clarity. Similarly, **the umpires** always means both umpires.

ಎ ೪.೬ **ಚೆಂಡನ್ನು ಎದುರಿಸುವ ದಾಂಡಿಗನ ವಿಕೆಟ್ಟಿನ ಮುಂಭಾಗ** ದಾಂಡಿಗನ ತುದಿಯ ಘೂಟಗಳ ಮುಂಭಾಗವನ್ನು ಜೋಡಿಸುವ ಕಾಲ್ಪನಿಕ ರೇಖೆಯ ಮುಂಭಾಗದಲ್ಲಿರುವ ಆಟದ ಮೈದಾನದ ಪ್ರದೇಶ. ಈ ರೇಖೆಯನ್ನು ಎರಡೂ ದಿಕ್ಕಿನಲ್ಲಿ ಕಾಲ್ಪನಿಕವಾಗಿ ಬೌಂಡರಿ ರೇಖೆಯವರೆಗೂ ಬೆಳೆಸಬೇಕು. ಎ ೪.೨ ಗಮನಿಸಿ.

ಎ ೪.೭ **ವಿಕೆಟ್ಟಿನ ಹಿಂಭಾಗ** ಆಯಾ ತುದಿಯಲ್ಲಿರುವ ಘೂಟಗಳ ಹಿಂಭಾಗವನ್ನು ಜೋಡಿಸುವ ಕಾಲ್ಪನಿಕ ರೇಖೆಯ ಹಿಂಭಾಗದ ಆಟದ ಮೈದಾನದ ಜಾಗ. ಈ ರೇಖೆಯು, ಎರಡೂ ದಿಕ್ಕಿನಲ್ಲಿ ಬೌಂಡರಿವರೆಗೂ ಇದೆ ಎಂದು ಪರಿಗಣಿಸಬೇಕು. ಎ ೪.೧ ಗಮನಿಸಿ.

ಎ ೪.೮ **ಘೂಟರಕ್ಷಕನ ಹಿಂಭಾಗ** ಮೇಲೆ ತಿಳಿಸಿರುವಂತೆ ಚೆಂಡನ್ನೆದುರಿಸುವ ದಾಂಡಿಗನ ತುದಿಯಲ್ಲಿರುವ ವಿಕೆಟ್ಟಿನ ಹಿಂಭಾಗ ಆದರೆ ಎರಡೂ ಬದಿಯ ಘೂಟಗಳ ಸಮೂಹದ ರೇಖೆಯಲ್ಲಿ ಘೂಟರಕ್ಷಕನಿಂದ ದೂರ.

ಎ ೪.೯ **ಆಫ್ ಸೈಡ್ / ಆನ್ ಸೈಡ್ - ಎ ೧೩ರಲ್ಲಿಯ ಚಿತ್ರ ಗಮನಿಸಿ.**

ಎ ೪.೧೦ **ಅಂಚಿನ ಒಳಭಾಗ** ವಿಕೆಟ್ಟಿಗೆ ಹತ್ತಿರದ ಬದಿಯಲ್ಲಿರುವ ಅಂಚು.

**ಎ ೫ ಅಂಪೈರ್**

ಎ ೫.೧ **ಅಂಪೈರ್ -** ಎಲ್ಲೆಲ್ಲಿ ಅಂಪೈರ್ ಎಂಬ ಪದ ಉಪಯೋಗಿಸಲಾಗಿದೆಯೋ ಅಲ್ಲಿ ಅದನ್ನು ಬೌಲರ್ ತುದಿಯ

**An umpire** and **umpires** are generalised terms. Otherwise, a fuller description indicates which one of the umpires is specifically intended. Each umpire will be bowler's end umpire and striker's end umpire in alternate overs.

A5.2 **Bowler's end umpire** is the umpire who is standing at the bowler's end (see A4.4) for the current delivery.

A5.3 **Striker's end umpire** is the umpire who is standing at the striker's end (see A4.3), to one side of the pitch or the other, depending on his/her choice, for the current delivery.

A5.4 **Umpires together agree** applies to decisions which the umpires are to make jointly, independently of the players.

**A6 Batters**

A6.1 **Batting side** is the side currently batting, whether or not play is in progress.

ಅಂಪೈರ್ ಎಂದು ಪರಿಗಣಿಸಬೇಕು. ಆದಾಗ್ಯೂ ಕೆಲ ಸಂದರ್ಭಗಳಲ್ಲಿ ಪ್ರಾಧಾನ್ಯತೆ ಅಥವಾ ಸ್ಪಷ್ಟೀಕರಣಕ್ಕಾಗಿ ಪೂರ್ತಿಯಾಗಿ ಉಪಯೋಗಿಸಲಾಗಿದೆ. ಅದರಂತೆ ಅಂಪೈರ್‌ಗಳು ಎಂದು ಉಪಯೋಗಿಸಿದ ಕಡೆ ಎಲ್ಲ ಇಬ್ಬರೂ ಅಂಪೈರ್ ಎಂದು ಅರ್ಥೈಸಬೇಕು. ಅಂಪೈರ್ ಹಾಗೂ ಅಂಪೈರ್‌ಗಳು ಸಾಮಾನ್ಯವಾದ ಪದಗಳಾಗಿವೆ. ಹಾಗಲ್ಲದಿದ್ದರೆ, ಪೂರ್ಣ ವಿವರಣೆ ನಿರ್ದಿಷ್ಟವಾಗಿ ಯಾವ ಅಂಪೈರ್ ಎಂದು ತಿಳಿಸುತ್ತದೆ. ಪ್ರತಿ ಅಂಪೈರ್ ಅದಲು ಬದಲು ಓವರ್‌ಗಳಿಗೆ ಬೌಲರ್ ತುದಿಯ ಮತ್ತು ಚೆಂಡನ್ನೆದುರಿಸುವ ದಾಂಡಿಗನ ತುದಿಯ ಅಂಪೈರ್ ಆಗಿರುತ್ತಾರೆ.

ಎ ೫.೨ ಬೌಲ ತುದಿಯ ಅಂಪೈರ ಎಂದರೆ ಬೌಲರ್ ತುದಿಗೆ (ಅ೪.೪ ಗಮನಿಸಿ) ಚಾಲ್ತಿಯಲ್ಲಿರುವ ಎಸೆತಕ್ಕೆ ನಿಂತಿರುವ ಅಂಪೈರ್.

ಎ ೫.೩ ಚೆಂಡನ್ನೆದುರಿಸುವ ದಾಂಡಿಗನ ತುದಿಯಲ್ಲಿರುವ ಅಂಪೈರ್ ಎಂದರೆ ಚೆಂಡನ್ನೆದುರಿಸುವ ದಾಂಡಿಗನ ತುದಿಯಲ್ಲಿ(ಎ೪.೩ ಗಮನಿಸಿ) ಆಟದ ಪಟ್ಟಿಯ ಇ ಬದಿಗೆ ಅಥವಾ ಆ ಬದಿಗೆ ಅಂಪೈರ್ ತನಗೆ ಸರಿಕಂಡಂತೆ ಚಾಲ್ತಿಯಲ್ಲಿರುವ ಎಸೆತಕ್ಕೆ ನಿಂತಿರುವ ಅಂಪೈರ್

ಎ ೫.೪ ಇಬ್ಬರೂ ಅಂಪೈರ್ ಒಪ್ಪುರಿವ ನಿರ್ಣಯ ಎಂದರೆ ಇಬ್ಬರೂ ಅಥವಾ ಒಬ್ಬನೇ ಅಂಪೈರ್ ಆಟಗಾರರಿಂದ ಸ್ವತಂತ್ರವಾಗಿ ತೆಗೆದುಕೊಂಡ ನಿರ್ಣಯ.

**ಎ ೬ ದಾಂಡಿಗರು**

ಎ ೬.೧ **ದಾಂಡಿಗ ತಂಡ** ಆಟವು ಚಾಲ್ತಿಯಲ್ಲಿರಲಿ ಬಿಡಲಿ, ಪ್ರಸ್ತುತ ಬ್ಯಾಟಿಂಗ್ ಆಡುತ್ತಿರುವ ತಂಡ.

A6.2 **Member of the batting side** is one of the players nominated by the captain of the batting side, or any authorised replacement for such nominated player.

**A6.3 The striker** is the batter who receives the ball delivered by the bowler.

**A.6.4 The non-striker** is the batter whose ground is at the bowler's end when the ball is delivered.

**A.6.5 A batter's ground** – at each end of the pitch, the whole area of the field of play behind the popping crease is the ground at that end for a batter.

**A.6.6 Original end** is the end where a batter was when the ball came into play for that delivery.

**A.6.7 Wicket he/she has left** is the wicket at the end where a batter was at the start of the run-in progress.

**A.6.**8 A batting position is the position and posture adopted by the striker to receive a ball delivered by the bowler. A normal batting position is one from which a striker could be reasonably expected to defend his/her wicket.

**A.6.9** For the purposes of these Laws, **waist height** is defined as the point at which the top of the batter's trousers

ಎ ೬.೨ **ದಾಂಡಿಗ ತಂಡದ ಸದಸ್ಯ** ದಾಂಡಿಗ ತಂಡದ ನಾಯಕನಿಂದ ನೇಮಕಗೊಂಡ ಪ್ರಸ್ತುತ ಬ್ಯಾಟಿಂಗ್ ಮಾಡುತ್ತಿರುವ ತಂಡದ ಆಟಗಾರ ಅಥವಾ ಅಂತಹ ನೇಮಕಗೊಂಡ ಆಟಗಾರನ ಪ್ರತಿಯಾಗಿ ಬರುವ ಅಧಿಕೃತ ಆಟಗಾರ.

ಎ ೬.೩ **ಚೆ0ಡನ್ನೆದಿರುಸ ದಾ0ಡಿಗ** ಬೌಲರ್ ಎಸೆದ ಚೆ0ಡನ್ನು ಆಡುವ ದಾ0ಡಿಗ (ದಾಂಡಿಗ).

ಎ ೬.೪ **ಚೆ0ಡನ್ನೆದುರಿಸದ ದಾ0ಡಿಗ** ಚೆ0ಡನ್ನು ಎಸೆದಾಗ ಯಾವ ದಾ0ಡಿಗನ ನಿಗದಿತ ಜಾಗ ಬೌಲರ್ ತುದಿಯಲ್ಲಿ ಇರುತ್ತದೋ ಅವನು/ಳು.

ಎ ೬.೫ **ದಾಂಡಿಗನ ನಿಗದಿತ ಜಾಗ** - ಆಟದ ಪಟ್ಟಿಯ ಪ್ರತಿಯೊಂದು ತುದಿಯಲ್ಲಿ, ಆ ತುದಿಯ ಪಾಪಿಂಗ್ ರೇಖೆಯ ಹಿಂಭಾಗದಲ್ಲಿರುವ ಇಡೀ ಆಟದ ಮೈದಾನವು ಆ ತುದಿಯಲ್ಲಿರುವ ದಾಂಡಿಗನ ನಿಗದಿತ ಜಾಗ.

ಎ ೬.೬ **ಮೂಲ ತುದಿ** – ಚೆಂಡು ಆ ಎಸೆತಕ್ಕೆ ಆಟದಲ್ಲಿ ಬಂದ ಕ್ಷಣದಲ್ಲಿ ದಾಂಡಿಗನು ಇದ್ದ ತುದಿ.

ಎ.೬.೭ **ವಿಕೆಟನ್ನು ಅವನು/ಅವಳು ಬಿಟ್ಟಿದ್ದಾನೆ/ಬಿಟ್ಟಿದ್ದಾಳೆ –** ಓಟದ ಪ್ರಾರಂಭದಲ್ಲಿ ದಾಂಡಿಗನು ಇದ್ದ ತುದಿ.

ಎ.೬. ೮ **ಬ್ಯಾಟಿ0ಗ ಸ್ಥಾನ –** ಬೌಲರ್ ಬೌಲ್ ಮಾಡಿದ ಚೆಂಡನ್ನು ಎದುರಿಸಲು ದಾಂಡಿಗನು ನಿಂತುಕೊಂಡ ಸ್ಥಾನ ಮತ್ತು ತೆಗೆದುಕೊಂಡ ಭಂಗಿ. ಸಾಮಾನ್ಯವಾಗಿ ನಿ0ತುಕೊಳ್ಳುವ ಬ್ಯಾಟಿ0ಗ ಸ್ಥಾನ ಎ0ದರೆ, ಅಲ್ಲಿ0ದ ಚೆ0ಡನ್ನೆದಿರುಸುವ ದಾ0ಡಿಗನು

would conventionally be when he/she is standing upright at the popping crease.

**A7 Fielders**

A7.1 Fielding side is the side currently fielding, whether or not play is in progress.

A7.2 Member of the fielding side is one of the players nominated by the captain of the fielding side, or any authorised replacement or substitute for such nominated player.

A7.3 Fielder is one of the 11 or fewer players who together represent the fielding side on the field of play. This definition includes not only both the bowler and the wicket-keeper but also nominated players who are legitimately on the field of play, together with players legitimately acting as substitutes for absent nominated players. It excludes any nominated player who is absent from the field of play, or who has been absent from the

ಸಹಜವಾಗಿ ಬೌಲರ್ ಎಸೆದ ಚೆ0ಡಿನಿ0ದ ತನ್ನ ಘೂಟಗಳನ್ನು ರಕ್ಷಿಸಿಕೊಳ್ಳಬಹುದು.

ಎ.೬.೯ ಈ ನಿಯಮಗಳಿಗಾಗಿ, **ಸೊಂಟದ ಮಟ್ಟ** ಎಂದರೆ ದಾಂಡಿಗನು/ದಾಂಡಿಗಳು ಪೊಪಿಂಗ್ ಕ್ರೀಸ್ ಬಲಿ ನೇರವಾಗಿ ನಿಂತಾಗ ಅವನ/ಅವಳ ಪ್ಯಾಂಟಿನ ಮೆಲ್ ತುದಿ (ಸೊಂಟ ಪಟ್ಟಿ) ಸಾಮಾನ್ಯವಾಗಿ ಯಾವ ಮಟ್ಟದಲ್ಲಿರುತ್ತದೋ ಆ ಮಟ್ಟ.

**ಎ ೭ ಕ್ಷೇತ್ರ ರಕ್ಷಕ**

ಎ ೭.೧ **ಕ್ಷೇತ್ರ ರಕ್ಷಣೆ ತಂಡ** ಆಟವು ಪ್ರಗತಿಯಲ್ಲಿರಲಿ ಬಿಡಲಿ ಪ್ರಸ್ತುತ ಕ್ಷೇತ್ರ ರಕ್ಷಣೆ ಮಾಡುತ್ತಿರುವ ತಂಡ.

ಎ ೭.೨ **ಕ್ಷೇತ್ರ ರಕ್ಷಣೆ ತಂಡದ ಸದಸ್ಯ** ಕ್ಷೇತ್ರ ರಕ್ಷಣೆ ತಂಡದ ನಾಯಕನಿಂದ ನೇಮಕಗೊಂಡ ಪ್ರಸ್ತುತ ಕ್ಷೇತ್ರ ರಕ್ಷಣೆ ಮಾಡುತ್ತಿರುವ ತಂಡದ ಆಟಗಾರ ಅಥವಾ ಅಂತಹ ನೇಮಕಗೊಂಡ ಆಟಗಾರನ ಪ್ರತಿಯಾಗಿ ಬರುವ ಅಧಿಕೃತ ಆಟಗಾರ ಅಥವಾ ಬದಲಿ ಆಟಗಾರ.

ಎ ೭.೩ **ಕ್ಷೇತ್ರ ರಕ್ಷಕ** ಆಟದ ಮೈದಾನದಲ್ಲಿರುವ ೧೧ ಅಥವಾ ಅದಕ್ಕಿಂತ ಕಡಿಮೆ ಆಟಗಾರರನ್ನೊಳಗೊಂಡ ಕ್ಷೇತ್ರ ರಕ್ಷಣೆ ತಂಡವನ್ನು ಪ್ರತಿನಿಧಿಸುವ ಒಬ್ಬ ಆಟಗಾರ. ಈ ವ್ಯಾಖ್ಯಾನ ಕೇವಲ ಬೌಲರ್ ಮತ್ತು ಘೂಟ ರಕ್ಷಕರನ್ನಲ್ಲದೆ ಆಟದ ಮೈದಾನದೊಳಗೆ ನಿಯಮ ಬದ್ಧವಾಗಿರುವ ನೇಮಕಗೊಂಡ ಆಟಗಾರರ ಜೊತೆಗೆ ಗೈರುಹಾಜರಿರುವ ನೇಮಕಗೊಂಡ ಆಟಗಾರರ ಬದಲಿ ಆಟಗಾರರೂ ಒಳಗೊಂಡಿರುತ್ತಾರೆ. ಆಟದ ಮೈದಾನದ ಹೊರಗಿರುವ, ಈಗಾಗಲೇ

field of play and who has not yet obtained the umpire's permission to return.

A player going briefly outside the boundary in the course of discharging his/her duties as a fielder is not absent from the field of play nor, for the purposes of Law 24.2 (Fielder absent or leaving the field of play), is he/she to be regarded as having left the field of play.

**A8 Substitutes, Replacements and Runners**

A8.1 **A Substitute** is a player who takes the place of a fielder on the field of play but does not replace the player for whom he/she substitutes on that side's list of nominated players. A substitute's activities are limited to fielding.

A8.2 **A Replacement** is a player who takes the place of a nominated player and who, thereby, becomes a nominated player. A replacement's activities on the field of play are no more limited than those of any other nominated player.

ಹೊರಗಿದ್ದು ಒಳ ಬರಲು ಅಂಪೈರ್ ಅನುಮತಿಗೋಸ್ಕರ ಕಾಯುತ್ತಿರುವ ಯಾವುದೇ ನೇಮಕಗೊಂಡ ಆಟಗಾರನನ್ನು/ ಆಟಗಾರಳನ್ನು ಇದು ಒಳಗೊಳ್ಳುವುದಿಲ್ಲ.

ಕ್ಷೇತ್ರ ರಕ್ಷಕನೊಬ್ಬನು/ ಕ್ಷೇತ್ರ ರಕ್ಷಕರೊಬ್ಬಳು ತನ್ನ ನಿಯಮಿತ ಕ್ಷೇತ್ರ ರಕ್ಷಣೆ ಕಾರ್ಯದಲ್ಲಿ ತಾತ್ಪೂರ್ತಿಕವಾಗಿ ಆಟದ ಮೈದಾನದ ಹೊರ ಹೋದರೆ ಅದು ಆಟದ ಮೈದಾನದಿಂದ ಗೈರುಹಾಜರಿದ್ದಂತಾಗುವುದಿಲ್ಲ ಮತ್ತು ನಿಯಮ ೨೪.೨(ಕ್ಷೇತ್ರ ರಕ್ಷಕನ ಗೈರುಹಾಜರಿ ಇಲ್ಲವೇ ಆಟದ ಮೈದಾನ ಬಿಟ್ಟು ಹೋಗುವುದು) ರನ್ವಯ ಆಟದ ಮೈದಾನ ಬಿಟ್ಟು ಹೋಗಿದ್ದಾನೆಂದು ಪರಿಗಣಿಸಬಾರದು.

**ಎ ೮ ಬದಲಿ ಆಟಗಾರ, ಬದಲಾವಣೆ ಮತ್ತು ಓಟಗಾರ.**

ಎ ೮.೧ **ಬದಲಿ ಆಟಗಾರ -** ಆಟದ ಮೈದಾನದಲ್ಲಿ ಕ್ಷೇತ್ರ ರಕ್ಷಕನ ಸ್ಥಾನವನ್ನು ತೆಗೆದುಕೊಳ್ಳುವ ಆಟಗಾರ. ಆದರೆ ಯಾವ ಆಟಗಾರನ ಬದಲಾಗಿ ಬಂದಿರುತ್ತಾನೋ ಆ ಆಟಗಾರನನ್ನು ತಂಡದ ನೇಮಕಗೊಂಡ ಪಟ್ಟಿಯಿಂದ ಬದಲಾಯಿಸುವುದಿಲ್ಲ. ಬದಲಿ ಆಟಗಾರನ ಕರ್ತವ್ಯಗಳು ಕ್ಷೇತ್ರ ರಕ್ಷಣೆಗೆ ಮಾತ್ರ ಸೀಮಿತಗೊಳ್ಳುತ್ತದೆ.

ಎ ೮.೨ **ಬದಲಾದ ಆಗಾರ** – ನೇಮಕಗೊಂಡ ಆಟಗಾರನ ಸ್ಥಾನವನ್ನು ತೆಗೆದುಕೊಳ್ಳುತ್ತಾನೆ ಮತ್ತು ಅದರಿಂದ ನೇಮಕಗೊಂಡ ಆಟಗಾರನಾಗುತ್ತಾನೆ. ಹೀಗೆ ಬದಲಾವಣೆಯಿಂದ ಬಂದ ಆಟಗಾರನ ಆಟದ ಮೈದಾನದಲ್ಲಿಯ ಚಟುವಟಿಕೆಗಳು ಇತರ ಯಾವುದೇ ನೇಮಕಗೊಂಡ ಆಟಗಾರನ ಚಟುವಟಿಕೆಗಳಿಗೆ ಮೀರುವುದಿಲ್ಲ.

A8.3 **A Runner** is a nominated player who runs for another nominated player of his/her own side who is batting and is unable to run.

**A9 Bowlers**

A9.1 **Over the wicket / round the wicket** – If, as the bowler runs up between the wicket and the return crease, the wicket is on the same side as his/her bowling arm, he/she is bowling over the wicket. If the return crease is on the same side as his/her bowling arm, he/she is bowling round the wicket.

A9.2 **Delivery swing** is the motion of the bowler's arm during which he/she normally releases the ball for a delivery.

A9.3 **Delivery stride** is the stride during which the delivery swing is made, whether the ball is released or not. It starts when the bowler's back foot lands for that stride and ends when the front foot lands in the same stride. The stride after the delivery stride is completed when the next foot lands, i.e., when the back foot of the delivery stride lands again.

ಎ ೮.೩ **ಓಟಗಾರ** – ನೇಮಕಗೊಂಡ ಆಟಗಾರನೊಬ್ಬನು ದಾಂಡಿಗನಾಗಿದ್ದು, ಓಡಲು ಆಗದ ಸಂದರ್ಭದಲ್ಲಿ ಅವನ/ಅವಳ ಪರವಾಗಿ ಓಡಲು ಬರುವ ಆ ತಂಡದ ಮತ್ತೊಬ್ಬ ನೇಮಕಗೊಂಡ ಆಟಗಾರ.

**ಎ ೯ ಬೌಲರ್‌ಗಳು**

ಎ ೯.೧ **ವಿಕೆಟ್ ಮೇಲಿಂದ / ವಿಕೆಟ್ ಬಳಸಿ** – ವಿಕೆಟ್ ಮತ್ತು ರಿಟರ್ನ್ ರೇಖೆಯ ನಡುವೆ ಬೌಲರ್ ಓಡುವಾಗ, ಅವನ/ಅವಳ ಬೌಲಿಂಗ್ ಮಾಡುವ ತೋಳು ಇರುವ ಬದಿಯಲ್ಲಿ ವಿಕೆಟ್ ಇದ್ದರೆ, ಅವನು/ಅವಳು ವಿಕೆಟ್ ಮೇಲಿಂದ ಬೌಲ್ ಮಾಡುತ್ತಿದ್ದಂತೆ. ಒಂದು ವೇಳೆ ರಿಟರ್ನ್ ರೇಖೆ ಅವನ/ಅವಳ ಬೌಲಿಂಗ್ ತೋಳಿನ ಬದಿಯಲ್ಲಿದ್ದರೆ ಅವನು/ಅವಳು ವಿಕೆಟ್ ಬಳಸಿ ಬೌಲಿಂಗ್ ಮಾಡುತ್ತಿದ್ದಂತೆ.

ಎ ೯.೨ **ಡೆಲಿವರಿ ಸ್ವಿಂಗ್ –** ಬೌಲರ್ ಸಾಮಾನ್ಯವಾಗಿ ಬೌಲ್ ಮಾಡಲು ಚೆಂಡನ್ನು ಕೈಯಿಂದ ಬಿಡುವಾಗಿನ ತೋಳಿನ ಚಲನೆ.

ಎ ೯.೩ **ಬೌಲಿಂಗ್ ಮಾಡುವ ಸಮಯದಲ್ಲಿಯ ಕೊನೆಯ ಎರಡು ಹೆಜ್ಜೆ (ಡೆಲಿವರಿ ಸ್ಟ್ರೈಡ್)–** ಚೆಂಡನ್ನು ಬಿಡುಗಡೆ ಮಾಡಲಿ ಅಥವಾ ಬಿಡಲಿ ಡೆಲಿವರಿ ಸ್ವಿಂಗ್ ಮಾಡುವಾಗಿನ ಕೊನೆಯ ಎರಡು ಹೆಜ್ಜೆ. ಇದು ಬೌಲರ್ ಒಂದು ಹೆಜ್ಜೆಯಲ್ಲಿ ತನ್ನ ಹಿಂದಿನ ಪಾದ ಊರುವುದರಿಂದ ಪ್ರಾರಂಭವಾಗಿ ಅದೇ ಹೆಜ್ಜೆಯಲ್ಲಿ ಮುಂದಿನ ಪಾದ ಊರಿದಾಗ ಮುಗಿಯುತ್ತದೆ. ಡೆಲಿವರಿ ಸ್ಟ್ರೈಡನ ನಂತರದ

**A10 The ball**

A10.1 **The ball is struck/strikes the ball** unless specifically defined otherwise, mean ‘the ball is struck by the bat or ‘strikes the ball with the bat’.

A10.2 **Full-pitch** describes a ball delivered by the bowler that reaches or passes the striker without having touched the ground. Sometimes described as non-pitching.

**A11 Runs**

A11.1 A **run to be disallowed** is one that in Law should not have been taken. It is not only to be cancelled but the batters are to be returned to their original ends.

A11.2 A **run not to be scored** is one that is not illegal but is not recognised as a properly executed run. It is not a run that has been made, so the question of cancellation does not arise. The loss of the run so attempted is not a disallowance and the batters will not be returned to their original ends on that account.

**A12 The person**

A12.1 **Person;** A player’s person is his/her physical person (flesh and blood) together with any clothing or legitimate

ಸ್ಟ್ರೈಡ್**,** ಮುಂದಿನ ಪಾದ ಊರುವುದರೊಂದಿಗೆ ಪೂರ್ಣಗೊಳ್ಳುತ್ತದೆ. ಅಂದ್ರೆ, ಡೆಲಿವರಿ ಸ್ಟ್ರೈಡ್‌ನಲ್ಲಿಯ ಹಿಂದಿನ ಪಾದ ಪುನಃ ಊರಿದಾಗ.

**ಎ ೧೦ ಚೆಂಡು .**

ಎ ೧೦.೧ **ಚೆಂಡನ್ನು ಹೊಡೆಯಲಾಗಿದೆ / ಚೆಂಡನ್ನು ಹೊಡೆಯುವುದು –** ನಿರ್ದಿಷ್ಟವಾಗಿ ವ್ಯಾಖ್ಯಾನಿಸದ ಹೊರತು, ಚೆಂಡನ್ನು ದಾಂಡಿನಿಂದ ಹೊಡೆಯಲಾಗಿದೆ/ ದಾಂಡಿನಿಂದ ಹೊಡೆಯುವುದು ಎಂದರ್ಥ.

ಎ ೧೦.೨ **ಪುಟಿಗೆ ಇಲ್ಲದ** – ಬೌಲರ್ ಬೌಲ್ ಮಾಡಿದ ಚೆಂಡು ನೆಲಕ್ಕೆ ತಾಗದೆ ಚೆಂಡನ್ನೆದುರಿಸುವ ದಾಂಡಿಗನನ್ನು ತಲುಪುವುದು ಇಲ್ಲವೇ ದಾಟಿ ಹೋಗುವುದು.

**ಎ ೧೧ ಓಟಗಳು**

ಎ ೧೧.೧ **ಓಟವನ್ನು ರದ್ದುಗೊಳಿಸುವುದು** – ನಿಯಮಾನುಸಾರ ತೆಗೆದುಕೊಳ್ಳಬಾರದ ಓಟ. ಅದನ್ನು ರದ್ದುಪಡಿಸುವುದಲ್ಲದೆ ದಾಂಡಿಗರನ್ನು ಮೂಲ ತುದಿಗೆ ಹಿಂತಿರುಗಿಸಬೇಕು.


ಎ ೧೧.೨ **ಲೆಕ್ಕಿಸಬಾರದ ಓಟ -** ನಿಯಮಬಾಹಿರ ಓಟವಲ್ಲ. ಆದರೆ ಅದು ಸರಿಯಾಗಿ ಕಾರ್ಯಗತಗೊಳಿಸಿದ ಓಟವಲ್ಲ. ಅದು ಗಳಿಸಿದ ಓಟವಲ್ಲ, ಹೀಗಾಗಿ ರದ್ದುಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಹೀಗೆ ಪ್ರಯತ್ನಿಸಿದ ಓಟದ ನಷ್ಟವು ರದ್ದುಪಡಿಸುವಿಕೆಯಲ್ಲ ಮತ್ತು ಇದರ ಪ್ರಯುಕ್ತ ದಾಂಡಿಗರು ತಮ್ಮ ಮೂಲ ಜಾಗಕ್ಕೆ ಹಿಂತಿರುಗುವುದಿಲ್ಲ.


**ಎ ೧೨ ಶರೀರ (ವ್ಯಕ್ತಿ)**

ಎ ೧೨.೧ **ಶರೀರ** – ಆಟಗಾರನ ಶರೀರ ಎಂದರೆ ಅವನ/ಅವಳ ಶರೀರ(ದೇಹ)ದ ಜೊತೆಗೆ ದಾಂಡಿಗನಾಗಿದ್ದಲ್ಲಿ ಅವನ/ಅವಳ ದಾಂಡನ್ನು

| | |
|---|---|
| external protective equipment that he/she is wearing except, in the case of a batter, his/her bat. | ಹೊರತುಪಡಿಸಿ ಅವನು/ಅವಳು ಧರಿಸಿದ ಯಾವುದೇ ಉಡುಪು ಅಥವಾ ಅಧಿಕೃತ ಬಾಹ್ಯ ಸುರಕ್ಷಾ ಸಾಮಗ್ರಿಗಳನ್ನು ಒಳಗೊಂಡಿರುತ್ತದೆ. |
| A hand, whether gloved or not, that is not holding the bat is part of the batter's person. | ಕೈಗವಚ ಹಾಕಿಕೊಂಡಿರಲಿ ಅಥವಾ ಇಲ್ಲದಿರಲಿ, ಕೈಯಲ್ಲಿ ದಾಂಡು ಹಿಡಿದಿರದಿದ್ದರೆ ಅದು ದಾಂಡಿಗನ ಶರೀರದ ಒಂದು ಭಾಗವಾಗುತ್ತದೆ. |
| No item of clothing or equipment is part of the player's person unless it is attached to him/her. | ಯಾವುದೇ ಉಡಿಗೆ ಅಥವಾ ಸಾಮಗ್ರಿ ದಾಂಡಿಗನ ಶರೀರಕ್ಕೆ ಅಂಟಿಕೊಂಡಿರದಿದ್ದರೆ ಅದು ಅವನ/ಅವಳ ಶರೀರದ ಭಾಗವಾಗುವುದಿಲ್ಲ. |
| **For a batter**, a glove being held but not worn is part of his/her person. | **ದಾಂಡಿಗನ** ವಿಷಯದಲ್ಲಿ ಹಾಕಿಕೊಳ್ಳದೆ ಹಿಡಿದುಕೊಂಡ ಕೈಗವಚ ಅವನ/ಅವಳ ಶರೀರದ ಭಾಗವಾಗಿರುತ್ತದೆ. |
| **For a fielder**, an item of clothing or equipment he/she is holding in his/her hand or hands is not part of his/her person. | **ಕ್ಷೇತ್ರ ರಕ್ಷಕನ** ವಿಷಯದಲ್ಲಿ ಕೈಯಲ್ಲಿ ಅಥವಾ ಕೈಗಳಲ್ಲಿ ಹಿಡಿದುಕೊಂಡ ಉಡುಪು ಇಲ್ಲವೇ ಸಾಮಗ್ರಿ ಅವನ/ಅವಳ ಶರೀರದ ಭಾಗವಲ್ಲ. |
| **A12.2 Clothing** – anything that a player is wearing, including such items as spectacles or jewellery, that is not classed as external protective equipment is classed as clothing, even though he/she may be wearing some items of apparel, which are not visible, for protection. A bat being carried by a batter does not come within this definition of clothing. | ಎ ೧೨.೨ **ಉಡುಪು** – ಆಟಗಾರನು ಏನೇ ಹಾಕಿಕೊಂಡಿದ್ದರೆ, ಅವನು/ಅವಳು ಕಣ್ಣಿಗೆ ಕಾಣಿಸದಂತೆ ಕೆಲವು ಉಡುಪುಗಳನ್ನು ಸುರಕ್ಷತೆಗೋಸ್ಕರ ಧರಿಸಿದ್ದರೂ ಸಹ ಬಾಹ್ಯ ಸುರಕ್ಷಾ ಸಾಮಗ್ರಿ ಎಂದು ಪರಿಗಣಿಸದಂತಹವುಗಳನ್ನು ಉದಾಹರಣೆಗೆ ಕನ್ನಡಕ ಅಥವಾ ಆಭರಣಗಳನ್ನು ಉಡುಪು ಎಂದು ಪರಿಗಣಿಸಬೇಕು. ಕೈಯಲ್ಲಿ ಹಿಡಿದಿರುವ ದಾಂಡಿಗನ ದಾಂಡು ಉಡುಪಿನ ವ್ಯಾಖ್ಯೆಯಲ್ಲಿ ಬರುವುದಿಲ್ಲ. |

| | |
|---|---|
| A12.3 **Hand** for batter or wicketkeeper shall include both the hand itself and the whole of a glove worn on the hand. | ಎ ೧೨.೩ **ಕೈ –** ದಾಂಡಿಗ ಮತ್ತು ಘೂಟರಕ್ಷಕನ ವಿಷಯದಲ್ಲಿ ಕೈ ಎಂದರೆ ಕೈ ಮತ್ತು ಕೈ ಮೇಲೆ ಹಾಕಿಕೊಂಡಿರುವ ಇಡೀ ಕೈಗವಚ. |
| **A13 Offside/on side**; in front of / behind the popping crease. | **ಎ ೧೩ ಆಫ್ ಸೈಡ್/ಆನ್ ಸೈಡ್ : ಪಾಪಿಂಗ್ ರೇಖೆಯ ಮುಂದೆ/ಹಿಂದೆ** |



| **APPENDIX B BAT 9Law 5)** | **ಅನುಬಂಧ ಬಿ ದಾಂಡು (ನಿಯಮ ೫)** |
| --- | --- |
| B.1. General guidance<br>B.1.1. **Measurements** - All provisions in sections B.2 to B.6 below are subject to the measurements and restrictions stated in the Law and this Appendix.<br>B.1.2 **Adhesives** – Throughout, adhesives are permitted only where essential and only in minimal quantity<br>B.1.3 **Categories of bat** – The specifications given below relate to Type A, B C and D bats unless specified otherwise.<br>**B.2. Specifications for the Handle**<br>B.2.1 One end of the handle is inserted into a recess in the blade as a means of joining the handle and the blade. This lower portion is used purely for joining the blade and the handle together. It is not part of the blade but, solely in interpreting B.3 and B.4 below, references to the blade shall be considered to extend also to this lower portion of the handle where relevant.<br>B.2.2. **The handle** may be glued where necessary and bound with twine along the upper portion. Providing Law 5.5 is not contravened, the upper portion may be covered with materials solely to provide a surface | **ಬಿ ೧ ಸಾಮಾನ್ಯ ಮಾರ್ಗದರ್ಶಕಗಳು**<br>ಬಿ ೧.೧ **ಅಳತೆಗಳು –** ಕೆಳಗಿನ ಬಿ೨ ರಂದ ಬಿ ೬ರ ವರೆಗಿನ ನಿಬಂಧನೆಗಳು ನಿಯಮದಲ್ಲಿ ಹಾಗೂ ಈ ಅನುಬಂಧದಲ್ಲಿ ತಿಳಿಸಿರುವ ಅಳತೆ ಮತ್ತು ನಿರ್ಬಂಧಗಳಿಗೆ ಒಳಪಡುತ್ತವೆ.<br>ಬಿ ೧.೨ **ಅಂಟು** – ಅವಶ್ಯವಿರುವೆಡೆ ಹಾಗೂ ಕನಿಷ್ಠ ಪ್ರಮಾಣದಲ್ಲಿ ಅಂಟನ್ನು ಉಪಯೋಗಿಸಲು ಅನುಮತಿ ಇದೆ.<br>ಬಿ ೧.೩ ದಾಂಡಿನ ವರ್ಗೀಕರಣ – ಇತರೆ ರೀತಿಯಲ್ಲಿ ನಿರ್ದಿಷ್ಟಪಡಿಸದ ಹೊರತು ಕೆಳಗೆ ನೀಡಿರುವ ನಿರ್ದಿಷ್ಟತೆಗಳು ಎ, ಬಿ, ಸಿ ಮತ್ತು ಡಿ ನಮೂನೆಯ ದಾಂಡುಗಳಿಗೆ ಸಂಬಂಧಿಸಿವೆ.<br>**ಬಿ ೨ ಹಿಡಿಕೆಯ ನಿರ್ದಿಷ್ಟತೆಗಳು**<br>ಬಿ ೨.೧ ಹಿಡಿಕೆ ಹಾಗೂ ಬ್ಲೇಡನ್ನು ಜೋಡಿಸಲು ಹಿಡಿಕೆಯ ಒಂದು ಭಾಗವನ್ನು ಬ್ಲೇಡಿನ ಒಳಭಾಗದಲ್ಲಿರುವ ಬಿರುಕಿನಲ್ಲಿ ಸೇರಿಸಲಾಗಿದೆ. ಈ ಕೆಳ ಭಾಗವನ್ನು ಕೇವಲ ಬ್ಲೇಡ್ ಮತ್ತು ಹಿಡಿಕೆಯನ್ನು ಜೋಡಿಸಲು ಉಪಯೋಗಿಸಬೇಕು. ಇದು ಬ್ಲೇಡಿನ ಭಾಗವಲ್ಲ, ಆದರೆ ಕೆಳಗಿನ ಬಿ೩ ಮತ್ತು ಬಿ೪ನ್ನು ಅರ್ಥೈಸಲು, ಬ್ಲೇಡ್ ಎಂದಲ್ಲೆಲ್ಲ ಹಿಡಿಕೆಯ ಕೆಳಭಾಗವೂ ಸೇರಿದೆ.<br>ಬಿ ೨.೨ ಅಗತ್ಯವಿದ್ದರೆ ಹಿಡಿಕೆಯನ್ನು ಅಂಟನ್ನು ಉಪಯೋಗಿಸಿ ಟ್ವೈನ್ ದಾರದಿಂದ ಮೇಲಿನ ಭಾಗವನ್ನು ಸುತ್ತ ಬಹುದು. ನಿಯಮ ೫.೫ನ್ನು ಉಲ್ಲಂಘಿಸದಂತೆ, ಮೇಲಿನ ಭಾಗದ ಹೊರ ಭಾಗವನ್ನು ಒಳ್ಳೆಯ ಹಿಡಿತ ಸಿಗುವುದಕ್ಕೋಸ್ಕರ ಮಾತ್ರ ವಸ್ತುವಿನಿಂದ |

suitable for gripping. Such covering is an addition and is not part of the bat, except in relation to Law 5.6. The bottom of this grip should not extend below the point defined in B.2.4 below.

Twine binding and the covering grip may extend beyond the junction of the upper and lower portions of the handle, to cover part of the shoulders of the bat as defined in

No material may be placed on or inserted into the lower portion of the handle other than as permitted above together with the minimal adhesives or adhesive tape used solely for fixing these items, or for fixing the handle to the blade.

B.2.3 **Materials in handle** – As a proportion of the total volume of the handle, materials other than cane, wood or twine are restricted to one-tenth for Types A and B and one fifth for Type C and Type D. Such materials must not project more than 3.25 in/8.26 cm into the lower portion of the handle.

ಹೊದಿಸಬಹುದು. ನಿಯಮ ೫.೬ ಕ್ಕೆ ಸಂಬಂಧಿಸಿದಂತೆ ಇಂತಹ ಹೊದಿಕೆ ದಾಂಡಿನ ಭಾಗವಾಗದೆ ಹೆಚ್ಚುವರಿ ವಸ್ತುವಾಗಿರುತ್ತದೆ. ಹಿಡಿತದ ವಸ್ತುವಿನ ಕೆಳ ತುದಿ ಕೆಳಗಿನ ಬಿ೨.೪ ಯಲ್ಲಿ ವಿವರಿಸಿದ ಅಂಚಿನ ಕೆಳಗೆ ಇರಬಾರದು.

ಟ್ವೈನ್ ದಾರ ಮತ್ತು ಹಿಡಿತದ ಹೊದಿಕೆಯು ಬಿ ૩.೧ ರಲ್ಲಿ ವಿವರಿಸಿರುವಂತೆ ಬ್ಲೇಡಿನ ಭುಜದ ಕೆಲ ಭಾಗವನ್ನು ಮುಚ್ಚುವಂತೆ ಹಿಡಿಕೆಯ ಮೇಲಿನ ಮತ್ತು ಕೆಳಗಿನ ಭಾಗ ಒಂದುಗೂಡುವ ಜಾಗಕ್ಕಿಂತ ಹೆಚ್ಚಿಗೆ ಇರಬಹುದು.

ಇವುಗಳನ್ನು ಜೋಡಿಸುವುದಕ್ಕಾಗಿ ಅಥವಾ ಹಿಡಿಕೆಯನ್ನು ಬ್ಲೇಡಿಗೆ ಜೋಡಿಸುವುದಕ್ಕಾಗಿ ಕನಿಷ್ಠ ಪ್ರಮಾಣದ ಅಂಟು ಅಥವಾ ಅಂಟು ಪಟ್ಟಿಯ ಜೊತೆ ಮೇಲೆ ಅನುಮತಿಸಿರುವುದನ್ನು ಹೊರತು ಪಡಿಸಿ ಬೇರಾವುದೇ ವಸ್ತುವನ್ನು ಹಿಡಿಕೆಯ ಕೆಳಗಿನ ಭಾಗದ ಮೇಲೆ ಇರಿಸಬಾರದು ಅಥವಾ ಸೇರಿಸಬಾರದು.

ಬಿ ೨.೩ **ಹಿಡಿಕೆಯಲ್ಲಿಯ** ಪದಾರ್ಥಗಳು. ಹಿಡಿಕೆಯ ಒಟ್ಟು ಘನ ಅಳತೆಯ ಅನುಸಾರವಾಗಿ, ಬೆತ್ತ, ಮರ ಅಥವಾ ಟ್ವೈನನ್ನು ಹೊರತುಪಡಿಸಿ, ಇತರ ಪದಾರ್ಥಗಳ ಬಳಕೆಯು “ಎ” ಮತ್ತು “ಬಿ” ನಮೂನೆಯ ದಾಂಡುಗಳಲ್ಲಿ ಹತ್ತನೇ ಒಂದು ಭಾಗಕ್ಕೂ ಮತ್ತು “ಸಿ” ಮತ್ತು “ಡಿ” ನಮೂನೆಯ ದಾಂಡಿಗೆ ಐದನೇ ಒಂದು ಭಾಗಕ್ಕೆ ಸೀಮಿತಗೊಳಿಸಬೇಕು. ಇಂತಹ ಪದಾರ್ಥಗಳು ಹಿಡಿಕೆಯ ಕೆಳ ಭಾಗದಲ್ಲಿ ૩.೨೫ ಅಂಗುಲ/೮.೨೬ ಸೆಂ. ಮೀ. ಗಿಂತ ಅಧಿಕವಾಗಿ ಚಾಚಬಾರದು.

ಬಿ ೨.೪ **ಹಿಡಿಕೆಯನ್ನು ಬಿಗಿಯುವುದು ಮತ್ತು ಹೊದಿಸುವುದು**. – ಅನುಮತಿಸಿದ ಉದ್ದವು ಹಿಡಿಕೆಯ ಮೇಲಿನ ಭಾಗ ಮತ್ತು ಕೆಳಗಿನ

B.2.4 **Binding and covering of handle** – The permitted continuation beyond the junction of the upper and lower portions of the handle is restricted to a maximum, measured along the length of the handle, of

2.5 in/6.35 cm in for the twine binding

2.75 in/6.99 cm for the covering grip.

**B.3 Specifications for the Blade**

B.3.1. **The blade** has a face, a back, a toe, sides, and shoulders.

B.3.1.1 **The face of the blade** is its main striking surface and shall be flat or have a slight convex curve resulting from traditional pressing techniques. The back is the opposite surface.

B.3.1.2 **The shoulders**, **sides and toe** are the remaining surfaces, separating the face and the back.

B.3.1.3. **The shoulders**, one on each side of the handle, are along that portion of the blade between the first entry point of the handle and the point at which the blade first reaches its full width.

B.3.1.4. **The toe** is the surface opposite to the shoulders taken as a pair.

ಭಾಗಗಳು ಕೂಡುವ ಜಾಗಕ್ಕಿಂತ ಇನ್ನೂ ಮುಂದೆ ಹಿಡಿಕೆಯ ಉದ್ದಕ್ಕೆ ಕೆಳಕಂಡ ಮಿತಿಯೊಳಗೆ ಇರಬೇಕು.

ಟ್ವೈನ್ ದಾರದಿಂದ ಬಿಗಿದಿರುವುದಕ್ಕೆ ೨.೫ ಅಂಗುಲ / ೬.೩೫ ಸೆಂ. ಮೀ.

ಹಿಡಿತದ ಹೊದಿಕೆ ೨.೭೫ ಅಂಗುಲ / ೬.೯೯ ಸೆಂ. ಮೀ.

**ಬಿ ೩ ಬ್ಲೇಡಿನ ನಿರ್ದಿಷ್ಟತೆಗಳು**

ಬಿ ೩.೧ ಬ್ಲೇಡ್ ಮುಖಭಾಗ, ಹಿಂಭಾಗ, ಕೆಳಭಾಗ, ಬದಿಗಳು ಮತ್ತು ಭುಜಗಳನ್ನು ಹೊಂದಿರುತ್ತದೆ.

ಬಿ ೩.೧.೧ ಬ್ಲೇಡಿನ ಮುಖ ಭಾಗವು ಚೆಂಡನ್ನು ಹೊಡೆಯುವ ಮುಖ್ಯ ಮೇಲ್ಮೈ ಆಗಿದ್ದು, ಸಮತಲವಾಗಿದ್ದು ಅಥವಾ ಸಾಂಪ್ರದಾಯಿಕ ಒತ್ತುವಿಕೆಯ ಕೌಶಲ್ಯತೆಯಿಂದ ಉಂಟಾದ ಅಲ್ಪ ಪ್ರಮಾಣದ ಉಬ್ಬುತನವನ್ನು ಹೊಂದಬಹುದು. ಹಿಂಭಾಗವು ವಿರುದ್ಧ ಮೇಲ್ಮೈ (ಹೊರ ಮೈ.)

ಬಿ ೩.೧.೨ ಭುಜ, ಬದಿ ಮತ್ತು ತಳ ಭಾಗಗಳು ಉಳಿದ ಭಾಗಗಳಾಗಿದ್ದು, ಮುಖ ಮತ್ತು ಹಿಂಭಾಗಗಳನ್ನು ಪ್ರತ್ಯೇಕಿಸುತ್ತವೆ.

ಬಿ ೩.೧.೩ ಹಿಡಿಕೆಯ ಎರಡೂ ಬದಿಗೆ ಇರುವ ಭುಜವು, ಹಿಡಿಕೆಯು ಬ್ಲೇಡಿನ ಒಳ ಭಾಗದಲ್ಲಿ ಸೇರಿಸುವ ಮೊದಲ ಜಾಗದಿಂದ ಬ್ಲೇಡ್ ತನ್ನ ಪೂರ್ಣ ಅಗಲವನ್ನು ಹೊಂದುವ ಜಾಗದವರೆಗೆ ಇರುತ್ತದೆ.

ಬಿ ೩.೧.೪ ತಳಭಾಗವು ಭುಜಭಾಗದ ವಿರುದ್ಧ ಭಾಗವಾಗಿದ್ದು ಇವೆರಡೂ ಒಂದು ಜೋಡಿ ಎಂದು ಪರಿಗಣಿಸಬೇಕು.

B.3.1.5. **The sides**, one each side of the blade, are along the rest of the blade, between the toe and the shoulders.

B.3.2. No material may be placed on or inserted into the blade other than as permitted in

B.2.4, B.3.3. and Law 5.4 together with the minimal adhesives or adhesive tape used solely for fixing these items, or for fixing the handle to the blade.

B.3.3 **Covering the blade**. Type A and Type B bats shall have no covering on the blade except as permitted in Law 5.4. Type C and Type D bats may have a cloth covering on the blade. This may be treated as specified in B.4 below.

The cloth covering permitted for Type C and D bats shall be of thickness not exceeding 0.012 in /0.3 mm before treatment as in B.4.1.

Any materials referred to above, in Law 5.4 and B.4 below, are to be considered as part of the bat, which must still pass through the gauge as defined in B.8.

ಬಿ ೩.೧.೫ ಬ್ಲೇಡಿನ ಪ್ರತಿ ತುದಿಯಲ್ಲಿರುವ ಬದಿಗಳು, ಭುಜ ಹಾಗೂ ತಳಗಳ ನಡುವಿನ ಮುಖದ ಉದ್ದಕ್ಕೂ ಇರುತ್ತವೆ.

ಬಿ ೩.೨ ಇವುಗಳನ್ನು ಜೋಡಿಸುವುದಕ್ಕೆ ಅಥವಾ ಹಿಡಿಕೆಯನ್ನು ಬ್ಲೇಡಿನಲ್ಲಿ ಕೂಡಿಸುವುದಕ್ಕೆ ಮಾತ್ರ ಅಲ್ಪ ಪ್ರಮಾಣದ ಅಂಟು ಇಲ್ಲವೇ ಅಂಟು ಪಟ್ಟಿಯನ್ನು ಹೊರತು ಪಡಿಸಿ ಬಿ ೨.೪, ಬಿ೩.೩ ಮತ್ತು ನಿಯಮ ೫.೪ರಲ್ಲಿ ವಿವರಿಸಿದ ವಸ್ತುಗಳನ್ನು ಬಿಟ್ಟು ಬೇರಾವುದೇ ವಸ್ತುಗಳನ್ನು ಬ್ಲೇಡಿನ ಮೇಲಿರಿಸಬಾರದು ಅಥವಾ ಸೇರಿಸಬಾರದು.

ಬಿ ೩.೩ **ಬ್ಲೇಡಿಗೆ ಹೊದಿಸುವುದು**. – ನಮೂನೆ ಎ ಮತ್ತು ಬಿ ದಾಂಡುಗಳ ಬ್ಲೇಡಿನ ಮೇಲೆ ನಿಯಮ ೫.೪ ರನ್ವಯ ಅನುಮತಿಸಿರುವುದನ್ನು ಹೊರತುಪಡಿಸಿ ಹೊದಿಕೆ ಇರುವಂತಿಲ್ಲ.ನಮೂನೆ ಸಿ ಮತ್ತು ಡಿ ದಾಂಡುಗಳ ಬ್ಲೇಡಿನ ಮೇಲೆ ಬಟ್ಟೆಯ ಹೊದಿಕೆಯನ್ನು ಹಾಕಬಹುದು. ಇದನ್ನು ಬಿ ೪ ರಲ್ಲಿ ನಿರ್ದಿಷ್ಟಪಡಿಸಿರುವಂತೆ ಎಂದು ಪರಿಗಣಿಸಬೇಕು.

ಸಿ ಮತ್ತು ಡಿ ನಮೂನೆಯ ದಾಂಡುಗಳಿಗೆ ಪರಿಮಿತಿಸಿದ ಬಟ್ಟೆಯ ಹೊದಿಕೆಯು ಬಿ ೪.೧ ರಲ್ಲಿ ವ್ಯಾಖ್ಯಾನಿಸಿರುವಂತೆ ಸಂಸ್ಕರಣೆಯ ಮೊದಲು ೦.೦೧೨ಅಂಗುಲ / ೦.೩ ಮಿ.ಮೀ.ಗಿಂತ ದಪ್ಪಗಿರಬಾರದು.

ಮೇಲೆ ನಿಯಮ ೫.೪ ಮತ್ತು ಕೆಳಗಿನ ಬಿ ೪ರಲ್ಲಿ ಉಲ್ಲೇಖಿಸಿರುವ ಯಾವುದೇ ವಸ್ತು ದಾಂಡಿನ ಭಾಗವೆಂದು ಪರಿಗಣಿಸಬೇಕು ಹಾಗೂ ಬಿ.೮ರಲ್ಲಿ ವ್ಯಾಖ್ಯಾನಿಸಿರುವಂತೆ ಅಳತೆ ಮಾಪಕದಲ್ಲಿ ಹಾದು ಹೋಗಬೇಕು.

| B.4 Protection and repair | ಬಿ ೪ ರಕ್ಷಣೆ ಮತ್ತು ದುರಸ್ತಿ |
| --- | --- |
| B.4.1. The surface of the blade may be treated with non-solid materials to improve resistance to moisture penetration and/or mask natural blemishes in the appearance of the wood. Save for the purpose of giving a homogeneous appearance by masking natural blemishes, such treatment shall not materially alter the colour of the blade. | ಬಿ ೪.೧ ಬ್ಲೇಡಿನ ಮೇಲುಮ್ಮೈಯನ್ನು, ತೇವಾಂಶ ಆವರಿಸಿಕೆಯನ್ನು ತಡೆಯುವುದಕ್ಕಾಗಿ ಮತ್ತು ಅಥವಾ ಪ್ರಾಕೃತಿಕವಾದ ಕುಂದುಗಳನ್ನು ಮರೆ ಮಾಡಲು ಘನರೂಪದಲ್ಲಿರದ ವಸ್ತುವನ್ನು ಉಪಯೋಗಿಸಬಹುದು. ಪ್ರಾಕೃತಿಕ ಕುಂದುಗಳನ್ನು ಮರೆ ಮಾಡಿ ಏಕರೂಪವಾಗಿ ಕಾಣಿಸುವ ಸಲುವಾಗಿ ತೆಗೆದುಕೊಂಡಂತಹ ಕ್ರಮವು, ಬ್ಲೇಡಿನ ಮೇಲ್ಮೈ ಬಣ್ಣವನ್ನು ಬಹುಮಟ್ಟಿಗೆ ಬದಲಿಸಬಾರದು. |
| B.4.2. Materials can be used for protection and repair as stated in Law 5.4 and are additional to the blade. Note however Law 5.6. | ಬಿ. ೪.೨ ನಿಯಮ ೫.೪ರಲ್ಲಿ ತಿಳಿಸಿರುವಂತೆ ಸುರಕ್ಷತೆ ಮತ್ತು ದುರಸ್ತಿಗಾಗಿ ವಸ್ತುಗಳನ್ನು ಉಪಯೋಗಿಸಬಹುದಾಗಿದ್ದು, ಇವು ಬ್ಲೇಡಿಗೆ ಹೆಚ್ಚುವರಿಯಾಗಿರುತ್ತವೆ. ಆದರೂ ನಿಯಮ ೫.೬ ಗಮನಿಸಿ. |
| Any such material shall not extend over any part of the back of the blade except in the case of Law 5.4.1 and then only when it is applied as a continuous wrapping covering the damaged area. | ಇಂತಹ ಯಾವುದೇ ವಸ್ತು ನಿಯಮ ೫.೪.೧ರ ಹೊರತಾಗಿ ಬ್ಲೇಡಿನ ಹಿಂಭಾಗದ ಯಾವುದೇ ಭಾಗದ ಮೇಲೆ ಬರಬಾರದು ಮತ್ತು ಅದನ್ನು ಹಾನಿಗೊಂಡ ಭಾಗದ ಮೇಲೆ ನಿರಂತರ ಹೊದಿಕೆಯಾಗಿ ಮುಚ್ಚಿದಾಗ ಮಾತ್ರ ಅನ್ವಯಿಸುವುದು. |
| The repair material shall not extend along the length of the blade more than 0.79 in/2.0 cm in each direction beyond the limits of the damaged area. Where used as a continuous binding, any overlapping shall not breach the maximum of 0.04 in/0.1 cm in total thickness. | ದುರಸ್ತಿಗಾಗಿ ಉಪಯೋಗಿಸುವ ವಸ್ತುವು ಬ್ಲೇಡಿನ ಉದ್ದಕ್ಕೆ ಹಾನಿಗೊಂಡ ಜಾಗದ ಎರಡೂ ದಿಕ್ಕಿಗೆ ೦.೭೯ ಅಂಗುಲ / ೨.೦ ಸೆಂ. ಮೀ. ಗಿಂತ ಹೆಚ್ಚಾಗಿರಬಾರದು. ಒಂದು ವೇಳೆ ಬಿಗಿಯಲು ನಿರಂತರ ಪಟ್ಟಿ ಉಪಯೋಗಿಸಿದಾಗ ಯಾವುದೇ ಪಟ್ಟಿ ಒಂದರ ಮೇಲೆ ಒಂದು ಬಂದರೆ ಅದರ ಒಟ್ಟು ದಪ್ಪ ಗರಿಷ್ಠ ೦.೦೪ ಅಂಗುಲ / ೦೧ ಸೆಂ. ಮೀ ಮಿತಿಯನ್ನು ಉಲ್ಲಂಘಿಸಬಾರದು. |

The use of non-solid material which when dry forms a hard layer more than 0.004 in/0.01 cm in thickness is not permitted.

Additionally, for protection from damage, for Bat Types B, C and D, material may be inserted at the toe and/or along the sides, parallel to the face of the blade.

B.4.3. Permitted coverings, repair material and toe guards, not exceeding their specified thicknesses, may be additional to the dimensions above, but the bat must still pass through the gauge as described in B.8.

B.5. **Toe and side inserts** – The wood used must not be more than 0.35 in/0.89 cm in thickness.

The toe insert shall not extend from the toe more than 2.5 in/6.35 cm up the blade at any point.

Neither side insert may extend from the edge more than 1 in/2.54 cm across the blade at any point.

B.6 **Commercial identifications** These identifications may not exceed 0.008 in/0.02 cm in thickness. On the back of the blade, they must occupy no more than 50% of the surface.

ಯಾವುದೇ ಘನವಲ್ಲದ ವಸ್ತು ಉಪಯೋಗಿಸಿದರೆ, ಅದು ಒಣಗಿದಾಗ ಆಗುವ ಪದರಿನ ದಪ್ಪ ೦.೦೪ಅಂಗುಲ / ೦೧ ಸೆಂ. ಮೀ ಗಿಂತ ಹೆಚ್ಚಿಗಿರಬಾರದು.

ಹೆಚ್ಚುವರಿಯಾಗಿ, ಬಿ, ಸಿ ಮತ್ತು ಡಿ ನಮೂನೆಯ ದಾಂಡುಗಳಿಗೆ ಹಾನಿಗೊಳ್ಳುವುದನ್ನು ರಕ್ಷಿಸಲು ದಾಂಡಿನ ತಳಭಾಗ ಮತ್ತು ಅಥವಾ ಬ್ಲೇಡಿಗೆ ಸಮಾಂತರವಾಗಿರುವ ಬದಿಗಳಿಗೆ ವಸ್ತುಗಳನ್ನು ಸೇರಿಸಬಹುದು.

ಬಿ ೪.೩ ಅನುಮತಿಸಿದ ಹೊದಿಕೆಗಳು, ದುರಸ್ತಿ ಪದಾರ್ಥಗಳು ಮತ್ತು ತಳ ಭಾಗದ ರಕ್ಷಕಗಳು ದಪ್ಪದಲ್ಲಿ ಗೊತ್ತುಪಡಿಸಿರುವ ಅಳತೆಗಳನ್ನು ಮೀರಬಾರದು, ಅವುಗಳು ಬೇಕಾದರೆ ಮೇಲೆ ತಿಳಿಸಿದ ಅಳತೆಗಳಿಗೆ ಹೆಚ್ಚುವರಿಯಾಗಿರಬಹುದು. ಆದರೆ ಒಟ್ಟಾರೆ ದಾಂಡು ಬಿ ೮ ರಲ್ಲಿ ತಿಳಿಸಿದಂತೆ ಅಳತೆಮಾಪಕದಲ್ಲಿ ಹಾದು ಹೋಗಬೇಕು.

**ಬಿ ೫ ತಳಭಾಗ ಮತ್ತು ಬದಿಗಳಿಗೆ ಸೇರಿಸುವ ವಸ್ತು –** ಉಪಯೋಗಿಸುವ ಕಟ್ಟಿಗೆಯು ೦.೩೫ ಅಂಗುಲ / ೦.೮೯ ಸೆಂ. ಮೀ. ಗಿಂತ ದಪ್ಪಗಿರಬಾರದು.

ತಳಭಾಗದಲ್ಲಿ ಸೇರಿಸುವ ವಸ್ತು ಯಾವುದೇ ಜಾಗದಲ್ಲಿ ೨.೫ ಅಂಗುಲ / ೬.೩೫ ಸೆಂ. ಮೀ ಗಿಂತ ಹೆಚ್ಚಿಗೆ ಬ್ಲೇಡಿನ ಮೇಲೆ ಬರಬಾರದು.

ಬದಿಗಳಲ್ಲಿ ಸೇರಿಸಿದ ವಸ್ತು ಬದಿಗಳಿಂದ ೧ ಅಂಗುಲ / ೨.೫೪ ಸೆಂ. ಮೀ ಗಿಂತ ಹೆಚ್ಚು ಬ್ಲೇಡಿನ ಮೇಲೆ ಬರಬಾರದು.

**ಬಿ ೬** ವಾಣಿಜ್ಯ ಗುರುತುಗಳು – ಈ ಗುರುತುಗಳು೦.೦೦೮ ಅಂಗುಲ / ೦.೦೨ ಸೆಂ. ಮೀ. ಗಿಂತ ಹೆಚ್ಚು ದಪ್ಪಗಿರಬಾರದು. ಹಿಂಭಾಗದಲ್ಲಿ ಅವು ೫೦% ಗಿಂತ ಹೆಚ್ಚು ಜಾಗವನ್ನು ಆವರಿಸಬಾರದು. ಬ್ಲೇಡಿನ ಮುಂಭಾಗದಲ್ಲಿ ಅವು

On the face of the blade, they must be confined within the top 9 in/22.86 cm, measured from where the bottom of the grip as defined in B.2.2 and B.2.4, would finish.

**B.7 Type D Bats**

Type D bats, as defined, shall comply with the size specifications and restrictions in Law 5 and this Appendix. The blade in addition may be

B.7.1 laminated but using only wood and with no more than three pieces.

B.7.2. coloured, providing Law 5.5 is not contravened.

**B.8 Bat Gauge**

All bats that conform to the Laws of Cricket must meet the specifications defined in Law 5.7.

They must also, with or without protective coverings permitted in Law 5.4, be able to pass through a bat gauge, the dimensions and shape of which are shown in the diagram on the following page.

ಮೇಲಿನಿಂದ ೯ ಅಂಗುಲ / ೨೨.೮೬ ಸೆಂ. ಮೀ. ಜಾಗದೊಳಗೆ ಸೀಮಿತಗೊಳ್ಳಬೇಕು. ಈ ಅಳತೆಯನ್ನು ಹಿಡಿತದ ಕೆಳಅಂಚಿನಿಂದ ಬಿ.೨.೨ ಮತ್ತು ಬಿ.೨.೪ರಲ್ಲಿ ವ್ಯಾಖ್ಯಾನಿಸಿದಂತೆ ಮಾಡಬೇಕು.

**ಬಿ ೭ ಡಿ ನಮೂನೆಯ ದಾಂಡುಗಳು**


ಡಿ ನಮೂನೆಯ ದಾಂಡುಗಳು ನಿಯಮ ೫ ಮತ್ತು ಈ ಅನುಬಂಧದಲ್ಲಿ ಗೊತ್ತುಪಡಿಸಿರುವ ನಿರ್ದಿಷ್ಟತೆಗಳಿಗೆ ಮತ್ತು ನಿರ್ಬಂಧಗಳಿಗೆ ಅನುಸಾರವಾಗಿರಬೇಕು. ಜೊತೆಗೆ ಬ್ಲೇಡು

ಬಿ ೭.೧ ಲ್ಯಾಮಿನೇಟ ಆಗಿರಬಹುದು. ಆದರೆ ಮೂರು ಪಟ್ಟಿಗಳಿಗಿಂತ ಹೆಚ್ಚಿಗಿರದ ಮರವನ್ನು ಉಪಯೋಗಿಸಬಹುದು.

ಬಿ ೭.೨ ನಿಯಮ ೫.೫ ಉಲ್ಲಂಘಿಸದಂತೆ ಬಣ್ಣದ್ದಿರಬಹುದು.

**ಅ ೮ ದಾಂಡಿನ ಮಾಪಕ**

ಕ್ರಿಕೆಟ್ ನಿಯಮಗಳ ಪ್ರಕಾರ ಇರುವ ಎಲ್ಲ ದಾಂಡುಗಳು ನಿಯಮ ೫.೭ರಲ್ಲಿ ತಿಳಿಸಿರುವ ನಿರ್ದಿಷ್ಟತೆಗಳಿಗೆ ಅನುಸಾರವಾಗಿರಬೇಕು. ನಿಯಮ ೫.೪ರಲ್ಲಿ ಅನುಮತಿಸಿರುವಂತೆ ರಕ್ಷಣಾ ಹೊದಿಕೆ ಸಹಿತ ಇಲ್ಲವೇ ಹೊದಿಕೆ ಇಲ್ಲದೇ ದಾಂಡಿನ ಮಾಪಕದಲ್ಲಿ ಹಾದು ಹೋಗಬೇಕು. ಅದರ ಆಕೃತಿ ಮತ್ತು ಅಳತೆ ಕೆಳಗಿನಂತಿರಬೇಕು.




**ಬಾಲ್ ಪಾಪನದ ತೂತಿನ ಅಳತೆಗಳು;**

ಅಗಲ - ೪.೩೩ ಅಂಗುಲ / ೧೧.೦೦ಸೆಂ.ಮೀ.


ಆಳ - ೨.೬೮ ಅಂಗುಲ / ೬.೮ ಸೆಂ. ಮೀ.

ಅಂಚು- ೧.೬೧ ಅಂಗುಲ / ೪.೧ ಸೆಂ. ಮೀ.

ತಿರುವು- ೦.೨೦ ಅಂಗುಲ / ೦.೫ ಸೆಂ. ಮೀ.
ತೂತಿನ ಕೆಳ ಅಂಚು ೧೨.೦ ಅಂಗುಲ /೩೦.೫ ಸೆಂ.ಮೀ.


ವ್ಯಾಸದ ವರ್ತುಳದ ಕಮಾನಾಗಿದ್ದು, ವರ್ತುಳದ ಮಧ್ಯಬಿಂದು ತೂತಿನ ಲಂಬದ ಮಧ್ಯ ದಲ್ಲಿರಬೇಕು

APPENDIX C - ಅನುಭಂದ ಕ



ಅ

ಚಿಕ್ಕ




ಅನುಭಂದ ಡ

ನಿಯಮ ೮ ಘೂಟಗಳು

ಬೇಲ್ಸ

ದೊಡ್ಡವರ ಆಟ

ಒಟ್ಟಾರೆ ಉದ್ದಳತೆ ೪.೩೧ ಅಂಗುಲ / ೧೦.೯೫ ಸೆಂ.ಮೀ.

ಅ(ಬ್ಯಾರಲ್ ಉದ್ದಳತೆ) ೨.೧೩ ಅಂಗುಲ / ೫.೪೦ ಸೆಂ.ಮೀ.

ಬ(ಉದ್ದದ ಸ್ಪಿಗೋಟ್) ೧.೩೮ ಅಂಗುಲ / ೩.೫೦ ಸೆಂ.ಮೀ.

ಕ( ಚಿಕ್ಕ ಸ್ಪಿಗೋಟ್) ೦.೮೧ ಅಂಗುಲ / ೨.೦೬ ಸೆಂ.ಮೀ

ಘೂಟಗಳು

ಎತ್ತರ ಡ ೨೮ ಎಂಚು / ೭೧ ಸೆ.ಮಿ.

ವ್ಯಾಸವು ಇ

ಹೆಚ್ಚೆಂದರೇ ೧.೩೮ ಅಂಗುಲ /೩.೫೦ ಸೆಂ.ಮೀ.

ಕಡಿಮೆ ಎಂದರೇ ೧.೫ ಅಂಗುಲ / ೩.೮೧ ಸೆಂ.ಮೀ.

ವಿಕೆಟ್ಟಿನ ಅಗಲ ೯ ಅಂಗುಲ / ೨೨.೮೬ ಸೆ. ಮಿ.

APPENDIX E

These diagrams show what is meant by:



- no webbing between the fingers
- single piece of non-stretch material between finger and thumb as a means of support
- and, when a hand wearing the glove has the thumb fully extended, the top edge being taut and not protruding beyond the straight line joining the top of the index finger to the top of the thumb.



ಅನುಭಂದ ಇ

- ಅದರ ತೋರು ಬೆರಳು ಮತ್ತು ಹೆಬ್ಬೆರಳುಗಳ ವಿನಃ ಬೇರೆ ಬೆರಳುಗಳ ನಡುವೆ ಜೋಡಿಸುವ ಪಟ್ಟಿ (ವೆಬ್ಬಿಂಗ್) ಇರಬಾರದು,
- ತೋರು ಬೆರಳು ಮತ್ತು ಹೆಬ್ಬೆರಳುಗಳನ್ನು ಜೋಡಿಸಲು ಪಟ್ಟಿಯನ್ನು ಸಹಾಯಕ್ಕೋಸ್ಕರ ಅಳವಡಿಸಬಹುದು.
- ಹಾಗೇ ಉಪಯೋಗಿಸಿದರೆ, ಜೋಡಿಸುವ ಪಟ್ಟಿಯು ಹಿಗ್ಗದಂತಹ ವಸ್ತುವಿನದಾಗಿರಬೇಕು, ಇದಕ್ಕೆ ಮೇಲು ಮೈ ಹೊದಿಕೆ ಇದ್ದರೂ ಅದು ಬಲವರ್ಧನೆ ಮತ್ತು ಮಡಿಕೆಯನ್ನು ಹೊಂದಿರಬಾರದು.

○ ಪಟ್ಟಿಯ ಮೇಲಿನ ತುದಿಯು ತೋರು ಬೆರಳು ಮತ್ತು ಹೆಬ್ಬೆರಳು ಜೋಡಿಸುವ ಸರಳ ರೇಖೆಯ ಹೊರ ಬರಬಾರದು.

○ ಹೆಬ್ಬೆರಳನ್ನು ಚಾಚಿದಾಗ ಈ ಪಟ್ಟಿ ನೆಟ್ಟಗೆ ಇರಬೇಕು. ಅನುಬಂಧ ಈ ಗಮನಿಸಿ.

# ಸೂಚ್ಯಾಂಕ


| ನಿಯಮ | | ಪುಟ |
|---|---|---|
| **The Preamble – The Spirit of Cricket** | **ಪೀಠಿಕೆ** | 17 / ೧೭ |
| **LAW 1 THE PLAYERS** | **ನಿಯಮ ೧ ಆಟಗಾರರು** | 18/ ೧೮ |
| 1.1 Number of players | ೧.೧ ಆಟಗಾರರ ಸಂಖ್ಯೆ | |
| 1.2 Nomination and replacement of players | ೧.೨ ನೇಮಕ ಹಾಗೂ ಆಟಗಾರರ ಸಂಖ್ಯೆ | |
| 1.3 Captain | ೧.೩ ನಾಯಕ | |
| 1.4 Responsibility of captains | ೧.೪ ನಾಯಕರ ಜವಾಬ್ದಾರಿ | |
| **LAW 2 THE UMPIRES** | **ನಿಯಮ ೨ ಅಂಪೈರ್** | 20/ ೨೦ |
| 2.1 Appointment and attendance | ೨.೧ ನಿಯುಕ್ತಿ ಮತ್ತು ಹಾಜರಾತಿ | |
| 2.2 Change of umpire | ೨.೨ ಅಂಪೈರ್ ಬದಲಾವಣೆ | |
| 2.3 Consultation with captains | ೨.೩ ನಾಯಕರೊಡನೆ ಸಮಾಲೋಚನೆ | |
| 2.4 The wickets, creases, and boundaries | ೨.೪ ಘೂಟಗಳು, ಕ್ರೀಸ್‌ಗಳು ಮತ್ತು ಬೌಂಡರಿಗಳು | |
| 2.5 Conduct of the match, implements and equipment | ೨.೫ ಪಂದ್ಯವನ್ನು ನಡೆಸುವುದು, ಸಲಕರಣೆಗಳು ಮತ್ತು ಸಾಮಗ್ರಿಗಳು. | |
| 2.6 Fair and unfair play | ೨.೬ ನಿಯಮಾನುಸಾರ ಮತ್ತು ನಿಯಮ ಬಾಹಿರ ಆಟ | |
| 2.7 Fitness for play | ೨.೭ ಆಟ ನಡೆಸಲು ಯುಕ್ತವಾದ ಅಂಶಗಳು. | |
| 2.8 Suspension of play in dangerous or unreasonable circumstances | ೨.೮ ಅಪಾಯಕಾರಿ ಅಥವಾ ಅನುಚಿತ ಸ್ಂದರ್ಭಗಳಲ್ಲಿ ಆಟವನ್ನು ನಿಲ್ಲಿಸುವುದು | |
| 2.9 Position of umpires | ೨.೯ ಅಂಪೈರ್ ಸ್ಥಾನ | |
| 2.10 Umpires changing ends | ೨.೧೦ ಅಂಪೈರ್ ತುದಿಯನ್ನು ಬದಲಾಯಿಸುವುದು. | |
| 2.11 Disagreement and dispute | ೨.೧೧ ಭಿನ್ನಾಭಿಪ್ರಾಯ ಹಾಗು ವಿವಾದ | |

| | |
|---|---|
| 2.12 Umpire's decision ೨.೧೨ ಅಂಪೈರ್ ನಿರ್ಣಯ<br>2.13 Signals ೨.೧೩ ಸನ್ನೆಗಳು<br>2.14 Informing the umpires ೨.೧೪ ಅಂಪೈರ್‌ಗಳಿಗೆ ತಿಳಿಸುವುದು<br>**2.15** Correctness of scores ೨.೧೫ ಸ್ಕೋರಿನ ನಿಖರತೆ | |
| **LAW 3 SCORERS ನಿಯಮ ೩ ಸ್ಕೋರರ್‌ಗಳು**<br>3.1 Appointment of scorers ೩.೧ ಸ್ಕೋರರ್‌ಗಳ ನೇಮಕಾತಿ<br>3.2 Correctness of scores ೩.೨ ಸ್ಕೋರಿನ ನಿಖರತೆ<br>3.3 Acknowledging signals ೩.೩ ಸನ್ನೆಗಳನ್ನು ಅಂಗೀಕರಿಸುವುದು | 31/೩೧ |
| **LAW 4 THE BALL ನಿಯಮ ೪ ಚೆಂಡು**<br>4.1 Weight and size ೪.೧ ತೂಕ ಮತ್ತು ಅಳತೆ<br>4.2 Approval and control of balls ೪.೨ ಚೆಂಡುಗಳ ಅನುಮೋದನೆ ಮತ್ತು ನಿಯಂತ್ರಣ<br>4.3 New ball ೪.೩ ಹೊಸ ಚೆಂಡು<br>4.4 New ball in match of more than one day's duration ೪.೪ ಒಂದುದಿನಕ್ಕಿಂತ ಹೆಚ್ಚಿನ ದಿನಗಳ ಪಂದ್ಯದಲ್ಲಿ ಹೋಸಚೆಂಡಿನ್‌ಅ ಬಳಕೆ<br>4.5 Ball lost or becoming unfit for play ೪.೫ ಚೆಂಡು ಕಳೆಯುವುದು ಅಥವಾ ಆಡಲು ಬಾರದ ಸ್ಥಿತಿಯಲ್ಲಿರುವುದು.<br>**4.6** Specifications ೪.೬ ಮಾಪನಗಳು | 32/೩೨ |
| **LAW 5 THE BAT ನಿಯಮ ೫ ದಾಂಡು**<br>5.1 The bat ೫.೧ ದಾಂಡು<br>5.2 The handle ೫.೨ ಹಿಡಿಕೆ<br>5.3 The blade ೫.೩ ಆಡುವ ಭಾಗ (ಬ್ಲೇಡು)<br>5.4 Protection and repair ೫.೪ ಆಡುವ ಭಾಗ (ಬ್ಲೇಡ್)<br>5.5 Damage to the ball ೫.೫ ಚೆಂಡಿಗೆ ಹಾನಿ<br>5.6 Contact with the ball ೫.೬ ಚೆಂಡಿನೊಂದಿಗೆ ಸಂಪರ್ಕ.<br>5.7 Bat size limits ೫.೭ ದಾಂಡಿನ ಅಳತೆಯ ಮಿತಿ | 35/೩೫ |

| | |
|---|---|
| **5.8** Categories of bat ೫.೮ ದಾಂಡಿನ ವರ್ಗೀಕರಣಗಳು | |
| **LAW 6 THE PITCH ನಿಯಮ ೬ ಆಟದ ಪಟ್ಟಿ**<br>6.1 Area of pitch ೬.೧ ಆಟದ ಪಟ್ಟಿಯ ವಿಸ್ತೀರ್ಣ<br>6.2 Fitness of pitch for play ೬.೨ ಆಡಲು ಆಟದ ಪಟ್ಟಿಯ ಯುಕ್ತತೆ.<br>6.3 Selection and preparation ೬.೩ ಆಯ್ಕೆ ಮತ್ತು ಸಿದ್ಧತೆ<br>6.4 Changing the pitch ೬.೪ ಆಟದ ಪಟ್ಟಿಯ ಬದಲಾವಣೆ<br>6.5 Non-turf pitches ೬.೫ ಹುಲ್ಲಿನಲ್ಲದ ಆಟದ ಪಟ್ಟಿ<br>**6.6** Junior Cricket ೬.೬ ಕಿರಿಯರ ಕ್ರಿಕೆಟ್ | 39/೩೯ |
| **LAW 7 THE CREASES ನಿಯಮ ೭ ಕ್ರೀಸ್‌ಗಳು**<br>7.1 The creases ೭.೧ ಕ್ರೀಸ್‌ಗಳು<br>7.2 The bowling crease ೭.೨ ಬೌಲಿಂಗ ಕ್ರೀಸ್<br>7.3 The popping crease ೭.೩ ಪೊಪಿಂಗ ಕ್ರೀಸ್<br>**7.4** The return creases ೭.೪ ರಿಟರ್ನ್ ಕ್ರೀಸ್ | 41/೪೧ |
| **LAW 8 THE WICKETS ನಿಯಮ ೮ ಘೂಟಗಳು**<br>8.1 Description, width and pitching ೮.೧ ವಿವರಣೆ, ಅಗಲ ಮತ್ತು ನೆಡುವಿಕೆ.<br>8.2 Size of stumps ೮.೨ ಘೂಟಗಳ ಅಳತೆ<br>8.3 The bails ೮.೩ ಬೇಲ್ಸ್<br>8.4 Junior cricket ೮.೪ ಕಿರಿಯರ ಕ್ರಿಕೆಟ್<br>**8.5** Dispensing with bails ೮.೫ ಬೇಲ್ಸ್‌ಗಳನ್ನು ಉಪಯೋಗಿಸದಿರುವುದು | 43/೪೩ |
| **LAW 9 PREPARATION AND MAINTENANCE OF THE PLAYING AREA ನಿಯಮ ೯ ಆಟದ ಮೈದಾನವನ್ನು ಸಿದ್ಧಪಡಿಸುವುದು ಮತ್ತು ಉಸ್ತುವಾರಿ**<br>9.1 Rolling ೯.೧ ರೋಲಿಂಗ್ (ಉರುಳುಕಲ್ಲು ಉರುಳಿಸುವುದು)<br>9.2 Clearing debris from the pitch ೯.೨ ಆಟದ ಪಟ್ಟಿಯ ಮೇಲಿನ ಕಸವನ್ನು ತೆಗೆಯುವುದು | 45/೪೫ |

| | | |
|---|---|---|
| 9.3 Mowing | ೯.೩ ಹುಲ್ಲು ಕತ್ತರಿಸುವುದು | |
| 9.4 Watering the pitch | ೯.೪ ಆಟದ ಪಟ್ಟಿಗೆ ನೀರು ಹನಿಸುವುದು | |
| 9.5 Re-marking creases | ೯.೫ ಕ್ರೀಸ್‌ಗಳನ್ನು ಮರು ಗುರುತು ಮಾಡುವುದು | |
| 9.6 Maintenance of foot holes | ೯.೬ ಹೆಜ್ಜೆಯ ಗುರುತುಗಳನ್ನು ಸರಿಪಡಿಸುವುದು | |
| 9.7 Securing of footholds and maintenance of pitch | ೯.೭ ಹೆಜ್ಜೆಯ ಗುರುತುಗಳನ್ನು ಭದ್ರಪಡಿಸುವುದು ಮತ್ತು ಆಟದ ಪಟ್ಟಿಯ ಉಸ್ತುವಾರಿ | |
| 9.8 Non-turf pitches | ೯.೮ ಹುಲ್ಲಿನಲ್ಲದ ಆಟದ ಪಟ್ಟಿ | |
| **LAW 10 COVERING THE PITCH** | **ನಿಯಮ ೧೦ ಆಟದ ಪಟ್ಟಿಯನ್ನು ಹೊದಿಸುವುದು.** | 50/೫೦ |
| 10.1 Before the match | ೧೦.೧ ಅಂದ್ಯಕ್ಕೆ ಮೊದಲು | |
| 10.2 During the match | ೧೦.೨ ಪಂದ್ಯದ ಅವಧಿಯಲ್ಲಿ | |
| 10.3 Removal of covers | ೧೦.೩ ಹೊದಿಕೆ ತೆಗೆಯುವುದು. | |
| **LAW 11 INTERVALS** | **ನಿಯಮ ೧೧ ವಿರಾಮಗಳು** | 51/೫೧ |
| 11.1 An interval | ೧೧.೧ ವಿರಾಮವೆಂದರೆ | |
| 11.2 Duration of intervals | ೧೧.೨ ವಿರಾಮಗಳ ಅವಧಿ | |
| 11.3 Allowance for interval between innings | ೧೧.೩ ಸರದಿಗಳ ನಡುವಿನ ವಿರಾಮದ ಅವಧಿ | |
| 11.4 Changing agreed times of intervals | ೧೧.೪ ವಿರಾಮಗಳ ನಿರ್ಧಾರಿತ ಅವಧಿಯನ್ನು ಬದಲಾಯಿಸುವುದು | |
| 11.5 Changing agreed time for lunch interval | ೧೧.೫ ಊಟದ ವಿರಾಮದ ನಿರ್ಧಾರಿತ ಅವಧಿಯನ್ನು ಬದಲಾಯಿಸುವುದು | |
| 11.6 Changing agreed time for tea interval | ೧೧.೬ ಚಹಾ ವಿರಾಮದ ನಿರ್ಧಾರಿತ ಸಮಯವನ್ನು ಬದಲಾಯಿಸುವುದು | |
| 11.7 Lunch or tea interval – 9 wickets down | ೧೧.೭ ಊಟದ ಮತ್ತು ಚಹಾ ವಿರಾಮ – ೯ ಹುದ್ದರಿಗಳ ಪಥನ | |
| 11.8 Intervals for drinks | ೧೧.೮ ಪಾನೀಯ ವಿರಾಮ | |
| 11.9 Agreement to forgo intervals | ೧೧.೯ ವಿರಾಮಗಳನ್ನು ತ್ಯಜಿಸಲು ಒಪ್ಪಂದ. | |

| | |
|---|---|
| **11.10** Scorers to be informed ೧೧.೧೦ ಸ್ಕೋರರ್‌ಗಳಿಗೆ ತಿಳಿಸುವುದು. | |
| **LAW 12 START OF PLAY; CESSATION ನಿಯಮ ೧೨ ಆಟದ ಪ್ರಾರಂಭ ಮತ್ತು ಮುಕ್ತಾಯ.**<br>12.1 Call of Play ೧೨.೧"ಪ್ಲೇ" ಕರೆಯುವುದು.<br>12.2 Call of Time ೧೨.೨ "ಟೈಂ" ಕರೆಯುವುದು<br>12.3 Removal of bails ೧೨.೩ ಬೇಲ್ಸ್ ಗಳನ್ನು ತೆಗೆಯುವುದು<br>12.4 Starting a new over ೧೨.೪ ಹೊಸ ಓವರ್ ಪ್ರಾರಂಭಿಸುವುದು<br>12.5 Completion of an over ೧೨.೫ ಓವರ್ ಪೂರ್ಣಗೊಳಿಸುವುದು<br>12.6 Last hour of match – number of overs ೧೨.೬ ಪಂದ್ಯದ ಕೊನೆಯ ಒಂದು ಘಂಟೆ – ಓವರ್‌ಗಳ ಸಂಖ್ಯೆ<br>12.7 Last hour of match – interruptions of play ೧೨.೭ ಪಂದ್ಯದ ಕೊನೆಯ ಒಂದು ಘಂಟೆ – ಆಟದಲ್ಲಿ ತಡೆಗಳು<br>12.8 Last hour of match – intervals between innings ೧೨.೮ ಪಂದ್ಯದ ಕೊನೆಯ ಒಂದು ಘಂಟೆ – ಸರದಿಗಳ ನಡುವಿನ ವಿರಾಮಗಳು<br>12.9 Conclusion of match ೧೨.೯ ಪಂದ್ಯದ ಮುಕ್ತಾಯ<br>12.10 Completion of last over of match ೧೨.೧೦ ಪಂದ್ಯದ ಕೊನೆಯ ಓವರನ್ನು ಪೂರ್ಣಗೊಳಿಸುವುದು<br>12.11 Bowler unable to complete an over during last hour ofmatch.<br>೧೨.೧೧ ಪಂದ್ಯದ ಕೊನೆಯ ಘ್ಂಟೆಯ ಅವಧಿಯಲ್ಲಿ ಬೌಲರ್ ಓವರನ್ನು ಪೂರ್ಣಗೊಳಿಸಲಾಗದಿರುವುದು | 59/೫೯ |
| **LAW 13 INNINGS ನಿಯಮ ೧೩ ಸರದಿ**<br>13.1 Number of innings ೧೩.೧ ಸರದಿಗಳ ಸಂಖ್ಯೆ<br>13.2 Alternate innings ೧೩.೨ ಅದಲು ಬದಲು ಸರದಿ<br>13.3 Completed innings ೧೩.೩ ಪೂರ್ನಗೊಂಡ ಸರದಿ.<br>13.4 The toss ೧೩.೪ ನಾಣ್ಯ ಚಿಮ್ಮುವಿಕೆ<br>**13.5** Decision to be notified ೧೩.೫ ನಿರ್ಧಾರವನ್ನು ತಿಳಿಸುವುದು. | 66/೬೬ |

| | |
|---|---|
| **LAW 14 THE FOLLOW-ON ನಿಯಮ ೧೪ ಮರಳಿ ಸರದಿಯ ಮುಂದುವರಿಕೆ**<br>14.1 Lead on first innings ೧೪.೧ ಮೊದಲನೆಯ ಸರದಿಯಲ್ಲಿ ಮುನ್ನಡೆ<br>14.2 Notification ೧೪.೨ ತಿಳಿಸುವುದು<br>**14.3** First day's play lost ೧೪.೩ ಮೊದಲನೆಯ ದಿನದ ಆಟ ಆಗದಿದ್ದರೆ. | 68/೬೮ |
| LAW 15 DECLARATION AND FORFEITURE **ನಿಯಮ ೧೫ ಸರದಿಯ ಸಮಾಪ್ತಿಯ ಘೋಷಣೆ ಮತ್ತು ತ್ಯಜಿಸುವುದು**<br>15.1 Time of declaration ೧೫.೧ ಸರದಿ ಸಮಾಪ್ತಿಗೊಳಿಸುವುದು<br>15.2 Forfeiture of an innings ೧೫.೨ ಸರದಿಯನ್ನು ತ್ಯಜಿಸುವುದು<br>**15.3** Notification ೧೫.೩ ತಿಳಿಸುವುದು | 69/೬೯ |
| **LAW 16 THE RESULT ನಿಯಮ ೧೬ ಫಲಿತಾಂಶ**<br>16.1 A Win – two-innings match ೧೬.೧ ಗೆಲವು – ಎರಡು ಪಾಳಿಗಳ ಪಂದ್ಯ<br>16.2 A Win – one-innings match ೧೬.೨ ಗೆಲವು ಒಂದು ಸರದಿಯ ಪಂದ್ಯ<br>16.3 Umpires awarding a match ೧೬.೩ ಅಂಪೈರ್ ಪಂದ್ಯವನ್ನು ಅನುದಾನಿಸುವುದು.<br>16.4 Matches in which there is an agreement under Law 13.1.2 ೧೬.೪ ನಿಯಮ ೧೩.೧.೨ರ ಅನುಸಾರ ಒಪ್ಪಂದಗಳುಳ್ಳ ಪಂದ್ಯಗಳು.<br>16.5 All other matches – A Tie or Draw ೧೬.೫ ಇತರ ಎಲ್ಲಾ ಪಂದ್ಯಗಳು – ಟೈ ಅಥವಾ ಸಮ (ಡ್ರಾ)<br>16.6 Winning hit or extras ೧೬.೬ ಗೆಲುವಿನ ಹೊಡೆತ ಇಲ್ಲವೇ ಅತಿರಿಕ್ತ ಓಟಗಳು<br>16.7 Statement of result ೧೬.೭ ಫಲಿತಾಂಶದ ವ್ಯಾಖ್ಯೆ<br>16.8 Correctness of result ೧೬.೮ ಸರಿಯಾದ ಫಲಿತಾಂಶ<br>16.9 Mistakes in scoring ೧೬.೯ ಸ್ಕೋರಿಂಗನಲ್ಲಿ ಲೋಪಗಳು<br>**16.10** Result not to be changed ೧೬.೧೦ ಫಲಿತಾಂಶ ಬದಲಿಸಬಾರದು. | 70/೭೦ |

## LAW 17 THE OVER ನಿಯಮ ೧೭ ಓವರ್

76/೭೬

17.1 Number of balls — ೧೭.೧ ಎಸೆತಗಳ ಸಂಖ್ಯೆ

17.2 Start of an over — ೧೭.೨ ಓವರ್ ಪ್ರಾರಂಭ

17.3 Validity of balls — ೧೭.೩ ಎಸೆತಗಳ ನಿಯಮ ಬದ್ಧತೆ

**17.4** Call of Over — ೧೭.೪ ಓವರ್ ಕರೆಯುವುದು

17.5 Umpire miscounting — ೧೭.೫ ಅಂಪೈರ್ ತಪ್ಪಾಗಿ ಎಣಿಸುವುದು.

17.6 Bowler changing ends — ೧೭.೬ ಬೌಲರ್ ತುದಿ ಬದಲಾಯಿಸುವುದು.

17.7 Finishing an over — ೧೭.೭ ಓವರ್ ಪೂರ್ಣಗೊಳಿಸುವುದು

**17.8** Bowler incapacitated or suspended during an over — ೧೭.೮ ಓವರಿನ ಮಧ್ಯದಲ್ಲಿ ಬೌಲರ್ ಅಸ್ವಸ್ಥನಾಗುವುದು ಇಲ್ಲವೇ ಅಮಾನತ್ತುಗೊಳ್ಳುವುದು.

## LAW 18 SCORING RUNS ನಿಯಮ ೧೮ ಓಟಗಳ ಗಳಿಕೆ

79/೭೯

**18.1** A run — ೧೮.೧ ಓಟ

**18.2** Runs disallowed and runs not scored — ೧೮.೨ ಅನುಮತಿಸದ ಓಟಗಳು.

18.3 Short runs — ೧೮.೩ ಅಪೂರ್ಣ ಓಟಗಳು

18.4 Unintentional short runs — ೧೮.೪ ಉದ್ದೇಶರಹಿತ ಅಪೂರ್ಣ ಓಟ

**18.5** Deliberate short runs — ೧೮.೫ ಉದ್ದೇಶಪೂರ್ವಕ ಅಪೂರ್ಣ ಓಟ

18.6 Runs awarded for penalties — ೧೮.೬ ಅನುದಾನಿಸುವ ದಂಡದ ಓಟಗಳು.

**18.7** Runs scored for boundaries — ೧೮.೭ ಬೌಂಡರಿಗಳಿಂದ ಓಟ ಗಳಿಕೆ.

18.8 Runs scored when a batter is dismissed — ೧೮.೮ ದಾಂಡಿಗನು ಔಟ್ ಆದಾಗ ಓಟಗಳ ಗಳಿಕೆ.

18.9 Runs scored when the ball becomes dead other than at thefall of a wicket.
೧೮.೯ ದಾಂಡಿಗನು ಔಟ್ ಆದ ಸಂದರ್ಭಗಳನ್ನು ಹೊರತುಪಡಿಸಿ, ಚೆಂಡು ಡೆಡ್ ಆದಾಗ ಪರಿಗಣಿಸಬೇಕಾದ ಓಟಗಳು

18.10 Crediting of runs scored — ೧೮.೧೦ ಗಳಿಸಿದ ಓಟಗಳನ್ನು ಗಣನೆಗೆ ತೆಗೆದುಕೊಳ್ಳುವುದು.

18.11 Batter returning to original end — ೧೮.೧೧ ದಾಂಡಿಗರು ತವು ಬಟ್ಟ ತುದಿಗೆ ಮರಳಿ ಬರುವುದು.

| | | |
|---|---|---|
| 18.12 Batter returning to wicket he/she has left | ೧೮.೧೨ ದಾಂಡಿಗರು ತವು ಬಟ್ಟ ವಿಕೆಟ್‌ಗೆ ಮರಳಿ ಬರುವುದು | |
| **LAW 19 BOUNDARIES** **ನಿಯಮ ೧೯ ಬೌಂಡರಿಗಳು** | | 89/೮೯ |
| 19.1 Determining the boundary of the field of play | ೧೯.೧ ಆಟದ ಮೈದಾನದ ಸೀಮಾ ರೇಖೆಯನ್ನು ನಿರ್ಧರಿಸುವುದು | |
| 19.2 Identifying and marking the boundary | ೧೯.೨ ಸೀಮಾ ರೇಖೆಯನ್ನು ಗುರುತಿಸುವುದು | |
| 19.3 Restoring the boundary | ೧೯.೩ ಸೀಮಾ ರೇಖೆಯನ್ನು ಸ್ವಸ್ಥಾನಕ್ಕೆ ತರುವುದು | |
| 19.4 Ball grounded beyond the boundary | ೧೯.೪ ಚೆಂಡು ಬೌಂಡರಿಯಾಚೆ ನೆಲಕ್ಕೆ ತಾಗುವುದು. | |
| 19.5 Fielder grounded beyond the boundary | ೧೯.೫ ಕ್ಷೇತ್ರ ರಕ್ಷಕನು ಬೌಂಡರಿಯಾಚೆ ನೆಲದ ಸಂಪರ್ಕದಲ್ಲಿರುವುದು. | |
| 19.6 Boundary allowances | ೧೯.೬ ಬೌಂಡರಿ ಗಳಿಕೆ | |
| 19.7 Runs scored from boundaries | ೧೯.೭ ಬೌಂಡರಿಗಳಿಂದ ಓಟಗಳ ಗಳಿಕೆ. | |
| 19.8 Overthrow or wilful act of fielder | ೧೯.೮ ಮೇರೆ ಮೀರಿದ ಎಸೆತ ಅಥವಾ ಕ್ಷೇತ್ರ ರಕ್ಷಕರ ಉದ್ದೇಶ ಪೂರಿತ ಕೃತ್ಯ | |
| **LAW 20 DEAD BALL** **ನಿಯಮ ೨೦ ಡೆಡ್ ಬಾಲ್** | | 96/೯೬ |
| 20.1 Ball is dead | ೨೦.೧ ಬಾಲ್ ಡೆಡ್ ಆಗಿದೆ. | |
| 20.2 Ball finally settled | ೨೦.೨ ಚೆಂಡು ಅಂತಿಮವಾಗಿ ಕೈ ಸೇರುವುದು. | |

| | |
|---|---|
| 20.3 Call of Over or Time ೨೦.೩ ಓವರ್ ಅಥವಾ “ಟೈಂ” ಕರೆಯುವುದು<br>20.4 Umpire calling and signalling Dead ball ೨೦.೪ ಅಂಪೈರ್ “ಡೆಡ್ ಬಾಲ್” ಎಂದು ಕರೆದು ಸನ್ನೆ ಮಾಡುವುದು<br>20.5 Ball ceases to be dead ೨೦.೫ ಚೆಂಡು ಯಾವಾಗ ಆಟದಲ್ಲಿ ಬರುತ್ತದೆಂದರೆ.<br>20.6 Dead ball not to be revoked ೨೦.೬ ಡೆಡ್ ಬಾಲ್ ರದ್ದು ಮಾಡಬಾರದು.<br>20.7 Dead ball; ball counting as one of over ೨೦.೭ ಡೆಡ್ ಬಾಲ್ – ಓವರಿನ ಒಂದು ಎಸೆತವೆಂದು ಎಣಿಸುವುದು | |
| **LAW 21 NO BALL ನಿಯಮ ೨೧ ನೋ ಬಾಲ್ (ನಿಯಮ ಬಾಹಿರ ಎಸೆತ)**<br>21.1 Mode of delivery ೨೧.೧ ಬೌಲಿಂಗ್ ಶೈಲಿ<br>21.2 Fair delivery – the arm ೨೧.೨ ನಿಯಮಬದ್ಧ ಎಸೆತ (ಬೌಲಿಂಗ್) – ತೋಳು<br>21.3 Ball thrown or delivered underarm – action by umpires.<br>೨೧.೩ ಚೆಂಡನ್ನು ನಿಯಮಬಾಹಿರವಾಗಿ ಎಸೆಯುವುದು ಇಲ್ಲವೇ ತೋಳಿನ ಮಟ್ಟದ ಕೆಳಗಿನಿಂದ ಹಾಕುವುದು<br>21.4 Bowler throwing towards striker’s end before delivery.<br>೨೧.೪ ಬೌಲಿಂಗ್ ಮಾಡುವುದಕ್ಕಿಂತ ಮೊದಲು ಬೌಲರ್ ಚೆಂಡನ್ನು ಎದುರಿಸುವ ದಾಂಡಿಗನ ತುದಿಗೆ ಎಸೆಯುವುದು<br>21.5 Fair delivery – the feet ೨೧.೫ ನಿಯಮಬದ್ಧ ಎಸೆತ – ಪಾದಗಳ ಸ್ಥಾನ<br>21.6 Bowler breaking wicket in delivering ball ೨೧.೬ ಬೌಲರ್ ಬೌಲಿಂಗ್ ಮಾಡುವಾಗ ವಿಕೆಟ್ ಬೀಳಿಸುವುದು.<br>21.7 Ball bouncing more than once, rolling along the ground, orpitching off the pitch.<br>೨೧.೭ ಚೆಂಡು ಒಂದಕ್ಕಿಂತ ಹೆಚ್ಚು ಸಲ ಪುಟಿಯುವುದು, ನೆಲದ ಮೇಲೆ ಉರುಳುವುದು ಮತ್ತು ಆಟದ ಪಟ್ಟಿಯ ಹೊರಗೆ ಪುಟಿಗೆ ಆಗುವುದು<br>21.8 Ball causing the striker to leave the pitch, or ball coming to rest in front of striker’s wicket.<br>೨೧.೮ ಚೆಂಡನ್ನು ಎದುರಿಸುವ ದಾಂಡಿಗನ ವಿಕೆಟ್ ಮುಂದೆ ಚೆಂಡು ಬಂದು ನಿಲ್ಲುವುದು<br>21.9 Fielder intercepting a delivery ೨೧.೯ ಬೌಲ್ ಮಾಡಲ್ಪಟ್ಟ ಚೆಂಡನ್ನು ಕ್ಷೇತ್ರ ರಕ್ಷಕ ತಡೆದರೆ.<br>21.10 Ball bouncing overhead height of striker ೨೧.೧೦ ಚೆಂಡನ್ನೆದುರಿಸುವ ದಾಂಡಿಗನ ತಲೆಯಮೇಲಿಂದ | 102/೧೦೨ |

| | |
|---|---|
| ಚೆಂಡು ಎಗರುವುದು. | |
| 21.11 Call of No ball for infringement of other Laws ೨೧.೧೧ ಇತರ ನಿಯಮಗಳ ಉಲ್ಲಂಘನೆಗಾಗಿ “ನೋ ಬಾಲ್” ಕರೆಯುವುದು | |
| 21.12 Revoking a call of No ball ೨೧.೧೨ ನೋ ಬಾಲ್ ಕರೆಯನ್ನು ಹಿಂತೆಗೆದುಕೊಳ್ಳುವುದು | |
| 21.13 No ball to over-ride Wide ೨೧.೧೩ ನೋ ಬಾಲ್ ವೈಡ್ ಕರೆಯನ್ನು ಅಮಾನ್ಯಗೊಳಿಸುವುದು | |
| 21.14 Ball not dead ೨೧.೧೪ ಚೆಂಡು ಡೆಡ್ ಆಗುವುದಿಲ್ಲ | |
| 21.15 Penalty for a No ball ೨೧.೧೫ ನೋ ಬಾಲ್ ಕರೆಗೆ ದಂಡ | |
| 21.16 Runs resulting from a No ball – how scored ೨೧.೧೬ ನೋ ಬಾಲ್ ದಿಂದ ಗಳಿಸಿದ ಓಟಗಳನ್ನು ಹೇಗೆ ಲೆಕ್ಕಿಸಬೇಕು. | |
| 21.17 No ball not to count ೨೧.೧೭ ನೋ ಬಾಲ್ ಎಣಿಸಬಾರದು. | |
| 21.18 Out from a No ball ೨೧.೧೮ ನೋ ಬಾಲ್‌ನಿಂದ ಔಟ್ ಆದಾಗ. | |
| **LAW 22 WIDE BALL ನಿಯಮ ೨೨ ವೈಡ್ ಬಾಲ್** | 112/೧೧೨ |
| 22.1 Judging a Wide ೨೨.೧ ವೈಡ್ ನಿರ್ಧರಿಸುವುದು | |
| 22.2 Call and signal of Wide ball ೨೨.೨ ವೈಡ್ ಬಾಲ್ ಎಂದು ಕರೆದು ಸನ್ನೆ ಮಾಡುವುದು. | |
| 22.3 Revoking a call of Wide ball ೨೨.೩ ವೈಡ್ ಕರೆಯನ್ನು ಹಿಂತೆಗೆದುಕೊಳ್ಳುವುದು | |
| 22.4 Delivery not a Wide ೨೨.೪ ಬೌಲ್ ಮಾಡಿದ ಎಸೆತ ವೈಡ್ ಅಲ್ಲ | |
| 22.5 Ball not dead ೨೨.೫ ಚೆಂಡು ಡೆಡ್ ಅಲ್ಲ | |
| 22.6 Penalty for a Wide ೨೨.೬ ವೈಡ್‌ಗೆ ದಂಡ | |
| 22.7 Runs resulting from a Wide – how scored ೨೨.೭ ವೈಡ್‌ನಿಂದ ಗಳಿಸಿದ ಓಟಗಳನ್ನು ಹೇಗೆ ಲೆಕ್ಕಿಸಬೇಕು. | |
| 22.8 Wide not to count ೨೨.೮ ವೈಡ್‌ಬಾಲ್ ಎಣಿಸಬಾರದು. | |

| | | |
|---|---|---|
| 22.9 Out from a Wide | ೨೨.೯ ವೈಡ್‌ಬಾಲ್ ನಿಂದ ಔಟ್ ಆಗುವುದು | |
| **LAW 23 BYE AND LEG BYE** | **ನಿಯಮ ೨೩ ಬೈ ಮತ್ತು ಲೆಗ್ ಬೈ** | 115/೧೧೫ |
| 23.1 Byes | ೨೩.೧ ಬೈಸ್ | |
| 23.2 Leg byes | ೨೩.೨ ಲೆಗ್ ಬೈಸ್ | |
| 23.3 Leg byes not to be awarded | ೨೩.೩ ಲೆಗ್ ಬೈಸ್ ಓಟಗಳನ್ನು ಅನುಮತಿಸದಿರುವುದು. | |
| **LAW 24 FIELDER'S ABSENCE; SUBSTITUTES** | **ನಿಯಮ ೨೪ ಕ್ಷೇತ್ರ ರಕ್ಷಕನ ಅನುಪಸ್ಥಿತಿ; ಬದಲಿ ಆಟಗಾರ** | 117/೧೧೭ |
| 24.1 Substitute fielders | ೨೪.೧ ಬದಲಿ ಕ್ಷೇತ್ರ ರಕ್ಷಕರು | |
| 24.2 Fielder absent or leaving the field of play | ೨೪.೨ ಕ್ಷೇತ್ರ ರಕ್ಷಕ- ಅನುಪಸ್ಥಿತಿ ಇಲ್ಲವೇ ಮೈದಾನದಿಂದ ಹೊರ ಹೋಗುವುದು. | |
| 24.3 Penalty time not incurred | ೨೫.೩ ದಂಡದ ಅವಧಿ ಅನ್ವಯವಾಗುವುದಿಲ್ಲ. | |
| 24.4 Player returning without permission | ೨೫.೪ ಅನುಮತಿ ಇಲ್ಲದೇ ಆಟಗಾರನು ಹಿಂತಿರುಗುವುದು | |
| **LAW 25 BATTER'S INNINGS; RUNNERS** | **ನಿಯಮ ೨೫ ದಾಂಡಿಗ (ದಾಂಡಿಗನ/ಳ) ಸರದಿ: ಓಟಗಾರರು** | 123/೧೨೩ |
| 25.1 Eligibility to act as a batter or runner | ೨೫.೧ ದಾಂಡಿಗ ಅಥವಾ ಓಟಗಾರನಾಗಿ ಕಾರ್ಯ ನಿರ್ವಹಿಸುವುದು. | |
| 25.2 Commencement of a batter's innings | ೨೫.೨ ದಾಂಡಿಗನ ಸರದಿಯ ಪ್ರಾರಂಭ | |
| 25.3 Restriction on batter commencing an innings | ೨೫.೩ ದಾಂಡಿಗನ ಸರದಿಯ ಪ್ರಾರಂಭಕ್ಕೆ ನಿರ್ಬಂಧ. | |
| 25.4 Batter retiring | ೨೫.೪ ದಾಂಡಿಗ ನಿವೃತ್ತನಾಗುವುದು. | |
| 25.5 Runners | ೨೫.೫ ಓಟಗಾರರು | |
| 25.6 Dismissal and conduct of a batter and his/her runner | ೨೫.೬ ದಾಂಡಿಗ ಮತ್ತು ಅವನ /ಅವಳ ಓಟಗಾರನನ್ನು ಔಟ್ ಮಾಡುವುದು ಹಾಗೂ ನಡತೆ. | |

| | | |
|---|---|---|
| 25.7 Restriction on the striker's runner | ೨೫.೭ ಚೆಂಡನ್ನು ಎದುರಿಸುವ ದಾಂಡಿಗನ/ಳ ಓಟಗಾರನ ಮೇಲಿನ ನಿರ್ಬಂಧ | |
| 25.8 Striker's right to play the ball | ೨೫.೮ ಚೆ0ಡನ್ನೆದುರಿಸುವ ದಾಂಡಿಗನ/ಳ ಚೆ0ಡನ್ನಾಡುವ ಅಧಿಕಾರ | |
| **LAW 26 PRACTICE ON THE FIELD** | **ನಿಯಮ ೨೬ ಆಟದ ಮೈದಾನದಲ್ಲಿ ಅಭ್ಯಾಸ** | 131/೧೩೧ |
| 26.1 Practice on the pitch or the rest of the square | ೨೬.೧ ಆಟದ ಪಟ್ಟಿಯ ಮೇಲೆ ಮತ್ತು ಚೌಕಾಕಾರದ ಉಳಿದ ಭಾಗದ ಮೇಲೆ ಅಭ್ಯಾಸ | |
| 26.2 Practice on the outfield | ೨೬.೨ ಹೊರ ಮೈದಾನ (ಔಟ್ ಫೀಲ್ಡ್) ದಲ್ಲಿ ಅಭ್ಯಾಸ | |
| 26.3 Trial run-up | ೨೬.೩ ಅಭ್ಯಾಸದ ಓಟ (ರನ್ ಅಪ್) | |
| 26.4 Penalties for contravention | ೨೬.೪ ಉಲ್ಲಂಘನೆಗಾಗಿ ದಂಡಗಳು | |
| **LAW 27 THE WICKET-KEEPER** | **ನಿಯಮ ೨೭ ಘೂಟ ರಕ್ಷಕ** | 134/೧೩೪ |
| 27.1 Protective equipment | ೨೭.೧ ಸುರಕ್ಷಾ ಉಪಕರಣಗಳು | |
| 27.2 Gloves | ೨೭.೨ ಕೈ ಗವಚಗಳು | |
| 27.3 Position of wicket-keeper | ೨೭.೩ ಘೂಟ ರಕ್ಷಕನ ಸ್ಥಾನ | |
| 27.4 Movement by wicket-keeper | ೨೭.೪ ಘೂಟ ರಕ್ಷಕನ ಚಲನೆ | |
| 27.5 Restriction on actions of wicket-keeper | ೨೭.೫ ಘೂಟ ರಕ್ಷಕನ ಹಾವಭಾವಗಳ ಮೇಲಿನ ನಿರ್ಬಂಧ | |
| 27.6 Interference with wicket-keeper by striker | ೨೭.೬ ಚೆಂಡನ್ನು ಎದುರಿಸುವ ದಾಂಡಿಗನಿಂದ ಘೂಟ ರಕ್ಷಕನಿಗೆ ಅಡ್ಡಿಪಡಿಸುವಿಕೆ | |
| **LAW 28 THE FIELDER** | **ಯಮ ೨೮ ಕ್ಷೇತ್ರ ರಕ್ಷಕ** | 138/೧೩೮ |
| 28.1 Protective equipment | ೨೮.೧ ಸುರಕ್ಷಾ ಉಪಕರಣಗಳು | |
| 28.2 Fielding the ball | ೨೮.೨ ಚೆಂಡಿನ ಕ್ಷೇತ್ರ ರಕ್ಷಣೆ | |

| | |
|---|---|
| 28.3 Protective helmets belonging to the fielding side ೨೮.೩ ಕ್ಷೇತ್ರ ರಕ್ಷಣೆ ತಂಡಕ್ಕೆ ಸೇರಿದ ಸುರಕ್ಷಾ ಶಿರಸ್ತ್ರಾಣಗಳು.<br>28.4 Limitation of on side fielders ೨೮.೪ ಆನ್ (ಬಲ) ಭಾಗದ ಕ್ಷೇತ್ರ ರಕ್ಷಕರ ಮಿತಿ<br>28.5 Fielders not to encroach on pitch ೨೮.೫ ಆಟದ ಪಟ್ಟಿಯ ಮೇಲೆ ಕ್ಷೇತ್ರ ರಕ್ಷಕರ ಅತಿಕ್ರಮಣ (ಎನ್ ಕ್ರೋಚ್‌ಮೆಂಟ್)<br>28.6 Movement by any fielder other than the wicket-keeper ೨೮.೬ ಕ್ಷೇತ್ರ ರಕ್ಷಕ ಚಲನೆ ಘೂಟರಕ್ಷಕನನ್ನು ಹೊರತುಪಡಿಸಿ. | |
| **LAW 29 THE WICKET IS BROKEN ನಿಯಮ ೨೯ ವಿಕೆಟ್ ಬೀಳಿಸುವುದು.**<br>29.1 The wicket is broken ೨೯.೧ ವಿಕೆಟನ್ನು ಬೀಳಿಸುವುದು.<br>29.2 Breaking the wicket fairly ೨೯.೨ ವಿಕೆಟನ್ನು ನಿಯಮಬದ್ಧವಾಗಿ ಬೀಳಿಸುವುದು.<br>29.3 One bail off ೨೯.೨ ಒಂದು ಬೇಲ್ ಬಿದ್ದರೆ<br>29.4 Remaking wicket ೨೯.೩ ವಿಕೆಟನ್ನು ಮತ್ತೆ ಸರಿಪಡಿಸುವುದು<br>29.5 Dispensing with bails ೨೯.೪ ಬೇಲ್‌ಗಳನ್ನು ತೆಗೆದಿಡುವುದು | 145/೧೪೫ |
| **LAW 30 BATTER OUT OF HIS/HER GROUND ನಿಯಮ ೩೦ ದಾಂಡಿಗ (ದಾಂಡಿಗನು/ಳು) ತನ್ನ ಜಾಗದಿಂದ ಹೊರಗಿರುವುದು**<br>30.1 When out of his/her ground ೩೦.೧ ಯಾವಾಗ ತನ್ನ ನಿಗದಿತ ಜಾಗದಿಂದ ಹೊರಗಿದ್ದಾನೆ/ಹೊರಗಿದ್ದಾಳೆ<br>30.2 Which is a batter's ground ೩೦.೨ ದಾಂಡಿಗನ/ಳ ನಿಗದಿತ ಜಾಗ ಯಾವುದು?<br>30.3 Position of non-striker ೩೦.೩ ಬೌಲರ್ ತುದಿಯ ದಾಂಡಿಗನ/ಳ ಸ್ಥಾನ(ಜಾಗ) | 148/೧೪೮ |
| **LAW 31 APPEALS ನಿಯಮ ೩೧ ಮನವಿಗಳು**<br>31.1 Umpire not to give batter out without an appeal ೩೧.೧ ಅಂಪೈರ್ ಮನವಿ ಇಲ್ಲದ ಹೊರತು ದಾಂಡಿಗನನ್ನು ಔಟ್ ಕೊಡಬಾರದು.<br>31.2 Batter dismissed ೩೧.೨ ದಾಂಡಿಗ ಔಟಾಗುವುದು.<br>31.3 Timing of appeals ೩೧.೩ ಮನವಿ ಸಲ್ಲಿಸುವ ವೇಳೆ<br>31.4 Appeal "How's That?" ೩೧.೪ ಮನವಿ – "ಹೌ ಈಸ್ ದಟ್"<br>31.5 Answering appeals ೩೧.೫ ಮನವಿಗಳಿಗೆ ಉತ್ತರಿಸುವುದು | 150/೧೫೦ |

| | | |
|---|---|---|
| 31.6 Consultation by umpires | ೩೧.೬ ಅಂಪೈರ್ ಗಳ ನಡುವೆ ಸಮಾಲೋಚನೆ | |
| 31.7 Batter leaving the wicket under a misapprehension | ೩೧.೭ ದಾಂಡಿಗನು ತಪ್ಪು ತಿಳುವಳಿಕೆಯಿಂದ ವಿಕೆಟ್ ಬಿಡುವುದು. | |
| 31.8 Withdrawal of an appeal | ೩೧.೮ ಮನವಿ ಹಿಂತೆಗೆದುಕೊಳ್ಳುವುದು | |
| **LAW 32 BOWLED** ನಿಯಮ ೩೨ ಬೌಲ್ಡ್ | | 152/೧೫೨ |
| 32.1 Out Bowled | ೩೨.೧ ಔಟ್ ಬೌಲ್ಡ್ | |
| 32.2 Bowled to take precedence | ೩೨.೨ ಬೌಲ್ಡ್ ಗೆ ಮೊದಲ ಆದ್ಯತೆ | |
| **LAW 33 CAUGHT** ನಿಯಮ ೩೩ – ಕಾಟ್ (ಬುತ್ತಿ ಹಿಡಿಯುವುದು) | | 153/೧೫೩ |
| 33.1 Out Caught | ೩೩.೧ ಔಟ್ ಕಾಟ್ | |
| 33.2 A fair catch | ೩೩.೨ ನಿಯಮ ಬದ್ಧ ಕ್ಯಾಚ್ (ಬುತ್ತಿ) | |
| 33.3 Making a catch | ೩೩.೩ ಕ್ಯಾಚ್ ಪೂರ್ಣಗೊಳ್ಳುವುದು | |
| 33.4 No runs to be scored | ೩೩.೪ ಯಾವುದೇ ಓಟ ಗಳಿಕೆಯಾಗುವುದಿಲ್ಲ. | |
| 33.5 Caught to take precedence | ೩೩.೫ ಕ್ಯಾಚ್‌ಗೆ ಆದ್ಯತೆ. | |
| **LAW 34 HIT THE BALL TWICE** ನಿಯಮ ೩೪ – ಚೆಂಡನ್ನು ಎರಡು ಸಲ ಹೊಡೆಯುವುದು. | | 156೧೫೬ |
| 34.1 Out Hit the ball twice | ೩೪.೧ ಚೆಂಡನ್ನು ಎರಡು ಸಲ ಹೊಡೆದ ಎಂದು ಔಟ್ | |
| 34.2 Not out Hit the ball twice | ೩೪.೨ ಚೆಂಡನ್ನು ಎರಡು ಸಲ ಹೊಡೆದ ಎಂದು ಔಟಿಲ್ಲ | |
| 34.3 Ball lawfully struck more than once | ೩೪.೩ ನಿಯಮಬದ್ಧವಾಗಿ ಚೆಂಡನ್ನು ಒಂದಕ್ಕಿಂತ ಹೆಚ್ಚು ಸಲ ಹೊಡೆಯುವುದು. | |
| 34.4 Runs permitted from ball lawfully struck more than once | ೩೪.೪ ನಿಯಮಬದ್ಧವಾಗಿ ಒಂದಕ್ಕಿಂತ ಹೆಚ್ಚು ಸಲ ಹೊಡೆದ ಚೆಂಡಿನಿಂದ ಓಟಗಳ ಗಳಿಕೆ. | |
| 34.5 Bowler does not get credit | ೩೪.೫ ಬೌಲರನಿಗೆ ಶ್ರೇಯ ಸಲ್ಲದು. | |
| **LAW 35 HIT WICKET** ನಿಯಮ ೩೫ – ಹಿಟ್ ವಿಕೆಟ್ | | 159/೧೫೯ |
| 35.1 Out Hit wicket | ೩೫.೧ ಔಟ್ ಹಿಟ್ ವಿಕೆಟ್ | |

| | | |
|---|---|---|
| 35.2 Not out Hit wicket | ೩೫.೨ ಹಿಟ್ ವಿಕೆಟ್ ಎಂದು ಔಟಿಲ್ಲ | |
| 35.3 Runs scored | ೩೫.೩ ಓಟಗಳ ಗಳಿಕೆ. | |
| **LAW 36 LEG BEFORE WICKET** | **ನಿಯಮ ೩೬ - ಘೂಟಗಳ ಮುಂದೆ ಕಾಲು (ಎಲ್ ಬಿ ಡಬ್ಲ್ಯು .)** | 161/೧೬೧ |
| 36.1 Out LBW | ೩೬.೧ ಔಟ್ ಎಲ್ ಬಿ ಡಬ್ಲ್ಯು | |
| 36.2 Interception of the ball | ೩೬.೨ ಚೆಂಡಿನ ತಡೆ | |
| 36.3 Off side of wicket | ೩೬.೩ ವಿಕೆಟ್ಟಿನ ಆಫ್ ಭಾಗ | |
| **LAW 37 OBSTRUCTING THE FIELD** | **ನಿಯಮ ೩೭ – ಕ್ಷೇತ್ರ ರಕ್ಷಣೆಗೆ ಅಡಚಣೆ (ಅಬ್‌ಸ್ಟ್ರಕ್ಟಿಂಗ್ ದಿ ಫೀಲ್ಡ್)** | 163/೧೬೩ |
| 37.1 Out Obstructing the field | ೩೭.೧ ಔಟ್ ಕ್ಷೇತ್ರ ರಕ್ಷಣೆಗೆ ಅಡಚಣೆ | |
| 37.2 Not out Obstructing the field | ೩೭.೨ ಕ್ಷೇತ್ರ ರಕ್ಷಣೆಗೆ ಅಡಚಣೆಗೆ ಔಟಿಲ್ಲ | |
| 37.3 Obstructing a ball from being caught | ೩೭.೩ ಚೆಂಡನ್ನು ಕ್ಯಾಚ್ ಹಿಡಿಯುವುದರಿಂದ ಅಡ್ಡಿಪಡಿಸುವುದು. | |
| 37.4 Returning the ball to a fielder | ೩೭.೪ ಚೆಂಡನ್ನು ಕ್ಷೇತ್ರ ರಕ್ಷಕನಿಗೆ ಹಿಂತಿರುಗಿಸುವುದು | |
| 37.5 Runs scored | ೩೭.೫ ಓಟಗಳ ಗಳಿಕೆ. | |
| 37.6 Bowler does not get credit | ೩೭.೬ ಬೌಲರ್‌ಗೆ ಶ್ರೇಯ ಕೊಡಬಾರದು. | |
| **LAW 38 RUN OUT** | **ನಿಯಮ ೩೮ ರನ್ ಔಟ್.** | 166/೧೬೬ |
| 38.1 Out Run out | ೩೮.೧ ಔಟ್ ರನ್ ಔಟ್ | |
| 38.2 Batter not out Run out | ೩೮.೨ ದಾಂಡಿಗ ರನ್ ಔಟ್ ಅಲ್ಲ. | |
| 38.3 Non-striker leaving his/her ground early | ೩೮.೩ ಚೆಂಡನ್ನು ಎದುರಿಸದ ದಾಂಡಿಗ ಅವನ/ಅವಳ ಗದಿತ ಜಾಗದಿಂದ ಬೇಗನೆ ಹೊರಬರುವುದು | |
| 38.4 Which batter is out | ೩೮.೪ ಯಾವ ದಾಂಡಿಗ ಔಟ್? | |
| 38.5 Runs scored | ೩೮.೫ ರನ್ ಗಳಿಸುವುದು. | |
| 38.6 Bowler does not get credit | ೩೮.೬ ಬೌಲರ್‌ಗೆ ಶ್ರೇಯ ಸಲ್ಲದು | |

| | |
|---|---|
| **LAW 39 STUMPED** **ನಿಯಮ ೩೯ – ಸ್ಟಂಪ್ಡ್**<br>39.1 Out Stumped ೩೯.೧ ಔಟ್ ಸ್ಟಂಪ್ಡ್<br>39.2 Ball rebounding from wicket-keeper's person ೩೯.೨ ಚೆಂಡು ಘೂಟ ರಕ್ಷಕನ ಶರೀರದಿಂದ ಪುಟಿಯುವುದು<br>39.3 Not out Stumped ೩೯.೩ ಸ್ಟಂಪ್ಡ್ ಔಟ್ ಅಲ್ಲ<br>39.4 Runs scored ೩೯.೪ ಓಟಗಳ ಗಳಿಕೆ. | 171/೧೭೧ |
| **LAW 40 TIMED OUT** **ನಿಯಮ ೪೦ – ಟೈಮ್ಡ್ ಔಟ್**<br>40.1 Out Timed out ೪೦.೧ ಔಟ್ ಟೈಮ್ಡ್ ಔಟ್<br>40.2 Bowler does not get credit ೪೦.೨ ಬೌಲರ್‌ಗೆ ಶ್ರೇಯ ಸಲ್ಲದು. | 172/೧೭೨ |
| **LAW 41 UNFAIR PLAY** **ನಿಯಮ ೪೧ – ನಿಯಮಬಾಹಿರ ಆಟ**<br>41.1 Fair and unfair play – responsibility of captains ೪೧.೧ ನಿಯಮ ಬದ್ಧ ಮತ್ತು ನಿಯಮಬಾಹಿರ ಆಟ – ನಾಯಕರ ಜವಾಬ್ದಾರಿ<br>41.2 Fair and unfair play – responsibility of umpires ೪೧.೨ ನಿಯಮ ಬಾಹಿರ - ಕ್ರಮಗಳು<br>41.3 The match ball – changing its condition ೪೧.೩ ಪಂದ್ಯದ ಚೆಂಡು - ಸ್ವರೂಪವನ್ನು ಬದಲಾಯಿಸುವುದು.<br>41.4 Deliberate attempt to distract striker ೪೧.೪ ಉದ್ದೇಶಪೂರ್ವಕವಾಗಿ ಚೆಂಡನ್ನೆದುರಿಸುವ ದಾಂಡಿಗನ ಚಿತ್ತ ವಿಚಲಿತಗೊಳಿಸುವುದು.<br>41.5 Deliberate distraction, deception, or obstruction of batter ೪೧.೫ ಉದ್ದೇಶಪೂರ್ವಕವಾಗಿ ದಾಂಡಿಗನ ಚಿತ್ತ ವಿಚಲಿತಗೊಳಿಸುವುದು, ವಂಚಿಸುವುದು ಮತ್ತು ಅಡೆತಡೆ ಒಡ್ಡುವುದು<br>41.6 Bowling of dangerous and unfair short pitched deliveries ೪೧.೬ ಅಪಾಯಕಾರಿ ಹಾಗೂ ನಿಯಮಬಾಹಿರ ಅಲ್ಪ ಪುಟಿಗೆಯ ಎಸೆತಗಳು<br>41.7 Bowling of dangerous and unfair non-pitching deliveries ೪೧.೭ ಅಪಾಯಕಾರಿ ಮತ್ತು ನಿಯಮಬಾಹಿರ ಪುಟಿಗೆ ಇಲ್ಲದ ಎಸೆತ<br>41.8 Bowling of deliberate front-foot No ball ೪೧.೮ ಉದ್ದೇಶಪೂರಿತ ಮುಂದಿನ ಪಾದದ ನೋ ಬಾಲ್<br>41.9 Time wasting by the fielding side ೪೧.೯ ಕ್ಷೇತ್ರ ರಕ್ಷಣೆ ತಂಡದಿಂದ ಕಾಲಹರಣ. | 173/೧೭೩ |

| | | |
|---|---|---|
| 41.10 Batter wasting time | ೪೧.೧೦ ದಾಂಡಿಗ ಕಾಲಹರಣ ಮಾಡುವುದು. | |
| 41.11 The protected area | ೪೧.೧೧ ಕಾಪಾಡುವ ಜಾಗ (ಪ್ರೊಟೆಕ್ಟೆಡ್ ಏರಿಯಾ) | |
| 41.12 Fielder damaging the pitch | ೪೧.೧೨ ಕ್ಷೇತ್ರ ರಕ್ಷಕನು ಅಂಕಣವನ್ನು ಹಾಳುಮಾಡುವುದು. | |
| 41.13 Bowler running on protected area | ೪೧.೧೩ ಬೌಲರ್ ಕಾಪಾಡುವ ಜಾಗದಲ್ಲಿ ಓಡುವುದು. | |
| 41.14 Batter damaging the pitch | ೪೧.೧೪ ದಾಂಡಿಗನು ಆಟದ ಪಟ್ಟಿಯನ್ನು ಹಾಳುಮಾಡುವುದು. | |
| 41.15 Striker in protected area | ೪೧.೧೫ ಕಾಪಾಡಬೇಕಾದ ಜಾಗದ ಮೇಲೆ ಚೆಂಡನ್ನೆದುರಿಸುವ ದಾಂಡಿಗ | |
| 41.16 Batters stealing a run | ೪೧.೧೬ ದಾಂಡಿಗರು ಓಟವನ್ನು ಕದಿಯುವುದು. | |
| 41.17 Penalty runs | ೪೧.೧೭ ದಂಡದ ಓಟಗಳು. | |
| **LAW 42 PLAYERS' CONDUCT ನಿಯಮ ೪೨ ಆಟಗಾರರ ನಡವಳಿಕೆ** | | 204/೨೦೪ |
| 42.1 Unacceptable conduct | ೪೨.೧ ಅಂಗೀಕಾರಾರ್ಹವಲ್ಲದ ನಡವಳಿಕೆ | |
| 42.2 Level 1 offences and action by umpires | ೪೨.೨ ೧ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ | |
| 42.3 Level 2 offences and action by umpires | ೪೨.೩ ೨ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ | |
| 42.4 Level 3 offences and action by umpires | ೪೨.೪ ೩ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ | |
| 42.5 Level 4 offences and action by umpires | ೪೨.೫ ೪ನೇ ಮಟ್ಟದ ಅಪರಾಧ ಮತ್ತು ಅಂಪೈರ್‌ಗಳ ಕ್ರಮ | |
| 42.6 Captain refusing to remove a player from the field | ೪೨.೬ ಆಟಗಾರನನ್ನು ಆಟದ ಮೈದಾನದ ಹೊರಗೆ ಕಳಿಸಲು ನಾಯಕನು ನಿರಾಕರಿಸುವುದು. | |
| 42.7 Additional points relating to Level 3 and Level 4 offences | ೪೨.೭ ೩ನೇ ಪಾತಳಿ ಮತ್ತು ೪ನೇ ಪಾತಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಅಂಶಗಳು. | |
| **Appendix A: Definitions and explanations of words or phrases not defined in the text ಅನುಬಂಧ ಎ ಉಪಯೋಗಿಸಿದ ಪದಗಳ ವ್ಯಾಖ್ಯಾನ ಮತ್ತು ವಿವರಣೆ** | | 217/೨೧೭ |

| | | |
|---|---|---|
| A.1 The match | ಎ.೧ ಪಂದ್ಯ | |
| A.2 Implements and equipment | ಎ.೨ ಉಪಕರಣಗಳು ಮತ್ತು ಸಾಮಗ್ರಿಗಳು | |
| A3 The playing area | ಎ. ೩. ಆಡುವ ಜಾಗ (ಪ್ರದೇಶ) | |
| A.4 Positioning | ಎ.೪ ಸ್ಥಾನ (ಜಾಗ) | |
| A.5 Umpires | ಎ.೫ ಅಂಪೈರ್ | |
| **A.6 Batter** | ಎ.೬ ದಾಂಡಿಗರು | |
| A.7 Fielders | ಎ.7 ಕ್ಷೇತ್ರ ರಕ್ಷಕ | |
| A.8 Substitutes, Replacements and Runners | ಎ.೮ ಬದಲಿ ಆಟಗಾರ, ಬದಲಾವಣೆ ಮತ್ತು ಓಟಗಾರ. | |
| A.9 Bowlers | ಎ.೯ ಬೌಲರಗಳು | |
| A.10 The ball | ಎ.೧೦ ಚೆಂಡು. | |
| A.11 Runs | ಎ.೧೧ ಓಟಗಳು | |
| A.12 The person | ಎ.೧೨ ಶರೀರ (ವ್ಯಕ್ತಿ) | |
| A.13 Offside/on side; in front of / behind the popping crease | ಎ.೧೩ ಆಫ್ ಸೈಡ್/ಆನ್ ಸೈಡ್: ಪಾಪಿಂಗ್ ರೇಖೆಯ ಮುಂದೆ/ಹಿಂದೆ | |
| **Appendix B: The bat (Law 5)** | **ಅನುಬಂಧ ಬಿ ದಾಂಡು (ನಿಯಮ ೫)** | 230/೨೩0 |
| B.1. General guidance | ಬಿ.೧ ಸಾಮಾನ್ಯ ಮಾರ್ಗದರ್ಶಕಗಳು | |
| B.2. Specifications for the handle | ಬಿ.೨ ಹಿಡಿಕೆಯ ನಿರ್ದಿಷ್ಠತೆಗಳು | |
| B.3 Specifications for the blade | ಬಿ.೩ ಬ್ಲೇಡಿನ ನಿರ್ದಿಷ್ಠತೆಗಳು | |
| B.4 Protection and repair | ಬಿ.೪ ರಕ್ಷಣೆ ಮತ್ತು ದುರಸ್ತಿ | |

| | |
|---|---|
| B.5. Toe and side inserts ಬಿ.೫ ತಳಭಾಗ ಮತ್ತು ಬದಿಗಳಿಗೆ ಸೇರಿಸುವ ವಸ್ತು<br>B.6 Commercial identifications ಬಿ.೬ ವಾಣಿಜ್ಯ ಗುರುತುಗಳು<br>B.7 Type D Bats ಬಿ.೭ ಡಿ ನಮೂನೆಯ ದಾಂಡುಗಳು<br>B.8 Bat Gauge ಬಿ.೮ ದಾಂಡಿನ ಮಾಪಕ | |
| **Appendix C: Laws 6 (The pitch) and 7 (The creases)**<br>ಅನುಬಂಧ ಸಿ ನಿಯಮ ೬ (ಆಟದ ಪಟ್ಟಿ) ಮತ್ತು ನಿಯಮ ೭ (ಕ್ರೀಸ್‌ಗಳು) | 237/೨೩೭ |
| **Appendix D: Law 8 (The wickets)**<br>**ಅನುಬಂಧ ಡಿ** ನಿಯಮ ೮ (ಘೂಟಗಳು) | 238/೨೩೮ |
| **Appendix E: Wicket-keeping gloves**<br>**ಅನುಬಂಧ ಇ** ಘೂಟರಕ್ಷಕನ ಕೈಗವಚಗಳು | 23೯/೨೩೯ |



## ABOUT AUTHOR - ಲೇಖಕರ ಬಗ್ಗೆ

Vinayak (Abhay) Narayanrao Kulkarni is one of the few International Umpires that Karnataka has produced. It is to his credit that he is the first Cricket Umpire from North Karnataka to scale this height. A Native of border taluk, Athani in Belgaum district. Born to Late Civil Judge N B Kulkarni and Late Indirabai Kulkarni at Bagalkot on 11.09.1954 is the second son. He has been a sportsman throughout his school / college days having represented his school / college in varied disciplines like Cricket, Hockey, Chess, Carom, Kho-Kho, and Basketball not to mention of Athletics. He represented Karnataka University in chess during 1972. His education has been at various places in Karnataka.

ವಿನಾಯಕ್ (ಅಭಯ) ನಾರಾಯಣರಾವ ಕುಲಕರ್ಣಿ ಕರ್ನಾಟಕದ ಕೆಲವೇ ಅಂತರಾಷ್ಟ್ರಿಯ ಅಂಪೈರ್ ಗಳಲ್ಲಿ ಒಬ್ಬರು. ಅಂತರಾಷ್ಟ್ರಿಯ ಮಟ್ಟಕ್ಕೇರಿರುವ ಮೊದಲ ಉತ್ತರ ಕರ್ನಾಟಕದ ಅಂಪೈರ್ ಎಂಬ ಹಿರಿಮೆ. ಮೂಲತಃ ಬೆಳಗಾವಿ ಜಿಲ್ಲೆಯ ಅಥಣಿಯವರಾದ ಇವರು ಹುಟ್ಟಿದ್ದು (೧೧-೦೯-೧೯೫೪) ಬಾಗಲಕೋಟೆಯಲ್ಲಿ. ಸಿವಿಲ್ ನ್ಯಾಯಾಧೀಶರಾಗಿದ್ದ ದಿವಂಗತ ಎನ್ ಬಿ ಕುಲಕರ್ಣಿ ಮತ್ತು ದಿವಂಗತ ಇಂದಿರಾಬಾಯಿ ಅವರ ದ್ವಿತೀಯ ಪುತ್ರರಾದ ವಿನಾಯಕ, ಶಾಲೆ, ಕಾಲೇಜು ದಿನಗಳಲ್ಲಿ ಕ್ರಿಕೆಟ್, ಹಾಕಿ, ಚೆಸ್, ಕೇರಂ, ಖೊ ಖೊ ಮತ್ತು ಬಾಸ್ಕೆಟ ಬಾಲ್ ಆಟಗಳನ್ನಲ್ಲದೆ ಅಥ್ಲೆಟಿಕ್ಸ್ ನಲ್ಲೂ ಭಾಗವಹಿಸದವರು. ೧೯೭೨ರಲ್ಲಿ ಕರ್ಣಾಟಕ ವಿಶ್ವವಿದ್ಯಾಲಯ ಚೆಸ್ ತಂಡವನ್ನು ಪ್ರತಿನಿಸಿದರು. ಇವರ ಶಾಲಾಭ್ಯಾಸ ಕರ್ನಾಟಕದ ವಿವಿಧ ಸ್ಥಳ ಗಳಲ್ಲಿ ಆಯಿತು.

He joined State Bank of India in January 1975 at Islampur (Walva) in Maharashtra. He has represented Satara Dist. in the inter district Cricket tournament conducted by Maharashtra Cricket Association. He played for SBI Kolhapur and Satara District Bankers team. He took up umpiring in 1977 and qualified as state level umpire in 1977-78 under the guidance of Mr. M G Deshpande, a national level umpire. He came to Bangalore in May 1985. He qualified as Ranji Panel Umpire of BCCI in 1991 under the guidance of Mr. B R Keshava Murthy an All-India Panel Umpire. He made his debut as Cricket Umpire at the 1st Class level in the Ranji Trophy

match between Delhi (DDCA) and Punjab (PCA) at Feroze Shah Kotla grounds, Delhi on 19th December 1992. He became an All-India panel umpire in 1996 and made his debut at international level by officiating the triangular series ODI match between India and Sri Lanka at Pune on 30th March 1999.

ಇವರು ೧೯೭೫ರಲ್ಲಿ ಸ್ಟೇಟ್ ಬ್ಯಾಂಕ ಆಫ್ ಇಂಡಿಯ (ಮಹಾರಾಷ್ಟ್ರದ ಇಸ್ಲಾಮಪುರದಲ್ಲಿ) ಸೇರಿದರು. ೧೯೭೭-೭೮ರಲ್ಲಿ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಆಯೋಜಿಸಿದ ಅಂತರ ಜಿಲ್ಲಾ ಕ್ರಿಕೆಟ್ ಪ್ಂದ್ಯಾವಳಿಯಲ್ಲಿ ಸಾತಾರಾ (ಮಹಾರಾಷ್ಟ್ರದ) ಜಿಲ್ಲೆ ಯನ್ನು ಪ್ರತಿನಿಧಿಸಿದರು. ಇವರು ಸ್ಟೇಟ್ ಬ್ಯಾಂಕ ಆಫ್ ಇಂಡಿಯ ಕೊಲ್ಹಾಪುರ್ ಮತ್ತು ಸಾತಾರಾ ಜಿಲ್ಲಾ ಕ್ರಿಕೆಟ್ ಪಂಗಡಗಳನ್ನೂ ಪ್ರತಿನಿಧಿಸಿದರು. ೧೯೭೭ರಲ್ಲಿ ಅಂಪೈರಿಂಗ ಪ್ರಾರಂಭಿಸಿದ ಇವರು ೧೯೭೮-೭೯ರಲ್ಲಿ, ಕ್ರಿಕೆಟ್ ಮಂಡಳಿ ಅಂಪೈರ್ ಆಗಿದ್ದ ಎಂ. ಜಿ. ದೇಶಪಾಂಡೆ ಇವರ ಮಾರ್ಗದರ್ಶನದಲ್ಲಿ ರಾಜ್ಯ ಮಟ್ಟದ ಕ್ರಿಕೆಟ್ ಅಂಪೈರಿಂಗಿಗೆ ಅರ್ಹತೆ ಪಡೆದರು. ಇವರು ಬೆಂಗಳೂರಿಗೆ ಮೇ ೧೯೮೫ರಲ್ಲಿ ಬಂದರು.೧೯೯೧ರಲ್ಲಿ ಕ್ರಿಕೆಟ್ ಮಂಡಳಿಯ ಆಲ್ ಇಂಡಿಯಾ ಅಂಪೈರ್ ಆದ ಬಿ. ಆರ್. ಕೇಶವ ಮೂರ್ತಿ ಅವರ ಮಾರ್ಗದರ್ಶನದಲ್ಲಿ ರಣಜಿ ಅಂಪೈರ್ ಪರೀಕ್ಷೆ ಪಾಸಾದರು. ಇವರ ಚೊಚ್ಚಲ ಪ್ರಥಮ ಶ್ರೇಣಿ ಯ ಪಂದ್ಯ ದೆಹಲಿಯ ಫಿರೋಜಶಹಾ ಕೊಟ್ಲಾ ಮೈದಾನದಲ್ಲಿ ಡಿಸೆಂಬರ ೧೯, ೧೯೯೨ರಂದು ಪ್ರಾರಂಭವಾದ ದೆಹಲಿ ಮತ್ತು ಪಂಜಾಬ ನಡುವಿನ ರಣಜಿ ಪಂದ್ಯ. ೧೯೯೬ರಲ್ಲಿ ಆಲ್ ಇಂಡಿಯಾ ಅಂಪೈರ್ ಆದ ಇವರು ೧೯೯೯ರಲ್ಲಿ ಅಂತರಾಷ್ಟ್ರಿಯ ಮಟ್ಟಕ್ಕೆ ಅರ್ಹತೆ ಪಡೆದು ೩೦ ಮಾರ್ಚ್ ೧೯೯೯ರಂದು ಪುಣೆಯ ನೆಹರು ಮೈದಾನದಲ್ಲಿ ಭಾರತ ಮತ್ತು ಶ್ರಿಲಂಕಾ ನಡುವಿನ ತ್ರಿಕೋಣ ಸರದಿಯ ಪಂದ್ಯದಲ್ಲಿ ಪದಾರ್ಪಣೆ ಮಾಡಿದರು.

He is the third Karnataka umpire to have officiated in a cricket match outside the country – at Singapore in the Asian Fast Track Countries Tournament 2005– appointed by ACC/BCCI. He has officiated in one test as 4th umpire-India Vs Australia, six ODIs (two on field and four as 4th umpire, Two Jr. test matches, two matches of Afro-Asian Cricket Tournament ,two three-day games against the visiting teams, 6 Duleep Trophy matches including a final in addition to more than 100 matches conducted by BCCI at various levels from Age group matches to Ranji Trophy, wills trophy, interstate one day matches, T20 matches, and Deodhar trophy matches. He was one of the umpires in the first ever T20 match held in India (Bengaluru) involving international players.

ಇವರು ೨೦೦೫ರಲ್ಲಿ ಕರ್ನಾಟಕದಿಂದ ಪರ ದೇಶದಲ್ಲಿ (ಸಿಂಗಾಪೂರ) ಅಂಪೈರಿಂಗ ಮಾಡಲು (ಏಷಿಯನ್ ಫಾಸ್ಟ ಟ್ರಾಕ್ ದೇಶಗಳ ನಡುವಿನ ಪಂದ್ಯಾವಳಿ) ಎ.ಸಿ.ಸಿ / ಬಿ. ಸಿ. ಸಿ. ಐ. ವತಿಅಯಿಂದ ಆಯ್ಕೆಯಾದ ಮೂರನೆಯ  ಅಂಪೈರ್. ಇವರು ಒಂದು ಟೆಸ್ಟ ಪಂದ್ಯದಲ್ಲಿ(ಭಾರತ ಮತ್ತು ಆಸ್ಟ್ರೇಲಿಯಾ) ೪ನೇ ಅಂಪೈರ್ ಆಗಿ, ಆರು ಒಂದು ದಿನದ ಪಂದ್ಯಗಳಲ್ಲಿ (ಎರಡು  ಮೈದಾನದಲ್ಲಿ ಮತ್ತು ನಾಲ್ಕು ೪ನೇ ಅಂಪೈರ್ ಆಗಿ), ಎರಡು ಚಿಕ್ಕವರ ಟೆಸ್ಟ, ಎರಡು ಆಫರೊ  ಏಷಿಯನ್ ದೇಶಗಳ ಟ್೨೦ ಪಂದ್ಯಗಳು, ಎರಡು ಪರದೇಶದಿಂದ ಬಂದ ಪಂಗಡದ ಮೂರು ದಿನಗಳ ಪಂದ್ಯ, ಬಿ. ಸಿ. ಸಿ. ಐ ಅಯೋಜಿಸುವ ಅಂತರ್ ರಾಜ್ಯ ಮತ್ತು ವಲಯಗಳ  ಆರು ದುಲಿಪ ಟ್ರೋಫಿ ಪಂದ್ಯಗಳು ಒಂದು ಅಂತಿಮ ಪಂದ್ಯ ಸೇರಿ ಮತ್ತು ೧೦೦ ಕ್ಕೂ ಹೆಚ್ಚು ವಿವಿಧ ಪಾತಳಿಯ – ಚಿಕ್ಕವರ ಪಂದ್ಯಗಳು, ಟಿ೨೦, ಒಂದುದಿನದ ಪಂದ್ಯಗಳು, ದೇವಧರ್ ಟ್ರೋಫಿ, ವಿಲ್ಸ ಟ್ರೋಫಿ ಪಂದ್ಯಗಳ ಜೊತೆಗೆ  ಇವರು ಬೆಂಗಳೂರಿನಲ್ಲಿ (ಭಾರತ )ನಡೆದ ಮೊಟ್ಟ ಮೊದಲ ಅಂತರರಾಷ್ಟ್ರಿಯ ಆಟಗಾರರು ಪಾಲ್ಗೊಂಡ ಟ್೨೦ ಪಂದ್ಯದಲ್ಲಿ ಅಂಪೈರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

He was one of the two resident Faculty at the BCCI National Academy for Umpires (NAU) since its inception from 2010 to 2013. He was part of the train the trainer course conducted by ICC for Umpire coaches of various countries (2 from each country) at Nagpur. He is an accredited Level III Cricket umpire educator of BCCI and Cricket Australia. He has trained / educated over 3000 umpires of various levels in most of the states throughout India.

ಇವರು ನಾಗಪೂರ್ ನಲ್ಲಿ ಬಿ ಸಿ ಸಿ  ಐ ಸ್ಥಾಪಿಸಿದ ಅಂಪೈರ್ ಅಕಾಡೆಮಿಯಲ್ಲಿ, ಅದು ೨೦೧೦ರಲ್ಲಿ ಪ್ರಾರಂಭವಾದಾಗಿನಿಂದ  ೨೦೧೩ರ ವರೆಗೆ ಇಬ್ಬರು ನಿವಾಸಿ ತರಬೆತುದಾರರಲ್ಲಿ ಒಬ್ಬರಾಗಿದ್ದರು. ಇವರು ವಿವಿಧ ದೇಶದ ತರಬೇತುದಾರರಿಗೆ  (ಪ್ರತಿ ದೇಶದಿಂದ ಇಬ್ಬರು) ಐ ಸಿ ಸಿ ನೀಡುವ ತರಬೇತುದಾರರಿಗೆ ತರಬೇತಿ ಕೋರ್ಸಗೆ ಭಾರತದ ಪ್ರತಿನಿಧಿ ಯಾಗಿದ್ದರು. ಇವರು  ಬಿ ಸಿ ಸಿ ಐ ಮತ್ತು ಕ್ರಿಕೆಟ್ ಆಸ್ಟ್ರೇಲಿಯಾ  ನಿಂದ ಮಾನ್ಯತೆ ಪಡೆದ ಮೂರನೇ ಪಾತಳಿಯ ತರಬೇತುದಾರರಾಗಿದ್ದಾರೆ.  ಇವರು ಭಾರತದಾದ್ಯಂತ  ವಿವಿಧ ರಾಜ್ಯಗಳ ಎಲ್ಲ ಪಾತಳಿಯ ೩೦೦೦ ಕ್ಕೂ ಹೆಚ್ಚು ಅಂಪೈರ್ ಗಳಿಗೆ ತರಬೇತಿ ನೀಡಿದ್ದಾರೆ.

He is a member of the umpire’s sub-committee of Karnataka State Cricket Association for over two decades and has served the Association of Cricket Umpires Karnataka as its hon. Treasurer, hon. Secretary and President. He has been a presenter/educator in umpiring seminars and workshops conducted by BCCI all over the country and KSCA & ACUK in Karnataka for over two decades.

ಇವರು ಕಳೆದ ೨೦ ವರ್ಷ ಗಳಿಂದಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಂಪೈರ್ ಉಪ ಸಮಿತಿಯ ಸದಸ್ಯ ರಾಗಿದ್ದರು. ಇವರು ಕರ್ನಾಟಕ ಅಂಪೈರ್ ಸಂಸ್ಥೆಯ(ACUK) ಗೌರವ ಖಜಾಂಜಿ, ಗೌರವ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರು ಬಿ ಸಿ ಸಿ ಐ, ದೇಶದಾದ್ಯಂತ ನಡೆಸುವ ಅಂಪೈರ್ ಕಾರ್ಯಾಗಾರಗಳಲ್ಲಿ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಥವಾ ಕರ್ನಾಟಕ ಅಂಪೈರ್ ಸಂಸ್ಥೆ ಕರ್ನಾಟಕದಲ್ಲಿ ನಡೆಸುವ ಅಂಪೈರ್ ಕಾರ್ಯಾಗಾರಗಳಲ್ಲಿ ಕಳೆದ ೩೦ ವರ್ಷಗಳಿಂದಲೂ ಸಕ್ರಿಯವಾಗಿ ನಿರೂಪಕ ರಾಗಿ ಇಲ್ಲವೇ ತರಬೇತುದಾರರಿಗೆ ಭಾಗವಹಿಸುತ್ತಿದ್ದಾರೆ

**ಶ್ರೀಮತಿ. ಗೀತಾ ಕುಲಕರ್ಣಿ.**